ಹುಬ್ಬಳ್ಳಿ
ಶನಿವಾರ, 28 ಮಾರ್ಚ್ 2026
ಸಂಪುಟ 16, ಸಂಚಿಕೆ 3, ಪುಟಗಳು 16
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಮತಾಂತರ ತಡೆಗಾಗಿ ಕಠಿಣ ಕಾಯ್ದೆ | ೦೭ | ಪುರಾತನ ಮೂರು ಶಿಲ್ಪ ಮರಳಿ ಭಾರತಕ್ಕೆ | ೦೭ | ಮನರಂಜನಾ ಹಬ್ಬ ಇಂದಿನಿಂದ ಶುರು | ೧೩

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಪುಷ್ಯ

ದಿನದ ಮಾತು

ವಿದ್ವತ್ತು ಮತ್ತು ಸಾರ್ವಭೌಮತ್ವವನ್ನು ಒಂದಾಗಿ ಪರಿಗಣಿಸಲಾಗದು. ರಾಜನು ಅವನ ರಾಜ್ಯದಲ್ಲಿ ಮಾತ್ರ ಗೌರವಿಸಲ್ಪಡುತ್ತಾನೆ. ಆದರೆ ಒಬ್ಬ ವಿದ್ವಾಂಸ ಎಲ್ಲೆಡೆ ಗೌರವಾನ್ವಿತ.

▲ ಪಂಚತಂತ್ರ

ವಿಶುದ್ಧ ಚಕ್ರಕ್ಕೆ ನಿತ್ಯಾನುಷ್ಠಾನ

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು

• ಪುಟ ೬

ಕಿರುಸುದ್ದಿ

ಇಂದು, ನಾಳೆ ತೆರೆದಿರಲಿದೆ ಉಪ ನೋಂದಣಿ ಕಚೇರಿ

• **ಬೆಂಗಳೂರು:** ರಾಜ್ಯದ ಎಲ್ಲಾ ಉಪ ನೋಂದಣಿ ಕಚೇರಿಗಳು ಶನಿವಾರ (ಮಾ.28) ಮತ್ತು ಭಾನುವಾರ (ಮಾ.29)ರ ರಜಾ ದಿನಗಳಂದು ಕರ್ತವ್ಯದ ನಿರ್ವಹಿಸುವ ದಿನಗಳೆಂದು ಘೋಷಿಸಿ ಕಂದಾಯ ಇಲಾಖೆ ಆದೇಶ ಹೊರಡಿಸಿದೆ. ಕರ್ನಾಟಕ ನೋಂದಣಿ ನಿಯಮಗಳು, 1965ರ ಚಾಪ್ಟರ್–2ರ ನಿಯಮ5ಕ್ಕೆ 2024ರಲ್ಲಿ ತಂದಿರುವ ತಿದ್ದುಪಡಿಯನ್ವಯ, ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ ಎರಡೂ ರಜಾ ದಿನಗಳಾದ ಶನಿವಾರ ಮತ್ತು ಭಾನುವಾರ ಕರ್ತವ್ಯದ ನಿರ್ವಹಿಸುವ ದಿನಗಳೆಂದು ಘೋಷಿಸಿ ಕಂದಾಯ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿಯವರು ಶುಕ್ರವಾರ ಆದೇಶಿಸಿದ್ದಾರೆ.

ಮೋದಿ, ನಾನು ಸೇರಿದರೆ ಎಲ್ಲವೂ ಸಾಧ್ಯ: ಟ್ರಂಪ್

• **ಹೊಸದಿಲ್ಲಿ:** ನಾನು ಮತ್ತು ಭಾರತದ ಪ್ರಧಾನಿ ನರೇಂದ್ರ ಮೋದಿ ನಮ್ಮ ಚಿಂತನೆಗಳನ್ನು ನೇರ ಕೃತಿರೂಪಕ್ಕಿಳಿಸುವವರು. ಈ ತಾಕತ್ತು ಬಹುತೇಕರಿಗೆ ಇರುವುದಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪಶ್ಚಿಮ ಏಷ್ಯಾ ಸಮರ ಮಧ್ಯೆ ಪ್ರಧಾನಿ ಮೋದಿ ಅವರನ್ನು ಮಗದೊಮ್ಮೆ ಹೊಗಳಿದ್ದಾರೆ. ಭಾರತದಲ್ಲಿನ ಅಮೆರಿಕ ದೂತಾವಾಸದಲ್ಲಿ ಶುಕ್ರವಾರ ಅಂಟಿಸಿರುವ ಪೋಸ್ಟ್ ಒಂದರಲ್ಲಿ ಈ ರೀತಿ ಉಲ್ಲೇಖವಿದೆ.

• ಪುಟ ೭

ನೋಯ್ಡಾ ಏರ್‌ಪೋರ್ಟ್ ಹಂತ 1ಕ್ಕೆ ಇಂದು ಚಾಲನೆ

• ಪುಟ ೭

ಇನ್ನು ಅಮೆರಿಕದ ಕರೆನ್ಸಿ ನೋಟಲ್ಲಿ ಟ್ರಂಪ್ ಸಹಿ

• ಪುಟ ೭

ಶ್ರೀನಗರದಲ್ಲಿ ಹಿಮಪಾತ: ಏಳು ಜನ ಸಾವು

• ಪುಟ ೭

ನಾವು ಮೌಲ್ಯಾಧಾರಿತ ಸಮಾಜದೆಡೆಗೆ ಸಾಗುವಂತಾಗಲಿ

• ಪುಟ ೮

ಬಾಕಿ ಹಣ ನೀಡದ ಸಕ್ಕರೆ ಕಾರ್ಖಾನೆಗಳಿಗೆ ನೋಟಿಸ್

• ಪುಟ ೮



ರಾಮನವಮಿ ಅಂಗವಾಗಿ ಶುಕ್ರವಾರ ಅಯೋಧ್ಯೆಯ ಶ್ರೀರಾಮನಿಗೆ ಸೂರ್ಯತಿಲಕ ಸ್ಪರ್ಶಿಸಿದ ಕ್ಷಣವನ್ನು ಪ್ರಧಾನಿ ಮೋದಿ ನೇರ ಪ್ರಸಾರ ವೀಕ್ಷಿಸಿ ನಮಿಸುತ್ತಿರುವುದು.

ಮಧ್ಯಪ್ರಾಚ್ಯ ಬಿಕ್ಕಟ್ಟು | ಸಿಎಂಗಳ ಜತೆ ಮೋದಿ ಚರ್ಚೆ

ಇಂಧನ ಭದ್ರತೆ, ಜನ ಹಿತ ರಕ್ಷಣೆಗೆ ಆದ್ಯತೆ

ಲಾಕ್‌ಡೌನ್ ಪ್ರಸ್ತಾಪವಿಲ್ಲ, ಆತಂಕ ಬೇಡ: ನಿರ್ಮಲಾ

• ಪುಟ ೭

ರಾಜ್ಯಕ್ಕೆ 20% ವಾಣಿಜ್ಯ ಅಡುಗೆ ಅನಿಲ ಹೆಚ್ಚಳ: ಪ್ರಧಾನಿ ಸಕಾರಾತ್ಮಕ ಸ್ಪಂದನೆ

• ಪುಟ ೪





• **ಹೊಸದಿಲ್ಲಿ:** ಮಧ್ಯಪ್ರಾಚ್ಯ ಸಂಘರ್ಷದಿಂದ ಉಂಟಾದ ಜಾಗತಿಕ ಪರಿಸ್ಥಿತಿ ಇನ್ನೂ ಮಾರಕವಾಗಿ ಬದಲಾಗುತ್ತಿದ್ದು, ಆರ್ಥಿಕ ಮತ್ತು ವಾಣಿಜ್ಯ ಸ್ಥಿರತೆ ಕಾಯ್ದುಕೊಳ್ಳುವುದು, ಇಂಧನ ಭದ್ರತೆ ಖಚಿತಪಡಿಸಿಕೊಳ್ಳುವುದು, ಕೈಗಾರಿಕೆ ಮತ್ತು ಸರಬರಾಜು ಸರಪಳಿಗಳನ್ನು ಬಲಪಡಿಸುವುದು ಹಾಗೂ ನಾಗರಿಕರ ಹಿತಾಸಕ್ತಿಯನ್ನು ರಕ್ಷಿಸುವುದು ಸರ್ಕಾರದ ಪ್ರಮುಖ ಆದ್ಯತೆಗಳಾಗಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದ್ದಾರೆ.



ಮುಖ್ಯಮಂತ್ರಿಗಳ ಜತೆಗೆ ವರ್ಚುವಲ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಪರಿಸ್ಥಿತಿಯು ನಿರಂತರ ಮೇಲ್ವಿಚಾರಣೆ ಮತ್ತು ತ್ವರಿತವಾಗಿ ಹೊಂದಿಕೊಳ್ಳುವ ಕಾರ್ಯತಂತ್ರಗಳನ್ನು ಅಗತ್ಯವನ್ನು ವಿವರಿಸುತ್ತದೆ ಎಂದರು.

ಕೇಂದ್ರ ಮತ್ತು ರಾಜ್ಯಗಳ ನಡುವೆ ನಿರಂತರ ಸಂವಹನ ಮತ್ತು ಸಮನ್ವಯ ಅಗತ್ಯವಿದ್ದು, ಸಮಯೋಚಿತ ಮಾಹಿತಿಯ ಹಂಚಿಕೆ ಹಾಗೂ ಜಂಟಿ ನಿರ್ಧಾರಗಳಿಂದ ಪ್ರತಿಕ್ರಿಯೆಗಳು ವೇಗವಾಗಿ ಮತ್ತು ಸಮನ್ವಯವಾಗಿ ನಡೆಯುತ್ತವೆ ಎಂದರು. ➡ ಪುಟ ೪

ರಾಜ್ಯಗಳಿಗೆ ಪ್ರಧಾನಿ ಸಲಹೆ

- ಟೀಂ ಇಂಡಿಯಾ ಆಗಿ ಕೆಲಸ ಮಾಡಬೇಕು
- ಸಮಸ್ಯೆ ಪರಿಹರಿಸಿಕೊಳ್ಳಲು ಎಲ್ಲರೂ ಒಗ್ಗಟ್ಟಾಗಿರಬೇಕು
- ಒಟ್ಟಾಗಿ ಕೆಲಸ ಮಾಡಿದರೆ ಸಮಸ್ಯೆ ಪರಿಹಾರ ಸುಲಭ
- ಆರ್ಥಿಕ, ವ್ಯಾಪಾರ ಸ್ಥಿತಿ ಕಾಪಾಡಿಕೊಳ್ಳಬೇಕು
- ನಾಗರಿಕರ ಹಿತಾಸಕ್ತಿ ಕಾಪಾಡಲು ಆದ್ಯತೆ ನೀಡಿ
- ತಪ್ಪು ಮಾಹಿತಿ, ವದಂತಿ ಹರಡದಂತೆ ಕ್ರಮ ವಹಿಸಿ

ಅಬಕಾರಿ ಸುಂಕ ಕಡಿತ



• **ಹೊಸದಿಲ್ಲಿ:** ಪಶ್ಚಿಮ ಏಷ್ಯಾದ ಉದ್ವಿಗ್ನ ಪರಿಸ್ಥಿತಿ ನಡುವೆ ಜಾಗತಿಕ ಕಚ್ಚಾ ತೈಲ ಬೆಲೆಗಳು ಏರಿಕೆಯಾಗುವ ಆತಂಕ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು ಲೀಟರ್‌ಗೆ 10 ರೂ. ಕಡಿತಗೊಳಿಸಿದೆ. ➡ ಪುಟ ೪

ಡೀಸೆಲ್‌ಗಿಲ್ಲ ತೆರಿಗೆ, ಪ್ರತಿ ಲೀಟರ್ ಪೆಟ್ರೋಲ್‌ಗೆ 10 ರೂ. ಇಳಿಕೆ, ಬೆಲೆ ಏರಿಕೆ ತಡೆಗೆ ಕೇಂದ್ರ ಕ್ರಮ

ಇನ್ನು ತೃತೀಯ ಭಾಷೆಗಿಲ್ಲ ಅಂಕ | ಈ ವರ್ಷದಿಂದಲೇ ಜಾರಿ

525 ಅಂಕಕ್ಕಿಳಿದ ಎಸ್ಸೆಸ್ಸೆಲ್ಸಿ ಪರೀಕ್ಷೆ

• **ಬೆಂಗಳೂರು:** ರಾಜ್ಯದಲ್ಲಿ ಈವರೆಗೆ 625 ಅಂಕಗಳಿಗೆ ನಡೆಯುತ್ತಿದ್ದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು 525 ಅಂಕಗಳಿಗೆ ಇಳಿಸಲು ಸರ್ಕಾರ ತೀರ್ಮಾನಿಸಿದೆ. ಇನ್ನು ಮುಂದೆ ತೃತೀಯ ಭಾಷೆಯಲ್ಲಿ ಪಾಸ್ ಅಥವಾ ಫೇಲ್ ಎಂಬ ಪದ್ಧತಿ ಇರುವುದಿಲ್ಲ, ಅದರ ಅಂಕಗಳನ್ನು ಮುಖ್ಯ ಫಲಿತಾಂಶಕ್ಕೆ ಪರಿಗಣಿಸದೆ ಕೇವಲ ಗ್ರೇಡ್ ನೀಡುವ ವ್ಯವಸ್ಥೆಯನ್ನು ಈ ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ತರಲು ನಿರ್ಧರಿಸಿದೆ.



ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ, ತೃತೀಯ ಭಾಷೆ ಹಿಂದಿ ಪರೀಕ್ಷೆ ನಡೆಸುವುದಕ್ಕೆ ಕನ್ನಡಪರ ಸಂಘಟನೆಗಳು ಸೇರಿದಂತೆ ರಾಜ್ಯಾದ್ಯಂತ ಭಾರೀ ವಿರೋಧ ವ್ಯಕ್ತವಾಗಿತ್ತು. ಸಾರ್ವಜನಿಕರಿಂದ, ವಿವಿಧ ಸಂಘಟನೆಗಳಿಂದ ತೀವ್ರ ಒತ್ತಡ ಹಾಗೂ ಮನವಿಗಳು ಬಂದಿದ್ದವು.

ಈ ಮಧ್ಯೆ ಮಾ.31ರಂದು ನಡೆಯಬೇಕಾಗಿದ್ದ ಪರೀಕ್ಷೆಯನ್ನು ಮಹಾವೀರ ಜಯಂತಿ ಹಿನ್ನೆಲೆಯಲ್ಲಿ ಒಂದು ದಿನ ಮೊದಲೇ ಪರೀಕ್ಷೆ ನಡೆಸಲು ನಿರ್ಧರಿಸಲಾಗಿದೆ. ಇದೀಗ ಈ ಪರೀಕ್ಷೆಯ ಅಂಕವನ್ನೂ ಪರಿಗಣಿಸುವುದಿಲ್ಲ, ಈ ಮೂಲಕ ಇದೇ ವರ್ಷದಿಂದಲೇ ತೃತೀಯ ಭಾಷೆಯನ್ನು ಕಡ್ಡಾಯ ವಿಷಯದಿಂದ ಹೊರಗಿಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು. ➡ ಪುಟ ೪

ಎಲ್ಲ ಪಠ್ಯಕ್ರಮ ಶಾಲೆಗೂ ಅನ್ವಯ

2026–27ರ ಶೈಕ್ಷಣಿಕ ಸಾಲಿನಲ್ಲಿ 1ನೇ ತರಗತಿಯ ಪ್ರವೇಶ ವಯೋಮಿತಿಯಲ್ಲಿ ನೀಡಲಾಗಿರುವ 60 ದಿನಗಳ ವಿನಾಯಿತಿಯು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪಠ್ಯಕ್ರಮ (ಸಿಬಿಎಸ್‌ಇ, ಐಸಿಎಸ್‌ಇ ಒಳಗೊಂಡಂತೆ) ಶಾಲೆಗಳಿಗೂ ಅನ್ವಯಿಸುತ್ತದೆ. ಈ ಕುರಿತು ಸಿಬಿಎಸ್‌ಇ ಮತ್ತು ಇತರೆ ರಾಜ್ಯಗಳ ಪಾಲಿಸಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ತೀರ್ಮಾನ ಕೈಗೊಳ್ಳಲಾಗುವುದು. ಈ ಬಗ್ಗೆ ಈಗಾಗಲೇ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳೊಂದಿಗೆ ಚರ್ಚಿಸಲಾಗಿದೆ. ಇತರ ರಾಜ್ಯಗಳಲ್ಲಿನ ಶಿಕ್ಷಣ ಪದ್ಧತಿಯ ಮಾಹಿತಿ ಕೋರಲಾಗಿದೆ. ➡ ಪುಟ ೪

> ನಮ್ಮ ಸರ್ಕಾರದ ಪ್ರಮುಖ ಉದ್ದೇಶ ಸರ್ಕಾರಿ ಶಾಲೆಗಳ ಸಬಲೀಕರಣ, ಪಾರದರ್ಶಕತೆ ಕಾಯ್ದುಕೊಳ್ಳುವುದು ಮತ್ತು ವಿದ್ಯಾರ್ಥಿಗಳನ್ನು ಪರೀಕ್ಷಾ ಒತ್ತಡದಿಂದ ಮುಕ್ತಗೊಳಿಸುವುದಾಗಿದೆ. ಈ ನಿಟ್ಟಿನಲ್ಲಿ ವಾರ್ಷಿಕ 3 ಪರೀಕ್ಷೆಗಳನ್ನು ನಡೆಸುವ ಮೂಲಕ ವಿದ್ಯಾರ್ಥಿಗಳಿಗೆ ಉತ್ತಮ ಅಂಕ ಉಳಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.
>
> ■ **ಮಧು ಬಂಗಾರಪ್ಪ**, ಶಾಲಾ ಶಿಕ್ಷಣ, ಸಾಕ್ಷರತಾ ಸಚಿವ

ಕೆಎಸ್‌ಸಿಎಗೆ ಡಿಕೆಶಿ ಸೂಚನೆ | ಡಿಸಿಎಂ ನೇತೃತ್ವದ ಸಭೆ ನಿರ್ಧಾರ

ಶಾಸಕರಿಗೆ ತಲಾ 2 ಐಪಿಎಲ್ ಟಿಕೆಟ್

• **ಬೆಂಗಳೂರು:** ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಐಪಿಎಲ್ ಪಂದ್ಯಗಳಿಗೆ ನಾಲ್ಕು ಟಿಕೆಟ್‌ಗಳಿಗೆ ಬೇಡಿಕೆಯಿಟ್ಟಿದ್ದ ಶಾಸಕರಿಗೆ ಎರಡು ಟಿಕೆಟ್ ಕೊಡಿಸುವಲ್ಲಿ ಡಿಸಿಎಂ ಯಶಸ್ವಿಯಾಗಿದ್ದಾರೆ. ಮೊದಲ ಪಂದ್ಯಕ್ಕೆ ಪ್ರತಿ ಶಾಸಕರಿಗೆ ಎರಡು ಟಿಕೆಟ್ ನೀಡುವಂತೆ ಕೆಎಸ್‌ಸಿಎಗೆ ಸೂಚಿಸಿದ್ದಾರೆ.



ಸಂಸದರು ಹಾಗೂ ಶಾಸಕರಿಗೆ ಐಪಿಎಲ್ ಸೇರಿದಂತೆ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಗಳ ಟಿಕೆಟ್ ವಿತರಣೆ ಸಂಬಂಧ ವಿಧಾನಸಭೆ ಕಲಾಪದಲ್ಲಿ ವಿಷಯ ಪ್ರಸ್ತಾಪವಾದ ಹಿನ್ನೆಲೆಯಲ್ಲಿ ಹಾಗೂ ಸ್ಪೀಕರ್ ಯು. ಟಿ. ಖಾದರ್ ಅವರು ನೀಡಿದ ಸೂಚನೆ ಮೇರೆಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ವೆಂಕಟೇಶ್ ಪ್ರಸಾದ್, ಕಾರ್ಯದರ್ಶಿ ವಿನಯ್ ಮತ್ತಿತರರ ಜತೆ ವಿಧಾನಸೌಧದಲ್ಲಿ ಶುಕ್ರವಾರ ಸಮಾಲೋಚನೆ ನಡೆಸಿದರು. ➡ ಪುಟ ೪



ಸುರಕ್ಷತೆ ಕುರಿತು ಸಿಎಸ್ ಸಭೆ

ಶನಿವಾರದಿಂದ (ಮಾ.28) ಐಪಿಎಲ್ ಪಂದ್ಯಾವಳಿಗಳು ಆರಂಭವಾಗಲಿರುವ ಹಿನ್ನೆಲೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಕೆಎಸ್‌ಸಿಎ ಸಂಸ್ಥೆಯ ಪದಾಧಿಕಾರಿಗಳೊಂದಿಗೆ ಸುರಕ್ಷತೆ ಕುರಿತಾಗಿ ಸುದೀರ್ಘ ಸಭೆ ನಡೆಸಿ ಸಲಹೆ, ಸೂಚನೆಗಳನ್ನು ನೀಡಿದರು. ➡ ಪುಟ ೪

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಮಾಹಿತಿ

ಸಾದಿಕ್ ಪೈಲ್ವಾನ್ ಕಣದಿಂದ ನಿವೃತ್ತಿ

• **ಬೆಂಗಳೂರು:** ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗೆ ಸ್ವತಂತ್ರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ಸಾದಿಕ್ ಪೈಲ್ವಾನ್ ಚುನಾವಣಾ ಕಣದಿಂದ ಹಿಂದೆ ಸರಿಸುವಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಯಶಸ್ವಿಯಾಗಿದ್ದಾರೆ.



ನಾಮಪತ್ರ ಸಲ್ಲಿಸಿದ್ದ ಸಾದಿಕ್ ಅವರನ್ನು ಕೆಪಿಸಿಸಿ ಕಚೇರಿಯಲ್ಲಿ ಖುದ್ದಾಗಿ ಭೇಟಿ ಮಾಡಿದ ಸಿಎಂ ಹಾಗೂ ಡಿಸಿಎಂ ಅವರು ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಳಿಕ ಕಾಂಗ್ರೆಸ್ ಕಚೇರಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೊಂದಿಗೆ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ ಅವರು, ದಾವಣಗೆರೆ ಮತ್ತು ಬಾಗಲಕೋಟೆ ಎರಡೂ ಕಡೆ ಕಾಂಗ್ರೆಸ್ ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ➡ ಪುಟ ೪



> ರಾಜ್ಯದಲ್ಲಿ ಕೆಲವು ಬೆಳವಣಿಗೆಗಳಾಗಿತ್ತು. ಈಗ ಕಾಂಗ್ರೆಸ್‌ನಲ್ಲಿ ಸಂಭ್ರಮದ ದಿನ. ಕಾಂಗ್ರೆಸ್‌ನ ಮನೆಯವರೇ ವಾಪಸ್ ಮನೆಯನ್ನು ಸೇರಿದ್ದಾರೆ. ಎಲ್ಲವೂ ಬಗೆಹರಿದಿದೆ.
>
> ■ **ರಣದೀಪ್‌ಸಿಂಗ್ ಸುರ್ಜೇವಾಲಾ**, ರಾಜ್ಯ ಕಾಂಗ್ರೆಸ್ ಉಸ್ತುವಾರಿ

ರಾಮನವಮಿ ದಿನ ಲಕ್ಷಾಂತರ ಭಕ್ತರಿಂದ ರಾಮಲಲಾ ದರ್ಶನ

• **ಅಯೋಧ್ಯೆ:** ಚೈತ್ರ ನವರಾತ್ರಿಯ ಒಂಭತ್ತನೇ ದಿನ ಅವತರಿಸಿದ ಭಗವಾನ್ ಶ್ರೀರಾಮಚಂದ್ರನ ಅಯೋಧ್ಯಾ ಮಂದಿರದಲ್ಲಿ ಶುಕ್ರವಾರ ಲಕ್ಷಾಂತರ ಭಕ್ತರು ಸೇರಿದ್ದರು. ರಾಮನವಮಿ ಹಿನ್ನೆಲೆಯಲ್ಲಿ ದ್ವಿತೀಯ ಬಾರಿ ವಿಶಿಷ್ಟವಾಗಿ ಸೂರ್ಯತಿಲಕದಿಂದ ಪ್ರಕಾಶಿತ, ಪುಷ್ಪ –ಆಭರಣಗಳಿಂದ ಶೋಭಿತ ರಾಮಲಲಾನ ಕಾಣಲು, ಬಾಲರಾಮನ ದರ್ಶನ ಮಾತ್ರದಿಂದಲೆ ಪುನೀತರಾಗಲು ಭಕ್ತರು ಮುಂಜಾನೆಯಿಂದಲೇ ಪ್ರವಾಹೋಪಾದಿಯಲ್ಲಿ ಶ್ರೀರಾಮಮಂದಿರದತ್ತ ಹೆಜ್ಜೆ ಹಾಕಿದ್ದರು. ಮಧ್ಯಾಹ್ನ 12 ಗಂಟೆಗೆ ಪವಿತ್ರ ಅಭಿಜಿತ್ ಮುಹೂರ್ತದಲ್ಲಿ ಬಾಲರಾಮನಿಗೆ ಸೂರ್ಯ ತಿಲಕ ವಿಧಿಯನ್ನು ವಿಧಿಬದ್ಧವಾಗಿ ನೆರವೇರಿಸಲಾಯಿತು. ವಿಧಿಪ್ರಕಾರ ಆದಿತ್ಯನ ತೇಜೋಮಯ ಪ್ರಖರ ರಶ್ಮಿಗಳು ಭಗವಂತನ ಹಣೆ ಭಾಗವನ್ನು ನೇರವಾಗಿ ಸ್ಪರ್ಶಿಸಿದ್ದವು.

• ವಿವರ ಪುಟ ೭



ಮೂರು ವರ್ಷಗಳಲ್ಲಿ 273ಕ್ಕೂ ಹೆಚ್ಚು ಮಂದಿ ಸಾವು

ಹಾವು ಕಡಿತದಿಂದ ಸಾವು ಹೆಚ್ಚಳ

▸ ನಂದಿನಿ ಎನ್.

• **ಬೆಂಗಳೂರು:** ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ 273ಕ್ಕೂ ಹೆಚ್ಚು ಮಂದಿ ಹಾವು ಕಚ್ಚಿದ್ದರಿಂದ ಮೃತಪಟ್ಟಿದ್ದು, ಗ್ರಾಮೀಣ ಭಾಗಗಳಲ್ಲಿ ಇಂತಹ ಪ್ರಕರಣಗಳು ಹೆಚ್ಚಾಗಿವೆ.

ಅದರಲ್ಲೂ ರಾಜ್ಯದಲ್ಲಿ ಹಾವು ಕಡಿತದಿಂದ ಅಸುನೀಗುತ್ತಿರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಈ ಸಾವಿನ ಸಂಖ್ಯೆ ಹೆಚ್ಚಲು ಹಲವು ಕಾರಣಗಳಿವೆ. ಹಾವಿನ ವಿಷವು ನರಮಂಡಲ, ರಕ್ತ ಅಥವಾ ಸ್ನಾಯುಗಳ ಮೇಲೆ ಪರಿಣಾಮ ಬೀರಿ, ಚಿಕಿತ್ಸೆ ವಿಳಂಬವಾದರೆ ಶ್ವಾಸಕೋಶದ ವೈಫಲ್ಯ ಅಥವಾ ಹೃದಯಸ್ತಂಭನದಿಂದ ಸಾವು ಸಂಭವಿಸುತ್ತದೆ. ಹಾವು ಕಡಿತ ಪ್ರಕರಣಗಳು ಹಾಗೂ ಮೃತಪಡುವವರ ಸಂಖ್ಯೆಯ ವರದಿ ಪ್ರಮಾಣವು ವರ್ಷದಿಂದ ವರ್ಷಕ್ಕೆ ಏರಿಕೆಯಾಗಿರುತ್ತದೆ. ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ ಪ್ರತಿ ವರ್ಷ ಭಾರತದಲ್ಲಿ 50 ಸಾವಿರ ಮರಣಗಳು ಸಂಭವಿಸುತ್ತಿವೆ. ಅದರಂತೆ ರಾಜ್ಯದಲ್ಲಿ ಹಾವು ಕಡಿತದಿಂದ 2023ರಲ್ಲಿ 19 ಜನ ಮೃತಪಟ್ಟರೆ, 2024ರಲ್ಲಿ 100 ಜನ, 2025ರಲ್ಲಿ 154 ಜನರು ಮೃತಪಟ್ಟಿದ್ದಾರೆ. ➡ ಪುಟ ೪

ವರ್ಷದಿಂದ ವರ್ಷಕ್ಕೆ ಏರಿಕೆ



ಮೃತಪಟ್ಟ ಕುಟುಂಬಕ್ಕೆ ಪರಿಹಾರ

ಹಾವು ಕಡಿತದಿಂದ ಮೃತಪಟ್ಟವರ ಕುಟುಂಬಕ್ಕೆ, ಜಿಲ್ಲಾಡಳಿತದ ಮೂಲಕ ಅರ್ಜಿ ಸಲ್ಲಿಸಿದರೆ ಪರಿಹಾರ ಮೊತ್ತ ಲಭ್ಯವಾಗಲಿದೆ. ಅಲ್ಲದೆ, ರಾಜ್ಯದ ಸರ್ಕಾರಿ, ಸಂಯೋಜಿತ ಖಾಸಗಿ ಆಸ್ಪತ್ರೆಗಳಲ್ಲಿ ಹಾವು ಕಡಿತಕ್ಕೆ ಉಚಿತ ಚಿಕಿತ್ಸೆ ಒದಗಿಸಲು ಆದೇಶಿಸಲಾಗಿದೆ. ಆದರೆ, ಪರಿಹಾರ ಪಡೆಯಲು ಮರಣೋತ್ತರ ಪರೀಕ್ಷಾ ವರದಿ, ಪೊಲೀಸ್ ದೂರು, ಮತ್ತು ಮರಣ ಪ್ರಮಾಣಪತ್ರ ಕಡ್ಡಾಯಗೊಳಿಸಲಾಗಿದೆ.

ನೇಪಾಳ ಪ್ರಧಾನಿ ಆಗಿ ಬಾಲೇಂದ್ರ ಶಾ ಪ್ರಮಾಣ

• **ಕಠ್ಮಂಡು:** ನೇಪಾಳ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿದ ಬಾಲೇಂದ್ರ ಶಾ ಅವರು ಶುಕ್ರವಾರ ನೇಪಾಳದ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ರಾಷ್ಟ್ರೀಯ ಸ್ವತಂತ್ರ ಪಕ್ಷದ (ಆರ್‌ಎಸ್‌ಪಿ) ನಾಯಕರಿಗೆ ರಾಷ್ಟ್ರಪತಿಗಳ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ರಾಮಚಂದ್ರ ಪೌದೆಲ್ ಅವರು ಪ್ರಮಾಣವಚನ ಬೋಧಿಸಿದರು. ಈ ತಿಂಗಳ ಸಂಸತ್ ಚುನಾವಣೆಯಲ್ಲಿ ಆರ್‌ಎಸ್‌ಪಿ ಅಭೂತಪೂರ್ವ ಗೆಲುವು ದಾಖಲಿಸಿತ್ತು. ಕಠ್ಮಂಡುವಿನ ಮಾಜಿ ಮೇಯರ್ ಆಗಿರುವ ಶಾ, ನೇಪಾಳದ ಉನ್ನತ ಹುದ್ದೆಗೆ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಅತ್ಯಂತ ಕಿರಿಯ ನಾಯಕರಾಗಿದ್ದಾರೆ. ➡ ಪುಟ ೪



ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,40,000 (2,50,100) ಅಪರಂಜಿ ಚಿನ್ನ: 1,44,710 (1,46,890) ಆಭರಣ ಚಿನ್ನ: 1,32,650 (1,34,650) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 73,583 (1,690↓) ಎನ್‌ಎಸ್‌ಇ 22,819 (486↓)

$1 = ₹93.97

ಕಿರುಸುದ್ದಿ

ಏ.2ರಂದು ವಾರ್ಷಿಕೋತ್ಸವ



◆**ಕಲಘಟಗಿ:** ಪಟ್ಟಣದ ಗ್ರಾಮದೇವಿ ಗುಡಿ ಓಣಿಯಲ್ಲಿರುವ ಶ್ರೀ ದೊಡ್ಡ ಹನುಮಂತ ದೇವರ ದೇವಸ್ಥಾನದಲ್ಲಿ ಹನುಮ ಜಯಂತಿ ಪ್ರಯುಕ್ತ ಏಪ್ರಿಲ್ 2 ರಂದು ಬೆಳಗ್ಗೆ 6 ಗಂಟೆಗೆ ಹೋಮ, ಮಹಾಪೂಜೆ, ತೊಟ್ಟಿಲೋತ್ಸವ ಜರುಗಲಿದೆ. ಪುರಾತನ ದೇವಸ್ಥಾನ ಜೀರ್ಣೋದ್ಧಾರ ಮತ್ತು ನೂತನ ಕಟ್ಟಡ ಲೋಕಾರ್ಪಣೆಯ 5ನೇ ವರ್ಷದ ವಾರ್ಷಿಕೋತ್ಸವ ಆಯೋಜಿಸಲಾಗಿದೆ. ಭಕ್ತಾದಿಗಳಿಗೆ ಮಧ್ಯಾಹ್ನ 1ಗಂಟೆಯಿಂದ ಅನ್ನ ಸಂತರ್ಪಣೆಯನ್ನು ಇರಲಿದೆ ಎಂದು ಶ್ರೀ ದೊಡ್ಡ ಹನುಮಂತ ದೇವರ ದೇವಸ್ಥಾನ ಟ್ರಸ್ಟ್ ಕಮಿಟಿ ಪ್ರಕಟಣೆಯಲ್ಲಿ ತಿಳಿಸಿದೆ.

ಸದಸ್ಯರಾಗಿ ನೇಮಕ



◆**ಧಾರವಾಡ:** ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗಕ್ಕೆ ಹೆಚ್ಚುವರಿ ಸದಸ್ಯರಾಗಿ ಧಾರವಾಡದ ಗೀತಾ ಮಲ್ಲಿಕಾರ್ಜುನ ಥಾಂವಶಿ ಅವರನ್ನು ನಾಮನಿರ್ದೇಶನ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ವೃತ್ತಿಯಿಂದ ವಕೀಲರಾದ ಗೀತಾ ಅವರನ್ನು ಮೂರು ವರ್ಷಗಳ ಅವಧಿ ಅಥವಾ ಮುಂದಿನ ಆದೇಶದವರೆಗೆ ಸದಸ್ಯರಾಗಿ ನೇಮಕ ಮಾಡಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿಗಳು ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.

ಸಂಗೀತ ಕಾರ್ಯಕ್ರಮ ಇಂದು

◆**ಹುಬ್ಬಳ್ಳಿ:** ನಗರದ ರಂಗರೇಜಾ ಕಲಾ ಬಳಗ, ಕನ್ನಡ ಹಾಗೂ ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ವಿಶ್ವ ರಂಗ ಭೂಮಿ ದಿನಾಚರಣೆ-2026 ಅಂಗವಾಗಿ ವರಕವಿ ಡಾ. ದ.ರಾ. ಬೇಂದ್ರೆಯವರ ನಾಟಕ ದೆವ್ವನ ಮನೆ ಹಾಗೂ ಸಂಗೀತ ಕಾರ್ಯಕ್ರಮ ಮಾ. 28ರಂದು ಸಂಜೆ 5 ಗಂಟೆಗೆ ನಗರದ ಸವಾಯಿ ಗಂಧರ್ವ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಬಳಗ ಅಧ್ಯಕ್ಷ ಬಸವರಾಜ ಚಕ್ರಸಾಲಿ ಹೇಳಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿರಿಯ ಪತ್ರಕರ್ತ ಗಣಪತಿ ಗಂಗೊಳ್ಳಿ ಸಮಾರಂಭಕ್ಕೆ ಚಾಲನೆ ನೀಡಲಿದ್ದಾರೆ. ಅಧ್ಯಕ್ಷತೆ ಡಾ. ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ ಡಾ. ಕೆ.ಎಸ್. ಶರ್ಮಾ ವಹಿಸುವರು ಎಂದರು.

14ನೇ ಪದವಿ ದಿನ ಇಂದು

◆**ಹುಬ್ಬಳ್ಳಿ:** ನಗರದ ಕೆಎಲ್‌ಇ ಸಂಸ್ಥೆ ಪಿ.ಸಿ. ಜಾಬಿನ ವಿಜ್ಞಾನ ಕಾಲೇಜ್‌ನಲ್ಲಿ 14ನೇ ಪದವಿ ದಿನವನ್ನು ಮಾ. 28 ರಂದು ಬೆಳಿಗ್ಗೆ 10 ಗಂಟೆಗೆ ಕಾಲೇಜ್‌ನ ಚತುಷ್ಪಥದಲ್ಲಿ ಹಮ್ಮಿಕೊಳ್ಳಲಾಗಿದೆ. ಕವಿವಿ ಉಪಕುಲಪತಿ ಪ್ರೊ. ಎ.ಎಂ. ಖಾನ್, ಚಾಣಕ್ಯ ವಿವಿಯ ವಿದ್ಯಾರ್ಥಿಗಳ ವ್ಯವಹಾರ ವಿಭಾಗದ ಪ್ರೊ. ಶ್ರೀನಿವಾಸ ಬಳ್ಳಿ, ಕರ್ನಾಟಕ ವಿವಿ ಕುಲಸಚಿವ ಎನ್. ವೈ. ಮಟ್ಟಿಹಾಳ, ಕೆಎಲ್‌ಇ ಆಡಳಿತ ಮಂಡಳಿಯ ನಿರ್ದೇಶಕ ಮಂಜುನಾಥ ಮುನವಳ್ಳಿ, ಆಡಳಿತ ಮಂಡಳಿ ಅಧ್ಯಕ್ಷ ಶಂಕರಣ್ಣ ಮುನವಳ್ಳಿ ಅಧ್ಯಕ್ಷತೆ ವಹಿಸುವರು. ಕಾಲೇಜ್ ಪ್ರಾಂಶುಪಾಲರಾದ ಸಂಧ್ಯಾ ಕುಲಕರ್ಣಿ ಭಾಗವಹಿಸುವರು. ವಿದ್ಯಾರ್ಥಿನಿ ರಮ್ಯಾ ಬುಡಿ, ನೇಹಾ ನಾಯಕ, ಮಧು ಪಡಲಾಲೆ, ಸ್ವಾತಿ ಕೆ.ಎಂ., ಸಮ್ರೀನ್ ಖಾನ್, ಸುನಿತಾ ಅವರಿಗೆ ಚಿನ್ನದ ಪದಕಗಳನ್ನು ನೀಡಲಾಗುವುದು. ಒಟ್ಟು 648 ಪದವೀಧರರಿಗೆ ಪದವಿ ಪ್ರದಾನ ಮಾಡಲಾಗುವುದು ಎಂದು ಪರೀಕ್ಷಾ ನಿಯಂತ್ರಕ ಡಾ. ಮಹಾಂತೇಶ ಎಂ. ತಿಳಿಸಿದರು.

ಪ್ರಶಸ್ತಿ ಪ್ರದಾನ ನಾಳೆ

◆**ಹುಬ್ಬಳ್ಳಿ:** ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಸುನಿಧಿ ಕಲಾ ಸೌರಭದ ವತಿಯಿಂದ ಮಾರ್ಚ್ 29ರಂದು ಸಂಜೆ 6ಗಂಟೆಗೆ ನಗರದ ಸವಾಯಿ ಗಂಧರ್ವ ಸಭಾಭವನದಲ್ಲಿ ಸಾಧಕರಿಗೆ ರಂಗಸೌರಭ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ನಾಟಕ ಪ್ರದರ್ಶನವು ಹಮ್ಮಿಕೊಳ್ಳಲಾಗಿದೆ ಎಂದು ರಂಗಾಯಣ ಮಾಜಿ ನಿರ್ದೇಶಕ ಸುಭಾಸ ನರೇಂದ್ರ ಹೇಳಿದರು. ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಅವರು, ಕೆಎಲ್‌ಇ ಆಸ್ಪತ್ರೆ ನಿರ್ದೇಶಕ ಡಾ. ಎಂ.ಜಿ. ಹಿರೇಮಠ ಮತ್ತು ಭರತನಾಟ್ಯ ಕಲಾವಿದ ವಿದ್ವಾನ್ ಸುಜಯ್ ಶಾನಭಾಗ ಅವರಿಗೆ ರಂಗ ಸೌರಭ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಸಿಂಧೂರತಾಯಿ ಸಪಕಾಳ ಅವರ ಜೀವನಾಧರಿತ ಏಕವ್ಯಕ್ತಿ ನಾಟಕ ಅನಾಥರ ಮಾಯಿ ಪ್ರದರ್ಶನವಾಗಲಿದೆ ಎಂದರು. ಪತ್ರಕರ್ತ ಬಂಡು ಕುಲಕರ್ಣಿ, ಸಿದ್ಧಾರೂಢಮಠ ಟ್ರಸ್ಟ್ ಚೇರ್‌ಮನ್ ಚನ್ನವೀರ ಮುಂಗರವಾಡಿ, ನಾಟಕಕಾರ ಡಾ. ಗೋವಿಂದರಾಜ ಮಣ್ಣೂರ, ಜಿಲ್ಲಾ ಕಸಾಪ ಅಧ್ಯಕ್ಷ ಲಿಂಗರಾಜ ಅಂಗಡಿ, ಉದ್ಯಮಿ ವೆಂಕಟೇಶ ಕಾಟವೆ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು. ವೀಣಾ ಅಠವಾಲೆ, ಸ್ವಾತಿ ಪಟೇಲ್ ಇದ್ದರು.

ನೀಲಪ್ಪ ಕಮ್ಮಾರ ನಿಧನ



◆**ಕುಂದಗೋಳ:** ತಾಲೂಕಿನ ಸಂಶಿ ಗ್ರಾಮದ ನಿವಾಸಿ ನೀಲಪ್ಪ ಶಿವಮೂರ್ತೆಪ್ಪ ಕಮ್ಮಾರ (67) ಈಚೆಗೆ ನಿಧನರಾದರು. ಮೃತರಿಗೆ ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗ ಅಗಲಿದ್ದಾರೆ.



ಧಾರಬಾಡ: ರಾಜ್ಯಮಟ್ಟದ ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿಗೆ ಭಾಜನರಾದ ಧಾರವಾಡದ ಗೀತಾ ಚಿಕ್ಕಮಠ ಅವರನ್ನು ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಸನ್ಮಾನಿಸಿ, ಗೌರವಿಸಿದರು.

ಡಾ.ರಾಚಯ್ಯ ಹಿರೇಮಠರಿಗೆ ಅಭಿನಂದನೆ ನಾಳೆ



◆**ಧಾರವಾಡ:** ಡಾ.ರಾಚಯ್ಯ ಹಿರೇಮಠ ಅಭಿನಂದನಾ ಸಮಿತಿ ಹಾಗೂ ಶಿಷ್ಯ ಬಳಗ ವತಿಯಿಂದ ಖ್ಯಾತ ತಬಲಾ ವಾದಕ ಪಂ. ರಾಚಯ್ಯ ಹಿರೇಮಠ ಅವರ ಅಭಿನಂದನಾ ಮಾ.29ರ ಸಂಜೆ 5ಕ್ಕೆ ನಗರದ ಆಲೂರು ವೆಂಕಟರಾವ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಕುರಿತು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಭಿನಂದನಾ ಸಮಿತಿ ಅಧ್ಯಕ್ಷ ಡಾ.ಅಲ್ಲಮಪ್ರಭು ಕಡಕೋಳ, ಕಲಾ ಪೋಷಕಿ ಭಾರತಿದೇವಿ ರಾಜಗುರು ಉದ್ಘಾಟಿಸಲಿದ್ದು, ಅಧ್ಯಕ್ಷತೆ ಗಾಯಕ ಸೋಮನಾಥ ಮರಡೂರ ವಹಿಸಲಿದ್ದಾರೆ. ಸಿತಾರಾ ವಾದಕ ಡಾ.ಮಲ್ಲಿಕಾರ್ಜುನ ತರ್ಲಗಟ್ಟಿ, ಹಿಂದೂಸ್ತಾನಿ ಗಾಯಕ ಡಾ. ಶಾಂತಾರಾಮ ಹೆಗಡೆ ಪಾಲ್ಗೊಳ್ಳಲಿದ್ದು, ವಿಜಯಪುರದ ಧೃತಿ ಮಠಪತಿ ನೃತ್ಯ ಪ್ರದರ್ಶನ ಮತ್ತು ಪಂ.ಕುಮಾರ ಮರಡೂರ ಗಾಯನ ಪ್ರಸ್ತುತಪಡಿಸುವರು. ಡಾ. ರಾಚಯ್ಯ ಹಿರೇಮಠ ಅವರಿಂದ ತಬಲಾ ಸೋಲೋ, ಹಿರೇಮಠ ಶಿಷ್ಯ ಬಳಗದ ವತಿಯಿಂದ ಸಮೂಹ ತಬಲಾ ವಾದನ ಪ್ರದರ್ಶನ ನಡೆಯಲಿದೆ. ಜೊತೆಗೆ ವಿವಿಧ ಕಲಾವಿದರಿಂದ ವಾದ್ಯ ಸಹಕಾರವೂ ಇರಲಿದೆ ಎಂದರು. ಡಾ. ಎ.ಎಲ್.ದೇಸಾಯಿ ಮಾತನಾಡಿ, ಡಾ.ರಾಚಯ್ಯ ಹಿರೇಮಠ ಅವರು ನಮ್ಮ ಕರ್ನಾಟಕದಲ್ಲಿ ತಬಲಾ ವಾದನಕ್ಕೆ ಹೊಸ ಆಯಾಮ ನೀಡಿರುವ ಧೀಮಂತರು. ಹಲವು ದಶಕಗಳಿಂದ ಸಂಗೀತ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ್ದು, ಹಿಂದೂಸ್ತಾನಿ ಸಂಗೀತ ಪರಂಪರೆಯಲ್ಲಿ ತಬಲಾ ವಾದನದ ಬೆಳವಣಿಗೆಗೆ ಬಹಳ ಮಹತ್ವದ ಕೊಡುಗೆ ನೀಡಿದವರು. ತಬಲಾ ವಾದಕ ಡಾ.ಅಲ್ಲಮಪ್ರಭು ಕಡಕೋಳ ಅವರ ನೇತೃತ್ವದಲ್ಲಿ ಅಭಿನಂದಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದರು. ಡಾ. ಶ್ರೀಹರಿ ದಿಗ್ಗಾವಿ, ಡಾ.ಬಸವರಾಜ ಕಲಿಗಾರ ಇದ್ದರು.



ಹುಬ್ಬಳ್ಳಿ: ಇಲ್ಲಿಯ ಹು-ಧಾ ಪೂರ್ವ ವಿಧಾನ ಸಭಾ ಕ್ಷೇತ್ರದ ವಾರ್ಡ್ ನಂ. 67 ರಲ್ಲಿ ಸದಸ್ಯ ಶಿವು ಮೆಣಸಿನಕಾಯಿ ಅವರು ಭೂಗತ ಕೇಬಲ್ ಅಳವಡಿಕೆಗೆ ಚಾಲನೆ ನೀಡಿದರು.

ನಗರದಲ್ಲಿ ನೀರಿಗಾಗಿ ಪರದಾಟ | ಖಾಲಿ ಕೊಡಗಳ ಪ್ರದರ್ಶನ

ನೀರಿಗಾಗಿ ಪಕ್ಷಾತೀತ ಹೋರಾಟ

◆**ಧಾರವಾಡ:** ನಗರದಲ್ಲಿ ತಲೆದೋರಿರುವ ತೀವ್ರ ಜಲಕ್ಷಾಮ ಹಾಗೂ ಅಸಮರ್ಪಕ ನೀರು ಪೂರೈಕೆ ವ್ಯವಸ್ಥೆ ಖಂಡಿಸಿ ಮಹಾನಗರ ಪಾಲಿಕೆಯ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಸದಸ್ಯರು ಶುಕ್ರವಾರ ಒಕ್ಕೊರಲಿನಿಂದ ಬೃಹತ್ ಪ್ರತಿಭಟನೆ ನಡೆಸಿದರು.

ಧಾರವಾಡ ಪಾಲಿಕೆ ಕಚೇರಿಯ ಆವರಣದಲ್ಲಿರುವ 24X7 ನೀರು ಪೂರೈಸುವ ಕಚೇರಿಯ ಮುಂಭಾಗದಲ್ಲಿ ಸದಸ್ಯರು ಕೈಯಲ್ಲಿ ಖಾಲಿ ಕೊಡಗಳನ್ನು ಹಿಡಿದು ಘೋಷಣೆಗಳನ್ನು ಕೂಗುವ ಮೂಲಕ ಆಡಳಿತ ಯಂತ್ರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸಾಮಾನ್ಯವಾಗಿ ಸೈದ್ಧಾಂತಿಕ ಮತ್ತು ರಾಜಕೀಯವಾಗಿ ಭಿನ್ನಾಭಿಪ್ರಾಯ ಹೊಂದಿರುವ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ಜನತೆಯ ಮೂಲಭೂತಸಮಸ್ಯೆಯಾದ ನೀರಿಗಾಗಿ ಪಕ್ಷಾತೀತವಾಗಿಯೇ ಒಂದಾಗಿ ಹೋರಾಟಕ್ಕಿಳಿದಿದ್ದು ವಿಶೇಷವಾಗಿತ್ತು.

ಪ್ರತಿಭಟನೆಯಲ್ಲಿ ಮಹಾನಗರ ಪಾಲಿಕೆ ಬಿಜೆಪಿ ಸದಸ್ಯರಾದ ಶಿವು ಹಿರೇಮಠ, ಸುರೇಶ ಬೇದರೆ, ಮಂಜುನಾಥ ಬಟ್ಟೆಣ್ಣವರ, ಅರವಳಾದ, ಕಾಂಗ್ರೆಸ್ ಸದಸ್ಯೆ ಕವಿತಾ ಕಬ್ಬೇರಿ, ಜೆಡಿಎಸ್ ಸದಸ್ಯೆ ಲಕ್ಷ್ಮೀ ಹಿಂಡಸಗೇರಿ ಸೇರಿದಂತೆ ಅನೇಕರು ಇದ್ದರು.

ಜವಾಬ್ದಾರಿ ವಹಿಸಿ ನೀರು ಪೂರೈಕೆಯ ಮೇಲ್ವಿಚಾರಣೆ ಮಾಡುವ ಎಲ್ ಆ್ಯಂಡ್ ಟಿ ಕಂಪನಿ ಮತ್ತು ಸಂಬಂಧಪಟ್ಟ ಅಧಿಕಾರಿಗಳು ಬೇಜವಾಬ್ದಾರಿತನ ಕೈಬಿಟ್ಟು, ಸಾರ್ವಜನಿಕರಿಗೆ ಕುಡಿಯಲು ಸಮರ್ಪಕವಾಗಿ ನೀರು ಪೂರೈಸಲು ಪ್ರತಿಭಟನಾಕಾರರು ಆಗ್ರಹಿಸಿದರು.



ರಾಜಕೀಯ ಪಕ್ಷ ಯಾವುದಾದರೇನು ಜನರಿಗೆ ಕುಡಿಯಲು ನೀರು ಸಿಗದಿದ್ದರೆ, ನಾವುಗಳು ಜನಪ್ರತಿನಿಧಿಗಳು ಆಗಿರುವುದು ವ್ಯರ್ಥ. ನಮಗೆ ಮತದಾನ ಮಾಡಿದ ಜನರಿಗೆ ಏನು ಉತ್ತರಿಸಬೇಕು. ಅಧಿಕಾರಿಗಳು ಎಚ್ಚೆತ್ತುಕೊಳ್ಳದಿದ್ದರೆ ಹೋರಾಟ ಮತ್ತಷ್ಟು ತೀವ್ರಗೊಳ್ಳಲಿದೆ.
■ **ಶಿವು ಹಿರೇಮಠ,**
ಬಿಜೆಪಿ ಸದಸ್ಯ, ಹು-ಧಾ ಮಹಾನಗರ ಪಾಲಿಕೆ



ಜನಪ್ರತಿನಿಧಿಗಳಿಂದ ಖಾಲಿ ಕೊಡ ಪ್ರದರ್ಶನ

ದಿನವೂ 24X7 ನೀರು ಪೂರೈಕೆ ಯೋಜನೆ ಅಡಿಯಲ್ಲಿ ಸರಿಯಾಗಿ ನೀರು ಬರುತ್ತಿಲ್ಲ. ಹಲವು ವಾರ್ಡ್‌ಗಳಲ್ಲಿ ವಾರಗಟ್ಟಲೆ ನೀರು ಸಹ ಪೂರೈಕೆಯಾಗುತ್ತಿಲ್ಲ ಎಂದು ಸದಸ್ಯರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರಲ್ಲದೇ ಮಹಿಳಾ ಸದಸ್ಯರು ಸೇರಿದಂತೆ ಪಾಲಿಕೆ ಎಲ್ಲ ಜನಪ್ರತಿನಿಧಿಗಳು ಖಾಲಿ ಕೊಡಗಳನ್ನು ಪ್ರದರ್ಶಿಸಿ ನಗರದ ಜನರಿಗೆ ಕುಡಿಯಲು ನೀರಿಲ್ಲದಿದ್ದರೆ, ನಾವುಗಳು ಸಾರ್ವಜನಿಕರಿಗೆ ಏನು? ಉತ್ತರ ನೀಡಬೇಕು ಎಂದು ಪ್ರಶ್ನಿಸಿದರು.

- ನಿಗದಿತ ಸಮಯಕ್ಕೆ ಮತ್ತು ಎಲ್ಲ ವಾರ್ಡ್‌ಗಳಿಗೆ ನೀರು ಪೂರೈಸಬೇಕು
- ಪೈಪ್‌ಲೈನ್ ಸೋರಿಕೆ ಮತ್ತು ತಾಂತ್ರಿಕ ದೋಷಗಳು ತಕ್ಷಣ ಸರಿಪಡಿಸಬೇಕು ಎಂಬುದು ಸದಸ್ಯರ ಬೇಡಿಕೆಗಳು

ಮೊಳಗಿದ ಶ್ರೀರಾಮ ನಾಮ ಸ್ಮರಣೆ

◆**ಧಾರವಾಡ:** ಸಾಂಸ್ಕೃತಿಕ ನಗರಿ ಧಾರವಾಡ ನಗರ ಹಾಗೂ ಗ್ರಾಮೀಣ ಭಾಗ ಸೇರಿ ಜಿಲ್ಲೆಯಲ್ಲಿ ಶುಕ್ರವಾರ ಶ್ರೀರಾಮನವಮಿ ಅತ್ಯಂತ ಶ್ರದ್ಧಾ, ಭಕ್ತಿ ಹಾಗೂ ಸಂಭ್ರಮ, ಸಡಗರದಿಂದ ಆಚರಿಸಲಾಯಿತು.

ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಪ್ರಮುಖ ರಾಮಮಂದಿರಗಳಲ್ಲಿ ಬೆಳ್ಳಂಬೆಳಗ್ಗೆ ಮರ್ಯಾದೆ ಪುರುಷ ಶ್ರೀರಾಮನಿಗೆ ವಿಶೇಷ ಪೂಜೆ, ಹೋಮ-ಹವನದ ಜೊತೆಗೆ ಸಾಂಸ್ಕೃತಿಕ ಕಾರ್ಯಗಳು ನಡೆದವು. ನಗರದ ಲೈನ್ ಬಜಾರ್ ಪುರಾತನ ರಾಮಮಂದಿರ, ಸಪ್ತಾಪುರ, ಮಾಳಮಡ್ಡಿ, ಸಾರಸ್ವತಪುರ ದೇಸ್ಥಾನಗಳಲ್ಲಿ ಬೆಳಗ್ಗೆ ಶ್ರೀರಾಮನ ವಿಗ್ರಹಕ್ಕೆ ಅಭಿಷೇಕದ ಜೊತೆ ಅಲಂಕಾರ ಕೂಡ ಮಾಡಲಾಗಿತ್ತು. ಧಾರವಾಡದ ಶತಮಾನದ ಇತಿಹಾಸ ಇರುವ ಲೈನ್ ಬಜಾರ್ ಮಂದಿರದಲ್ಲಿ ರಾಮಲಲ್ಲಾನಿಗೆ ವಿಶೇಷ ಬೆಣ್ಣೆ ಅಲಂಕಾರದ ಜೊತೆ ಜೊತೆ ಬೆಳಿಗ್ಗೆ ಕಾಕಡಾರತಿ, ಮುತ್ತಿನ ಪೋಷಾಕು ಧರಿಸಲಾಗಿತ್ತು. ಮಧ್ಯಾಹ್ನ 12ಕ್ಕೆ ರಾಮನ ಜನ್ಮದ ಸಂಕೇತವಾಗಿ ತೊಟ್ಟಿಲೋತ್ಸವ ಜರುಗಿತು. ಮುತ್ತೈದೆಯರು ಬಾಲರಾಮನ ತೊಟ್ಟಿಲಿಗೆ ಹಾಕುವುದರ ಜೊತೆಗೆ ಜೋಗುಳದ ಹಾಡುವ ದೃಶ್ಯಗಳು ಗೋಚರಿಸಿದವು. ಮಾಳಮಡ್ಡಿ ವನವಾಸಿ ರಾಮಮಂದಿರದಲ್ಲಿ ಶ್ರೀರಾಮನಿಗೆ ವಿವಿಧ ಧಾರ್ಮಿಕ ವಿಧಿ-ವಿಧಾನಗಳು ಜರುಗಿದವು. ರಾಮ ನಾಮ ಸ್ಮರಣೆ ಹಾಗೂ ಭಜನಾ ಕೀರ್ತನೆಗಳು ವಿಶೇಷವಾಗಿ ಗಮನ ಸೆಳೆದವು. ಶ್ರೀರಾಮನವಮಿ ಆಚರಣೆಯಲ್ಲಿ ಶಾಸ್ತ್ರೀಯ ಸಂಗೀತಕ್ಕೆ ಹೆಚ್ಚಿನ ಆದ್ಯತೆ ನೀಡಿತ್ತು. ಹಲವು ದೇವಸ್ಥಾನಗಳಲ್ಲಿ ರಾಮಾಯಣ ಪಾರಾಯಣ, ದಾಸ ಸಾಹಿತ್ಯದ ಗಾಯನ ಕಾರ್ಯಕ್ರಮಗಳು ಕೂಡ ನಡೆದವು. ಬಿಸಿಲಿನ ತಾಪದ ನಡುವೆಯೂ ಭಕ್ತರು ಸರತಿ ಸಾಲಿನಲ್ಲಿ ನಿಂತು ಶ್ರೀರಾಮನ ದರ್ಶನ ಪಡೆದರು. ರಸ್ತೆಯಲ್ಲಿ ವಿವಿಧ ಸಂಘ-ಸಂಸ್ಥೆಗಳು, ನೀರು, ಮಜ್ಜಿಗೆ, ಪಾನಕ, ಕೋಸಂಬರಿ ವಿತರಿಸಿದರು. ಕೆ.ಸಿ.ಪಾರ್ಕ್ ಹತ್ತಿರದ ರಾಮಮಂದಿರದಲ್ಲಿ ಹಾಗೂ ಹಳೇ ಧಾರವಾಡದ ಪ್ರಮುಖ ವೃತ್ತಗಳಲ್ಲಿ ಭಕ್ತರಿಗೆ ಬೃಹತ್ ಅನ್ನಸಂತರ್ಪಣೆ ಜರುಗಿತು. ಸಾವಿರಾರು ಜನರು ಜಾತಿ-ಬೇಧ ಮರೆತ ಪ್ರಸಾದ ಸ್ವೀಕರಿಸಿದರು. ಬಡಾವಣೆಗಳಲ್ಲಿ ಶ್ರೀರಾಮನ ಭಾವಚಿತ್ರದ ಭವ್ಯ ಮೆರವಣಿಗೆ ನಡೆದವು. ಯುವ ಜನಾಂಗ ಕೇಸರಿ ಧ್ವಜ ಹಿಡಿದು ಜೈ ಶ್ರೀರಾಮ್ ಎಂಬ ಘೋಷಣೆ ಕೂಗುತ್ತಾ, ಶಾಂತಿ ಸೌಹಾರ್ದತೆ ಸಂದೇಶ ಸಾರಿದರು.



ಶೇ.3ರಷ್ಟು ಆಸ್ತಿ ತೆರಿಗೆ ಹೆಚ್ಚಿಸಲು ನಿರ್ಣಯ

◆**ಅಣ್ಣಿಗೇರಿ:** ಪುರಸಭೆ ವ್ಯಾಪ್ತಿಯಲ್ಲಿ 2026-27ನೇ ಸಾಲಿನಲ್ಲಿ ಶೇ.3ರಷ್ಟು ಆಸ್ತಿ ತೆರಿಗೆ ಹೆಚ್ಚಿಸಲು ಸರ್ವಾನುಮತದಿಂದ ಏರಿಕೆ ಮಾಡಿ ಪುರಸಭೆ ಆಡಳಿತ ಮಂಡಳಿ ನಿರ್ಣಯ ಕೈಗೊಂಡಿತು.

ಪುರಸಭೆಯ ಸರ್ವ ಸದಸ್ಯರು ಅಧ್ಯಕ್ಷ ಶಿವಾನಂದ ಬೆಳಹಾರ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ಬೆಳಗ್ಗೆ ಪುರಸಭೆಯ ಸಭಾಭವನದಲ್ಲಿ ವಿವಿಧ ವಿಷಯಗಳ ಬಗ್ಗೆ ಸಾಮಾನ್ಯ ಸಭೆಯಲ್ಲಿ ಆಸ್ತಿ ತೆರಿಗೆ ಹೆಚ್ಚಿಸಿದರೆ ಮಾತ್ರ ಕೇಂದ್ರ ಸರ್ಕಾರದಿಂದ 16ನೇ ಹಣಕಾಸು ಯೋಜನೆಯಲ್ಲಿ ಅನುದಾನ ಬರಲಿದೆ. ಆದ್ದರಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಶೇ .3ರಿಂದ 5ರಷ್ಟು ಹೆಚ್ಚಿಸುವುದು ಅನಿವಾರ್ಯವಾಗಿದೆ.

ಆಸ್ತಿ ತೆರಿಗೆ ಮತ್ತು ನೀರಿನ ಕರ ಹೆಚ್ಚಳಕ್ಕೆ ಪ್ರಾರಂಭದಲ್ಲಿ ಸರ್ವ ಸದಸ್ಯರು ವಿರೋಧ ವ್ಯಕ್ತಪಡಿಸಿದರು ಕೂಡಾ ಅನುದಾನ ವಾಪಸ್ ಹೋಗುವ ಕಾರಣ ಶೇ.3ರಷ್ಟು ಹೆಚ್ಚಿಸಲು ಎಲ್ಲ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದರು.

24/7 ನೀರು ಸರಬರಾಜು ಯೋಜನೆಯಡಿ ನೀರು ಶುದ್ಧೀಕರಣ, ಪೈಪ್ ಲೈನ್ ನಿರ್ವಹಣೆ ಮತ್ತು ನಿರಂತರ ವಿದ್ಯುತ್ ಸರಬರಾಜಿನ ವೆಚ್ಚವನ್ನು ಭರಿಸಲು, ದರವನ್ನು ಪ್ರಸ್ತುತ 56 ರಿಂದ 100 ರವರೆಗೆ ಪರಿಷ್ಕರಿಸುವುದು ಅತ್ಯಗತ್ಯ. ಈ ಹೆಚ್ಚಳವು ಉತ್ತಮ ಗುಣಮಟ್ಟದ ಕುಡಿಯುವ ನೀರು, ಸೋರಿಕೆ ತಡೆಗಟ್ಟುವಿಕೆ ಮತ್ತು ಸುಸ್ಥಿರ ಮೂಲಸೌಕರ್ಯ ನಿರ್ವಹಣೆಗೆ ಸಹಕಾರಿಯಾಗಿದೆ. ಸಭೆಯನ್ನು ಉದ್ದೇಶಿಸಿ ಪುರಸಭೆಯ ಮುಖ್ಯ ಅಧಿಕಾರಿ ವೈ.ಜಿ. ಗದ್ದಿಗೌಡರ, ಮಾತನಾಡಿದರು.

ಪರಿಷ್ಕೃತ ದರವು ಗ್ರಾಹಕರಿಗೆ ಶುದ್ಧ ಮತ್ತು ಒತ್ತಡದ ನೀರು ದಿನದ 24 ಗಂಟೆಯೂ ಸಿಗುವಂತೆ ಖಚಿತಪಡಿಸುತ್ತದೆ. ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಸ್ವಾವಲಂಬಿಯಾಗಲು ಮತ್ತು ನೀರಿನ ಪೋಲಾಗುವುದನ್ನು ತಡೆಯಲು ದರ ಪರಿಷ್ಕರಣೆ ಅನಿವಾರ್ಯವಾಗಿದೆ.
■ **ನಾಗರಾಜ ದಳವಾಯಿ,**
ಉಪಾಧ್ಯಕ್ಷ



ಮಕ್ಕಳ ಬೀಳ್ಕೊಡುಗೆ ಸಮಾರಂಭ

◆**ನವಲಗುಂದ:** ನಗರದ ಎಲ್ಲಾ ಅಂಗನವಾಡಿ ಕೇಂದ್ರದ ಮಕ್ಕಳ ಬೀಳ್ಕೊಡುಗೆ ಸಮಾರಂಭವು ಶುಕ್ರವಾರ ನಗರದ ಕಳ್ಳಿಮಠ ಓಣಿಯ ಅಂಬೇಡ್ಕರ್ ಭವನದಲ್ಲಿ ಜರುಗಿತು.

ಸಿಡಿಪಿಒ ಗಾಯತ್ರೀದೇವಿ ಪಾಟೀಲ ಉದ್ಘಾಟಿಸಿ ಮಾತನಾಡಿ, ಶಾಲೆಗೆ ರಜೆ ಇದೆ ಎಂದು ಮಕ್ಕಳನ್ನು ಬಿಸಿಲಲ್ಲಿ ಆಟ ಆಡಲು ಬಿಡಬೇಡಿ. ಮೊಬೈಲ್ ಕೊಡಬೇಡಿ, ಮನೆಯಲ್ಲಿ ಬುದ್ಧಿ ಚುರುಕುವಾಗುವಂತ ಹಾಗೂ ದೈಹಿಕ ವ್ಯಾಯಾಮ ಆಗುವಂತ ಸಣ್ಣಪುಟ್ಟ ಆಟಗಳನ್ನು ಬಿಡುವಿನ ಸಮಯದಲ್ಲಿ ಆಡಿಸಿ ಮುಖ್ಯವಾಗಿ ಮಕ್ಕಳು ಆರೋಗ್ಯದ ಕಡೆ ಗಮನಹರಿಸಿ ಎಂದು ಪಾಲಕರಿಗೆ ಹೇಳಿದರು.

ಮಲ್ಲಿಕಾರ್ಜುನಗೌಡ್ರ ಸಂಗನಗೌಡ್ರ ಮಾತನಾಡಿದರು. ನಂತರ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಮೇಲ್ವಿಚಾರಕರಾದ ತುಳಸಾ ಮಳಲಿ, ಹಿರಿಯ ನಾಗರಿಕರಾದ ಗಂಗಮ್ಮ ಹುಳಕನ್ನವರ, ವಸಂತ ಕೊಣ್ಣೂರ ಮಾಜಿ ಸೈನಿಕರಾದ ಗುರುಸಿದ್ದಪ್ಪ ಕಟ್ಟೆಕಾರ, ಭಾರತಿ ಹಳೇಮನಿ, ಗಿರಿಜಾ ಹುಲ್ಲೂರ, ಮಂಜುಳಾ ಒಂಟಲಿ ಸೇರಿದಂತೆ ಅಂಗನವಾಡಿ ಕಾರ್ಯಕರ್ತೆಯರು, ಸಿಡಿಪಿಒ ಇಲಾಖೆಯ ಸಿಬ್ಬಂದಿ, ಮಕ್ಕಳು, ಪಾಲಕರು ಇದ್ದರು.



ಯುವ ವೈದ್ಯಕೀಯ ವಿದ್ಯಾರ್ಥಿಗಳು ತಜ್ಞರಿಂದ ಜ್ಞಾನ ಸಂಪಾದಿಸಲಿ: ಡಾ. ಭಗವಾನ್


◆**ಹುಬ್ಬಳ್ಳಿ:** ಯುವ ವೈದ್ಯಕೀಯ ವಿದ್ಯಾರ್ಥಿಗಳು ತಜ್ಞರಿಂದ ಹಲವಾರು ವಿಷಯಗಳನ್ನು ಕಲಿತು ಜ್ಞಾನ ಸಂಪಾದಿಸಬೇಕು. ಸದ್ಯ ಆಧುನಿಕ ತಂತ್ರಜ್ಞಾನಕ್ಕೆ ಮಹತ್ವವಿದ್ದು, ಅದನ್ನು ಅರಿಯಬೇಕು. ನೈತಿಕತೆ ಮೂಲಕ ಚಿಕಿತ್ಸೆಯಲ್ಲೂ ಸಮಾಜಕ್ಕೆ ಮಾದರಿಯಾಗಬೇಕು. ಆಗ ಉತ್ತಮ ವೈದ್ಯರಾಗಲು ಸಾಧ್ಯ ಎಂದು ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ(ಆರ್‌ಜಿಯುಎಚ್‌ಎಸ್)ದ ಕುಲಪತಿ ಡಾ. ಭಗವಾನ್ ಬಿ.ಸಿ. ಹೇಳಿದರು.

ನಗರದಲ್ಲಿ ಶುಕ್ರವಾರ ವಿದ್ಯಾನಗರದ ಕೆಎಂಸಿಆರ್ ಐ ಸಭಾಂಗಣದಲ್ಲಿ ಕೆಎಂಸಿಆರ್ ಐ ಶಸ್ತ್ರಚಿಕಿತ್ಸಾ ವಿಭಾಗವು ಅಸೋಸಿಯೇಷನ್ ಆಫ್ ಮಿನಿಮಲ್ ಆಕ್ಸೆಸ್ ಸರ್ಜನ್ ಆಫ್ ಇಂಡಿಯಾ (ಎಎಂಎಎಸ್ ಐ) ಮತ್ತು ಎಎಸ್‌ಐ ಹು-ಧಾ. ನಗರ ಶಾಖೆ ಸಹಯೋಗದೊಂದಿಗೆ ಎರಡು ದಿನಗಳ ಕಾಲ ಆಯೋಜಿಸಿರುವ ಲ್ಯಾಪ್ರೊ-2026 ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು. ಭಾರತ ವೈದ್ಯಕೀಯ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಹೊಂದುತಿದೆ. ಜಗತ್ತಿನಾದ್ಯಂತ ಲ್ಯಾಪ್ರೊಸ್ಕೋಪಿ(ಉದರ ದರ್ಶಕ) ವಿಧಾನ ಪ್ರಚಲಿತದಲ್ಲಿದೆ. ರಾಜ್ಯದ ಪ್ರತಿ ಜಿಲ್ಲಾ ಮಟ್ಟದಲ್ಲೂ ಲ್ಯಾಪ್ರೊಸ್ಕೋಪಿ ಸರ್ಜನ್ ಇದ್ದಾರೆ. ವೈದ್ಯಕೀಯ ಕ್ಷೇತ್ರದಲ್ಲಿ ಸಂವಹನ, ವೃತ್ತಿ ಕೌಶಲ್ಯ ಅಭಿವೃದ್ಧಿ ಪಡಿಸಿಕೊಂಡರೆ ಉತ್ತಮ ಹೆಸರು ಪಡೆದುಕೊಳ್ಳಬಹುದು ಎಂದರು.

ಲ್ಯಾಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸಾ ಪ್ರವರ್ತಕ ಡಾ. ಸಿ. ಪಳನಿವೇಲು ಮಾತನಾಡಿ, ನಾವು ಪಡೆದಂತಹ ಜ್ಞಾನವನ್ನು ಇನ್ನೊಬ್ಬರಿಗೆ ಹಂಚಿಕೆ ಮಾಡುವುದು ಬಹಳ ಮುಖ್ಯ. ವಿದ್ಯಾರ್ಥಿಗಳಲ್ಲಿ ಸಂಶೋಧನೆ, ಅಧ್ಯಯನ ನಿರಂತರವಾಗಿ ಆಗಬೇಕು. ಸರ್ಜರಿಗೆ ಮಾನ್ಯತೆ ಹೆಚ್ಚಿದೆ. ಶಸ್ತ್ರಚಿಕಿತ್ಸಕರು ಆಧುನಿಕ ತಂತ್ರಜ್ಞಾನ ಸಂಪರ್ಕವಾಗಿ ಬಳಸಿಕೊಳ್ಳಬೇಕು ಎಂದರು. ಇದೇ ಸಂದರ್ಭದಲ್ಲಿ ಗಣ್ಯರು ಡಾ. ಪಳನಿವೇಲು ಅವರ ಆತ್ಮಕಥೆಯ ಕನ್ನಡಕ್ಕೆ ಭಾಷಾಂತರಿಸಿದ ಗಟ್ ಪುಸ್ತಕ ಬಿಡುಗಡೆಗೊಳಿಸಿದರು. ಕೆಎಂಸಿಆರ್ ಐ ನಿರ್ದೇಶಕ ಡಾ. ಈಶ್ವರ ಹೊಸಮನಿ ಮಾತನಾಡಿ, ರೋಗಿಗಳ ಆರೈಕೆ ಜೊತೆಗೆ ಕೌಶಲ ಅಭಿವೃದ್ಧಿ ಮುಖ್ಯವಾಗುತ್ತದೆ. ಆಧುನಿಕ ತಂತ್ರಜ್ಞಾನದ ಅರಿವು ಮೂಡಿಸಲು ಕೆಎಂಸಿಆರ್ ಐ ಶ್ರಮಿಸುತ್ತಿದೆ ಎಂದರು. ಸಮ್ಮೇಳನದಲ್ಲಿ ರಾಷ್ಟ್ರೀಯ ಎಎಸ್‌ಐ ಅಧ್ಯಕ್ಷ ಡಾ. ಮುರುತು ಪಾಂಡಿಯನ್, ಡಾ. ರಾಜಗೋಪಾಲ ಶೆಣೈ, ಡಾ. ರೋಷನ ಶೆಟ್ಟಿ, ಡಾ. ಸಮೀರ, ಡಾ. ನಾಸ್ ಜಹಾನ್ ಶೇಖ, ಡಾ. ಗಡ್ರಿ ದಿವಾಕರ, ಡಾ. ಜಿ. ಸಿದ್ದೇಶ, ಡಾ. ಸುರೇಶಚಂದ್ರ ಹರಿ, ಡಾ. ಪ್ರವೀಣ ಸೂರ್ಯವಂಶಿ, ಡಾ. ಜೋಗೀಂದ್ರ, ಕೆಎಂಸಿಆರ್ ಐ ಪ್ರಾಂಶುಪಾಲ ಡಾ. ಸೂರ್ಯಕಾಂತ ಕಲ್ಲೂರಾಯ, ಡಾ. ವೀಣಾ ಭಟ್ಟ, ಡಾ. ಕಸ್ತೂರಿ ಡೋಣಿಮಠ ಇದ್ದರು.



ಬೃಹತ್ ಶೋಭಾಯಾತ್ರೆ ನಾಳೆ: ಗಂಡಗಾಳೇಕರ



◆**ಹುಬ್ಬಳ್ಳಿ:** ನಗರ ಬಾನಿ ಓಣಿಯ ಶಕ್ತಿ ರೋಡ್ ಶ್ರೀ ಶಕ್ತಿ ಯುವಕ ಮಂಡಳ ಹಾಗೂ ಶ್ರೀರಾಮ ನವಮಿ ಉತ್ಸವ ಸಮಿತಿ ವತಿಯಿಂದ ರಾಮನವಮಿ ಉತ್ಸವದ ಬೃಹತ್ ಶೋಭಾಯಾತ್ರೆ ಮಾ.29ರಂದು ಸಂಜೆ 4 ಗಂಟೆ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಪ್ರಧಾನ ಕಾರ್ಯದರ್ಶಿ ಕೃಷ್ಣಾ ಗಂಡಗಾಳೇಕರ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀರಾಮ, ಹನುಮಾನ, ಛತ್ರಪತಿ ಶಿವಾಜಿ, ಭಗೀರಥ ಮಹರ್ಷಿ ಅವರ ಮೂರ್ತಿ ಮೆರವಣಿಗೆ ಮಾಡಲಾಗುವುದು. ಶಕ್ತಿ ರೋಡ್ ಬಾನಿ ಓಣಿಯಿಂದ ಆರಂಭವಾಗಿ ಸ್ಟೇಷನ್ ರಸ್ತೆ, ಮರಾಠ ಗಲ್ಲಿ ರೋಡ್, ಮರಾಠಗಲ್ಲಿ ಸರ್ಕಲ್, ಕೊಪ್ಪಿಕರ್ ರಸ್ತೆ ಮೂಲಕ ಮರಳಿ ಶಕ್ತಿ ರಸ್ತೆಗೆ ಬಂದು ತಲುಪಲಿದೆ. ಇದಕ್ಕೂ ಮೊದಲು ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಮೂರು ಸಾವಿರ ಮಠದ ಗುರುಸಿದ್ಧರಾಜಯೋಗೀಂದ್ರ ಸ್ವಾಮೀಜಿ, ಉಪ್ಪಾರ ಸಮಾಜ ಭಾರ್ಗಾವಾನಂದ ಗಿರಿ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಸಂಸದ ಜಗದೀಶ ಶೆಟ್ಟರ, ಶಾಸಕರಾದ ಅರವಿಂದ ಬೆಲ್ಲದ, ಪ್ರಸಾದ ಅಬ್ಬಯ್ಯ ಭಾಗವಹಿಸುವರು ಎಂದರು. ಉತ್ಸವ ಸಮಿತಿ ಅಧ್ಯಕ್ಷ ಸುಬ್ರಮಣ್ಯ ಶಿರಕೋಳ, ಪ್ರಭು ನವಲಗುಂದ ಮಠ, ರವಿ ನಾಯಕ, ವಿನಯ ಸಜ್ಜನರ, ರವೀಂದ್ರ, ಕೃಷ್ಣಾ ಅನೇಕರಿದ್ದರು.

ವಿಶ್ವಕ್ಕೆ ಪ್ರಭಾವ ಬೀರಿದ ಭಾರತೀಯ ಸಂಸ್ಕೃತಿ

◆**ಹುಬ್ಬಳ್ಳಿ:** ಭಾರತೀಯ ಕಲೆ ಮತ್ತು ಸಂಸ್ಕೃತಿಯು ವೈವಿಧ್ಯಮಯ ಮತ್ತು ಶ್ರೀಮಂತ ಪರಂಪರೆಯನ್ನು ಹೊಂದಿದೆ. ಪುರಾತನ ಇತಿಹಾಸ ಅನನ್ಯ ಭೌಗೋಳಿಕ ರಚನೆ, ವಿಭಿನ್ನ ಸಂಪ್ರದಾಯಗಳು ಮತ್ತು ಆಚರಣೆಗಳು ಸಂಸ್ಕೃತಿಯನ್ನು ರೂಢಿಸಿಕೊಂಡಿದೆ ಎಂದು ನಟಿ ಸಿರಿ ರವಿಕುಮಾರ ಹೇಳಿದರು.

ನಗರದ ಕೆಎಲ್‌ಇ ಸಂಸ್ಥೆಯ ಜೆಜಿಎಂಎಂಸಿ ಮೆಡಿಕಲ್ ಕಾಲೇಜ್‌ನಲ್ಲಿ ಪಿ.ಸಿ. ಜಾಬಿನ್ ಕಾಲೇಜ್‌ನ ಬಿಸಿಎ ವಿಭಾಗದಿಂದ ಏರ್ಪಡಿಸಿದ್ದ ರಂಗಮಂಚ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿ, ಭಾರತೀಯ ಸಂಸ್ಕೃತಿ ವಿಶ್ವದ ಇನ್ನಿತರ ಸಂಸ್ಕೃತಿಗಳ ಮೇಲೂ ತನ್ನ ಪ್ರಭಾವ ಬೀರಿದೆ. ಜೀವನದಲ್ಲಿ ಸಾಧಿಸಲು ಆತ್ಮವಿಶ್ವಾಸ, ಧನಾತ್ಮಕ ಚಿಂತನೆ ಮತ್ತು ನಿರಂತರ ಪ್ರಯತ್ನ ಆತ್ಯಗತ್ಯವಾಗಿದೆ ಎಂದರು.

ಕೆಎಲ್‌ಇ ಸಂಸ್ಥೆ ಜಂಟಿ ಕಾರ್ಯದರ್ಶಿ ಡಾ. ಪ್ರಕಾಶ ಕಡಕೋಳ ಮಾತನಾಡಿ, ನಮ್ಮ ಸಂಸ್ಕೃತಿಯು ಸಾವಿರಾರು ವರ್ಷಗಳ ಇತಿಹಾಸ ವೈವಿಧ್ಯತೆಯ ಮತ್ತು ವಸುದೈವ ಕುಂಟುಂಬಕಂ ಎಂಬ ಉದಾತ್ತ ತತ್ವಗಳ ಮೇಲೆ ನಿಂತಿದೆ. ಸಾಮಾಜಿಕ ಮೌಲ್ಯಗಳ ಮೂಲಕ ಸಹಿಷ್ಣುತೆ, ಐಕ್ಯತೆ ಮತ್ತು ನೈತಿಕತೆಯನ್ನು ಕಲಿಸುತ್ತದೆ ಎಂದರು.

ಪ್ರೊ. ರಮಾಕಾಂತ ಡಿ., ಡಾ. ಅಮರ ಪಿ., ಪ್ರೊ. ಸಿದ್ದಲಿಂಗಪ್ಪ ಸಿ ಕಡಕೊಳ, ಪ್ರೊ. ಶೃತಿ ಕೆ. ಮತ್ತು ಪ್ರೊ. ಜ್ಯೋತಿ ಇದ್ದರು.



ಬಸ್ ತಂಗುದಾಣ ನಿರ್ಮಾಣಕ್ಕೆ ಭೂಮಿಪೂಜೆ



◆**ಕುಂದಗೋಳ:** ತಾಲೂಕಿನ ಬು.ತರ್ಲಘಟ್ಟ ಗ್ರಾಮ ಪಂಚಾಯತ್ ವ್ಯಾಪ್ತಿಯ ಬು.ಕೊಪ್ಪ ಗ್ರಾಮದಲ್ಲಿ ಬಸ್ ತಂಗುದಾಣ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿತು.

ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಅವರ ಪ್ರದೇಶಾಭಿವೃದ್ಧಿ ಅನುದಾನದಡಿ ಅಂದಾಜು 5 ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ತಂಗುದಾಣ ಕಾಮಗಾರಿಗೆ ಅವರ ಪರವಾಗಿ ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಷಣ್ಮುಖ ಶಿವಳ್ಳಿ ಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿ ಬಳಿಕ ಮಾತನಾಡಿದ ಅವರು, ಗ್ರಾಮಸ್ಥರು ಮತ್ತು ವಿದ್ಯಾರ್ಥಿಗಳ ಬಹುಕಾಲದ ಬೇಡಿಕೆಗೆ ಸ್ಪಂದಿಸಿ ಈ ಯೋಜನೆ ಕೈಗೆತ್ತಿಕೊಳ್ಳಲಾಗಿದ್ದು, ಶೀಘ್ರ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದರು.

ಡಾ. ಬಸವರಾಜ ಗೊರವರ, ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಸತೀಶ ಕೊಬ್ಬಯ್ಯನವರ, ಗ್ರಾಪಂ ಮಾಜಿ ಅಧ್ಯಕ್ಷ ಶಂಬುಲಿಂಗಪ್ಪ ನಂದೆಪ್ಪನವರ, ಮುಖಂಡರಾದ ಹನುಮಪ್ಪ ವಿಜಾಪರ, ದೇವಪ್ಪ ಕಿತ್ತೂರು, ಪ್ರದಾನೆಪ್ಪ ಗೊರವರ, ಪಕ್ಕಪ್ಪ ಕುರಬರ, ಶಂಕ್ರಪ್ಪ ಪೂಜಾರ, ರಾಮಪ್ಪ ಶಿಗ್ಗಾವಿ, ಗ್ರಾಪಂ ಮಾಜಿ ಸದಸ್ಯ ಬಸವರಾಜ ಅಂಗಡಿ, ಮಾಜಿ ಉಪಾಧ್ಯಕ್ಷ ಇಂದ್ರಗೌಡ ಪಾಟೀಲ ಸೇರಿದಂತೆ ಮತ್ತಿತರರಿದ್ದರು.

ಬಂಟರ ಸಂಘದಿಂದ ಸುವರ್ಣ ಮಹೋತ್ಸವ ಸಮಾರಂಭ ನಾಳೆ

◆**ಹುಬ್ಬಳ್ಳಿ:** ಹುಬ್ಬಳ್ಳಿ-ಧಾರವಾಡ ಬಂಟರ ಸಂಘದ ವತಿಯಿಂದ ಸುವರ್ಣ ಮಹೋತ್ಸವ ಸಮಾರಂಭ ಮಾ. 29 ರಂದು ಬೆಳಿಗ್ಗೆ 9.30 ಕ್ಕೆ ಇಲ್ಲಿಯ ಉಣಕಲ್ ಕೆರೆ ಹತ್ತಿರ ನವೀನ ಹೋಟೆಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ಉಪಸ್ಥಿತಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್, ಶಾಸಕರಾದ ಅರವಿಂದ ಬೆಲ್ಲದ, ಪ್ರಸಾದ ಅಬ್ಬಯ್ಯ, ಮಹೇಶ ಟೆಂಗಿನಕಾಯಿ, ಪ್ರದೀಪ ಶೆಟ್ಟರ, ಉದ್ಯಮಿ ಪ್ರಸನ್ನ ಶೆಟ್ಟಿ , ಸಂಘದ ಅಧ್ಯಕ್ಷ ವಿಜಯಾನಂದ ಶೆಟ್ಟಿ ಭಾಗವಹಿಸಿವರು. ಈ ವೇಳೆ ಸ್ಥಾಪಕ ಸದಸ್ಯರಿಗೆ ಸನ್ಮಾನ, ಕೀರ್ತಿಶೇಷ ಕಟ್ಟೆರೆ ಶಂಕರ ಶೆಟ್ಟಿ ಸ್ಮರಣಾರ್ಥ ವಿದ್ಯಾರ್ಥಿ ವೇತನ ವಿತರಿಸಲಾಗುವುದು. ಸಂಜೆ 4.30 ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಸಂಸದ ಬ್ರಿಜೇಶ್ ಚೌಟ್, ಆಳ್ವಾಸ ಫೌಂಡೇಶನ್ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ, ಎಂಆರ್‌ಜಿ ಗ್ರೂಪ್ ಚೇರಮನ್ ಡಾ.ಕೆ. ಪ್ರಕಾಶ ಶೆಟ್ಟಿ, ಉದ್ಯಮಿ ಯು.ಬಿ. ಶೆಟ್ಟಿ, ಸತೀಶ ಆರ್.ಎನ್. ಶೆಟ್ಟಿ, ರಾಜೇಶ ನಾಯ್ಕ, ಭರತ್ ಶೆಟ್ಟಿ, ಹರೀಶ ಪೂಂಜ, ಸುರೇಶ ಶೆಟ್ಟಿ ಗುರ್ಮೆ, ಗುರುರಾಜ್ ಗಂಟಿಹೋಳೆ, ಭಾರತಿ ಶೆಟ್ಟಿ ಹಾಗೂ ವಿಜಯಾನಂದ ಶೆಟ್ಟಿ ಭಾಗವಹಿಸುವರು. ಡಾ. ಆರ್ ಎನ್. ಶೆಟ್ಟಿ ಸ್ಮಾರಕ ಪ್ರಶಸ್ತಿಯನ್ನು ಡಾ. ಎಂ. ಮೋಹನ ಆಳ್ವ, ಕೆ. ಪ್ರಕಾಶ ಶೆಟ್ಟಿ ಹಾಗೂ ಯು. ಸೀತಾರಾಮ ಶೆಟ್ಟಿ ಅವರಿಗೆ ನೀಡಲಾಗುವುದು ಎಂದು ಸಂಘ ಪ್ರಕಟಣೆಗೆ ತಿಳಿಸಿದೆ.



ಅಳ್ನಾವರ: ರಾಮನವಮಿ ಸಂದರ್ಭದಲ್ಲಿ ರಾಮನ ವೇಷದಲ್ಲಿ ಸಂಭ್ರಮಿಸಿದ ಸಖಿ ಹೇಮಾದ್ರಿ.

ಶ್ರೀರಾಮ ನವಮಿ ದಿನ ಜನಿಸಿದ ಕರುವಿಗೆ ಶ್ರೀರಾಮನ ಹೆಸರು ನಾಮಕರಣ

ಬಾದಾಮಿ: ಐತಿಹಾಸಿಕ ತಾಲೂಕಿನ ವಿಶ್ವ ಪ್ರಸಿದ್ಧ ಪ್ರವಾಸಿ ತಾಣ ಪಟ್ಟದಕಲ್ಲು ಗ್ರಾಮದಲ್ಲಿ ಶ್ರೀರಾಮ ನವಮಿ ದಿನ ಜನಿಸಿದ ಕರುವಿಗೆ ಶ್ರೀರಾಮನ ಹೆಸರು ನಾಮಕರಣ ಮಾಡಲಾಗಿದೆ.

ಶುಕ್ರವಾರ ಬೆಳಗ್ಗೆ 9 ಗಂಟೆಗೆ ಗೋಮಾತೆ ತನ್ನ ಕರುವಿಗೆ ಜನ್ಮ ನೀಡಿದ್ದು, ಹುಟ್ಟಿದ ಗಂಡು ಕರುವಿಗೆ ಕುಟುಂಬದ ಸದಸ್ಯರಲ್ಲಿ ಸಂತಸ ಸಂಭ್ರಮ ಮನೆ ಮಾಡಿತ್ತು. ಏಕೆಂದರೆ ಶ್ರೀರಾಮನವಮಿ ಹಬ್ಬದ ದಿನದಂದು ರೈತನ ಮನೆಯಲ್ಲಿ ಗಂಡು ಕರು ಹುಟ್ಟಿರುವುದು ಅದಕ್ಕೆ ಗೋಕರುವಿಗೆ ಧಾರ್ಮಿಕ ವಿಧಿ ವಿಧಾನಗಳದಿಂದ ಹೂವಿನ ಹಾರ ಹಾಕಿ ಆರತಿ ಬೆಳಗಿ ಕರುವಿಗೆ ಪೂಜೆ ಮಾಡಿ ವಿಧಿ ವಿವಿಧ ಪದಾರ್ಥಗಳ ನೈವೇದ್ಯ ಮಾಡಿದರು.

ತದನಂತರ ಕುಟುಂಬದ ಸದಸ್ಯರು ಎಲ್ಲರು ಸೇರಿ ಆ ಗಂಡ ಕರುವಿಗೆ ಶ್ರೀರಾಮ ಎಂದು ನಾಮಕರಣ ಮಾಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮುತ್ತಪ್ಪ ಮೋಜ, ಬಸವ ಮೋಜ, ಮಲ್ಲಪ್ಪ ಕೋಟಿ ಗ್ರಾಮದ ಮುತ್ತೈದೆಯರು ಭಾಗವಹಿಸಿದ್ದರು.



ಇಂಧನ ಭದ್ರತೆ, ಜನ ಹಿತ ರಕ್ಷಣೆಗೆ ಆದ್ಯತೆ

ಪುಟ ೧➔ ಸರಬರಾಜು ಸರಪಳಿಗಳ ಸುಗಮ ಕಾರ್ಯಾಚರಣೆಯನ್ನು ಖಚಿತಪಡಿಸಿಕೊಳ್ಳುವಂತೆ ಹಾಗೂ ಅಕ್ರಮ ಸಂಗ್ರಹಣೆ ಮತ್ತು ಅತಿಲಾಭ ಪಡೆಯುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ ಮೋದಿ, ತಪ್ಪು ಮಾಹಿತಿ ಮತ್ತು ವದಂತಿಗಳ ಹರಡುವಿಕೆಯನ್ನು ತಡೆಯುವ ಅಗತ್ಯವಿದೆ ಎಂದು ಎಚ್ಚರಿಸಿದರು. ಜನರಲ್ಲಿ ಆತಂಕ ಉಂಟಾಗದಂತೆ ನಿಖರ ಮತ್ತು ವಿಶ್ವಾಸಾರ್ಹ ಮಾಹಿತಿಯನ್ನು ಸಮಯಕ್ಕೆ ಸರಿಯಾಗಿ ತಲುಪಿಸುವುದು ಅತ್ಯಗತ್ಯ ಎಂದರು.

ಪಶ್ಚಿಮ ಏಷ್ಯಾದ ಪರಿಸ್ಥಿತಿ ಉಲ್ಲೇಖಿಸಿ, ಭಾರತವು ಇಂತಹ ಜಾಗತಿಕ ಅಶಾಂತಿಗಳನ್ನು ಎದುರಿಸುವಲ್ಲಿ ಹಿಂದಿನಿಂದಲೂ ಅನುಭವ ಹೊಂದಿದೆ ಎಂದುಹೇಳಿದರು. ಕೋವಿಡ್-19 ಮಹಾಮಾರಿಯಸಮಯದಲ್ಲಿಕೇಂದ್ರ ಮತ್ತು ರಾಜ್ಯಗಳು ಟೀಮ್ ಇಂಡಿಯಾ ಆಗಿ ಕೆಲಸ ಮಾಡಿ ಸರಬರಾಜು ಸರಪಳಿ, ವ್ಯಾಪಾರ ಮತ್ತು ದೈನಂದಿನ ಜೀವನದ ಮೇಲೆ ಪರಿಣಾಮವನ್ನು ಕಡಿಮೆ ಮಾಡಿದುದನ್ನು ಅವರು ನೆನಪಿಸಿದರು. ಈಗಿನ ಪರಿಸ್ಥಿತಿಯನ್ನೂ ಎದುರಿಸಲು ಸಹಕಾರ ಮತ್ತು ಸಮನ್ವಯದ ಅದೇ ಮನೋಭಾವವೇ ಭಾರತದ ದೊಡ್ಡ ಶಕ್ತಿ ಎಂದು ಮೋದಿ ಹೇಳಿದರು. ಆನ್‌ಲೈನ್ ಮೋಸಗಳು ಮತ್ತು ನಕಲಿ ಏಜೆಂಟ್‌ಗಳ ವಿರುದ್ಧ ಜಾಗ್ರತೆ ವಹಿಸಲು ಸಲಹೆ ನೀಡಿದ ಅವರು, ಗಡಿ ಮತ್ತು ಕರಾವಳಿ ರಾಜ್ಯಗಳಲ್ಲಿ ಸಾಗಣೆ, ಅಗತ್ಯ ವಸ್ತುಗಳು ಮತ್ತು ಸಮುದ್ರ ಕಾರ್ಯಾಚರಣೆಗಳಿಗೆ ಸಂಬಂಧಿಸಿದ ಸವಾಲುಗಳನ್ನು ಎದುರಿಸಲು ವಿಶೇಷ ಗಮನಹರಿಸುವಂತೆ ಹೇಳಿದರು. ಜನರ ವಿಶ್ವಾಸವನ್ನು ಕಾಪಾಡುವುದು ಅತ್ಯಂತ ಮುಖ್ಯ ಎಂದು ಮೋದಿ ಒತ್ತಿಹೇಳಿದರು. ಅಗತ್ಯ ವಸ್ತುಗಳ ಲಭ್ಯತೆಯ ಬಗ್ಗೆ ಭರವಸೆ ನೀಡುವುದರಿಂದ ಜನರಲ್ಲಿ ಅನಗತ್ಯ ಆತಂಕ ತಡೆಯಬಹುದು ಎಂದು ಹೇಳಿದರು.

20% ವಾಣಿಜ್ಯ ಅಡುಗೆ ಅನಿಲ ಹೆಚ್ಚಳ: ಪ್ರಧಾನಿ ಸಕಾರಾತ್ಮಕ ಸ್ಪಂದನೆ

ಬೆಂಗಳೂರು: ರಾಜ್ಯದ ಹೋಟೆಲ್‌ಗಳಿಗೆ ಸದ್ಯ ನೀಡುತ್ತಿರುವ ಶೇ.50ರಷ್ಟು ವಾಣಿಜ್ಯ ಅಡುಗೆ ಅನಿಲವನ್ನು ಇನ್ನೂ ಶೇ.20ರಷ್ಟು ಹೆಚ್ಚಿಸಲು ಪ್ರಧಾನಿಯವರಲ್ಲಿ ಮನವಿ ಮಾಡಿದ್ದು, ಪ್ರಧಾನಿಯವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು. ಕರ್ನಾಟಕ ರಾಜ್ಯ ಸರ್ಕಾರದ ಪ್ರತಿನಿಧಿಯಾಗಿ ಭಾಗವಹಿಸಿದ ಅವರು, ಸಭೆಯ ವಿವರವನ್ನು ಹಂಚಿಕೊಂಡರು. ಕರ್ನಾಟಕವೂ ಈ ವಿಷಮ ಪರಿಸ್ಥಿತಿಯಲ್ಲಿ, ಕೇಂದ್ರದ ಜತೆಗೆ ಇರುವುದಾಗಿ ಪ್ರಧಾನಿಗಳಿಗೆ ಭರವಸೆ ನೀಡಲಾಗಿದೆ ಎಂದು ಮುನಿಯಪ್ಪ ತಿಳಿಸಿದರು.

ಅಬಕಾರಿ ಸುಂಕ ಕಡಿತ

ಪುಟ ೧➔ ಗುರುವಾರ ತಡರಾತ್ರಿ ಹೊರಡಿಸಿದ ಅಧಿಸೂಚನೆಯ ಪ್ರಕಾರ, ಪೆಟ್ರೋಲ್ ಮೇಲಿನ ಸುಂಕವನ್ನು 13 ರೂ.ಗಳಿಂದ 3 ರೂ.ಗೆ ಇಳಿಸಲಾಗಿದ್ದು, ಡೀಸೆಲ್ ಮೇಲಿನ ಸುಂಕವನ್ನು 10 ರೂ.ರಿಂದ ಸಂಪೂರ್ಣವಾಗಿ ತೆಗೆದುಹಾಕಲಾಗಿದೆ. ಇರಾನ್-ಅಮೆರಿಕ-ಇಸ್ರೇಲ್ ಸಂಘರ್ಷ ಹಾಗೂ ಹಾರ್ಮುಜ್ ಜಲಸಂಧಿಯ ಅಸ್ಥಿರತೆ ಈ ನಿರ್ಧಾರಕ್ಕೆ ಪ್ರಮುಖ ಕಾರಣವಾಗಿದ್ದು, ಇದರಿಂದ ಜಾಗತಿಕ ಇಂಧನ ಸರಬರಾಜಿನಲ್ಲಿ ಅಡಚಣೆ ಉಂಟಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ದೇಶೀಯ ಮಾರುಕಟ್ಟೆಯಲ್ಲಿ ಬೆಲೆ ಏರಿಕೆ ನಿಯಂತ್ರಿಸಲು ಸರ್ಕಾರ ಈ ಕ್ರಮ ಕೈಗೊಂಡಿದೆ. ಆದಾಗ್ಯೂ, ಸದ್ಯಕ್ಕೆ ಚಿಲ್ಲರೆ ಇಂಧನ ಬೆಲೆಗಳಲ್ಲಿ ಯಾವುದೇ ಬದಲಾವಣೆ ಕಂಡುಬಂದಿಲ್ಲ.

2 ವಾರದಲ್ಲಿ 5,500 ಕೋಟಿ ರೂ. ಆದಾಯ ನಷ್ಟ: ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಲೀಟರ್‌ಗೆ 10ರೂ. ಕೇಂದ್ರ ಅಬಕಾರಿ ಸುಂಕ ಕಡಿತ ಹಾಗೂ ವಿಮಾನ ಟರ್ಬೈನ್ ಇಂಧನ(ಎಟಿಎಫ್) ಮತ್ತು ಡೀಸೆಲ್ ರಫ್ತು ಮೇಲಿನ ಸುಂಕ ಹೆಚ್ಚಳದಿಂದ ಎರಡು ವಾರಗಳಲ್ಲಿ ಕೇಂದ್ರ ಸರ್ಕಾರಕ್ಕೆ ಒಟ್ಟಾರೆ 5,500 ಕೋಟಿ ಆದಾಯ ನಷ್ಟವಾಗಲಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಬಕಾರಿ ಸುಂಕ ಕಡಿತದಿಂದ ಸುಮಾರು 7 ಸಾವಿರ ಕೋಟಿ ರೂ. ಆದಾಯ ನಷ್ಟವಾಗಲಿದ್ದು, ಡೀಸೆಲ್ ಮತ್ತು ಎಟಿಎಫ್ ರಫ್ತು ಮೇಲಿನ ವಿಶೇಷ ಹೆಚ್ಚುವರಿ ಸುಂಕದಿಂದ 1,500 ಕೋಟಿ ರೂ. ಹೆಚ್ಚುವರಿ ಆದಾಯ ಲಭಿಸಲಿದೆ ಎಂದು ಹೇಳಿದರು. ಅಬಕಾರಿ ಕಡಿತದ ನಂತರ ಪೆಟ್ರೋಲ್ ಮೇಲಿನ ಒಟ್ಟು ಸುಂಕ ಪ್ರತಿ ಲೀಟರ್‌ಗೆ 11.9 ರೂ. ಆಗಿದ್ದು, ಇದರಲ್ಲಿ ಮೂಲ ಸುಂಕ 1.40 ರೂ., ವಿಶೇಷ ಹೆಚ್ಚುವರಿ ಸುಂಕ 3 ರೂ., ಕೃಷಿ ಮೂಲಸೌಕರ್ಯ ಸೆಸ್ 2.50 ರೂ. ಹಾಗೂ ರಸ್ತೆ ಸೆಸ್ 5 ರೂ. ಸೇರಿವೆ. ಮಾ.26ರಿಂದ ಡೀಸೆಲ್ ಮತ್ತು ಎಟಿಎಫ್ ರಫ್ತು ಮೇಲೆ ಕ್ರಮವಾಗಿ 21.5 ರೂ. ಮತ್ತು 29.5 ರೂ. ಪ್ರತಿ ಲೀಟರ್ ಸುಂಕ ವಿಧಿಸಲಾಗಿದೆ.

ರಾಮ ಬಾಣ



ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಜಗತ್ತಿನ ಅತಿ ಕಲುಷಿತ ದೇಶಗಳಲ್ಲಿ ಪಾಕಿಸ್ತಾನಕ್ಕೆ ನಂಬರ್ ಒನ್ ಸ್ಥಾನ - ಸುದ್ದಿ - ಹೊರಗಿನದೇ ಹೀಗಿರುವಾಗ ಒಳಗಿನ ಕಲುಷಿತ ಮಾನಸಿಕತೆ ಅದೆಷ್ಟು ಭೀಕರವಾಗಿದ್ದೀತು?

ದಿನ ಭವಿಷ್ಯ

ಮೇಷ ಕೆಲ ಅಹಿತಕರ ಪ್ರಸಂಗದಿಂದಾಗಿ ನಿಮ್ಮ ಆತ್ಮವಿಶ್ವಾಸ ಕುಸಿತ. ಹೋರಾಟ ಮನೋಭಾವ ಬಿಡಬೇಡಿ. ಇತರರ ಮನ ಒಪ್ಪಿಸಬೇಕಾಗಿಲ್ಲ.

ವೃಷಭ ಶುಭ ಸುದ್ದಿ ಕೇಳುವಿರಿ. ಕೌಟುಂಬಿಕ ಸಂಭ್ರಮ. ಆರೋಗ್ಯ ಸಮಸ್ಯೆ ನಿವಾರಣೆ. ನಿಮ್ಮ ಆರ್ಥಿಕ ಸ್ಥಿತಿ ಉತ್ತಮ ಪಡಿಸಲು ಯೋಜಿಸಿ.

ಮಿಥುನ ಮನಸ್ಸಿನ ಶಾಂತಿ ಕಾಪಾಡಿ. ವಾಗ್ವಾದ, ಸಂಘರ್ಷಕ್ಕೆ ಇಳಿಯದಿರಿ. ಹೊಸ ವ್ಯವಹಾರ ಆರಂಭಕ್ಕೆ ಕಾಲ ಸುಸೂತ್ರವಾಗಿದೆ. ಬಂಧು ಸಹಕಾರ.

ಕಟಕ ಉದ್ದಿಮೆಯಲ್ಲಿ ಹಣ ಹೂಡಲು ಸೂಕ್ತ ಸಮಯ. ನಿಮ್ಮ ಮೃದು ಸ್ವಭಾವ ಒಳ್ಳೆ ಫಲ ನೀಡದು. ಅವಶ್ಯ ಸಂದರ್ಭದಲ್ಲಿ ಕಠಿಣವಾಗಿ ವರ್ತಿಸಲು ಕಲಿಯಿರಿ.

ಸಿಂಹ ಅಹಿತಕರ ಪ್ರಸಂಗ ಎದುರಿಸುವಿರಿ. ಜಾಣ್ಮೆಯಿಂದ ನಿಭಾಯಿಸಿ. ಆಕರ್ಷಕ ವ್ಯಕ್ತಿಯ ಜತೆ ಸ್ನೇಹ ಬೆಳೆದೀತು. ಭಾವುಕ ಸನ್ನಿವೇಶಕ್ಕೆ ಸಾಕ್ಷಿ.

ಕನ್ಯಾ ಕಲಾವಿದರಿಗೆ ಉತ್ತಮ ದಿನ. ಕೌಟುಂಬಿಕ ಪರಿಸರ ಉಲ್ಲಾಸದಾಯಕ. ನೆಂಟರಿಷ್ಟರ ಸಮ್ಮುಖ ಆತ್ಮೀಯ ಕಾಲಕ್ಷೇಪ. ಆರ್ಥಿಕ ಉನ್ನತಿ.

ತುಲಾ ಸ್ಪಷ್ಟವಾಗಿ ನಿಮ್ಮ ಅಭಿಪ್ರಾಯ ವ್ಯಕ್ತಪಡಿಸಿ. ಕಹಿಸತ್ಯ ಹೇಳಲು ಹಿಂಜರಿಕೆ ಬೇಡ. ವ್ಯವಹಾರದಲ್ಲಿ ತುಸು ಹಿನ್ನಡೆ ಉಂಟಾದೀತು.

ವೃಶ್ಚಿಕ ಹಳಬರ ಭೇಟಿ ಸಂಭವ. ಹಳೆ ನೆನಪು ಕೆದುಕುವಿರಿ. ನಿಮ್ಮ ವ್ಯವಹಾರದಲ್ಲಿ ಅಡ್ಡಿ ಒದಗೀತು. ಸಹನೆಯ ನಡೆ ಒಳ್ಳೆಯದು.

ಧನು ಕಠಿಣ ಪರಿಸ್ಥಿತಿ ಒದಗಿದರೂ ಆತ್ಮವಿಶ್ವಾಸ ಬಿಡಬೇಡಿ. ಎಲ್ಲ ಕಷ್ಟವೂ ತಾತ್ಕಾಲಿಕ. ಅನಿರೀಕ್ಷಿತ ನೆರವು ಒದಗಲಿದೆ. ಬಂಧು ಭೇಟಿಯಿಂದ ಸಂತಸ.

ಮಕರ ಸಂಘಟಿತ ಕಾರ್ಯದಿಂದ ಯಶಸ್ಸು. ಏಕಾಂಗಿ ಪ್ರಯತ್ನ ಫಲ ನೀಡದು. ಕೇಳಿದವರಿಗೆಲ್ಲ ಹಣ ನೀಡಬೇಡಿ. ಕೌಟುಂಬಿಕ ಹೊಣೆ ಹೆಚ್ಚಳ.

ಕುಂಭ ಮುತುವರ್ಜಿಯಿಂದ ಕೆಲಸ ನಿರ್ವಹಿಸಿ. ಉದಾಸೀನತೆ ಕಾರ್ಯ ಕೆಡಿಸಬಹುದು. ಸಂಬಂಧ ಪಡದ ವಿಚಾರದಲ್ಲಿ ಹಸ್ತಕ್ಷೇಪ ಮಾಡಬೇಡಿ.

ಮೀನ ಹಣದ ವಿವಾದ ಪರಿಹಾರ. ಸಂಬಂಧದಲ್ಲಿ ಯಾವುದೇ ಅನುಮಾನ ಇಟ್ಟುಕೊಳ್ಳದಿರಿ. ಸಂವಹನ ಕೊರತೆಯಿಂದ ಆಪ್ತರ ಜತೆ ಮುನಿಸು ಸಂಭವ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ 3,7,5,1

ಮಹಾರಾಷ್ಟ್ರ ಕನ್ನಡಿಗರ ಜತೆ ಜಿಲ್ಲಾಧಿಕಾರಿ ಸಭೆಯಲ್ಲಿ ನಿರ್ಧಾರ

ಕನ್ನಡಿಗರ ಹಿತ ರಕ್ಷಣೆಗೆ ಒತ್ತು

ಬೆಳಗಾವಿ: ಮಹಾರಾಷ್ಟ್ರದಲ್ಲಿರುವ ಕನ್ನಡಿಗರ ಹಿತರಕ್ಷಣೆಗಾಗಿ ಕರ್ನಾಟಕ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ. ಗಡಿ ಸಚಿವ ಎಚ್.ಕೆ.ಪಾಟೀಲ್ ಅವರ ಸೂಚನೆಯಂತೆ ಬೆಳಗಾವಿಯಲ್ಲಿ ಸುಮಾರು ಎರಡು ದಶಕಗಳ ನಂತರ ಗಡಿ ಕನ್ನಡಿಗರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳ ನಡುವೆ ಐತಿಹಾಸಿಕ ಸಭೆ ನಡೆದಿದ್ದು, ಸುಮಾರು 24 ಪ್ರಮುಖ ಸಮಸ್ಯೆಗಳ ಬಗ್ಗೆ ಸುದೀರ್ಘ ಚರ್ಚೆ ನಡೆದಿದೆ.

ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಲಾಗಿರುವ ಸಭೆಯಲ್ಲಿ ಮಹಾರಾಷ್ಟ್ರದಲ್ಲಿರುವ ಕನ್ನಡಿಗರ ಹಿತ ರಕ್ಷಣೆ ಹಾಗೂ ಸಮಸ್ಯೆಗಳ ಕುರಿತು ಚರ್ಚೆಯಾಗಬೇಕೆಂದು ಗಡಿ ಸಚಿವರಾದ ಎಚ್.ಕೆ.ಪಾಟೀಲ ಅವರ ಸೂಚನೆಯಂತೆ ಮಹಾರಾಷ್ಟ್ರ ಗಡಿಯಲ್ಲಿರುವ ಕನ್ನಡಿಗರೊಂದಿಗೆ ಜಿಲ್ಲಾಮಟ್ಟದ ಅಧಿಕಾರಿಗಳ ಸಭೆ ಕರೆಯಲಾಗಿತ್ತು.

ಸುಮಾರು 23 ವರ್ಷಗಳ ಬಳಿಕ ಜಿಲ್ಲಾಧಿಕಾರಿ ಮೊಹ್ಮದ್ ರೋಷನ್ ಅವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದ ಸಭೆಯಲ್ಲಿ ಮಹಾರಾಷ್ಟ್ರದ ಮಾಜಿ ಶಾಸಕ ವಿಕ್ರಮ್ ಸಾವಂತ್, ನಗರ ಪೊಲೀಸ್ ಆಯುಕ್ತ ಭೂಷಣ್ ಬೋರಸೆ, ಸೇರಿದಂತೆ ಮಹಾರಾಷ್ಟ್ರ ಗಡಿಭಾಗದ ಕನ್ನಡಿಗರು ಭಾಗಿಯಾಗಿ ಸುಮಾರು 24 ಅಂಶಗಳ ಕುರಿತು ಸುದೀರ್ಘ ಸಭೆ ನಡೆಸಿದರು.

ಸಭೆಯ ಬಳಿಕ ಮಾತನಾಡಿದ ಜಿಲ್ಲಾಧಿಕಾರಿ ಮೊಹ್ಮದ್ ರೋಷನ್ ಅವರು, ಸುಮಾರು ತಿಂಗಳ ಹಿಂದೆ ಬೆಳಗಾವಿಯಲ್ಲಿರುವ ಮರಾಠಿ ಭಾಷಿಕರಿಗಾಗಿ ಒಂದು ಸಭೆ ಕರೆಯಲಾಗಿತ್ತು. ಅದರಂತೆ ಮಹಾರಾಷ್ಟ್ರದಲ್ಲಿರುವ ಕನ್ನಡಿಗರ ಸಮಸ್ಯೆಗಳನ್ನು ಅರಿಯಲು ಈ ಸಭೆ ಆಯೋಜಿಸಲಾಗಿದೆ. ಮಹಾರಾಷ್ಟ್ರದಲ್ಲಿರುವ ಕನ್ನಡ ಮಾಧ್ಯಮ ಶಾಲೆಗಳಿಗೆ ಕರ್ನಾಟಕ ಸರ್ಕಾರದಿಂದ ಒದಗಿಸಬಹುದಾದ ಹೆಚ್ಚಿನ ಸವಲತ್ತುಗಳು ಮತ್ತು ಕರ್ನಾಟಕದಲ್ಲಿರುವ ಮರಾಠಿ ಮಾಧ್ಯಮ ಶಾಲೆಗಳಿಗೆ ಕರ್ನಾಟಕ ಸರ್ಕಾರ ನೀಡುವ ಕುರಿತು ಚರ್ಚೆ ನಡೆದಿದೆ.

ಕರ್ನಾಟಕ ಸರ್ಕಾರದ ರಾಜ್ಯಮಟ್ಟದ ಯೋಜನೆಗಳನ್ನು ಮಹಾರಾಷ್ಟ್ರದಲ್ಲಿರುವಕನ್ನಡಿಗರಿಗೆತಲುಪಿಸಲುಚರ್ಚಿಸಲಾಗಿದೆ. ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ಸೇರಿದಂತೆ ಗಡಿಭಾಗದಲ್ಲಿ ಸದಾ ಶಾಂತಿ ಮತ್ತು ಸೌಹಾರ್ದತೆಯಿರಬೇಕು. ಇದರಿಂದ ಸಮಸ್ಯೆ ಪರಿಹರಿಸಲು ಸಾಧ್ಯ. ಮತ್ತೆ 2-3 ಸುತ್ತಿನ ಸಭೆ ನಡೆಸಿ, ಸೂಕ್ಷ್ಮತೆಗಳನ್ನು ಅರಿತು ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದರು.

ಮಹಾರಾಷ್ಟ್ರದಲ್ಲಿರುವ ಕನ್ನಡಿಗರಿಗೆ ಬಸ್ಸಿನ ವ್ಯವಸ್ಥೆ, ರಸ್ತೆ ಅಭಿವೃದ್ಧಿ, ನೀರಿನ ಸಮಸ್ಯೆ, ಸೇರಿದಂತೆ ಇನ್ನುಳಿದ ಸಮಸ್ಯೆಗಳನ್ನು ನಮ್ಮ ಮಟ್ಟದಲ್ಲಿ ಪರಿಹರಿಸಲು ಪ್ರಯತ್ನಿಸಲಾಗುವುದು. ನಮ್ಮ ಹಂತದಲ್ಲಿ ಸಾಧ್ಯವಾಗದ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಲಾಗುವುದು ಜಿಲ್ಲಾಧಿಕಾರಿ ಭರವಸೆ ನೀಡಿದರು.

ಜತ್ ತಾಲೂಕಿನ ಕೆಲ ಹಳ್ಳಿಗಳು ನೀರಿನ ಸಮಸ್ಯೆಗೆ ಸೋತು ಕರ್ನಾಟಕಕ್ಕೆ ಸೇರುವ ಠರಾವನ್ನು ಪಂಚಾಯಿತಿಯಲ್ಲಿ ಪಾಸ್ ಮಾಡಿವೆ. ಈ ಕುರಿತು ಅರ್ಜಿಗಳು ಬಂದಲ್ಲಿ ಸರ್ಕಾರದ ಗಮನಕ್ಕೆ ತರಲಾಗುವುದು ಎಂದರು. ಇನ್ನು ಮಹಾರಾಷ್ಟ್ರದ ಮಾಜಿ ಶಾಸಕರಾದ ವಿಕ್ರಮ್ ಸಾವಂತ್ ಅವರು ಈಗಾಗಲೇ ಗಡಿಭಾಗದ ಸಮಸ್ಯೆಗಳ ಕುರಿತು ಸಚಿವರಾದ ಎಚ್.ಕೆ.ಪಾಟೀಲ್ ಮತ್ತು ಎಂ.ಬಿ.ಪಾಟೀಲರನ್ನು ಭೇಟಿಯಾಗಿ ಗಮನ ಸೆಳೆಯಲಾಗಿತ್ತು.

ನಮ್ಮ ಕ್ಷೇತ್ರದಲ್ಲಿ ಶೇ.65ರಷ್ಟು ಕನ್ನಡಿಗರಿದ್ದು, ಮಾತೃಭಾಷೆಯಲ್ಲಿ ಶಿಕ್ಷಣ ನೀಡಬೇಕೆಂಬ ಪ್ರಯತ್ನವಿದೆ. ಪ್ರಥಮವಾಗಿ ಶಿಕ್ಷಣ, ರಸ್ತೆ, ನೀರು, ಬಸ್, ಮೂಲಸೌಲಭ್ಯಗಳ ಕುರಿತು ಮಹತ್ವದ ಚರ್ಚೆಯಾಗಿದೆ. ಕರ್ನಾಟಕದ 865 ಹಳ್ಳಿಗಳಿಗೆ ಮಹಾರಾಷ್ಟ್ರದಿಂದ ವಿವಿಧ ಯೋಜನೆಗಳು ದೊರೆಯುತ್ತವೆಯೋ ಅದೇ ಮಾದರಿಯಲ್ಲಿ ಮಹಾರಾಷ್ಟ್ರದಲ್ಲಿರುವ 747 ಹಳ್ಳಿಗಳ ಕನ್ನಡಿಗರಿಗೆ ಮೀಸಲಾತಿ ಸಿಗಬೇಕು. ಮಹಾರಾಷ್ಟ್ರ ಮತ್ತು ಕರ್ನಾಟಕದ ಜನರು ಮಾನವೀಯತೆಯ ದೃಷ್ಟಿಯಿಂದ ನೀರಿನ ನಿರ್ವಹಣೆಯಾಗಬೇಕು. ಜತ್, ಅಕ್ಕಲಕೋಟ್, ಸೋಲ್ಲಾಪುರಗಳಲ್ಲಿ ನೀರಿನ ಸಮಸ್ಯೆಯಿದ್ದು, ಮಳೆಗಾಲದಲ್ಲಿ ಕರ್ನಾಟಕದ ತುಬಚಿ-ಬಬಲೇಶ್ವರದಿಂದ ನೀರು ನೀಡಿ ಮತ್ತು ಬೇಸಿಗೆಯಲ್ಲಿ ತೆಗೆದುಕೊಳ್ಳುವ ನೀತಿಯನ್ನು ಅನುಸರಿಸಬೇಕಾಗಿದೆ. ಗಡಿಯಲ್ಲಿ ಶಿಕ್ಷಣ ಪಡೆದವರಿಗೆ ಶೇ.5ರಷ್ಟು ಮೀಸಲಾತಿ ಕರ್ನಾಟಕದಲ್ಲಿ ನೀಡಬೇಕು ಎಂದರು.



> ಕರ್ನಾಟಕ-ಮಹಾರಾಷ್ಟ್ರದ ಎರಡು ರಾಜ್ಯಗಳ ಸೌಹಾರ್ದತೆ ಕಾಪಾಡಾಲು ಬಂದಿರುವಾಗ ಬೆಳಗಾವಿಯಲ್ಲಿ ಕೆಲ ಸಂಘಟನೆಗಳು ಗಡಿ ವಿವಾದಕ್ಕಾಗಿ ಹೋರಾಡುತ್ತಿವೆ. ಮಾತೃಭಾಷೆಯ ಪ್ರೇಮ ಎಲ್ಲರಿಗೂ ಇರುವುದು ಸಹಜ. ಆದರೆ, ಅದಕ್ಕಿಂತ ಮೊದಲು ಬರುವುದು ಮಾನವೀಯತೆ. ಮಾನವೀಯ ಮೌಲ್ಯಗಳನ್ನು ಆಧರಿಸಿ ಅರಿತು ಬೆರೆತು ಬಾಳಬೇಕು.
> ■ **ವಿಕ್ರಮ್ ಸಾವಂತ್**, ಮಹಾರಾಷ್ಟ್ರದ ಮಾಜಿ ಶಾಸಕ

ಶಾಲೆ ಸ್ಥಾಪಿಸಲು ಸ್ವಂತ ಭೂಮಿ ಹೊಂದಿರಬೇಕು

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ ಪೂರ್ವ ಪ್ರಾಥಮಿಕದಿಂದಪ್ರೌಢಶಾಲೆಗಳನ್ನು ಸ್ಥಾಪಿಸಲುಬಯಸುವ ಖಾಸಗಿ ಸಂಸ್ಥೆಗಳು ಕನಿಷ್ಠ 15 ವರ್ಷಗಳ ಕಾಲ ನೋಂದಾಯಿತ ಗುತ್ತಿಗೆ ಅಥವಾ ಸ್ವಂತ ಭೂಮಿಯನ್ನು ಹೊಂದಿರಬೇಕು ಎಂಬ ಕರಡು ನಿಯಮವನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪ್ರಕಟಿಸಿದೆ.

ಈ ಕುರಿತು ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮ) (ತಿದ್ದುಪಡಿ) ನಿಯಮಗಳು 2026 ರ ಕರಡನ್ನು ಸರ್ಕಾರ ಹೊರಡಿಸಿದೆ. ಹೊಸ ಕರಡಿನಂತೆ ಭೂ ಮಾಲೀಕತ್ವದ ಪುರಾವೆಯಾಗಿ ಶಿಕ್ಷಣ ಸಂಸ್ಥೆಗಳು ಇನ್ನು ಮುಂದೆ (ಪಹಣಿ), ಇ-ಖಾತಾ ಅಥವಾ ಖಾತಾ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು.

ಈ ಭೂಮಿಯು ಶಾಲಾ ಕಟ್ಟಡ ಮತ್ತು ಆಟದ ಮೈದಾನಕ್ಕೆ ಪೂರಕವಾಗಿರಬೇಕು ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಂದ ಅನುಮತಿ ಪಡೆದಿರಬೇಕು ಎಂದು ಸೂಚಿಸಲಾಗಿದೆ.

ಹಾಗೆಯೇ ರಾಜ್ಯದ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ ಬದಲಾವಣೆ ಅಥವಾ ಸ್ಥಳಾಂತರಕ್ಕೆ ಸಂಬಂಧಿಸಿದಂತೆ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ ಬದಲಾವಣೆ ಅಥವಾ ಸ್ಥಳ ಬದಲಾವಣೆ) (ತಿದ್ದುಪಡಿ) ನಿಯಮಗಳು, 2026 ರ ಕರಡನ್ನು ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

ಉರುಳಿಗೆ ಸಿಲುಕಿ ಹುಲಿ ಸಾವು

ಮೈಸೂರು: ಉರುಳಿಗೆ ಸಿಲುಕಿ ಹುಲಿಯೊಂದು ಸಾವಿಗೀಡಾಗಿರುವ ಘಟನೆ ಜಿಲ್ಲೆಯ ಹುಣಸೂರು ತಾಲೂಕಿನ ನಾಗರಹೊಳೆ ಹುಲಿ ಮೀಸಲು ಅರಣ್ಯದ ಮೆಟ್ಟಿಕುಪ್ಪೆ ಶ್ರೇಣಿಯ ಬಳಿ ನಡೆದಿದೆ. ಹುಲಿ ಮೀಸಲು ಅರಣ್ಯದ ಗಡಿಯಿಂದ 300 ಮೀಟರ್ ದೂರದಲ್ಲಿರುವ ಆಸನಗುಂಡಿಯ ಗಿರೀಶ್ ಎಂಬುವರಿಗೆ ಸೇರಿದ ಫಾರಂ ಹೌಸ್‌ನ ಜಮೀನಿನಲ್ಲಿ ಕಾಡು ಹಂದಿಯನ್ನು ಬಲೆಗೆ ಬೀಳಿಸಲು ಬಲೆ ಹಾಕಲಾಗಿತ್ತು.

ಹಾವು ಕಡಿತ: ಸಾವು ಹೆಚ್ಚಳ

ಪುಟ ೧➔ ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ಹಾವು ಕಡಿತ ಪ್ರಕರಣಗಳನ್ನು ಹಾಗೂ ಹಾವು ಕಡಿತದಿಂದ ಸಂಭವಿಸುವ ಮರಣಗಳನ್ನು ಘೋಷಿತ ಖಾಯಿಲೆ ಎಂದು ಘೋಷಿಸಿ ಕರ್ನಾಟಕ ಸರ್ಕಾರ ಆದೇಶ ಹೊರಡಿಸಿರುವುದರಿಂದ, ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳು, ಖಾಸಗಿ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜುಗಳು ಕಡ್ಡಾಯವಾಗಿ ಕೇಂದ್ರ ಸರ್ಕಾರದ ಸಮಗ್ರ ಆರೋಗ್ಯ ಮಾಹಿತಿ ವೇದಿಕೆ ದಾಖಲು ಮಾಡುತ್ತಿರುತ್ತವೆ.

ಸರ್ಕಾರದಕ್ರಮಗಳು: ಎಲ್ಲಾ ಹಾವು ಕಡಿತ ಪ್ರಕರಣಗಳು ಹಾಗೂ ಮರಣಗಳನ್ನು ವರದಿ ಮಾಡುವುದು ಕಡ್ಡಾಯಗೊಳಿಸಲಾಗಿದೆ. ರಾಜ್ಯದಲ್ಲಿ ಈಗಾಗಲೇ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲೂಕು ಸಾರ್ವಜನಿಕ ಆಸ್ಪತ್ರೆ ಹಾಗೂ ಜಿಲ್ಲಾಸ್ಪತ್ರೆಗಳಲ್ಲಿ ಆ್ಯಂಟಿ ಸ್ನೇಕ್ ವೆನಮ್ (ಎಎಸ್‌ವಿ) ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ.

ರಾಜ್ಯದ ಎಲ್ಲಾ ತಾಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳನ್ನು ಹಾವು ಕಡಿತ ಚಿಕಿತ್ಸಾ ಕೇಂದ್ರಗಳಾಗಿ ಗುರುತಿಸಲಾಗಿದ್ದು, ಈ ಆಸ್ಪತ್ರೆಗಳಲ್ಲಿ ದಿನದ 24 ಗಂಟೆಯು ಹಾವು ಕಡಿತಕ್ಕೆ ಚಿಕಿತ್ಸೆ ಹಾಗೂ ಕಡಿತದಿಂದ ಉಂಟಾಗುವ ಬೇರೆ ಬೇರೆ ತೊಂದರೆಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ವೈದ್ಯಾಧಿಕಾರಿಗಳು ಹಾಗೂ ಇತರೆ ಆರೋಗ್ಯ ಸಿಬ್ಬಂದಿ ವಿವಿಧ ಹಂತಗಳಲ್ಲಿ ಹಾವು ಕಡಿತ ಚಿಕಿತ್ಸೆಯ ಬಗ್ಗೆ ತರಬೇತಿ ನೀಡಲಾಗಿದೆ. ಸಾಂಪ್ರದಾಯಿಕ/ನಾಟಿ ಚಿಕಿತ್ಸಕರಿಂದ ಹಾವು ಕಡಿತ ಪ್ರಕರಣಗಳು ಆಸ್ಪತ್ರೆ ಸೇರುವುದು ತಡವಾದಲ್ಲಿ ಅಥವಾ ಮರಣ ಹೊಂದಿದಲ್ಲಿ ಅವರ ಮೇಲೆ ಕೆಪಿಎಂಇ ಕಾಯ್ದೆ ಅಡಿಯಲ್ಲಿ ಜಿಲ್ಲಾ ಮಟ್ಟದಲ್ಲಿ ಕ್ರಮ ವಹಿಸಲು ಸೂಚಿಸಲಾಗಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಮುಂಗಡ ಹಣಕ್ಕಾಗಿ ಒತ್ತಾಯಿಸದೆ ಹಾವು ಕಚ್ಚಿದ ಸಂತ್ರಸ್ತರಿಗೆ ತಕ್ಷಣ ಜೀವ ಉಳಿಸುವ ಚಿಕಿತ್ಸೆ ಒದಗಿಸುವಂತೆ ಆದೇಶಿಸಲಾಗಿದೆ.



> ಹಾವು ಕಡಿತ ಮತ್ತು ಮರಣಗಳನ್ನು ತಡೆಗಟ್ಟಲು ದೇಶದಲ್ಲೇ ಪ್ರಪ್ರಥಮ ಬಾರಿಗೆ ರಾಜ್ಯವು ವಿವಿಧ ಇಲಾಖೆಗಳು ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಕುರಿತು ರಾಜ್ಯ ಕ್ರಿಯಾಯೋಜನೆಗೆ ಈಗಾಗಲೇ ಚಾಲನೆ ನೀಡಲಾಗಿದೆ. ಈ ಸಂಬಂಧ ಇಲಾಖೆ ಸೂಕ್ತ ಕ್ರಮ ಕೈಗೊಳ್ಳುತ್ತಿದೆ.
> ■ **ದಿನೇಶ್ ಗುಂಡೂರಾವ್**, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ

525 ಅಂಕಕ್ಕಿಳಿದ ಎಸ್ಸೆಸ್ಸೆಲ್ಸಿ ಪರೀಕ್ಷೆ

ಪುಟ ೧➔ **ಯಾವುದೇ ತೃತೀಯ ಭಾಷೆಗೆ ಮಾತ್ರ ಗ್ರೇಡ್:** ಒಟ್ಟು 1,64,000 ವಿದ್ಯಾರ್ಥಿಗಳು ತೃತೀಯ ಭಾಷೆ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದು, ಅದರಲ್ಲಿ 1,48,000 ವಿದ್ಯಾರ್ಥಿಗಳು ಕೇವಲ ಹಿಂದಿ ಭಾಷೆಯಲ್ಲಿಯೇ ಫೇಲ್ ಆಗಿರುವ ಆತಂಕಕಾರಿ ಅಂಶವನ್ನು ಸಚಿವರು ಮುಂದಿಟ್ಟಿದ್ದಾರೆ. ಆದ್ದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಿಂದಿ, ಸಂಸ್ಕೃತ, ತುಳು, ಮರಾಠಿ, ಅರೇಬಿಕ್ ಸೇರಿದಂತೆ ಪಠ್ಯಕ್ರಮದಲ್ಲಿರುವ ಎಲ್ಲಾ ತೃತೀಯ ಭಾಷೆಗೆ ಕಡ್ಡಾಯವಾಗಿ ಪರೀಕ್ಷೆ ಬರೆಯಬೇಕಾಗಿದೆ. ಜತೆಗೆ ತೃತೀಯ ಭಾಷೆಯು ಕೇವಲ ಗ್ರೇಡಿಂಗ್ (ಎ,ಬಿ,ಸಿ,ಡಿ)ಗೆ ಮಾತ್ರ ಸೀಮಿತವಾಗಲಿದ್ದು, ವಾರ್ಷಿಕ ಅಂಕಗಳ ಪಟ್ಟಿಗೆ ಪರಿಗಣನೆಯಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

16 ವರ್ಷದೊಳಗಿನ ಮಕ್ಕಳಿಗೆ ಸೋಷಿಯಲ್ ಮೀಡಿಯಾ ನಿರ್ಬಂಧ: ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ಮತ್ತು ಭವಿಷ್ಯ ದೃಷ್ಟಿಯಲ್ಲಿಟ್ಟುಕೊಂಡು 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ಬಳಕೆ ನಿರ್ಬಂಧಿಸುವ ಮಹತ್ವದ ಪ್ರಸ್ತಾಪವನ್ನು ಸದನದಲ್ಲಿ ಚರ್ಚಿಸಲಾಗಿದ್ದು, ಎಲ್ಲರಿಂದಲೂ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ. ಈ ಸಮಸ್ಯೆಯು ಕೇವಲ ಸರ್ಕಾರದ ಮಟ್ಟದಲ್ಲಿ ಬಗೆಹರಿಯುವುದಿಲ್ಲ. ಪೋಷಕರು ತಮ್ಮ ಮಕ್ಕಳ ಮೊಬೈಲ್ ಬಳಕೆಯ ಮೇಲೆ ಹೆಚ್ಚಿನ ಜವಾಬ್ದಾರಿ ವಹಿಸಬೇಕು ಎಂದು ಸಚಿವರು ಮನವಿ ಮಾಡಿದರು.

ಎಲ್ಲ ಪಠ್ಯಕ್ರಮ ಶಾಲೆಗೂ ಅನ್ವಯ

ಪುಟ ೧➔ ಇಲಾಖೆಯಿಂದ ಸ್ಪಷ್ಟನೆ ದೊರೆತ ತಕ್ಷಣ ಈ ಕುರಿತಾದ ಗೊಂದಲಗಳು ಬಗೆಹರಿಯಲಿವೆ ಎಂದು ಸಚಿವರು ತಿಳಿಸಿದರು. ರಾಜ್ಯ ಶಿಕ್ಷಣ ನೀತಿಯ (ಎಸ್‌ಇಪಿ) ಶಿಫಾರಸುಗಳನ್ನು ಇನ್ನೂ ಸಚಿವ ಸಂಪುಟದ ಮುಂದೆ ಮಂಡಿಸಬೇಕಿದ್ದು, ಒಮ್ಮೆ ಅದನ್ನು ಮಂಡಿಸಿ ಅನುಮೋದನೆ ಪಡೆದ ನಂತರ, ನಾವು ಕಾಯಂ ಆಗಿ ಅನ್ವಯವಾಗುವ ಮಾರ್ಗಸೂಚಿಗಳು ಮತ್ತು ಆದೇಶವನ್ನು ಹೊರಡಿಸುತ್ತೇವೆ. ಜತೆಗೆ ಕಿಂಡರ್ ಗಾರ್ಡನ್ ಪ್ರವೇಶದ ವಯೋಮಿತಿಗೆ ಸಂಬಂಧಿಸಿದಂತೆ ಸರಿಯಾದ ಮಾರ್ಗಸೂಚಿಗಳಿಲ್ಲದ ಕಾರಣ, ಪೋಷಕರಿಗೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ನಾವು ಸ್ಪಷ್ಟತೆ ನೀಡಬೇಕಾಗಿದೆ ಎಂದು ಮಧು ಬಂಗಾರಪ್ಪ ತಿಳಿಸಿದರು.



ನೇಪಾಳ ಪ್ರಧಾನಿ ಆಗಿ ಬಾಲೇಂದ್ರ ಶಾ ಪ್ರಮಾಣ

ಪುಟ ೧➔ **ಮೋದಿ ಅಭಿನಂದನೆ:** ಪ್ರಮಾಣವಚನ ಕಾರ್ಯಕ್ರಮ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು, ಬಾಲೇಂದ್ರ ಶಾ ಅವರನ್ನು ಅಭಿನಂದಿಸಿದ್ದಾರೆ. ಇದೇ ವೇಳೆ, ಭಾರತ-ನೇಪಾಳ ಸಂಬಂಧಗಳನ್ನು ಮುನ್ನಡೆಸಲು ತಮ್ಮ ನೇಪಾಳದ ಸಹವರ್ತಿಗಳೊಂದಿಗೆ ನಿಕಟವಾಗಿ ಕೆಲಸ ಮಾಡಲು ಎದುರು ನೋಡುತ್ತಿರುವುದಾಗಿ ಹೇಳಿದ್ದಾರೆ. ಪ್ರಧಾನಿ ಆಗಿ ನಿಮ್ಮ ಆಯ್ಕೆಯು ನೇಪಾಳದ ಜನರು ನಿಮ್ಮ ನಾಯಕತ್ವದ ಮೇಲೆ ಇಟ್ಟಿರುವ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ.

ಶಾಸಕರಿಗೆ ತಲಾ 2 ಐಪಿಎಲ್ ಟಿಕೆಟ್

ಪುಟ ೧➔ ಸಭೆಯ ಬಳಿಕ ಮಾತನಾಡಿದ ಡಿಸಿಎಂ ಡಿ.ಕೆ.ಶಿವಕುಮಾರ್, ಶಾಸಕರಿಗೆ ಟಿಕೆಟ್ ಕೇಳುವ ಹಕ್ಕಿದೆ ಎಂದು ಹೇಳಿದ್ದಾರೆ. ಸರ್ಕಾರದ ಭಾಗವಾಗಿರುವ ಕಾರಣ ಅವರಿಗೆ ಅವಕಾಶ ಕಲ್ಪಿಸಬೇಕು ಎಂದರು.ಅಲ್ಲದೇ ಮೊದಲ ಪಂದ್ಯದ ಟಿಕೆಟ್‌ಗಳು ಈಗಾಗಲೇ ಮಾರಾಟವಾಗಿವೆ ಎಂದು ಕೆಎಸ್‌ಸಿಎ ಮಾಹಿತಿ ನೀಡಿದೆ. ಹೀಗಾಗಿ ಈ ಪಂದ್ಯಕ್ಕೆ ಪ್ರತಿ ಶಾಸಕರಿಗೆ ಹಾಗೂ ಸಂಸದರಿಗೆ ಎರಡು ಟಿಕೆಟ್ ನೀಡಲು ಸೂಚಿಸಿದ್ದು, ಅವರೂ ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದರು.

ಎರಡು ಟಿಕೆಟ್ ನೀಡಲು ಒಪ್ಪಿದ ಕೆಎಸ್‌ಸಿಎ: ಚಿನ್ನಸ್ವಾಮಿ ಮೈದಾನದಲ್ಲಿ ನಡೆಯಲಿರುವ ಪಂದ್ಯಕ್ಕಾಗಿ ಶಾಸಕರಿಗೆ 1+1 ಟಿಕೆಟ್ ನೀಡಲು ಕೆಎಸ್‌ಸಿಎ ಒಪ್ಪಿಕೊಂಡಿದೆ. ಈ ಕುರಿತು ಕೆಎಸ್ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಹಾಗೂ ಪದಾಧಿಕಾರಿಗಳು ಸಿಎಂ ಸಿದ್ದರಾಮಯ್ಯ ಅವರನ್ನು ಕಾವೇರಿ ನಿವಾಸದಲ್ಲಿ, ಡಿ.ಕೆ.ಶಿವಕುಮಾರ್ ಅವರನ್ನು ವಿಧಾನಸೌಧದಲ್ಲಿ ಭೇಟಿ ಮಾಡಿ ಆಹ್ವಾನ ನೀಡಿದ್ದಾರೆ. ಭೇಟಿಯ ವೇಳೆ ಸಿಎಂ ಶಾಸಕರಿಗೆ ಹೆಚ್ಚುವರಿ ಟಿಕೆಟ್ ನೀಡುವಂತೆ ಬೇಡಿಕೆ ಇಟ್ಟಿದ್ದು, ನಾಲ್ಕು ಟಿಕೆಟ್ ಕೊಡಲು ಸೂಚಿಸಿದ್ದಾರೆ ಎನ್ನಲಾಗಿದೆ. ಇದಕ್ಕೆ ಕೆಎಸ್‌ಸಿಎ ಒಪ್ಪಿಗೆ ಸೂಚಿಸಿದ್ದು, ಈಗಾಗಲೇ ಮೊದಲ ಪಂದ್ಯದ ಟಿಕೆಟ್‌ಗಳು ಮಾರಾಟವಾಗಿರುವ ಹಿನ್ನೆಲೆಯಲ್ಲಿ ಶನಿವಾರದ ಪಂದ್ಯಕ್ಕೆ 1+1 ಟಿಕೆಟ್ ಹಾಗೂ ಮುಂದಿನ ಪಂದ್ಯಗಳಿಗೆ 4 ಟಿಕೆಟ್ ನೀಡುವುದಾಗಿ ಭರವಸೆ ನೀಡಿದೆ.

ಸುರಕ್ಷತೆ ಕುರಿತು ಸಿಎಸ್ ಸಭೆ

ಪುಟ ೧➔ ಕ್ರಿಕೆಟ್ ಪ್ರೇಮಿಗಳ ಸುರಕ್ಷತೆಗೆ ಕ್ರೀಡಾಂಗಣದ ಒಳಗೆ ಮತ್ತು ಕ್ರೀಡಾಂಗಣದ ಸುತ್ತ ರೂಪಿಸಿರುವ ಭದ್ರತಾ ವ್ಯವಸ್ಥೆ, ನಗರದ ಸಂಚಾರ ವ್ಯವಸ್ಥೆಯಲ್ಲಿ ಮಾಡಿಕೊಳ್ಳಲಾಗಿರುವ ಬದಲಾವಣೆಗಳು, ಪಾರ್ಕಿಂಗ್ ವ್ಯವಸ್ಥೆ, ಕ್ರೀಡಾಂಗಣದ ಒಳಗೆ ಕುಡಿಯುವ ನೀರು ಸೇರಿದಂತೆ ಇತರೆ ಅತ್ಯಾವಶ್ಯಕ ಸಂಗತಿಗಳ ಕುರಿತಾಗಿ ಮಾಹಿತಿ ಪಡೆದುಕೊಂಡರು. ಪಂದ್ಯಾವಳಿ ಆಯೋಜನೆಗೆ ಸರ್ಕಾರ ವಿಧಿಸಿರುವ ಷರತ್ತುಗಳು ಮತ್ತು ಎಚ್ಚರಿಕೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸಭೆಯಲ್ಲಿ ಸೂಚನೆ ನೀಡಿದರು. ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಂಸ್ಥೆಗಳು ಹೈ ಅಲರ್ಟ್ ಆಗಿರಬೇಕು. ಆಯಾ ಕ್ಷಣದ ಮಾಹಿತಿಗಳನ್ನು ಮೇಲಿನ ಅಧಿಕಾರಿಗಳಿಗೆ ನಿಯಮಿತವಾಗಿ ವಿನಿಮಯ ಮಾಡಿಕೊಳ್ಳಬೇಕು ಎನ್ನುವ ಸೂಚನೆಗಳನ್ನು ನೀಡಿದರು.

ಸಾದಿಕ್ ಪೈಲ್ವಾನ್ ಕಣದಿಂದ ನಿವೃತ್ತಿ

ಪುಟ ೧➔ ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಿದ್ದ ಸಾದಿಕ್ ಪೈಲ್ವಾನ್ ಅವರು ನನಗೆ ಬಹಳ ವರ್ಷಗಳಿಂದ ಪರಿಚಿತರು. ಮೈಸೂರಿನ ಕುಸ್ತಿ ಅಖಾಡಗಳಲ್ಲಿ ಅವರು ಪಾಲ್ಗೊಂಡಾಗ ಭೇಟಿಯಾಗುತ್ತಿದ್ದೆ ಎಂದರು.

ಅಭ್ಯರ್ಥಿಯಾಗಬೇಕೆಂದು ಯಾವುದೇ ವ್ಯಕ್ತಿ ಬಯಸುವುದು ತಪ್ಪಲ್ಲ, ನಿನ್ನೆ 11 ಜನ ನಾಮಪತ್ರ ಹಿಂಪಡೆದಿದ್ದಾರೆ. ಪಕ್ಷದ ಕೋರಿಕೆ ಮೇರೆಗೆ ಸಾದಿಕ್ ಅವರು ಚುನಾವಣಾ ಕಣದಿಂದ ನಿವೃತ್ತರಾಗಿರುವುದಕ್ಕೆ ಅವರಿಗೆ ಧನ್ಯವಾದಗಳು. ಶಾಸಕರಾದ ರಿಜ್ವಾನ್ ಅರ್ಷದ್, ಸಲೀಂ ಅಹ್ಮದ್, ನಜೀರ್ ಅಹ್ಮದ್ ಅವರು ದಾವಣಗೆರೆಗೆ ಭೇಟಿ ನೀಡಿದ್ದರು. ಅವರು ತಲುಪುವುದು ತಡವಾದ್ದರಿಂದ ನಾಮಪತ್ರ ಸಲ್ಲಿಸುವುದನ್ನು ತಡೆಯಲು ಸಾಧ್ಯವಾಗಲಿಲ್ಲ. ನಾನು ವಿಧಾನಪರಿಷತ್‌ನಲ್ಲಿ ಉತ್ತರ ನೀಡಬೇಕಿದ್ದರಿಂದ ಖುದ್ದು ಭೇಟಿ ಮಾಡಲಾಗಿಲ್ಲ ಎಂದು ಸಿದ್ದರಾಮಯ್ಯ ತಿಳಿಸಿದರು.

ಪಕ್ಷದ ಕಟ್ಟಾಳು; ನಿಷ್ಠಾವಂತ ಕಾರ್ಯಕರ್ತ: ಸಾದಿಕ್ ಪೈಲ್ವಾನ್ ಅವರು ಕಾಂಗ್ರೆಸ್‌ನಲ್ಲಿ ಸುಮಾರು 40 ವರ್ಷಗಳಿಂದ ಇದ್ದು, ಪಕ್ಷದ ಕಟ್ಟಾಳು. ದಾವಣಗೆರೆಯಲ್ಲಿ 70 ಸಾವಿರ ಮುಸ್ಲಿಂ ಮತದಾರರಿದ್ದಾರೆ. ಹೀಗಾಗಿ ಸಾದಿಕ್ ಟಿಕೆಟ್ ಆಕಾಂಕ್ಷಿ ಯಾಗಿದ್ದರು. ಹೈಕಮಾಂಡ್ ಇದನ್ನು ಪರಿಶೀಲಿಸಿ, ಮೃತರಾದವರ ಕುಟುಂಬದವರಿಗೆ ಟಿಕೆಟ್ ನೀಡುವ ಪದ್ಧತಿಯಂತೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಅವರ ಪುತ್ರ ಸಮರ್ಥ್‌ಗೆ ಟಿಕೆಟ್ ನೀಡಲಾಗಿದೆ ಎಂದರು.

ಸಾದಿಕ್ ಎದೆಯಲ್ಲಿ ಪಕ್ಷ ನಿಷ್ಠೆ: ಡಿಸಿಎಂ

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ದಾವಣಗೆರೆ ವಿಷಯದಲ್ಲಿ ಕೆಲವರು ದೊಡ್ಡ ಆತಂಕ ತೋರಿಸುತ್ತಿದ್ದರು. ಆದರೆ, ನಮಗೆ ನಮ್ಮ ಸಿದ್ಧಾಂತದ ಮೇಲೆ ನಂಬಿಕೆಯಿತ್ತು. ಸಾದಿಕ್ ಪೈಲ್ವಾನ್ ಹುಟ್ಟು ಕಾಂಗ್ರೆಸ್ಸಿಗ. ಅವರ ಎದೆಯಲ್ಲಿ ಪಕ್ಷ ನಿಷ್ಠೆಯೇ ಕಾಣಿಸುತ್ತಿದೆ. ಕಾಂಗ್ರೆಸ್ ಪಕ್ಷಕ್ಕೆ ತೊಂದರೆ ಆಗಬಾರದು ಎಂದು ಪೈಲ್ವಾನ್ ಒಪ್ಪಿಕೊಂಡಿದ್ದಾರೆ. ಮಲ್ಲಿಕಾರ್ಜುನ ಹಾಗೂ ಸಾದಿಕ್ ಪೈಲ್ವಾನ್ ಅಣ್ಣ ತಮ್ಮಂದಿರ ರೀತಿ ಇದ್ದವರು. ಪಕ್ಷವನ್ನು ಗೆಲ್ಲಿಸುತ್ತೇವೆ. ದೇಶಕ್ಕೆ ಒಂದು ಒಳ್ಳೆಯ ಸಂದೇಶ ಹೋಗಬೇಕು ಎಂದು ಸಾದಿಕ್ ಪೈಲ್ವಾನ್ ತಿಳಿಸಿದ್ದಾರೆ. ಹೀಗಾಗಿ ಸಾದಿಕ್ ಪೈಲ್ವಾನ್ ಅವರನ್ನು ಅಭಿನಂದಿಸುತ್ತೇನೆ ಎಂದರು.



> ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ನಾಡಿನಲ್ಲಿ ಕಾಂಗ್ರೆಸ್ ಆಡಳಿತ ಮಾಡಿಕೊಂಡು ಬಂದಿದೆ. ಒಂದು ಮನೆಯಲ್ಲಿ ಅಣ್ಣ ತಮ್ಮಂದಿರ ನಡುವೆ ಒಡಕು ಬಂದರೆ ಹಿರಿಯರು ಸರಿ ಮಾಡ್ತಾರೆ. ನಾನು ನನ್ನ ಮನೆಗೆ ಬಂದಿದ್ದೇನೆ. ಬಂಡಾಯ ಸ್ಪರ್ಧೆಯಿಂದ ನಾನು ನಿವೃತ್ತಿ ಆಗಿದ್ದೇನೆ.
> ■ **ಸಾದಿಕ್ ಪೈಲ್ವಾನ್**, ಕಾಂಗ್ರೆಸ್ ಮುಖಂಡ

ಬಿಜೆಪಿ ಅಭ್ಯರ್ಥಿ ಪರ ಬೊಮ್ಮಾಯಿ ಮತಯಾಚನೆ

ದಾವಣಗೆರೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಹಿಂದ ಸಮುದಾಯಗಳ ಜೊತೆಗೆ ಗುತ್ತಿಗೆ ಆಧಾರದ ರಾಜಕಾರಣವನ್ನು ಮಾಡುತ್ತ ಬಂದಿದ್ದಾರೆ. ದಾವಣಗೆರೆ ಜನರು ಸ್ವಾಭಿಮಾನ ಉಳಿಸಿಕೊಂಡು ಈ ಸರ್ಕಾರ ಕಿತ್ತೊಗೆಯುವ ತೀರ್ಮಾನ ಮಾಡಬೇಕು ಎಂದು ಸಂಸದ ಬಸವರಾಜ ಬೊಮ್ಮಾಯಿ ಕರೆ ನೀಡಿದರು.



ದಾವಣಗೆರೆಯ ಉಪಚುನಾವಣೆಯ ಹಿನ್ನೆಲೆಯಲ್ಲಿ ಶುಕ್ರವಾರ ನಾಗನೂರು ಗ್ರಾಮದಲ್ಲಿ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಅವರ ಪರವಾಗಿ ಮತಯಾಚನೆ ಮಾಡಿದರು. ಈ ಚುನಾವಣೆ ದಾವಣ ಗೆರೆಗೆ ಸೀಮಿತವಾಗಿರದ ಚುನಾವಣೆ. ದಾವಣಗೆರೆ ಮೀರಿ ಇರುವ ಚುನಾವಣೆ. ಇದನ್ನು ಮತದಾರರು ಅರ್ಥ ಮಾಡಿಕೊಂಡರೆ ಅವರು ಕೇವಲ ದಾವಣಗೆರೆ ಅಭಿವೃದ್ಧಿಗೆ ಮಾತ್ರವಲ್ಲ, ಒಂದು ಸುವ್ಯವಸ್ಥಿತ ಅಭಿವೃದ್ಧಿಗೆ ನಾಂದಿ ಹಾಡಲು ದಾವಣಗೆರೆ ದಕ್ಷಿಣದ ಮತದಾರರಿಗೆ ಅವಕಾಶ ಇದೆ ಎಂದರು. ದಾವಣಗೆರೆಗೆ ಹತ್ತಿರ ಇರುವ ಗ್ರಾಮೀಣ ಪ್ರದೇಶ ಅತ್ಯಂತ ಫಲವತ್ತಾದ ಭೂಮಿ, ನೀವು ಅತ್ಯಂತ ಪುಣ್ಯವಂತರು. ನಾವು ಒಣ ಬೇಸಾಯದಿಂದ ಬಂದವರು. ಈ ಪರಿಸರದ ತಕ್ಕ ಹಾಗೆ ನಿಮ್ಮ ಬದುಕು ಹಸಿರು ಮತ್ತು ಹಸನಾಗಬೇಕು. ಅದಕ್ಕಾಗಿ ಯೋಗ್ಯವಾದ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕು. ಇದುವರೆಗೂ ಹಿರಿಯರಿದ್ದರು. ಗೌರವ ನಮ್ಮ ಸಂಸ್ಕೃತಿ, ಸಂಸ್ಕಾರ ಅವರನ್ನು ಆಯ್ಕೆ ಮಾಡಿಕೊಂಡು ಬಂದಿದ್ದೀರಿ ಎಂದು ಬೊಮ್ಮಾಯಿ ಎಂದು ಹೇಳಿದರು.

ಮಾಹಿತಿ ನೀಡದ ಅಧಿಕಾರಿಗಳ ವಿರುದ್ಧ ಕ್ರಮ

ಬೆಂಗಳೂರು: ಮಾಹಿತಿ ಹಕ್ಕು ಕಾಯ್ದೆಯಡಿ ಸಾರ್ವಜನಿಕರು ಕೇಳಿದ ಮಾಹಿತಿಯನ್ನು ನೀಡಲು ವಿಫಲರಾದ ಅಧಿಕಾರಿಗಳ ವಿರುದ್ಧ ಕರ್ನಾಟಕ ಮಾಹಿತಿ ಆಯೋಗವು ಕಠಿಣ ಕ್ರಮ ಕೈಗೊಂಡಿದೆ. ಉಡುಪಿ ಜಿಲ್ಲೆಯ ಕಾರ್ಕಳದ ಶ್ರೀ ಮಾರಿಯಮ್ಮ ದೇವಾಲಯದ ಸಾರ್ವಜನಿಕ ಮಾಹಿತಿ ಅಧಿಕಾರಿಯೂ ಆಗಿರುವ ಆಡಳಿತ ಮೊಕ್ತೇಸರ ಕೆ.ಪಿ. ಗೋಪಾಲಕೃಷ್ಣರಾವ್ ಅವರಿಗೆ ಪ್ರತ್ಯೇಕ ನಾಲ್ಕು ಪ್ರಕರಣಗಳಲ್ಲಿ ಒಟ್ಟು ಒಂದು ಲಕ್ಷ ರೂ. ದಂಡ ವಿಧಿಸಿ ಮಾಹಿತಿ ಆಯುಕ್ತರು ಮಹತ್ವದ ಆದೇಶ ಹೊರಡಿಸಿದ್ದಾರೆ.

ಅರ್ಜಿದಾರರಾದ ಸೋಮನಾಥ ನಾಯಕ್ ಕೆ. ಅವರು ದೇವಾಲಯಕ್ಕೆ ಸಂಬಂಧಿಸಿದಂತೆ ಕೆಲವು ಮಾಹಿತಿಗಳನ್ನು ಕೋರಿ ಅರ್ಜಿ ಸಲ್ಲಿಸಿದ್ದರು. ಶ್ರೀಮಾರಿಯಮ್ಮ ದೇವಾಲಯವು ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಬರುವ ಎ ಗ್ರೇಡ್ ದೇವಾಲಯವಾಗಿದ್ದು, ಸರ್ಕಾರದಿಂದ ನೇಮಕಗೊಂಡ ಅಧಿಕಾರಿಯೇ ಮಾಹಿತಿ ನೀಡಲು ನಿರಾಕರಿಸಿದ್ದರು.

ಸಂಪಾದಕೀಯ

ಹೊಣೆಗೇಡಿ ವರ್ತನೆ ಸಲ್ಲದು

ಕೊಲ್ಲಿಯಲ್ಲಿ ಈಗ ನಡೆಯುತ್ತಿರುವುದು ಭಾರತ ಸಾರಿದ ಯುದ್ಧವಲ್ಲ, ಭಾರತವು ಅದರಲ್ಲಿ ಪಾಲ್ಗೊಂಡೂ ಇಲ್ಲ. ಯುದ್ಧನಿರತ ರಾಷ್ಟ್ರಗಳಿಂದ ಸಮಾನ ಅಂತರ ಕಾಯ್ದುಕೊಂಡು ದೇಶದ ಹಿತಾಸಕ್ತಿಯನ್ನಷ್ಟೆ ಗಮನದಲ್ಲಿಟ್ಟುಕೊಂಡು ಭಾರತ ಸರಕಾರವು ವ್ಯವಹರಿಸುತ್ತಿದೆ. ಕೊಲ್ಲಿ ಯುದ್ಧವು ಭಾರತವನ್ನಷ್ಟೇ ಅಲ್ಲದೆ ವಿಶ್ವದ ಎಲ್ಲಾ ರಾಷ್ಟ್ರಗಳನ್ನೂ ಬಾಧಿಸುತ್ತಿದೆ. ಅದಕ್ಕೆ ಕಾರಣ ಪೆಟ್ರೋಲಿಯಂ



ತೈಲ ಪೂರೈಕೆಯ ಕೇಂದ್ರದಲ್ಲೇ ಯುದ್ಧ ನಡೆಯುತ್ತಿರುವುದು. ತೈಲ ಪೂರೈಕೆಯನ್ನು ನಿರಂತರವಾಗಿಡಲು ಭಾರತವು ಇನ್ನಿಲ್ಲದ ಪ್ರಯತ್ನ ನಡೆಸುತ್ತಿದೆ. ಕೇವಲ ಒಂದು ರಾಷ್ಟ್ರವನ್ನಷ್ಟೇ ಅವಲಂಬಿಸದೆ ಸುಮಾರು 40 ದೇಶಗಳಿಂದ ತನಗೆ ಬೇಕಾದಂತಹ ತೈಲ ಮತ್ತು ಎಲ್‌ಪಿಜಿ ಪಡೆಯುತ್ತಿರುವುದರಿಂದ ಇತರ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಬಿಕ್ಕಟ್ಟು ಇನ್ನೂ ನಿಯಂತ್ರಣದ ಹಂತದಲ್ಲೇ ಇದೆ. ಇಂತಹ ಸಂದರ್ಭದಲ್ಲಿ ಸರಕಾರದ ಪ್ರಯತ್ನಗಳಿಗೆ ಬೆಂಬಲ ನೀಡುವುದು, ಸಹಕಾರ ನೀಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಹೌದು. ಎಲ್ಲಾ ರಾಜಕೀಯ ಪಕ್ಷಗಳೂ ಈ ಸಂದರ್ಭದಲ್ಲಿ ಸರಕಾರದೊಂದಿಗೆ ಸಹಕರಿಸಬೇಕಾದುದು, ದೇಶದಲ್ಲಿ ಪರಿಸ್ಥಿತಿ ಹದಗೆಡದಂತೆ ಹೊಣೆಗಾರಿಕೆಯಿಂದ ವರ್ತಿಸಬೇಕಾದುದು ಕರ್ತವ್ಯ.

ದುರಂತವೆಂದರೆ, ಬಹುತೇಕ ವಿರೋಧ ಪಕ್ಷಗಳು ಜನರಲ್ಲಿ ಅನವಶ್ಯ ಭಯಭೀತಿ ಸೃಷ್ಟಿಸುತ್ತಾ ಅರಾಜಕತೆ ಸೃಷ್ಟಿಸುವ ಪ್ರಯತ್ನ ಮಾಡುತ್ತಿವೆ. ಅಡುಗೆ ಅನಿಲ, ಪೆಟ್ರೋಲಿಯಂ ಉತ್ಪನ್ನಗಳ ಲಭ್ಯತೆ ಕುರಿತಂತೆ ಸುಳ್ಳು ಸುದ್ದಿ ಹರಡುತ್ತಿವೆ. ಲಾಕ್‌ಡೌನ್ ಹೇರಲು ಸರಕಾರವು ಸಿದ್ಧತೆ ನಡೆಸುತ್ತಿದೆ ಎಂದು ವದಂತಿ ಹರಡುತ್ತಿವೆ. ಸಿಲಿಂಡರ್‌ನಲ್ಲಿ ಗ್ಯಾಸ್ ಪ್ರಮಾಣವೇ ಕಡಿಮೆಯಾಗಿದೆ ಎಂದು ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಆರೋಪಿಸಿ ಬಳಿಕ ಅವರಿಗೆ ಸತ್ಯದರ್ಶನ ಮಾಡಿಸಿದ ಬಳಿಕ ಪೆಚ್ಚಾದರು. ಕಾಂಗ್ರೆಸ್ ಪಕ್ಷವಂತೂ ದೇಶಾದ್ಯಂತ ಅಡುಗೆ ಅನಿಲಕ್ಕೆ ಸಂಬಂಧಿಸಿ ಪ್ರತಿಭಟನೆ ನಡೆಸುತ್ತಿದೆ. ವಿಪರ್ಯಾಸವೆಂದರೆ ಕಾಂಗ್ರೆಸ್ ಮುಖಂಡರ ಮನೆಗಳಲ್ಲೆ ಅಕ್ರಮವಾಗಿ ದಾಸ್ತಾನು ಮಾಡಿದ ಸಿಲಿಂಡರ್‌ಗಳು ಕಾಣಸಿಗುತ್ತಿವೆ. ಇವರೆಲ್ಲರೂ ಭಾರತ ಸರಕಾರವೇ ಯುದ್ಧ ಘೋಷಿಸಿದ್ದು, ಭಾರತ ಸರಕಾರವೇ ಇಲ್ಲಿನ ತೈಲ ಬಿಕ್ಕಟ್ಟಿಗೆ ಕಾರಣ ಎಂಬಂತೆ ಹೇಳಿಕೆ ನೀಡುತ್ತಿರುವುದು ಬೇಜವಾಬ್ದಾರಿತನದ ಪರಮಾವಧಿ. ಕೆಲವು ಎಲ್‌ಪಿಜಿ ಪೂರೈಕೆದಾರರು ಕೂಡಾ ಈ ಸಂದರ್ಭವನ್ನು ಬಳಸಿಕೊಂಡು ಜನರನ್ನು ಶೋಷಿಸುತ್ತಿರುವುದು ದೇಶಹಿತದ ನಡೆಯಲ್ಲ. ಇವೆಲ್ಲ ವದಂತಿಗಳನ್ನು ನಿರಾಕರಿಸುವ ಸಲುವಾಗಿ ಸರಕಾರವು ಇದೀಗ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಇಳಿಸುವ ಮೂಲಕ ಜಾಣ ನಡೆಯಿಟ್ಟಿದೆ.

ಉತ್ತಮರಿಗೆ ವಿರೋಧಿಗಳಿಲ್ಲ

ನ ವೈರಾಣ್ಯಭಿಜಾನಂತಿ ಗುಣಾನ್ ಪಶ್ಯಂತಿ ನಾಗುಣಾನ್ ।
ವಿರೋಧಂ ನಾಗಚ್ಛಂತಿ ಯೇ ತೇ ಉತ್ತಮಪೂರುಷಾಃ ॥ –ಮಹಾಭಾರತ

ವೈರವನ್ನು ಭಾವಿಸದೇ, ದುರ್ಗುಣಗಳನ್ನು ಲೆಕ್ಕಿಸದೇ ಗುಣಗಳನ್ನು ಮಾತ್ರ ನೋಡುವವರು, ಯಾರೊಡನೆಯೂ ವಿರೋಧವನ್ನು ಕಟ್ಟಿಕೊಳ್ಳದೇ ಇರುವವರು ಉತ್ತಮ ಪುರುಷರು –ಎಂಬುದು ಶ್ಲೋಕಾರ್ಥ.

ಜನರನ್ನು ಉತ್ತಮರು, ಮಧ್ಯಮರು ಹಾಗೂ ಕನಿಷ್ಠರು ಎಂದು ವಿಭಾಗಿಸುತ್ತಾರೆ. ಜೀವನವನ್ನು ಪರರ ಹಿತಕ್ಕಾಗಿಯೇ ಮೀಸಲಿರಿಸಿ, ಸ್ವಾರ್ಥದ ಲವಲೇಶವೂ ಇಲ್ಲದವರು ಉತ್ತಮರು. ಸ್ವಾರ್ಥದ ಕೆಲಸವನ್ನು ಯಾರನ್ನೂ ವಂಚಿಸದೇ ನಡೆಸಿಕೊಂಡು ಹೋಗುವುದರ ಜತೆಗೆ ಸಮಯ ಮಾಡಿಕೊಂಡು ಪರೋಪಕಾರವನ್ನು ಕರ್ತವ್ಯಬುದ್ಧಿಯಿಂದ ನಡೆಸುವವರನ್ನು ಮಧ್ಯಮರು ಎಂದು ಗುರುತಿಸುತ್ತಾರೆ. ಸ್ವಾರ್ಥಕ್ಕಾಗಿ ಎಲ್ಲವನ್ನೂ ಬಳಸಿಕೊಳ್ಳುವವರು, ಇತರರಿಗೆ ಕೆಡುಕಾಗುವುದನ್ನು ಲೆಕ್ಕಿಸದೇ ಸ್ವಾರ್ಥಸಾಧನೆಯಲ್ಲಿ ತೊಡಗುವವರು ಕನಿಷ್ಠರು. ಇನ್ನೊಬ್ಬರನ್ನು ಹಿಂಸಿಸಿ ಸಂತೋಷ ಪಡುವವರನ್ನು ಅಧಮಾಧಮರು ಎಂದು ನಾಲ್ಕನೇ ಸ್ತರದವರನ್ನಾಗಿ ಗುರುತಿಸುತ್ತಾರೆ.

ಶ್ಲೋಕ ಸಾಗರ
ಡಾ.ಸೋಂದಾ ಭಾಸ್ಕರ ಭಟ್

ಉತ್ತಮರಾಗಿ ಬದುಕುವುದೇ ನಿಜವಾದ ಬದುಕು. ಇದರಲ್ಲಿಯೇ ಮಾನವೀಯ ಮೌಲ್ಯವಿರುವುದು. ಎಲ್ಲರೂ ಬದುಕಬೇಕಾದುದು ಹೀಗೇನೆ. ಭೌತಿಕ ವಿಷಯದತ್ತ ಆಕರ್ಷಿತರಾದ ನಾವು ಈ ಮೌಲ್ಯವನ್ನು ಕಡೆಗಣಿಸುತ್ತಾ ಬಂದಿದ್ದೇವೆ. ಉತ್ತಮರಾಗಲು ಸಾಧ್ಯವಾಗದಿದ್ದರೂ ಮಧ್ಯಮರಾಗಿ ಬದುಕಬಹುದಿತ್ತು ಅದನ್ನೂ ಕಡೆಗಣಿಸಿ ಇಂದಿನ ಮನುಜರು ಇನ್ನೂ ಕೆಳಕ್ಕಿಳಿದಿರುವುದು ಮನುಕುಲದ ದುರಂತ; ಮನುಕುಲಕ್ಕೆ ಮಾಡುವ ಅಪಚಾರ.

ಉತ್ತಮರಾಗಬೇಕೆನಿಸಿದರೆ ಅವರ ಜೀವನಕ್ರಮ ಹೇಗಿರಬೇಕು ಎಂಬುದನ್ನು ಪ್ರಕೃತಕಾರಿಕೆ ನಿರೂಪಿಸುತ್ತದೆ. ಯಾರೊಡನೆಯೂ ವೈರವನ್ನು ಸಾಧಿಸದೇ ಬದುಕನ್ನು ಸಾಗಿಸಬೇಕು. ವೈರದಿಂದ ವೈರವು ಉಪಶಮನಗೊಳ್ಳದು. ಪ್ರೀತಿಯಿಂದಲೇ ವೈರವನ್ನು ಗೆಲ್ಲಬೇಕು. ಇದು ಕಷ್ಟಕರವೆನಿಸಿದರೂ ಅಸಾಧ್ಯವೇನಲ್ಲ. ನಿರಂತರ ಸಾಧನೆ ಬೇಕು.

ಉತ್ತಮರು ಗುಣಗ್ರಾಹಿಗಳೇ ವಿನಾ ದುರ್ಗುಣಗಳನ್ನು ಗ್ರಹಿಸುವವರಲ್ಲ. ಸಾಮಾನ್ಯರಾದ ನಾವು ವ್ಯಕ್ತಿಯಲ್ಲಿರುವ ಗುಣಗಳಿಗಿಂತಲೂ ದೋಷವನ್ನೇ ಹೆಚ್ಚಾಗಿ ಗುರುತಿಸುತ್ತೇವೆ. ದೋಷ ಯಾವುದರಲಿಲ್ಲ? ಯಾರಲ್ಲಿಲ್ಲ? ದೋಷವನ್ನೇ ಹುಡುಕುವ ಸ್ವಭಾವವನ್ನು ಬಿಟ್ಟು ಗುಣಗಳನ್ನು ಗುರುತಿಸಿ, ಮೆಚ್ಚುಗೆ ವ್ಯಕ್ತಪಡಿಸಬೇಕು. ಈ ಕ್ರಿಯೆ ನಿರಂತರತೆಯನ್ನು ಪಡೆದುಕೊಂಡರೆ ಉತ್ತಮರಾಗಲು ಸಾಧ್ಯ. ದೋಷವನ್ನೇ ಗುರುತಿಸಲು ಮುಂದಾದರೆ ವೈಮನಸ್ಯಕ್ಕೆ ಕಾರಣವಾಗುತ್ತದೆ. ಗುಣವನ್ನು ಗುರುತಿಸುತ್ತಾ ಸಾಗಿದರೆ ಸ್ನೇಹ ವೃದ್ಧಿಯಾಗುತ್ತದೆ; ಪರಿವರ್ತನೆಯೂ ಸಾಧ್ಯ. ಇಂತಹ ಸ್ವಭಾವವನ್ನು ಉತ್ತಮರಲ್ಲಿ ಕಾಣಬಹುದು.

ಉತ್ತಮರು ಯಾರೊಡನೆಯೂ ದ್ವೇಷವನ್ನು ಸಾಧಿಸುವುದಿಲ್ಲ. ಯಾರ ವಿರೋಧವನ್ನೂ ಕಟ್ಟಿಕೊಳ್ಳುವುದಿಲ್ಲ. ವಿರೋಧಿಗಳನ್ನು ಪ್ರೀತಿ, ಸಜ್ಜನಿಕೆಗಳಿಂದಲೇ ಗೆಲ್ಲುತ್ತಾರೆ. ಸಣ್ಣಪುಟ್ಟ ಕಾರಣಗಳಿಗಾಗಿ ವಿರೋಧ ಕಾಣಿಸಿಕೊಳ್ಳುತ್ತದೆ. ಅವುಗಳನ್ನು ಸರಿಪಡಿಸಿಕೊಂಡು, ಹೊಂದಿಸಿಕೊಂಡು ಸಾಗಿಸಿದರೆ ವಿರೋಧವುಂಟಾಗಲಾರದು.

ಅವಿರೋಧದಿಂದ ವಿರೋಧವನ್ನು ಗೆಲ್ಲುವುದೇ ಸನಾತನ ಧರ್ಮದ ಲಕ್ಷಣ. ಇದನ್ನು ಅರಿತರೆ ವಿರೋಧಕ್ಕೂ, ವೈರಕ್ಕೂ ಆಸ್ಪದವಿರಲಾರದು. ಉತ್ತಮರು ಕಡಿಮೆಯಾದಷ್ಟು ಸಮಾಜದಲ್ಲಿ ದುಷ್ಟರು ಹೆಚ್ಚುತ್ತಾ ಹೋಗುತ್ತಾರೆ. ಸಮಾಜದ ವ್ಯವಸ್ಥೆ ಕುಸಿಯುತ್ತದೆ. ಆದ್ದರಿಂದ ಉತ್ತಮ ಸಂಸ್ಕಾರ, ಸನ್ನಡತೆ ಸದ್ವಿಚಾರಗಳನ್ನು ಕಲಿಸಿಕೊಟ್ಟು ಉತ್ತಮರನ್ನಾಗಿ ರೂಪಿಸುವ ಪ್ರಯತ್ನವನ್ನು ಮಾಡಬೇಕಾಗಿದೆ.

ವಿಶುದ್ಧ ಚಕ್ರಕ್ಕೆ ನಿತ್ಯಾನುಷ್ಠಾನ

ನೀವು ಏನು ಮಾಡಿದರೂ ಸರಿಹೋಗುತ್ತಿಲ್ಲ ಎಂದಾದರೆ ಭಗವದ್ಗೀತೆಯಲ್ಲಿ ಹೇಳಿದ ಐದು ಸೂತ್ರಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಿ.

ಪೂರ್ಣ ಪರಿಪೂರ್ಣ
ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ನೀವು ಅದ್ಭುತ ಮಾತುಗಾರರು ಆಗಬೇಕಾ?! ಮೊದಲು ಓದಬೇಕು. ಅಪಾರ ಪ್ರಮಾಣದ ಪುಸ್ತಕಗಳನ್ನು ಓದಬೇಕು. ಉದಾಹರಣೆಗೆ ನೀವು ಯಕ್ಷಗಾನ ಕಲಿಯುತ್ತೀರಿ. ಅಲ್ಲಿ ನಿಮಗೆ ಕುಣಿತವನ್ನು ಹೇಳಿಕೊಡುತ್ತಾರೆ. ಬಳಿಕ ಕತೆಯನ್ನು ಹೇಳುತ್ತಾರೆ. ಹಾಗೂ ಅದಕ್ಕೆ ತಕ್ಕಂತಹಾ ಸಂಭಾಷಣೆಗಳನ್ನು ಹೇಳಿಕೊಡುತ್ತಾರೆ. ಪ್ರಸಾಧನ ಮಾಡಿಕೊಳ್ಳುವುದನ್ನು, ವೇಷಭೂಷಣ ಹಾಕಿಕೊಳ್ಳುವುದನ್ನು, ಧ್ವನಿಯ ಏರಿಳಿತಗಳು ಹೇಗಿರಬೇಕು ಎನ್ನುವುದನ್ನು, ಪಾತ್ರದ ಪರಿಚಯವನ್ನು, ಪದ್ಯಗಳನ್ನು ಹೀಗೆ ಒಂದು ಪ್ರಸಂಗಕ್ಕೆ ಅನಿವಾರ್ಯವಾಗಿ ಮತ್ತು ಅಗತ್ಯವಾಗಿ ಬೇಕಾಗುವ ಎಲ್ಲಾ ಸಂಗತಿಗಳನ್ನು ಹೇಳಿಕೊಡುತ್ತಾರೆ. ನೀವು ಅವುಗಳನ್ನು ಕಲಿಯುತ್ತೀರಿ ಹಾಗೂ ನೀವು ಆ ಪ್ರಸಂಗದಲ್ಲಿ ಪಾತ್ರಧಾರಿಗಳಾಗುತ್ತೀರಿ.

ನೀವು ಕಲಿತಿರುವುದಷ್ಟನ್ನೇ ಅಲ್ಲಿ ಪ್ರದರ್ಶನ ಮಾಡಿದರೆ ಅದು ಒಂದು ಸಾಮಾನ್ಯ ಸಂಗತಿಯಾಗುತ್ತದೆ. ಅದೇ ನೀವು ಕಲಿತಿರುವುದಕ್ಕೆ ಪೂರಕವಾಗಿ ಇನ್ನಷ್ಟು ಜೋಡಿಸಿದರೆ ಅದು ಸಾಮಾನ್ಯಕ್ಕಿಂತ ಸ್ವಲ್ಪ ಹೆಚ್ಚು ಕಲಿತಂತೆ ಮತ್ತು ಪ್ರದರ್ಶನ ಮಾಡಿದಂತೆ ಆಗುತ್ತದೆ. ಹಾಗೆ ನೀವು ಮಾಡಲು ಅದೇ ಪ್ರಸಂಗವನ್ನು ಯಾರ್‍ಯಾರು ಹೇಗೆಲ್ಲಾ ಮಾಡಿದರು, ಹೇಗೆಲ್ಲಾ ಕುಣಿತ, ಮಾತುಗಳನ್ನು ಆಡಿದರು ಎಂಬುದನ್ನು ನೋಡಿದರೆ ಸಾಕು. ಆದರೆ ಅದನ್ನು ಅನುಕರಣೆ ಎನ್ನುತ್ತೇವೆ. ಪ್ರಾರಂಭದಲ್ಲಿ ಅನುಕರಣೆ ಸಹಜ. ಬಳಿಕ ಅದು ಜನಕ್ಕೆ ಸಹ್ಯವಾಗುವುದಿಲ್ಲ. ಆಗ ನೀವು ಹೊಸತನ್ನು ನೀಡಲೇ ಬೇಕಾಗುತ್ತದೆ. ಅದಕ್ಕೆ ನಿಮ್ಮದೇ ಆದ ಓದು ಬೇಕು. ಜ್ಞಾನ ಬೇಕು. ಅರಿವು ಬೇಕು. ತಜ್ಞರೊಂದಿಗೆ ಸಂವಾದ ಮಾಡಬೇಕು ಹೀಗೆ ಏನೆಲ್ಲಾ ಮಾಡಿದಾಗ ನಿಮ್ಮ ಪಾತ್ರ ವಿಭಿನ್ನವಾಗುತ್ತಾ ಹೋಗುತ್ತದೆ. ಅನನ್ಯವಾಗುತ್ತಾ ಹೋಗುತ್ತದೆ. ಅದ್ವಿತೀಯವಾಗುತ್ತಾ ಹೋಗುತ್ತದೆ. ನಿಮಗೆ ನೀವೇ ಸರಿಸಾಟಿಯಾಗುತ್ತೀರಿ. ಇದಕ್ಕೆ ನಿಮ್ಮ ಕುಣಿತ ಮಾತ್ರ ಕಾರಣವಲ್ಲ, ಮಾತೂ ಸಹಾ ಕಾರಣವಾಗಿರುತ್ತದೆ. ನೀವು ಕುಣಿಯುವ ಹೆಜ್ಜೆಗಳು ಅವೇ ಆಗಿರುತ್ತವೆ, ಆದರೆ ಭಂಗಿ ಬೇರೆಯಾಗಿರುತ್ತವೆ. ಆಡುವ ಮಾತುಗಳು ದಿನೇ ದಿನೇ ತಜ್ಞತೆಯನ್ನು ಪಡೆಯುತ್ತಾ ಹೋಗುತ್ತವೆ. ನಿಮಗೊಂದು ಸ್ಥಾನವನ್ನು ಕಲ್ಪಿಸುತ್ತದೆ. ನಿಮ್ಮನ್ನು ಎತ್ತರೆತ್ತರಕ್ಕೆ ಏರಿಸುತ್ತದೆ. ಅದಕ್ಕೆ ನಿಮಗೆ ಓದಿನ ಸಂಸ್ಕೃತಿ ಇರಲೇಬೇಕಾಗುತ್ತದೆ. ಓದಿದ್ದನ್ನು ಚರ್ಚೆಗೆ ಒಳಪಡಿಸಿ ಸರಿಯಾದದ್ದನ್ನು ಗ್ರಹಿಸುವ ಮನಸ್ಥಿತಿ ಇರಬೇಕಾಗುತ್ತದೆ. ಹಾಗೂ ಅವುಗಳನ್ನೆಲ್ಲಾ ಸರಿಯಾದ ರೀತಿಯಲ್ಲಿ ಪ್ರಸ್ತುತ ಪಡಿಸುವ ಜಾಣ್ಮೆ ಇರಬೇಕಾಗುತ್ತದೆ. ಅದಕ್ಕೆ ವಿಶುದ್ಧ ಚಕ್ರದ ನಿತ್ಯಾನುಷ್ಠಾನ ಬೇಕಾಗುತ್ತದೆ.

ಅದು ಗಮಕ ಕಲೆ ಇರಬಹುದು, ಸಂಗೀತ ಇರಬಹುದು, ಭಾಷಣ ಕಲೆ ಇರಬಹುದು, ಮಂತ್ರ ಪಠಣ ಇರಬಹುದು, ಸಂದರ್ಶನ ಕಲೆ ಇರಬಹುದು, ಚರ್ಚಾಸ್ಪರ್ಧೆ ಇರಬಹುದು, ಈವೆಂಟ್ ಮ್ಯಾನೇಜ್ಮೆಂಟ್ ಇರಬಹುದು, ನಿರೂಪಣೆ ಇರಬಹುದು... ಹೀಗೆ ಮಾತಿಗೆ ಸಂಬಂಧಿಸಿದ ಸಂಗತಿಗಳಿಗೆಲ್ಲಾ ವಿಶುದ್ಧ ಚಕ್ರದ ಸಹಾಯ ಅಗತ್ಯ. ಮತ್ತು ವಿಶುದ್ಧ ಚಕ್ರ ಸಮತೋಲನದಲ್ಲಿ ಇದ್ದಾಗ ಮಾತ್ರ ನೀವು ಒಂದರ ಹಿಂದೊಂದು ಯಶಸ್ಸನ್ನು ಸಾಧಿಸುತ್ತಾ ಬರುತ್ತೀರಿ. ಹಾಗೂ ನೀವು ನಿಮ್ಮ ವಿಶುದ್ಧ ಚಕ್ರವನ್ನು ಪಾಲೀಶ್ ಮಾಡುತ್ತಿದ್ದರೆ ಮಾತ್ರ ನಿಮ್ಮ ಯಶಸ್ಸು ನಿರಂತರವಾಗಿ ಇರುತ್ತದೆ.

ನಿರಂತರತೆ

ದಿನಾಲೂ ದೊಡ್ಡದಾಗಿ ಮಂತ್ರೋಚ್ಚಾರಣೆಯನ್ನು ಮಾಡಿ. ದೊಡ್ಡದಾಗಿ ಮಾತನಾಡಿ, ದೊಡ್ಡದಾಗಿ ಹಾಡನ್ನು ಹೇಳಿ, ದೊಡ್ಡದಾಗಿ ಶ್ಲೋಕಗಳನ್ನು ಹೇಳಿ, ದೊಡ್ಡದಾಗಿ ಭಜನೆ ಮಾಡಿ. ಸೂತ್ರಗಳನ್ನು, ಬೀಜಾಕ್ಷರಗಳನ್ನು, ಬೀಜ ಮಂತ್ರಗಳನ್ನು, ಸಹಸ್ರ ನಾಮಗಳನ್ನು ಬಾಯಿಪಾಠ ಮಾಡಿ. ಎಲ್ಲವನ್ನೂ ನಿತ್ಯವೂ ಅನುಷ್ಠಾನ ಮಾಡಬೇಕು. ನಿತ್ಯವೂ ಬಿಡದೇ ಹೇಳಲೇಬೇಕು. ಅದೂ ಸ್ನಾನ ಮಾಡಿ, ಮಡಿ ಉಟ್ಟು, ದೇವರಿಗೆ ದೀಪ ಹಚ್ಚಿ, ಅಲ್ಲಿಯೇ ಮಣೆ ಹಾಕಿಕೊಂಡು ಕುಳಿತು, ಭಕ್ತಿಯಿಂದ ಕೈಮುಗಿದು ಅಥವಾ ದೀಪವನ್ನು ನೋಡುತ್ತಾ ಇವೆಲ್ಲವನ್ನೂ ಅಥವಾ ಇವುಗಳಲ್ಲಿ ಯಾವುದಾದರೂ ಒಂದನ್ನು ಮಾಡಬೇಕು. ಕೇವಲ ವಿಟ್ಠಲ, ವಿಟ್ಠಲ, ವಿಟ್ಠಲ, ವಿಟ್ಠಲ ಎನ್ನುವ ಸ್ಮರಣೆ ಮಾತ್ರದಿಂದ ನಿಮ್ಮ ಉಸಿರಾಟ ಕ್ರಿಯೆ ಸರಾಗವಾಗುತ್ತದೆ ಎಂದಾದರೆ, ಹೃದಯಾಘಾತದಿಂದ ನೀವು ಪಾರಾಗುತ್ತೀರಿ ಎಂದಾದರೆ ವಿವಿಧ ಬೀಜ ಮಂತ್ರಗಳ ಶಕ್ತಿಯನ್ನು ಊಹಿಸಲೂ ಆಗದು.

ಅಭಿವ್ಯಕ್ತಿಶೀಲ ಬರವಣಿಗೆ

ನೀವು ನಿತ್ಯವೂ ಡೈರಿಯನ್ನು ಬರೆಯುತ್ತೀರಾ?! ಹಾಗಿದ್ದರೆ ನಿಮ್ಮಲ್ಲಿ ಒಂದು ಶಿಸ್ತು ಇದ್ದೇ ಇರುತ್ತದೆ. ನಿತ್ಯವೂ ಯಾವುದೇ ಕೆಲಸವನ್ನು ಎಚ್ಚರಿಕೆಯಿಂದ ಮಾಡುವುದು ಒಂದು ಶಿಸ್ತು. ನೀವು ಎಚ್ಚರಿಕೆಯಿಂದ ಇದ್ದಾಗ ಅಂತಹಾ ಕೆಲಸಗಳನ್ನು ಮಾಡುವಾಗ ತರ್ಕ ಮಾಡಿಯೇ ಮಾಡುತ್ತೀರಿ. ತರ್ಕ ಮಾಡಿದಾಗ ವಿಷಯದ ವಿವಿಧ ಮುಖಗಳ ಅನಾವರಣವಾಗುತ್ತದೆ. ಆಗ ಅವುಗಳಲ್ಲಿ ನಿಮಗೆ ಯಾವುದು ಸೂಕ್ತ ಎನ್ನುವುದು ಗೊತ್ತಾಗುತ್ತದೆ. ಹೀಗೆ ನೀವು ಸರಿಯಾದುದನ್ನೇ ಮಾಡುತ್ತೀರಿ. ಮತ್ತು ಹಾಗೆ ಮಾಡಿದ್ದನ್ನು ಬರೆಯುತ್ತೀರಿ. ಇವೆಲ್ಲಾ ನಿಯಮಿತವಾದ ಹಂತಗಳು. ಒಮ್ಮೆ ನಿಮಗೆ ಹಂತಗಳಲ್ಲಿ ಕೆಲಸ ಮಾಡುವುದು ಅಭ್ಯಾಸವಾದರೆ, ನೀವು ಯಾವುದನ್ನೂ ಗಾಬರಿಯಿಂದ, ಆತುರದಿಂದ ಮಾಡದೇ ಕ್ರಮಬದ್ಧವಾಗಿ ಮಾಡುತ್ತೀರಿ. ಆಗ ನಿಮಗೆ ಸೋಲು ಎದುರಾಗುವುದೇ ಇಲ್ಲ.

ಒಮ್ಮೆ ನಿಮಗೆ ಮುಂದೇನು ಮಾಡಬೇಕೆಂದು ತಿಳಿಯುವುದಿಲ್ಲ ಎಂದಿಟ್ಟುಕೊಳ್ಳೋಣ ಅಥವಾ ಏನು ಮಾಡಿದರೂ ಸರಿಹೋಗುತ್ತಿಲ್ಲ ಎಂದಾದರೆ ಆಗ ಭಗವದ್ಗೀತೆಯಲ್ಲಿ ಹೇಳಿದ ಐದು ಸೂತ್ರಗಳು ನೆನಪಿನಲ್ಲಿ ಇದ್ದರೆ ಸಾಕು:

1. ಸುಮ್ಮನಿದ್ದು ಬಿಡಿ: ವಿಷಯವನ್ನು ವಿರೋಧಿಸಲೂ ಹೋಗಬೇಡಿ. ಪರವಾಗಿ ಮಾತನಾಡಲೂ ಹೋಗಬೇಡಿರಿ. ನಿಮ್ಮ ಪರವಾದ ಸಾಕ್ಷಿಗಳನ್ನು ಮೌನವಾಗಿ ಯಾರಿಗೂ ಗೊತ್ತಾಗದಂತೆ ಸಂಗ್ರಹಿಸಿಟ್ಟುಕೊಳ್ಳಿ. ನೀವು ಸುಮ್ಮನಿರುವುದು, ತಡ ಮಾಡುತ್ತಿರುವುದರ ಅರ್ಥ ನೀವು ಅದನ್ನು ಒಪ್ಪಿಕೊಂಡಿಲ್ಲ ಎಂದಲ್ಲಾ ಅಥವಾ ತಿರಸ್ಕರಿಸಿದಿರೀ ಎಂದೂ ಅಲ್ಲ!! ನಿಮ್ಮ ಮಾರ್ಗವನ್ನು ಪುನರ್ ಪರಿಶೀಲನೆ ಮಾಡಿಕೊಳ್ಳುತ್ತಿದ್ದೀರಿ ಅಷ್ಟೆ. ಎಲ್ಲೂ ಕೀಳರಿಮೆಗೆ ಒಳಗಾಗಬೇಡಿ, ಎಲ್ಲೂ ಸೋಲಿನ ಭಯಕ್ಕೆ ಒಳಗಾಗಬೇಡಿ, ಎಲ್ಲೂ ಹತಾಶೆಗೆ ಒಳಗಾಗಬೇಡಿ. ತಣ್ಣಗೆ ಇರಿ ಮತ್ತು ಸ್ಪಷ್ಟತೆಗಾಗಿ ಕಾಯುತ್ತಿರಿ. ನಿಮ್ಮ ತಟಸ್ಥತೆಯಲ್ಲಿ ನಿಮಗೆ ಎಲ್ಲವೂ ಸ್ಪಷ್ಟವಾಗುತ್ತಾ ಪರಿಹಾರ ಹೊಳೆಯುತ್ತದೆ.

2. ಫಲಿತಾಂಶದಿಂದ ಕಳಚಿಕೊಳ್ಳಿ: ಅಂದರೆ ಎಲ್ಲರೂ ಮತ್ತು ನೀವು ಫಲಿತಾಂಶಕ್ಕೆ ಅಂಟಿಕೊಂಡಿರುತ್ತೀರಿ. ಯಾವುದೋ ಒಂದು ಫಲಿತಾಂಶಕ್ಕಾಗಿ ಸದಾ ನಿರೀಕ್ಷೆ ಇದ್ದೇ ಇರುತ್ತದೆ. ಫಲಿತಾಂಶ ನಿಮಗೆ ಬೇಕಾದಂತೆ ಇರುವುದಿಲ್ಲ ಎಂದಾದರೆ ನೀವೇಕೆ ಆ ಕೆಲಸವನ್ನು ಮಾಡಬೇಕು ಎನ್ನುವ ಪ್ರಶ್ನೆ ನಿಮ್ಮನ್ನು ಕಾಡತೊಡಗುತ್ತದೆ. ನೀವು ಹೀಗೆ ಯೋಚಿಸುತ್ತಾ ಸಾಮಾನ್ಯರಾಗಿ ಬಿಡುತ್ತೀರಿ. ಬದಲಿಗೆ ನಿಮ್ಮ ಕರ್ತವ್ಯವನ್ನು ಯಾವುದೇ ಹೆಚ್ಚಿನ ನಿರೀಕ್ಷೆಗಳಿಲ್ಲದೇ ಮಾಡುತ್ತಿರಿ. ನಿಮ್ಮ ಪರಿಶ್ರಮಕ್ಕೆ ಒಳ್ಳೆಯ ಫಲಿತಾಂಶ ತಡವಾದರೂ ಸಿಕ್ಕಿಯೇ ಸಿಗುತ್ತದೆ. ಅಲ್ಲಿಯವರೆಗೆ ನೀವು ಕಾಯಬೇಕು. ಆಗ ನಿಮ್ಮೊಳಗೆ ಸೇರಿಕೊಳ್ಳುತ್ತಾ ಬಂದ ತಾಳ್ಮೆಯೇ ನಿಮ್ಮ ದೊಡ್ಡ ಶಕ್ತಿಯಾಗಿ ಮಾರ್ಪಾಡಾಗುತ್ತದೆ. ಶಾಂತಿ ನಿಮ್ಮೊಳಗೆ ವ್ಯಾಪಿಸುತ್ತಾ ಬರುತ್ತದೆ. ನೀವು ಎಲ್ಲಾ ಕಾಲದಲ್ಲೂ ಶಾಂತಿಯಿಂದ ಇದ್ದೀರಿ ಎಂದಾದರೆ ನಿಮ್ಮ ಆರೋಗ್ಯ ಎಂದಿಗೂ ಹಾಳಾಗುವುದಿಲ್ಲ. ಸಮಸ್ಯೆಗಳು ನಿಮ್ಮನ್ನು ಕಾಡುವುದಿಲ್ಲ. ತೊಡಕುಗಳು ನಿಮ್ಮನ್ನು ಬಾಧಿಸುವುದಿಲ್ಲ.

3. ಹೋರಾಟ ನಿಮ್ಮನ್ನು ಗಟ್ಟಿಯಾಗಿಸುತ್ತದೆ: ಕಷ್ಟ ಕಾಲಗಳು ಎಲ್ಲರಿಗೂ ಎದುರಾಗುತ್ತವೆ. ಅವುಗಳನ್ನು ಎದುರಿಸುವುದನ್ನು ಕಲಿತರೆ ನೀವು ಗಟ್ಟಿಯಾಗುತ್ತಾ ಹೋಗುತ್ತೀರಿ. ಒಂದೊಂದೇ ಕಷ್ಟಗಳನ್ನು ಎದುರಿಸಿದಂತೆ ನಿಮಗೆ ಜೀವನದ ಅನುಭವ ಹೆಚ್ಚುತ್ತಾ ಹೋಗುತ್ತದೆ. ಆರ್ಥಿಕ ಸಂಕಷ್ಟ, ಸಾಮಾಜಿಕ ಸ್ಥಾನಮಾನ, ಸಾಂಸ್ಕೃತಿಕ ಅಭಿವ್ಯಕ್ತಿ, ಶಿಕ್ಷಣ ಹೀಗೆ ಒಂದೊಂದೂ ಒಂದೊಂದು ಕಾಲಮಾನದಲ್ಲಿ ನಿಮ್ಮನ್ನು ಬಂದು ಆವರಿಸಿಕೊಳ್ಳುತ್ತವೆ. ನೀವು ಅವುಗಳನ್ನು ನಿಭಾಯಿಸುತ್ತಾ ಬರಲೇಬೇಕು.

ಅದಕ್ಕೆ ಪೂರ್ವ ತಯಾರಿ ಎನ್ನುವುದು ಏನೂ ಇರುವುದಿಲ್ಲ. ಬಂದಿದ್ದನ್ನು ಎದುರಿಸುವುದು ಅಷ್ಟೇ. ಪ್ರತಿಯೊಂದು ವಿಷಯಕ್ಕೂ ಪ್ರತ್ಯೇಕವಾದ ಪರಿಹಾರ ಇರುವುದೇ ಹೊರತು ಹಿಂದಿನದೇ ದಾರಿಯಲ್ಲ!! ಹೀಗೆ ನೀವು ಹಳೆಯ ಅನುಭವದಿಂದ ಹೊಸತನ್ನು ಎದುರಿಸುವುದನ್ನು ಕಲಿಯುತ್ತೇನೆ ಎಂದಾದರೆ ಅದು ಅಸಾಧ್ಯ. ಹಾಗಂತಾ ಪ್ರತಿ ಹೋರಾಟವೂ ನಿಮಗೆ ಒಂದೊಂದು ಡಿಗ್ರಿಯನ್ನು ಕೊಡುತ್ತದೆ.

4. ನಿಮ್ಮ ಮನಸನ್ನು ಹರಿತಗೊಳಿಸಿ: ನೀವು ಸತತವಾಗಿ ಕೆಲಸ ಮಾಡುತ್ತಲೇ ಇದ್ದೀರಾ? ನೀವು ಯಾವಾಗಲೂ ಏನಾದರೊಂದು ಸಂಗತಿಯ ಕುರಿತು ಚಿಂತಿಸುತ್ತಲೇ ಇದ್ದೀರಾ? ನೀವು ಸದಾ ಸಮಸ್ಯೆಗಳನ್ನು ಎದುರಿಸುತ್ತಲೇ ಇದ್ದೀರಾ? ಹಾಗಿದ್ದರೆ ನೀವು ಎಂದಿಗೂ ಸುಖವಾಗಿ ಇರಲು ಸಾಧ್ಯವೇ ಇಲ್ಲ. ನೆಮ್ಮದಿಯಂತೂ ನಿಮ್ಮಿಂದ ಮೈಲುದೂರದಲ್ಲಿ ಇರುತ್ತದೆ. ನೀವು ಎಲ್ಲವನ್ನೂ ಮರೆತು ಆರಾಮಾಗಿ, ಶೂನ್ಯರಾಗಿ, ಮನಸ್ಸಿನಲ್ಲಿ ಇರುವುದನ್ನೆಲ್ಲಾ ಖಾಲಿ ಮಾಡಿ. ಆಗ ಪರಿಹಾರ ಗೋಚರಿಸಲು ಶುರುವಾಗುತ್ತದೆ.

5. ನಿಮ್ಮ ಪ್ಲಾನ್‌ನ್ನು ನೀವು ಮೊದಲು ನಂಬಿ: ನಿಮ್ಮನ್ನು ಬಿಟ್ಟು ಏನೆಲ್ಲಾ ಹೊರಟುಹೋಯಿತೋ ಅವೆಲ್ಲಾ ನಿಮಗೆ ನಷ್ಟವಲ್ಲ. ಬಿಟ್ಟು ಹೋಗಿದ್ದಕ್ಕಿಂತಲೂ ಸುಂದರವಾದ, ಲಾಭದಾಯಕ, ಗೆಲುವು ನೀಡುವ ಮತ್ಯಾವುದೋ ಒಂದು ಸಂಗತಿ ನಿಮಗಾಗಿ ಕಾಯುತ್ತಿರಬಹುದು. ಅಥವಾ ಬಂದು ಸೇರಬಹುದು. ಅದಕ್ಕಾಗಿಯೇ ಈ ಸಂಗತಿ ನಿಮ್ಮನ್ನು ಬಿಟ್ಟ ಹೋಯಿತು ಎಂದುಕೊಳ್ಳಿ. ಹೊಸ ಪ್ಲಾನ್ ಮಾಡಿ.

ಬಯಲು ಆಲಯದೊಳಗೋ ಆಲಯವು ಬಯಲೊಳಗೋ?

ಆಧ್ಯಾತ್ಮಿಕ ಶಕ್ತಿಯೇ ಹಿಂದು ಸಮಾಜದ ಹಾಗೂ ಭಾರತದ ಜೀವಾಳವಾಗಿದೆ.

ಒಳನೋಟ
ಹೆ.ಬಾ. ಮಲ್ಯ



ಇದೇನು, ಇರಾನ್ ಯುದ್ಧ, ಜಾಗತಿಕ ಇಂಧನ ಸಮಸ್ಯೆ, ಟ್ರಂಪ್, ಮೋದಿ ಬಗ್ಗೆ, ಎಲ್‌ಪಿಜಿ ಸಿಲಿಂಡರ್ ಬಗ್ಗೆ ಬರೆಯುವುದನ್ನು ಬಿಟ್ಟು ಇದ್ದಕ್ಕಿದ್ದ ಹಾಗೆ ಅಧ್ಯಾತ್ಮದ ಬಗ್ಗೆ ಬರೆಯುತ್ತಿದ್ದೇನೆ ಎಂದು ಕೆಲವರಿಗೆ ವಿಚಿತ್ರ ಎನಿಸಬಹುದು. ಮಾನವನಿಗೆ, ವಿಶೇಷವಾಗಿ ಭಾರತದಲ್ಲಿ ಹುಟ್ಟಿ ಬೆಳೆದವನಿಗೆ ಅರಿವು ಮೂಡುತ್ತಾ ಹೋದಂತೆ, ಅನುಭಗಳಾಗುತ್ತಾ ಹೋದಂತೆ, ನಮ್ಮ ಜೀವನದಲ್ಲಿ ಹಾಗೂ ಜಗತ್ತಿನಲ್ಲಿ ನಡೆಯುವ ಅನೇಕ ಸಂಗತಿಗಳು ತನ್ನ ಕೈಯಲ್ಲಿಲ್ಲ, ಯಾವುದೋ ಅಜ್ಞಾತ ಶಕ್ತಿ ನಮ್ಮ ಜೀವನವನ್ನು, ಜಗತ್ತಿನ ವ್ಯವಹಾರಗಳನ್ನು ನಿಯಂತ್ರಿಸುತ್ತಿದೆ ಎಂಬುದು ಗೋಚರವಾಗುತ್ತಾ ಹೋಗುತ್ತದೆ. ಇಲ್ಲೇ ಅಧ್ಯಾತ್ಮ ಪ್ರಾರಂಭವಾಗುವುದು, ವೈರಾಗ್ಯ ಮೂಡುವುದು. ಒಂದೇ ವಾರದೊಳಗೆ ಇರಾನನ್ನು ಮುಗಿಸಿಬಿಡಬಹುದು ಎಂದು ಟ್ರಂಪ್ ಭಾವಿಸಿದ್ದರು. ಆದರೆ ಈಗ ಯುದ್ಧ ಅವರಿಗೇ ತಿರುಗುಬಾಣವಾಗುತ್ತಿದೆಯೋ ಎನಿಸುತ್ತಿದೆ. ತಿಂಗಳು ಕಳೆಯುತ್ತಾ ಬಂದರೂ ಇರಾನ್ ಮಂಡಿಯೂರಿಲ್ಲ, ಕ್ಷಿಪಣಿಗಳನ್ನು ಎಸೆಯುತ್ತಲೇ ಇದೆ. ಮೂರು ವರ್ಷಗಳ ಹಿಂದೆ ರಷ್ಯಾದ ಪುಟಿನ್ ಪುಟ್ಟ ದೇಶವಾದ ಉಕ್ರೇನನ್ನು ಕೆಲವೇ ದಿವಸಗಳಲ್ಲಿ ಮಣಿಸಬಹುದು ಎಂದು ಭಾವಿಸಿದ್ದರು. ಆದರೆ ಇಂದಿಗೂ ಉಕ್ರೇನ್ ಯುದ್ಧ ನಡೆಯುತ್ತಲೇ ಇದೆ. ಭಾರತದಲ್ಲಿ ಮೋದಿಯನ್ನು ಹೇಗಾದರೂ ಮಾಡಿ ಅಧಿಕಾರದಿಂದಿಳಿಸಿ ತಾನು ಪ್ರಧಾನಿಯಾಗಬೇಕೆಂದು ರಾಹುಲ್ ಗಾಂಧಿ ಇನ್ನಿಲ್ಲದ ಪ್ರಯತ್ನ ಮಾಡಿದರು. ಅಮೆರಿಕದ ಸಿ.ಐ.ಎ., ಜಾರ್ಜ್ ಸೊರೋಸ್ ಗ್ಯಾಂಗ್ ಮುಂತಾದವರು ಮೋದಿಯನ್ನು ಹಣಿಯಲು ಇನ್ನಿಲ್ಲದ ಪ್ರಯತ್ನ ನಡೆಸಿದರು. ಆದರೆ ಮೋದಿ ಇನ್ನೂ ಅಧಿಕಾರದಲ್ಲಿ ಭದ್ರವಾಗಿದ್ದಾರೆ. ಹಾಗಾದರೆ ಟ್ರಂಪ್, ಪುಟಿನ್ ಅವರುಗಳ ಯೋಜನೆ ಏಕೆ ಸಾಕಾರವಾಗಲಿಲ್ಲ, ಮೋದಿಯವರು ತಮ್ಮನ್ನು ಹಣಿಯುವ ರಹಸ್ಯ ಪ್ರಯತ್ನಗಳಿಂದ ಹೇಗೆ ಬದುಕುಳಿದರು, ಹೇಗೆ ಇನ್ನೂ ಅಧಿಕಾರದಲ್ಲಿದ್ದಾರೆ, ಅದಾವ ಶಕ್ತಿ ಈ ಎಲ್ಲ ಘಟನಾವಳಿಗಳ ಹಿಂದೆ ಕೆಲಸ ಮಾಡುತ್ತಿದೆ ಎಂಬ ಪ್ರಶ್ನೆ ಮೂಡುತ್ತದೆ. ಅದಕ್ಕೇ ಹೇಳಿದ್ದು, ಅನೇಕ ಸಂಗತಿಗಳು ನಾವಂದುಕೊಂಡಂತೆ ನಡೆಯುವುದಿಲ್ಲ ಎಂದು. ಇಲ್ಲಿ ಅಧ್ಯಾತ್ಮದ ಬೀಜ ಮೊಳಕೆಯೊಡೆದು ಬೆಳೆಯಲಾರಂಭಿಸುವುದು.

ಎಲ್ಲವೂ ವಿಧಿಯಾಟ ಎಂದು ಭಾರತದ ಸಾಮಾನ್ಯ ಜನರು ಹೇಳುವುದನ್ನು ಮೂಢನಂಬಿಕೆ ಎನ್ನಲಾಗುವುದಿಲ್ಲ. ಅದೇನು ಆಗಬೇಕೆಂದಿದೆಯೋ ತನ್ನ ಪಾಡಿಗೆ ಆಗಿಯೇ ಆಗುತ್ತದೆ. ಇದು ಪ್ರತ್ಯಕ್ಷ ಅನುಭವ. ಆದರೆ ಈ ಅಧ್ಯಾತ್ಮ ಚಿಂತನೆ ಭಾರತದ್ದೇ ವಿಶೇಷತೆ. ಇತರ ಪಾಶ್ಚಾತ್ಯ ಕ್ರೈಸ್ತ ದೇಶಗಳಲ್ಲಾಗಲೀ, ಇಸ್ಲಾಮಿಕ್ ದೇಶಗಳಲ್ಲಾಗಲಿ ಆಧ್ಯಾತ್ಮಿಕತೆ ಎಂಬುದು ಕಾಣುವುದಿಲ್ಲ. ಅಲ್ಲಿನ 'ನಾನು' ಎಂಬ ದುರಹಂಕಾರ ಇಂದು ಜಗತ್ತಿನಲ್ಲಿ ನಡೆಯುತ್ತಿರುವ ಗೊಂದಲ, ಸಮಸ್ಯೆಗಳಿಗೆ ಕಾರಣ. ಭಾರತದಲ್ಲಿ ಹಿಂದೆ ಚಿಕ್ಕಂದಿನಲ್ಲೇ ಆಧ್ಯಾತ್ಮಿಕತೆ ಶಿಕ್ಷಣ, ಕಥೆಗಳ ರೂಪದಲ್ಲಿ ಸಿಗುತ್ತಿತ್ತು. ಈಗ ಕಡಿಮೆಯಾಗುತ್ತಿದೆ. ಕನಕದಾಸರ ಗುರುಗಳು ''ನಮ್ಮಲ್ಲಿ ಸ್ವರ್ಗಕ್ಕೆ ಯಾರು ಹೋಗಬಹುದು'' ಎಂದು ಕೇಳಿದಾಗ ಎಲ್ಲಾ ಶಿಷ್ಯರೂ ಮೌನವಾದರು. ಕನಕದಾಸರು ''ನಾನು ಹೋದರೆ ಹೋಗಬಹುದು'' ಎಂದರು. ಮಿಕ್ಕ ಶಿಷ್ಯರಿಗೆ ಮನಸ್ಸಿನೊಳಗೇ ಕೋಪ ಬಂತು. ಆಗ ಗುರುಗಳು ನಕ್ಕು ಅದರ ಅರ್ಥ ಹೇಳಿದರು– ''ನಾನು'' ಎಂಬ ದುರಹಂಕಾರ ನಾಶವಾದರೆ ನಾನು ಹೋಗಬಹುದು ಎಂದು. ಆದರೆ ಅದು ಅಷ್ಟು ಸುಲಭವಲ್ಲ. ಹಾಗೆಯೇ ಇನ್ನೊಮ್ಮೆ ಗುರುಗಳು ಎಲ್ಲಾ ಶಿಷ್ಯರಿಗೂ ಒಂದೊಂದು ಬಾಳೆಹಣ್ಣನ್ನು ಕೊಟ್ಟು ''ಯಾರೂ ಇಲ್ಲದ ಹಾಗೂ ಯಾರೂ ನೋಡದ ಜಾಗದಲ್ಲಿ ಈ ಹಣ್ಣನ್ನು ತಿಂದು ಬರಬೇಕು'' ಎಂದು ಹಣ್ಣುಗಳನ್ನು ಕೊಟ್ಟರು. ಮಿಕ್ಕೆಲ್ಲರೂ ಎಲ್ಲೆಲ್ಲೋ ಅಡಗಿ ಕುಳಿತು ಹಣ್ಣು ತಿಂದು ಬಂದರು. ಕನಕದಾಸರು ಬಾಳೆಹಣ್ಣು ತಿನ್ನದೇ ಹಾಗೆ ಬಂದರು. ಯಾಕೆ ತಿನ್ನಲಿಲ್ಲ ಎಂದು ಕೇಳಿದಾಗ ''ದೇವರು ಎಲ್ಲೆಡೆ ಇರುವನಲ್ಲವೇ? ಹಾಗಾಗಿ ತಿನ್ನಲಾಗಲಿಲ್ಲ'' ಎಂದರು. ಇವು ಸಾಮಾನ್ಯ ಮಕ್ಕಳ ಕಥೆಗಳು ಎನ್ನಿಸಿದರೂ ಇವುಗಳಲ್ಲಿ ಅಡಗಿರುವ ಆಧ್ಯಾತ್ಮಿಕ ತತ್ವ ಬಹಳ ಗಹನವಾದದ್ದು. ನಿಗೂಢವಾದದ್ದು. ಸಹಸ್ರಾರು ವರ್ಷಗಳಿಂದ ಭಾರತದಲ್ಲಿ ಜನರು ತಮ್ಮ ಜೀವನದಲ್ಲಿ ಎದುರಾಗುವ ಕಷ್ಟಗಳಿಂದ, ಸೋಲುಗಳಿಂದ ಕಂಗೆಡದೆ ಅವುಗಳನ್ನು ಧೈರ್ಯವಾಗಿ ಎದುರಿಸಿ, '' ಇದೆಲ್ಲ ವಿಧಿಯಾಟ. ತಾತ್ಕಾಲಿಕ ಸಮಸ್ಯೆ, ಕಾಲ ಹೋದಂತೆ ಈ ಕಷ್ಟ, ದುಃಖಗಳೆಲ್ಲ ಮುಗಿದು ಒಳ್ಳೆಯ ದಿನಗಳು ಬಂದೇ ಬರುತ್ತವೆ'' ಎಂಬ ಆಶಾವಾದವನ್ನು ಬೆಳೆಸಿಕೊಳ್ಳುತ್ತಾ ಬಂದಿದ್ದರು. ಆತ್ಮಹತ್ಯೆಗೆ ಶರಣಾಗುತ್ತಿರಲಿಲ್ಲ. ವಿಧಿಯಾಟವೆಂದರೆ ಪಲಾಯನವಾದ ಅಲ್ಲ, ಮತ್ತೆ ಪ್ರಯತ್ನದಲ್ಲಿ ತೊಡಗುತ್ತಾರೆ. ಈ ಆಧ್ಯಾತ್ಮಿಕ ಶಕ್ತಿಯೇ ಹಿಂದು ಸಮಾಜದ ಜೀವಾಳ. ಭಾರತದ ಮೇಲೆ ಎಷ್ಟೊಂದು ಕಷ್ಟ ಪರಂಪರೆಗಳೆರಗಿ ಬಂದರೂ ಸಂಘರ್ಷ ನಿಲ್ಲಲಿಲ್ಲ. ನಾವು ಹಿಂದೆ ಏನೋ ತಪ್ಪು ಮಾಡಿರಬೇಕು, ಮುಂದೆ ಸರಿಯಾಗಿ ನಡೆದುಕೊಳ್ಳೋಣ. ಈಗ ನಮಗೆ ಕಷ್ಟ ಕೊಡುವವರೂ ಶಾಶ್ವತರೇನೂ ಅಲ್ಲ, ಅವರೂ ತಕ್ಕ ಪ್ರತಿಫಲ ಅನುಭವಿಸುತ್ತಾರೆ ಎಂಬ ಕರ್ಮಸಿದ್ಧಾಂತದ ಮೇಲೆ ನಂಬಿಕೆ. ಇವುಗಳೇ ಹಿಂದು ಸಮಾಜವನ್ನು ಇಂದಿಗೂ ಉಳಿಸಿಕೊಂಡು ಬಂದಿವೆ.

ಮಿಕ್ಕ ವಿದೇಶಿ ಜನಾಂಗಗಳಲ್ಲಿ ಇಂಥ ಶ್ರೇಷ್ಠ ಆಧ್ಯಾತ್ಮಿಕ ಮೌಲ್ಯಗಳು, ನಂಬಿಕೆಗಳು, ಧರ್ಮ ಇಲ್ಲದ್ದರಿಂದ ಅಲ್ಲಿನ ಗ್ರೀಕ್, ರೋಂ, ಈಜಿಪ್ಟ್, ಬೆಬಿಲೋನಿಯಾ, ಅಸ್ಸೀರಿಯಾ ಮುಂತಾದ ಶ್ರೇಷ್ಠ ಹಾಗೂ ಬಲಿಷ್ಠ ಸಂಸ್ಕೃತಿಗಳು, ಒಂದೊಮ್ಮೆ ಎಷ್ಟೋ ಉಚ್ಛ್ರಾಯ ಸ್ಥಿತಿಯಲ್ಲಿದ್ದಂಥವುಗಳು ಹೇಳ ಹೆಸರಿಲ್ಲದಂತೆ ನಾಶವಾಗಿ ಹೋದುವು. ಅದೇ ಪ್ರಾಚೀನ ಭಾರತ ಇಂದಿಗೂ ಉಸಿರಾಡುತ್ತಿದೆ. ಇತ್ತೀಚಿನ ದಿನಗಳಲ್ಲಿ, ಸಹಸ್ರಾರು ವರ್ಷ ನಮ್ಮನ್ನು ಕಾಯ್ದುಕೊಂಡು ಬಂದ ಈ ಆಧ್ಯಾತ್ಮಿಕ ಮೌಲ್ಯಗಳು ಮಸುಕಾಗುತ್ತಿವೆ. ಅದರಿಂದಾಗಿ ಸಮಸ್ಯೆಗಳು. ಮತ್ತೆ ಅವುಗಳನ್ನು ಪುನರುಜ್ಜೀವನಗೊಳಿಸುವ ಅಗತ್ಯವಿದೆ. ಮಾತ್ರವಲ್ಲ ಜಗತ್ತಿಗೆ ನೀಡಬೇಕಾಗಿದೆ. ಆಗಲೇ ಜಗತ್ತಿನಲ್ಲಿ ಶಾಂತಿ ನೆಲೆಸಲು ಸಾಧ್ಯ. ಭಾರತ ಈ ಉದ್ದೇಶದಿಂದಲೇ ಇನ್ನೂ ಬದುಕಿದೆ. ಭಾರತ ಬದುಕಿದರೆ ಜಗತ್ತು ಬದುಕುತ್ತದೆ.

ಭಾರತದಲ್ಲಿ ಮಧ್ಯಯುಗೀನ ಕಾಲಖಂಡದಲ್ಲಿ ಮುಸ್ಲಿಂ ಆಕ್ರಮಣ, ದೌರ್ಜನ್ಯಗಳಿಂದ ಎಲ್ಲೆಡೆ ಕತ್ತಲು ಆವರಿಸಿದಂತಿತ್ತು. ಆಗ ದಾಸವರೇಣ್ಯರು, ಕೀರ್ತನಕಾರರು ಭಜನೆಗಳ ಮೂಲಕ, ಭಕ್ತಿ ಮಾರ್ಗದ ಮೂಲಕ ಗಹನವಾದ ಆಧ್ಯಾತ್ಮಿಕ ತತ್ವಗಳನ್ನು, ಮೌಲ್ಯಗಳನ್ನು ಸಾಮಾನ್ಯ ಜನರಲ್ಲಿ ಹರಡಿದರು. ಅದು ಆ ಕರಾಳ ಕಾಲಖಂಡದ ಅನಿವಾರ್ಯತೆಯಾಗಿತ್ತು. ಕನಕದಾಸರ ''ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ'' ಎಂಬ ಕೀರ್ತನೆಯಲ್ಲಿ ಗಹನವಾದ ಆಧ್ಯಾತ್ಮಿಕ ತತ್ವ ಅಡಗಿದೆ. ದೇವರು ಎಲ್ಲೆಡೆಯಲ್ಲೂ ಇದ್ದಾನೆ, ಅವನಿಲ್ಲದ ಜಾಗವೇ ಇಲ್ಲ ಎಂಬುದನ್ನು ದಾಸರ ಮೂಲಕ ಸಾಮಾನ್ಯ ಜನರೂ ಅರಿತುಕೊಂಡರು. ನಮ್ಮೊಳಗೂ ದೇವನಿದ್ದಾನೆ ಎಂಬುದು ಹಿಂದುಗಳ ನಂಬಿಕೆ. ಶಂಕರಾಚಾರ್ಯರು ''ಅಹಂ ಬ್ರಹ್ಮಾಸ್ಮಿ ತತ್ವಮಸಿ'' ಎಂದು ಹೇಳಿದ್ದು ಇದನ್ನೇ. ''ನೀ ದೇಹದೊಳಗೋ ನಿನ್ನೊಳು ದೇಹವೋ'' ಎಂದು ದಾಸರು ಭಗವಂತ ಹಾಗೂ ಮಾನವನನ್ನು ಪ್ರಶ್ನಿಸುತ್ತಾರೆ. ಇಲ್ಲಿ ದೇವರು ಎಂದಾಗ ಮೂರ್ತಿಗಳು, ಚಿತ್ರಗಳು ಆಗಿರದೆ ಪರಮಾತ್ಮ ಎಂಬ ಆ ಅನಂತಶಕ್ತಿ ಸಾಗರ ಎಂದು ಅರ್ಥ ಮಾಡಿಕೊಳ್ಳಬೇಕು. ದೇಹವನ್ನು ಒಂದು ಮಡಕೆಗೆ ಹೋಲಿಸಿದ್ದಾರೆ. ಆ ಅನಂತಶಕ್ತಿ ಸಾಗರವನ್ನು ಒಂದು ಮಹಾಜಲಸಾಗರ ಎಂದಿಟ್ಟುಕೊಳ್ಳೋಣ. ಅದರೊಳಗೆ ಓರ್ವ ಮುಳುಗುತಜ್ಞ ಆಕ್ಸಿಜನ್ ಮಾಸ್ಕ್ ಧರಿಸಿ ಮುಳುಗಿದಾಗ ಅದರೊಳಗೆ ಅವನಿಗೆ ಒಂದು ಲೋಕವೇ ಕಾಣುತ್ತದೆ. ಅದು ಜಗತ್ತು. ಅವನು ಒಂದು ಮಡಕೆಯನ್ನು ತೆಗೆದುಕೊಂಡು ಹೋದನೆಂದುಕೊಳ್ಳೋಣ. ಆ ಮಡಕೆ ಒಡೆದರೆ ಅದರೊಳಗಿನ ನೀರು ಸಾಗರದಲ್ಲಿ ಕರಗಿಹೋಗುತ್ತದೆ. ಶರೀರ ಎಂದರೆ ಮಡಕೆ, ಪಂಚಕೋಶಗಳಿಂದಾವೃತವಾದ ದೇಹ– ಅನ್ನಮಯ, ಪ್ರಾಣಮಯ, ಮನೋಮಯ, ಜ್ಞಾನಮಯ, ಆನಂದಮಯ. ಅದರೊಳಗೂ ಪರಮಾತ್ಮ ಶಕ್ತಿ ಇದೆ. ಈ ಕೋಶಗಳು ಹರಿದಾಗ ಒಳಗೂ ಪರಮಾತ್ಮನಿದ್ದಾನೆ ಎಂಬ ಸತ್ಯದ ಅರಿವಾಗುತ್ತದೆ. ಇದನ್ನೇ ಇನ್ನೊಂದು ರೀತಿಯಲ್ಲಿ ದಾಸರು ಹೇಳುತ್ತಾರೆ – ''ಬಯಲು ಆಲಯದೊಳಗೋ ಆಲವು ಬಯಲೊಳಗೋ'' ಎಂದು. ದೇವರೊಳಗೆ ಅಂದರೆ ಆ ಶಕ್ತಿ ಸಾಗರದೊಳಗೆ ನಾವಿದ್ದೇವೆ. ಆತ ಎಲ್ಲಾ ಠಾವಿನಲ್ಲಿದ್ದಾನೆ ಎಂದ ಮೇಲೆ ನಮ್ಮೊಳಗೂ ಇದ್ದಾನೆ. ಮಡಕೆ ಸಾಗರದೊಳಗೆ ಇದೆ. ಅದೇ ಸಾಗರ ಸಣ್ಣರೂಪದಲ್ಲಿ ಅಂದರೆ ಮಡಕೆಯ ಆಯಕ್ಕನುಗುಣವಾಗಿ ಮಡಕೆಯೊಳಗೂ ಇದೆ. ಪರಮಾತ್ಮನನ್ನು ಕುರಿತು ಹೇಳುವುದಾದರೆ ಬಯಲು ಎಂದರೆ ಬ್ರಹ್ಮಾಂಡ–ಜಗತ್ತು ಆತನದೇ ಸೃಷ್ಟಿಯಾದ್ದರಿಂದ ಆತನೊಳಗೇ ಇದೆ. ಹಾಗೇ ಬ್ರಹ್ಮಾಂಡ ಅಂದರೆ ಜಗತ್ತಿನೊಳಗೆ ಎಲ್ಲೆಡೆ ಅವನೇ ವ್ಯಾಪಿಸಿದ್ದಾನೆ. ಅವನಿಲ್ಲದ ಜಾಗವೇ ಇಲ್ಲ. ವ್ಯಕ್ತಿಯನ್ನು ಕುರಿತು ಹೇಳುವುದಾದರೆ ಈ ದೇಹವೇ ಆಲಯ, ಒಳಗಿರುವುದು ಬಯಲು, ಅಂದರೆ ಜಗತ್ತು. ''ಬಯಲು –ಆಲಯವೆರಡು ಮನಸ್ಸಿನೊಳಗೋ?'' ಎಂಬುದು ಮುಂದಿನ ಪ್ರಶ್ನೆ. ಇಂಥ ಗಹನವಾದ, ನಿಗೂಢವಾದ ಸೃಷ್ಟಿ–ಚೈತನ್ಯಗಳ ಅರ್ಥವನ್ನು ದಾಸರು ಸರಳ ಭಾಷೆಯಲ್ಲಿ ಸಾಮಾನ್ಯ ಜನರಿಗೂ ಅರ್ಥವಾಗುವಂತೆ ಹೇಳಿದ್ದಾರೆ. ಎಲ್ಲ ಹಿಂದುಗಳೂ ಮತ್ತೆ ತಮ್ಮ ಮೂಲ ಧರ್ಮ–ಚಿಂತನೆಗಳತ್ತ ಮರಳಬೇಕಾದ ಅಗತ್ಯವಿದೆ. ಆಗಲೇ ಭಾರತಕ್ಕೆ ಶಾಶ್ವತ ಭವಿಷ್ಯವಿದೆ ಎನ್ನಬಹುದು.

ಐವತ್ತು ವರ್ಷಗಳ ಸ್ಮೃತಿಪಥ: ಸಾಧನೆಗಳ ಸುಗಂಧಪಥ

ಭಾನುಪ್ರಕಾಶ್. ಎಲ್



ಸ್ವಾತಂತ್ರ್ಯಾನಂತರದ ಭಾರತದಲ್ಲಿ ಕೈಗಾರಿಕೆ ಮತ್ತು ಹಣಕಾಸಿನ ವಲಯದಲ್ಲಿ ಆಧುನಿಕ ನಿರ್ವಹಣಾ ಕೌಶಲ್ಯದಿಂದ ನಿಭಾಯಿಸುವ ಹೊಣೆಗಾರಿಕೆಯು ಹೆಚ್ಚಾಗತೊಡಗಿತ್ತು. ದೇಶದ ಬೆಳವಣಿಗೆಯಲ್ಲಿ ತಾಂತ್ರಿಕ ಕೌಶಲ್ಯದ ಜೊತೆಗೆ ನಿಪುಣ ವ್ಯವಸ್ಥಾಪಕರ ಅಗತ್ಯ ಸ್ಪಷ್ಟವಾಗಿ ಕಾಣಿಸಿತ್ತು. ದ್ವಿತೀಯ ಮತ್ತು ಮೂರನೇ ಪಂಚವಾರ್ಷಿಕ ಯೋಜನೆಗಳು ಭಾರತದಲ್ಲಿ ಭಾರೀ ಕೈಗಾರಿಕೆಗಳು ಮತ್ತು ಸಾರ್ವಜನಿಕ ಕ್ಷೇತ್ರದ ವಿಸ್ತರಣೆಗೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಲು ಸಿದ್ಧವಾಗಿದ್ದವು. 'ಲೈಸನ್ಸರಾಜ್' ದಂತಹ ಜಟಿಲ ವ್ಯವಸ್ಥೆಯನ್ನು ನಿಭಾಯಿಸಲು ಸಮರ್ಥ ವ್ಯವಸ್ಥಾಪಕರು ಅತ್ಯಗತ್ಯವಾದರು. ಆದ್ದರಿಂದ ನಿರ್ವಹಣಾ ಶಿಕ್ಷಣದ ಹೊಸ ಶಕೆ ಭಾರತದಂತಹ ದೇಶದಲ್ಲಿ, ಅಭಿವೃದ್ಧಿಗೆ ಪೂರಕವಾದ ಪ್ರಮುಖ ಆದ್ಯತೆಯಾಯಿತು.

ಈ ಕ್ಷಿಪ್ರ ಪ್ರಗತಿ ಮತ್ತು ಅಗತ್ಯತೆಯನ್ನು ಮನಗಂಡು 1961ರಲ್ಲಿ ದೇಶದ ಮೊಟ್ಟ ಮೊದಲ ಐಐಎಂ (Indian Institute of Management) ಅಂದಿನ ಕಲ್ಕತಾದಲ್ಲಿ ಪ್ರಾರಂಭವಾಯಿತು. ಅದೇ ವರ್ಷ ಅಹಮದಾಬಾದ್‌ನಲ್ಲೂ ಸಹ ಐಐಎಂ ಪ್ರಾರಂಭವಾಯಿತು. ಈ ಶಿಕ್ಷಣಸಂಸ್ಥೆಗಳು 1970ರ ವೇಳೆಗೆ ಕೈಗಾರಿಕಾ ವಲಯದ ಮೇಲೆ ಪರಿಣಾಮ ಬೀರಲು ಆರಂಭಿಸಿದ್ದವು. ಈ ಮಹತ್ವದ ಕಾಲಘಟ್ಟದಲ್ಲಿ 1973ರಲ್ಲಿ ಬೆಂಗಳೂರಿನಲ್ಲಿ ದೇಶದ 3ನೇ ಐಐಎಂ ಜನ್ಮ ತಾಳಿತು.

1916 ರಲ್ಲಿ ಕರ್ನಾಟಕ ಸಾಂಸ್ಕೃತಿಕ ರಾಜಧಾನಿಯಲ್ಲಿ ಪ್ರಾರಂಭವಾದ ಮೈಸೂರು ವಿಶ್ವವಿದ್ಯಾನಿಲಯವು ಭಾರತದ ನಿರ್ವಹಣಾ ಶಿಕ್ಷಣದ ಈ ಹೊಸಯುಗವನ್ನು ಸೂಕ್ಷ್ಮವಾಗಿ ಅವಲೋಕಿಸಿ, ಅಂದಿನ ಉಪಕುಲಪತಿಗಳಾಗಿದ್ದ ದಿ. ಪ್ರೊ. ದೇ. ಜವರೇಗೌಡ (ದೇಜಗೌ) ಮತ್ತು ವಾಣಿಜ್ಯ ವಿಭಾಗ ಅಂದಿನ ಮುಖ್ಯಸ್ಥರಾಗಿದ್ದ ದಿ. ಡಾ. ಜೆ.ಕೆ.ಇರಾನಿ ಇವರ ಚುರುಕು ನಾಯಕತ್ವದಲ್ಲಿ 1974 ರಲ್ಲಿ ವ್ಯವಹಾರ ನಿರ್ವಹಣೆಯ ಅಧ್ಯಯನ ವಿಭಾಗವು ಪ್ರಾರಂಭವಾಯಿತು. ಮೊದಲು ಈ ವಿಭಾಗದ ಪಾಠಪ್ರವಚನಗಳು ವಾಣಿಜ್ಯ ವಿಭಾಗದ ಆವರಣದಲ್ಲೇ ಪ್ರಾರಂಭಗೊಂಡು, ವಿಶ್ವವಿದ್ಯಾನಿಲಯದ ಗಣಿತ ಶಾಸ್ತ್ರ, ಮನೋವಿಜ್ಞಾನ, ಸಂಖ್ಯಾ ಶಾಸ್ತ್ರ, ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರುಗಳ ಸಮೂಹವು ವಿಭಾಗದ ಬೆಂಬಲಕ್ಕೆ ನಿಂತದ್ದು ಅವಿಸ್ಮರಣೀಯ. ವಾಣಿಜ್ಯ ಶಾಸ್ತ್ರ ವಿಭಾಗದಲ್ಲಿ ಆರಂಭಗೊಂಡ ಈ ವಿಭಾಗವು, ನಂತರದ ಸ್ವಲ್ಪ ಅವಧಿಯನ್ನು ಇಂದಿನ ಎಸ್‌ಎಸ್‌ಸಿ ಕಟ್ಟಡದಲ್ಲಿ ಮುಂದುವರೆದ ಮೆಲುಕುಗಳು ಹಿರಿಯ ವಿದ್ಯಾರ್ಥಿಗಳ ಸ್ಮೃತಿಪುಟಗಳಲ್ಲಿ ದಾಖಲಾಗಿದೆ.

ಡಾ.ಜೆ.ಕೆ.ಇರಾನಿಯವರ ನಂತರ, ಪ್ರೊ. ಮುನಿರಾಮಪ್ಪ ಈ ವಿಭಾಗವನ್ನು ಮುನ್ನಡೆಸಿದ್ದರು.

ಅದೇ ಸಮಯದಲ್ಲಿ ಅಮೇರಿಕಾದಲ್ಲಿ ಅಧ್ಯಯನ ಮಾಡಿ, ಕೆಲಕಾಲ ಧಾರವಾಡ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿದ್ದ ಪ್ರೊ. ಎಂ. ವೆಂಕಟೇಶ್ 1983–84ರಲ್ಲಿ ಈ ವಿಭಾಗಕ್ಕೆ ಸೇರ್ಪಡೆಗೊಂಡರು. ಅವರ ಅವಿರತ ಶ್ರಮದ ಫಲವಾಗಿ ಎಂಬಿಎ ವಿಭಾಗಕ್ಕೆ ಸಂಖ್ಯಾಶಾಸ್ತ್ರ ವಿಭಾಗ ಮೊದಲ ಮಹಡಿಯನ್ನು ವಿಶ್ವವಿದ್ಯಾನಿಲಯವು ನಿಯುಕ್ತಿಗೊಳಿಸಿತು. 1984–86ರ ಸಮಯದಲ್ಲಿ ಸಂಸ್ಥೆಗೆ ಪ್ರೊ. ಎಂ. ವೆಂಕಟೇಶ್ ಜೊತೆಗೆ ಶ್ರಮಿಸಿದವರಲ್ಲಿ ಪ್ರೊ. ಫ್ರಾನ್ಸಿಸ್ ಚೆಲುನಿಲಂ ಸಹಪ್ರಮುಖರು. ಪ್ರೊ. ಸಿ. ಎ. ಫ್ರಾನ್ಸಿಸ್‌ರವರ ರಚಿಸಿರುವ Business Environment ಹಾಗೂ Business and Government ಮುಂತಾದ ಪುಸ್ತಕಗಳು ಇಂದಿಗೂ ವ್ಯವಹಾರ ಶಾಸ್ತ್ರವಿದ್ಯಾರ್ಥಿಗಳಿಗೆ ದಾರಿದೀಪವಾಗಿದೆ. ಜೊತೆಗೆ ಇವರ ಪುಸಕ್ತಗಳು ದೇಶ ಹಾಗೂ ವಿದೇಶಗಳಲ್ಲಿ ಮನ್ನಣೆ ಪಡೆದಿದೆ. 1974 ರಲ್ಲಿ ಕೇವಲ 30 ವಿದ್ಯಾರ್ಥಿಗಳ ಪ್ರವೇಶ ಅವಕಾಶದಿಂದ ಪ್ರಾರಂಭಿಸಲ್ಪಟ್ಟ ಈ ವಿಭಾಗವು, 1999ರಲ್ಲಿ ಹೆಚ್ಚಾದ ಬೇಡಿಕೆ ಮತ್ತು ನಿರ್ವಹಣಾ ಶಾಸ್ತ್ರವನ್ನು ಹೆಚ್ಚು ಪ್ರಸರಿಸುವ ದೃಷ್ಟಿಯಿಂದ partially self-finance ಯೋಜನೆಯಡಿಯಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯನ್ನು 60ಕ್ಕೆ ಏರಿಸಲಾಯಿತ್ತು. ನಂತರ 2004ರಲ್ಲಿ ಈ ಸಂಖ್ಯೆ120ಕ್ಕೆ ಏರಿಕೆಯಾಗಿ, ಪ್ರಸುತ್ತ ಈ ಸಂಖ್ಯೆಯು 180ಕ್ಕೆ ತಲುಪಿದೆ. ಪ್ರತಿವರ್ಷ 25ಕ್ಕೂ ಹೆಚ್ಚು ವಿದೇಶಿ ವಿದ್ಯಾರ್ಥಿಗಳು ನಿರ್ವಹಣಾ ಶಾಸ್ತ್ರವನ್ನು ಅಭ್ಯಾಸಿಸುತ್ತಿರುವುದು ವಿಶೇಷ. ಈ ವಿಭಾಗವು ಪ್ರಾರಂಭವಾದ ವರ್ಷದಿಂದ ಸ್ಪರ್ಧಾತ್ಮಕ ಪ್ರವೇಶ ಪರೀಕ್ಷೆ ಮತ್ತು ಸಂದರ್ಶನ ಮೂಲಕ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುತ್ತಿದ್ದು, ಇದು ಪ್ರಸುತ್ತ ವ್ಯವಸ್ಥೆಯಲ್ಲಿನ ಪಾರದರ್ಶಕತೆಯ ಕೈಗನ್ನಡಿಯಾಗಿದೆ.

2002 ರಲ್ಲಿ ಅಂದಿನ ಉಪಕುಲಪತಿಗಳಾಗಿದ್ದ ಪ್ರೊ. ಎಸ್. ಎನ್.ಹೆಗ್ಗಡೆಯವರ ಸಂಪರ್ಕ ಮತ್ತು ಶ್ರಮದಿಂದ ಮೈಸೂರು ವಿಶ್ವವಿದ್ಯಾನಿಲಯದ ವಾಣಿಜ್ಯ ವಿಭಾಗದ ಶ್ರೇಷ್ಟ ಹಳೆಯ ವಿದ್ಯಾರ್ಥಿಗಳಲ್ಲಿ ಒಬ್ಬರಾದ, ದೂರದ ಅಮೇರಿಕಾದ ಮಿಶಿಗನ್‌ನಲ್ಲಿ ನೆಲೆಗೊಂಡು ಅತ್ಯಂತ ಯಶ್ವಸಿ ಉದ್ಯಮಿಯಾಗಿರುವ ಡಾ. ಬಿ.ಎನ್. ಬಹದ್ದೂರ್ ರವರ ಉದಾರಕೊಡುಗೆಯಿಂದ ಮೈಸೂರಿನ ಉತ್ತರದ ಅಂಚಿನಲ್ಲಿ ಡಾ. ಬಿ.ಎನ್. ಬಹದ್ದೂರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸೈನ್ಸ್ ಎಂಬ ನಾಮಕರಣದೊಂದಿಗೆ ಎಂಬಿಎ ವಿಭಾಗವು ಸುಸಜ್ಜಿತವಾಗಿದೆ ತನ್ನ ಮರು ಹುಟ್ಟನ್ನು ಪಡೆದುಕೊಂಡಿತು. ಈ ಸಂಸ್ಥೆಯಲ್ಲಿ ಪ್ರೊ. ಆಯೇಷಾ ಶರೀಫ್, ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರೊ.ಹೆಚ್. ಎನ್. ರಮೇಶ್ ಮತ್ತು ಹಲವಾರು ಅತಿಥಿ ಉಪನ್ಯಾಸಕರು ವಿದ್ಯಾರ್ಥಿಗಳಿಗೆ ಜ್ಞಾನದ ಬುತ್ತಿಯನ್ನು ಹೆಚ್ಚಿಸಿದನ್ನು ಮರೆಯಲು ಸಾಧ್ಯವಿಲ್ಲ.

1995 ರಿಂದ ಈ ವಿಭಾಗದ ವಿದ್ಯಾರ್ಥಿಗಳ ಸಮೂಹವು ರಾಜ್ಯಮಟ್ಟದ ಸಾಹಿತ್ಯ, ನಿರ್ವಹಣಾ ಕೌಶಲ್ಯ ಹಾಗೂ ಸಾಂಸ್ಕೃತಿಕ ಉತ್ಸವವನ್ನು 'ಮಂತ್ರ' MANTRA (Management The Rewarding Attitude)) ಆಯೋಜಿಸಲಾಗುತ್ತಿದ್ದು, ಈ ಕಾರ್ಯಕ್ರಮವು ಹೆಚ್ಚು ಪ್ರಶಂಸೆಯನ್ನು ಪಡೆದಿದೆ. ಈ ಸಂಸ್ಥೆಯಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳು ಪ್ರಸುತ್ತ ದೇಶವಿದೇಶಗಳ ಹಲವು ಕಂಪನಿಗಳಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸಿದ್ದಾರೆ. ತಮ್ಮ ಯಶಸ್ಸಿನಿಂದ ಈ ಶಿಕ್ಷಣ ಸಂಸ್ಥೆಯ ರಾಯಭಾರಿಗಳಾಗಿ, ಉದ್ಯಮಿಗಳಾಗಿ ದೇಶದ ಪ್ರಗತಿಗೆ ಮತ್ತು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ಬೆನ್ನೆಲುಬಾಗಿದ್ದಾರೆ.

ಇದೇ ಶನಿವಾರ 28 ರಂದು ಈ ವಿಭಾಗವು ಸುವರ್ಣ ಮಹೋತ್ಸವದ ಸಂಭ್ರಮದ ಕಾರ್ಯಕ್ರಮವನ್ನು ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ಆಯೋಜಿಸಿದೆ. ಕಾರ್ಯಕ್ರಮವನ್ನು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಉದ್ಘಾಟನೆ ಮಾಡಲಿದ್ದು, ಇದೇ ವಿಭಾಗದ ಪ್ರಥಮ ಬ್ಯಾಚ್‌ನ ವಿದ್ಯಾರ್ಥಿಯಾದ ಬ್ರಿಗೇಡ್ ಗ್ರೂಪ್ ಕಾರ್ಯನಿರ್ವಾಹಕ ಅಧ್ಯಕರಾದ ಎಂ.ಆರ್. ಜೈಶಂಕರ್ ಸಮಾರೋಪ ಭಾಷಣ ಮಾಡಲಿದ್ದಾರೆ.

ಮಾನವೀಯ ಸಂಕಷ್ಟ ಗಂಭೀರ

ಸಂಯುಕ್ತ ರಾಷ್ಟ್ರಗಳ ವರದಿಯ ಪ್ರಕಾರ, ಇರಾನ್‌ನಲ್ಲಿ ಸಾವಿರಾರು ಮನೆಗಳು, ಆಸ್ಪತ್ರೆಗಳು ಮತ್ತು ಶಾಲೆಗಳು ಹಾನಿಗೊಳಗಾಗಿವೆ. ಸುಮಾರು 1.8 ಲಕ್ಷ ಜನರು ತಮ್ಮ ಮನೆ ಕಳೆದುಕೊಂಡಿದ್ದಾರೆ. ಲಕ್ಷಾಂತರ ಜನರು ವಲಸೆ ಹೋಗುವ ಅಪಾಯ ಎದುರಿಸುತ್ತಿದ್ದಾರೆ.

ಸಾವು-ನೋವು ಹೆಚ್ಚಳ

ಇರಾನ್‌ನಲ್ಲಿ 1,900ಕ್ಕೂ ಹೆಚ್ಚು ಮಂದಿ ಮೃತರಾಗಿದ್ದಾರೆ. ಲೆಬನಾನ್‌ನಲ್ಲಿ 1,100 ಮಂದಿ ಮೃತಪಟ್ಟಿದ್ದಾರೆ. ಇಸ್ರೇಲ್‌ನಲ್ಲಿ 18 ನಾಗರಿಕರು ಹಾಗೂ 4 ಸೈನಿಕರು ಬಲಿಯಾಗಿದ್ದಾರೆ. ಇರಾಕ್ ಸೇರಿದಂತೆ ಇತರ ಪ್ರದೇಶಗಳಲ್ಲೂ ಸಾವುಗಳು ವರದಿಯಾಗಿವೆ. ಸಂಘರ್ಷ ಮುಂದುವರಿದಂತೆ ಜಾಗತಿಕ ಆತಂಕ ಹೆಚ್ಚುತ್ತಿದೆ. ರಾಜತಾಂತ್ರಿಕ ಪ್ರಯತ್ನಗಳು ನಡೆಯುತ್ತಿದ್ದರೂ, ತಕ್ಷಣದ ಶಾಂತಿಯ ಯಾವುದೇ ಲಕ್ಷಣಗಳು ಕಾಣುತ್ತಿಲ್ಲ. ಯುದ್ಧ ಇನ್ನಷ್ಟು ವಿಸ್ತರಿಸುವ ಭೀತಿ ಹೆಚ್ಚಾಗಿದೆ.



ಮಧ್ಯಪ್ರಾಚ್ಯ ಯುದ್ಧ: ಟ್ರಂಪ್ ಭರವಸೆಯ ಬಳಿಕವೂ ಇರಾನ್ ಕ್ಷಿಪಣಿ ದಾಳಿ, ಇಸ್ರೇಲ್ ಪ್ರತಿದಾಳಿ

ಸ್ಪಷ್ಟತೆ ಇಲ್ಲದ ಮಾತುಕತೆ, ಮುಂದುವರಿದ ಸಂಘರ್ಷ

ಇರಾನ್ ಮೇಲೆ ಶುಕ್ರವಾರ ಇಸ್ರೇಲ್ ಮತ್ತೊಮ್ಮೆ ಭಾರೀ ದಾಳಿಗಳನ್ನು ಆರಂಭಿಸಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಯುದ್ಧ ಅಂತ್ಯಗೊಳಿಸುವ ಮಾತುಕತೆಗಳು ಚೆನ್ನಾಗಿ ನಡೆಯುತ್ತಿವೆ ಎಂದು ಹೇಳಿದರೂ, ತಳಮಟ್ಟದಲ್ಲಿ ಯಾವುದೇ ಶಾಂತಿ ಲಕ್ಷಣಗಳು ಕಾಣುತ್ತಿಲ್ಲ. ಇರಾನ್ ತನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ತೋರಿಸದೆ ಮುಂದುವರಿದಿದ್ದು, ಸಂಘರ್ಷ ದಿನದಿಂದ ದಿನಕ್ಕೆ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದೆ. ಈ ಮಧ್ಯೆ ಟ್ರಂಪ್ ಅವರು ದಾಳಿಗೆ ಮತ್ತೆ ಹತ್ತು ದಿನಗಳ ವಿರಾಮ ಘೋಷಿಸಿದ್ದಾರೆ.

ಕ್ಷಿಪಣಿ ದಾಳಿ, ಮೊಳಗಿದ ಸೈರನ್: ಇಸ್ರೇಲ್ ನಗರಗಳಲ್ಲಿ ಏರ್ ರೇಡ್ ಸೈರನ್‌ಗಳು ನಿರಂತರವಾಗಿ ಮೊಳಗುತ್ತಿವೆ. ಇರಾನ್ ಹಾರಿಸಿದ ಕ್ಷಿಪಣಿಗಳನ್ನು ತಡೆಯಲು ಇಸ್ರೇಲ್ ಸೇನೆ ಪ್ರಯತ್ನಿಸುತ್ತಿದೆ. ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ದಾಳಿಗಳು ಇನ್ನಷ್ಟು ವಿಸ್ತಾರವಾಗುತ್ತವೆ ಎಂದು ಎಚ್ಚರಿಕೆ ನೀಡಿದ್ದಾರೆ. ನಾಗರಿಕರ ಮೇಲೆ ಕ್ಷಿಪಣಿಗಳನ್ನು ಹಾರಿಸುವುದನ್ನು ಇರಾನ್ ನಿಲ್ಲಿಸದಿದ್ದರೆ, ಇನ್ನಷ್ಟು ಗುರಿಗಳ ಮೇಲೆ ದಾಳಿ ನಡೆಸುವುದಾಗಿ ಹೇಳಿದ್ದಾರೆ. ಇಸ್ರೇಲ್ ಸೇನೆಯ ಪ್ರಕಾರ, ಶುಕ್ರವಾರ ನಡೆದ ದಾಳಿಗಳು ಟೆಹ್ರಾನ್‌ನ ಪ್ರಮುಖ ಸೈನಿಕ ಮತ್ತು ಕ್ಷಿಪಣಿ ಉತ್ಪಾದನಾ ಕೇಂದ್ರಗಳನ್ನು ಗುರಿಯಾಗಿಸಿಕೊಂಡಿವೆ. ಪಶ್ಚಿಮ ಇರಾನ್‌ನ ಕ್ಷಿಪಣಿ ಲಾಂಚರ್‌ಗಳು ಮತ್ತು ಸಂಗ್ರಹ ಕೇಂದ್ರಗಳನ್ನೂ ಹೊಡೆದಿದೆ.

ಪ್ರಾದೇಶಿಕ ಉದ್ವಿಗ್ನತೆ ಹೆಚ್ಚಳ

ಬೈರೂತ್ ಮೇಲೆಯೂ ಹೊಗೆ ಕಾಣಿಸಿಕೊಂಡಿದ್ದು, ಲೆಬನಾನ್ ಪ್ರದೇಶದಲ್ಲೂ ಸಂಘರ್ಷ ತೀವ್ರವಾಗಿದೆ. ಅದೇ ಸಮಯದಲ್ಲಿ ಇರಾನ್ ಗಲ್ಫ್ ದೇಶಗಳತ್ತ ಡ್ರೋನ್ ಮತ್ತು ಕ್ಷಿಪಣಿಗಳನ್ನು ಹಾರಿಸುತ್ತಿದ್ದು, ಬಹ್ರೈನ್, ಕತಾರ್ ಮತ್ತು ಯುಎಇಗಳಲ್ಲಿ ಎಚ್ಚರಿಕೆ ಸೈರನ್‌ಗಳು ಮೊಳಗಿವೆ. ಸೌದಿ ಅರೇಬಿಯಾದ ರಾಜಧಾನಿ ರಿಯಾದ್ ಕಡೆಗೆ ಬಂದ ಕ್ಷಿಪಣಿಗಳನ್ನು ಅಲ್ಲಿನ ರಕ್ಷಣಾ ವ್ಯವಸ್ಥೆ ತಡೆದಿದೆ.

ಕುವೈತ್ ಮತ್ತು ಚೀನಾ ಯೋಜನೆಗೆ ಹೊಡೆತ

ಕುವೈತ್‌ನ ಪ್ರಮುಖ ಬಂದರುಗಳು ದಾಳಿಯಿಂದ ಹಾನಿಗೊಳಗಾಗಿವೆ. ಚೀನಾದ ಬೆಲ್ಟ್ ಅಂಡ್ ರೋಡ್ ಯೋಜನೆಯ ಭಾಗವಾಗಿರುವ ಒಂದು ನಿರ್ಮಾಣ ಯೋಜನೆಯೂ ಹಾನಿಗೊಳಗಾಗಿದೆ. ಇದು ಯುದ್ಧದ ಪರಿಣಾಮ ಜಾಗತಿಕ ಮಟ್ಟಕ್ಕೆ ವಿಸ್ತರಿಸುತ್ತಿರುವುದನ್ನು ಸೂಚಿಸುತ್ತದೆ.

ಆರ್ಥಿಕ ಪರಿಣಾಮ ಮತ್ತು ತೈಲ ಬೆಲೆ ಏರಿಕೆ

ಸ್ಟಾಕ್ ಮಾರುಕಟ್ಟೆಗಳು ಕುಸಿದಿದ್ದು, ತೈಲ ಬೆಲೆಗಳು ಗಗನಕ್ಕೇರಿವೆ. ಬ್ರೆಂಟ್ ಕಚ್ಚಾತೈಲ ಬೆಲೆ ಬ್ಯಾರಲ್‌ಗೆ 107 ಡಾಲರ್ ತಲುಪಿದ್ದು, ಯುದ್ಧ ಆರಂಭವಾದ ನಂತರ 45% ಏರಿಕೆಯಾಗಿದೆ. ಹಾರ್ಮುಜ್ ಜಲಸಂಧಿಯ ನಿಯಂತ್ರಣದ ಮೇಲೆ ಇರುವ ಸಂಘರ್ಷ ಜಾಗತಿಕ ಇಂಧನ ಸರಬರಾಜಿಗೆ ಭಾರಿ ಆತಂಕವನ್ನುಂಟು ಮಾಡುತ್ತಿದೆ.

ಗುಜರಾತ್ ಬಂದರಿಗೆ ತಲುಪಿದ ಜಾಗ್ ವಸಂತ್

47,600 ಮೆಟ್ರಿಕ್ ಟನ್ ಎಲ್‌ಪಿಜಿ ಹೊತ್ತು ಬಂದ ಜಾಗ್ ವಸಂತ್ ಹಡಗು ಗುರುವಾರ ತಡರಾತ್ರಿ, ಗುಜರಾತಿನ ಬಂದರಿಗೆ ಆಗಮಿಸಿದೆ. ಪಶ್ಚಿಮ ಏಷ್ಯಾದ ಯುದ್ಧದ ನಡುವೆ ಸುಮಾರು 23 ದಿನಗಳ ಕಾಲ ಜಲಮಾರ್ಗದಲ್ಲಿ ಸಿಲುಕಿಕೊಂಡಿದ್ದ ಈ ಹಡಗು ವಾಡಿನಾರ್ ಬಂದರಿಗೆ ಆಗಮಿಸಿದೆ. ದೇಶವು ಇಂಧನ ಪೂರೈಕೆ ಕೊರತೆ ಅನುಭವಿಸುತ್ತಿರುವ ಮಧ್ಯೆ ಈ ಬೆಳವಣಿಗೆ ನಡೆದಿದೆ. ಹಾರ್ಮುಜ್ ಜಲಸಂಧಿಯಲ್ಲಿ ಸಿಲುಕಿಕೊಂಡಿದ್ದ ಹಲವಾರು ಟ್ಯಾಂಕರ್‌ಗಳಲ್ಲಿ ಜಾಗ್ ವಸಂತ್ ಕೂಡ ಒಂದಾಗಿದೆ.

ಲಾಕ್‌ಡೌನ್ ಪ್ರಸ್ತಾಪವಿಲ್ಲ ಆತಂಕ ಬೇಡ: ನಿರ್ಮಲಾ

• **ಹೊಸದಿಲ್ಲಿ** : ಪಶ್ಚಿಮ ಏಷ್ಯಾ ಯುದ್ಧದ ಹಿನ್ನೆಲೆಯಲ್ಲಿ ದೇಶದಲ್ಲಿ ಲಾಕ್‌ಡೌನ್ ವಿಧಿಸುವ ಪ್ರಸ್ತಾಪವಿಲ್ಲ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶುಕ್ರವಾರ ಸ್ಪಷ್ಟಪಡಿಸಿದ್ದಾರೆ. ಇದೇ ವೇಳೆ ವದಂತಿಗಳನ್ನು ಹರಡದಂತೆ ಹಾಗೂ ಭಯ ಸೃಷ್ಟಿಸದಂತೆ ಅವರು ಸಲಹೆ ನೀಡಿದ್ದಾರೆ. ಹೆಚ್ಚುತ್ತಿರುವ ಜಾಗತಿಕ ಕಚ್ಚಾ ತೈಲ ಬೆಲೆಗಳ ಹೊರೆ ಸಾಮಾನ್ಯ ಜನರ ಮೇಲೆ ಬೀಳದಂತೆ ನೋಡಿಕೊಳ್ಳುವ ಮೂಲಕ ಹಣಕಾಸಿನ ಕೊರತೆಯನ್ನು ನಿಯಂತ್ರಣದಲ್ಲಿಡಲು ಸರ್ಕಾರವು ಎಲ್ಲಾ ರೀತಿಯ ಪ್ರಯತ್ನ ಮಾಡುತ್ತದೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದರು. ರಾಜ್ಯಸಭೆಯಲ್ಲಿ ಹಣಕಾಸು ಮಸೂದೆ, 2026ರ ಕುರಿತ ಚರ್ಚೆಗೆ ಉತ್ತರಿಸಿದ ಅವರು, ಹಲವಾರು ದೇಶಗಳು ಮೋಟಾರು ಇಂಧನದ ಬೆಲೆಗಳನ್ನು ಶೇ.1ರಷ್ಟು ಹೆಚ್ಚಿಸಿವೆ. ಆದರೆ ಭಾರತವು ಪೆಟ್ರೋಲ್ ಮತ್ತು ಡಿಸೇಲ್ ದರಗಳನ್ನು ಯಥಾಸ್ಥಿತಿಯಲ್ಲಿ ಇರಿಸಿದೆ ಎಂದು ಹೇಳಿದರು.

ಜಂಟಿ ವರದಿ ಸಲ್ಲಿಸಲು ಇನ್ನಷ್ಟು ಕಾಲಾವಕಾಶ

• **ಹೊಸದಿಲ್ಲಿ:** ಪ್ರಧಾನಮಂತ್ರಿಗಳು, ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಗಂಭೀರ ಆರೋಪಗಳ ಮೇಲೆ ಸತತ 30 ದಿನಗಳ ಕಾಲ ಬಂಧನದಲ್ಲಿದ್ದರೆ ಅವರನ್ನು ಹುದ್ದೆಯಿಂದ ಕೆಳಗಿಳಿಸುವ ಮೂರು ಮಸೂದೆಗಳನ್ನು ಪರಿಶೀಲಿಸುವ ಜಂಟಿ ಸಂಸದೀಯ ಸಮಿತಿಗೆ ತನ್ನ ವರದಿಯನ್ನು ಸಲ್ಲಿಸಲು ಇನ್ನೂ ಹೆಚ್ಚಿನ ಸಮಯ ನೀಡಲಾಗಿದೆ. 2026ರ ಸಂಸತ್ತಿನ ಮುಂಗಾರು ಅಧಿವೇಶನದ ಕೊನೆಯ ವಾರದ ಮೊದಲ ದಿನದವರೆಗೆ ಲೋಕಸಭೆಯು ಶುಕ್ರವಾರ ಸಮಿತಿಗೆ ಕಾಲಾವಕಾಶ ನೀಡಿದೆ. ಸಾಮಾನ್ಯವಾಗಿ, ಮುಂಗಾರು ಅಧಿವೇಶನವು ಜುಲೈ ಮೂರನೇ ವಾರದಲ್ಲಿ ಪ್ರಾರಂಭವಾಗುತ್ತದೆ.

ಪರಿಣಾಮಗಳ ಪರಾಮರ್ಶೆಗಾಗಿ ಸಮಿತಿ

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾ ಸಮರದಿಂದ ಉದ್ಭವಿಸುತ್ತಿರುವ ಸಮಸ್ಯೆಗಳತ್ತ ನಿಗಾ ಇರಿಸಲು, ರಕ್ಷಣಾ ಸಚಿವ ರಾಜನಾಥ ಸಿಂಗ್ ನೇತೃತ್ವದ ಅಂತರ್ ಸಚಿವಾಲಯ ಸಮಿತಿಯೊಂದನ್ನು ಕೇಂದ್ರ ಸರ್ಕಾರ ರಚಿಸಿದೆ. ಪಶ್ಚಿಮ ಏಷ್ಯಾ ಯುದ್ಧ ಸನ್ನಿವೇಶಗಳು ಮತ್ತು ಅವು ಭಾರತದ ಮೇಲೆ ಬೀರಬಹುದಾದ ಸಂಭಾವ್ಯ ಪರಿಣಾಮಗಳನ್ನು ಸಮಿತಿ ಪರಾಮರ್ಶಿಸಲಿದೆ ಎಂದು ಮೂಲಗಳು ತಿಳಿಸಿವೆ. ಗೃಹ ಸಚಿವ ಅಮಿತ್ ಶಾ, ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ, ಮತ್ತಿತರ ಹಿರಿಯ ನಾಯಕರು ಈ ಸಮಿತಿಯಲ್ಲಿದ್ದಾರೆ.

ಇಂಧನ ದಾಸ್ತಾನು ಸಾಕಷ್ಟಿದೆ: ಈ ಮಧ್ಯೆ, ದೇಶಾದ್ಯಂತ ಚಿಲ್ಲರೆ ಮಾರಾಟದ ಎಲ್ಲಾ ಪೆಟ್ರೋಲ್ ಪಂಪ್‌ಗಳು ಸಹಜವಾಗೇ ಕಾರ್ಯ ನಿರ್ವಹಿಸುತ್ತಿವೆ. ಎಲ್ಲಾ ಪೆಟ್ರೋಲ್ ಪಂಪ್‌ಗಳಲ್ಲೂ ಪೆಟ್ರೋಲ್, ಡೀಸೆಲ್ ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನಿದೆ. ಹಾಗಾಗಿ ವದಂತಿಗಳ ನಂಬಿ ಭಯದಿಂದ ಖರೀದಿಗೆ ಆತುರಪಡದಿರಿ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಅಧಿಕೃತ ಹೇಳಿಕೆಯಲ್ಲಿ ಜನರನ್ನು ಎಚ್ಚರಿಸಿದೆ.

ಮಾತುಕತೆ ಪ್ರಯತ್ನ ವಿಫಲ

ಪಾಕಿಸ್ತಾನದ ಮೂಲಕ ಅಮೆರಿಕ ತನ್ನ ಪ್ರಸ್ತಾವನೆ ನೀಡಿದರೂ, ಇರಾನ್ ಅದನ್ನು ತಿರಸ್ಕರಿಸಿದೆ. ಇರಾನ್ ತನ್ನದೇ ಐದು ಅಂಶಗಳ ಪ್ರಸ್ತಾವನೆ ಮುಂದಿಟ್ಟಿದ್ದು, ಹಾರ್ಮುಜ್ ಜಲಸಂಧಿಯ ಮೇಲಿನ ತನ್ನ ಹಕ್ಕನ್ನು ಒಪ್ಪಿಕೊಳ್ಳಬೇಕೆಂದು ಒತ್ತಾಯಿಸಿದೆ. ಈ ನಡುವೆ ಈಜಿಪ್ಟ್, ಟರ್ಕಿ ಮತ್ತು ಪಾಕಿಸ್ತಾನ ಮಾತುಕತೆ ಏರ್ಪಡಿಸಲು ಪ್ರಯತ್ನಿಸುತ್ತಿವೆ.

ಅಮೆರಿಕದ ದ್ವಂದ್ವ ತಂತ್ರ

ಅಮೆರಿಕ ಒಂದು ಕಡೆ 15 ಅಂಶಗಳ ಶಾಂತಿ ಪ್ರಸ್ತಾವನೆ ನೀಡಿದರೆ, ಇನ್ನೊಂದು ಕಡೆ ಸಾವಿರಾರು ಸೇನೆಯನ್ನು ಮಧ್ಯಪ್ರಾಚ್ಯಕ್ಕೆ ಕಳುಹಿಸಿದೆ. ಸುಮಾರು 2,500 ಮರೈನ್ಸ್ ಮತ್ತು 1,000 ಪ್ಯಾರಾಟ್ರೂಪರ್‌ಗಳನ್ನು ನಿಯೋಜಿಸಲಾಗಿದೆ. ಇದು ಅಗತ್ಯವಿದ್ದರೆ ಸೈನಿಕ ಕ್ರಮ ಕೈಗೊಳ್ಳಲು ಸಿದ್ಧತೆ ಎಂಬ ಸೂಚನೆಯಾಗಿದೆ.

ಜಾಗತಿಕ ರಸಗೊಬ್ಬರ ಕೊರತೆ, ಆಹಾರ ಬೆಲೆ ಏರುಪೇರು ಸಾಧ್ಯತೆ

• **ಹನೋಯಿ:** ಇರಾನ್‌ನಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮವಾಗಿ ಜಾಗತಿಕವಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅಮೆರಿಕ ಮತ್ತು ಇಸ್ರೇಲ್ ದಾಳಿಗಳಿಗೆ ಪ್ರತಿಯಾಗಿ ಇರಾನ್ ಹಾರ್ಮುಜ್ ಜಲಸಂಧಿಯ ಮೂಲಕ ಸಾಗುವ ಸರಕುಗಳ ಮೇಲೆ ನಿರ್ಬಂಧ ಹೇರಿದೆ. ಇದರಿಂದ ಅನಿಲದ ಬೆಲೆಗಳು ಏರಿಕೆಯಾಗಿದ್ದು, ರಸಗೊಬ್ಬರ ಸರಬರಾಜು ಕಡಿಮೆಯಾಗಿದೆ.

ಈಗಾಗಲೇ ಹವಾಮಾನ ಬದಲಾವಣೆ ಮತ್ತು ಅಸ್ಥಿರ ಹವಾಮಾನದಿಂದ ಸಂಕಷ್ಟದಲ್ಲಿರುವ ಅಭಿವೃದ್ಧಿಶೀಲ ರಾಷ್ಟ್ರಗಳ ರೈತರು ಮಧ್ಯಪ್ರಾಚ್ಯ ಯುದ್ಧದ ಪರಿಣಾಮವಾಗಿ ಮತ್ತಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಈ ಹಿನ್ನೆಲೆ ವಿಶ್ವದಾದ್ಯಂತ ಆಹಾರ ಬೆಲೆಗಳು ಏರಿಕೆಯಾಗುವ ಸಾಧ್ಯತೆ ಇದೆ. ಗಲ್ಫ್ ದೇಶಗಳಿಂದ ರಸಗೊಬ್ಬರ ಆಮದು ಮೇಲೆ ರೈತರು ಅವಲಂಬಿತರಾಗಿದ್ದಾರೆ. ಬಿತ್ತನೆ ಕಾಲ ಆರಂಭವಾಗುತ್ತಿರುವ ಈ ಸಮಯದಲ್ಲಿ ಕೊರತೆ ಉಂಟಾಗಿರುವುದು ಕೃಷಿಯ ಮೇಲೆ ಮಾರಕ ಪರಿಣಾಮ ಬೀರಲಿದೆ. ಉತ್ಪಾದನಾ ವೆಚ್ಚ ಹೆಚ್ಚಾಗಿ ಆಹಾರ ಬೆಲೆ ಏರಿಕೆಯಾಗಲಿದೆ ಎಂದು ತಜ್ಞರು ಎಚ್ಚರಿಸಿದ್ದಾರೆ.

ನೈಟ್ರೋಜನ್, ಫಾಸ್ಫೇಟ್ ಸರಬರಾಜಿಗೆ ಹೊಡೆತ: ಹಾರ್ಮುಜ್ ಜಲಸಂಧಿ ಜಗತ್ತಿನ ತೈಲ ಸಾಗಣೆಯ ಸುಮಾರು 20% ಮತ್ತು ರಸಗೊಬ್ಬರ ವ್ಯಾಪಾರದ ಸುಮಾರು ಮೂರನೇ ಭಾಗವನ್ನು ನಿರ್ವಹಿಸುತ್ತದೆ. ಈ ಮಾರ್ಗದಲ್ಲಿ ಉಂಟಾದ ಅಡಚಣೆಯಿಂದ ನೈಟ್ರೋಜನ್ ಮತ್ತು ಫಾಸ್ಫೇಟ್ ಎಂಬ ಪ್ರಮುಖ ಪೋಷಕಾಂಶಗಳ ಸರಬರಾಜು ತೀವ್ರವಾಗಿ ಹಾನಿಗೊಳಗಾಗಿದೆ. ಯೂರಿಯಾ ಸೇರಿದಂತೆ ನೈಟ್ರೋಜನ್ ರಸಗೊಬ್ಬರಗಳ ಸರಬರಾಜು ಹೆಚ್ಚು ಪ್ರಭಾವಿತವಾಗಿದೆ. ಇದು ಬೆಳೆ ಬೆಳವಣಿಗೆಗೆ ಅಗತ್ಯವಾಗಿದ್ದು, ಉತ್ಪಾದನೆ ಹೆಚ್ಚಿಸಲು ಸಹಾಯಕವಾಗಿದೆ. ಆದರೆ ಸಾಗಣೆ ವಿಳಂಬ ಮತ್ತು ದ್ರವೀಕೃತ ನೈಸರ್ಗಿಕ ಅನಿಲದ ಬೆಲೆ ಏರಿಕೆಯಿಂದ ಇದರ ಕೊರತೆ ಉಂಟಾಗಿದೆ. ಜಾಗತಿಕ ಯೂರಿಯಾ ವ್ಯಾಪಾರದ ಸುಮಾರು 30% ಈ ಯುದ್ಧದಿಂದ ತೊಂದರೆ ಅನುಭವಿಸುತ್ತಿದೆ.

ಇಥಿಯೋಪಿಯಾ ಮೊದಲಾದ ದೇಶಗಳು ಗಂಭೀರ ಕೊರತೆಯನ್ನು ಎದುರಿಸುತ್ತಿವೆ. ಆ ದೇಶ ತನ್ನ ನೈಟ್ರೋಜನ್ ರಸಗೊಬ್ಬರದ ಬಹುಪಾಲು ಗಲ್ಫ್ ಪ್ರದೇಶದಿಂದ ಆಮದು ಮಾಡಿಕೊಳ್ಳುತ್ತದೆ. ಯುದ್ಧಕ್ಕೂ ಮುನ್ನವೇ ಒತ್ತಡದಲ್ಲಿದ್ದ ಸರಬರಾಜು ವ್ಯವಸ್ಥೆ ಈಗ ಇನ್ನಷ್ಟು ದುರ್ಬಲವಾಗಿದೆ.



ಬಿತ್ತನೆ ಸಮಯದಲ್ಲಿ ಕೊರತೆ

ರಸಗೊಬ್ಬರವನ್ನು ಸಾಮಾನ್ಯವಾಗಿ ಬಿತ್ತನೆ ಸಮಯದಲ್ಲಿ ಬಳಸಲಾಗುತ್ತದೆ. ಈ ಸಮಯದಲ್ಲಿ ಸರಬರಾಜು ವಿಳಂಬವಾದರೆ ಬೆಳೆಗಳ ಆರಂಭಿಕ ಬೆಳವಣಿಗೆ ಕುಂಠಿತವಾಗುತ್ತದೆ ಮತ್ತು ಉತ್ಪಾದನೆ ಕಡಿಮೆಯಾಗುತ್ತದೆ. ಈ ಪರಿಣಾಮ ಈಗಾಗಲೇ ಅಮೆರಿಕ ಮತ್ತು ಯುರೋಪ್‌ನಲ್ಲಿ ಕಾಣಿಸುತ್ತಿದೆ. ಏಷ್ಯಾದ ಹಲವು ಭಾಗಗಳಲ್ಲಿ ಮುಂದಿನ ತಿಂಗಳಲ್ಲಿ ಬಿತ್ತನೆ ಆರಂಭವಾಗಲಿದ್ದು, ಅಲ್ಲಿ ಕೂಡ ಪರಿಣಾಮ ಬೀರುವ ನಿರೀಕ್ಷೆಯಿದೆ. ಚೀನಾ ಮತ್ತು ರಷ್ಯಾ ಮೊದಲಾದ ಪ್ರಮುಖ ಉತ್ಪಾದಕರು ತಮ್ಮ ದೇಶೀಯ ಅಗತ್ಯಗಳಿಗೆ ಆದ್ಯತೆ ನೀಡುತ್ತಿರುವುದರಿಂದ ಜಾಗತಿಕ ಕೊರತೆಯನ್ನು ಭರಿಸುವುದು ಕಷ್ಟವಾಗಿದೆ.

ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಹೆಚ್ಚು ಪರಿಣಾಮ

ಆಫ್ರಿಕಾ ಸೇರಿದಂತೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಈ ಸಮಸ್ಯೆ ಗಂಭೀರವಾಗಿದೆ. ಮಧ್ಯಪ್ರಾಚ್ಯ ಮತ್ತು ರಷ್ಯಾದಿಂದ ರಸಗೊಬ್ಬರ ಆಮದು ಮಾಡುವ ರೈತರು ಹೆಚ್ಚು ತೊಂದರೆ ಅನುಭವಿಸುತ್ತಿದ್ದಾರೆ. ಸಂಶೋಧನೆಗಳ ಪ್ರಕಾರ, ರಸಗೊಬ್ಬರ ಬಳಕೆಯಲ್ಲಿ ಸ್ವಲ್ಪ ವಿಳಂಬವೂ ಮಕ್ಕೆಜೋಳದ ಉತ್ಪಾದನೆಯನ್ನು ಸುಮಾರು 4% ರಷ್ಟು ಕಡಿಮೆ ಮಾಡಬಹುದು. ಈ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರಗಳು ಸಹಾಯಧನ ನೀಡುವುದು, ದೇಶೀಯ ಉತ್ಪಾದನೆಯನ್ನು ಉತ್ತೇಜಿಸುವುದು ಮತ್ತು ರಫ್ತು ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬಹುದುದಾಗಿದೆ.

ಕಿರುಸುದ್ದಿ

ಇನ್ನು ಅಮೆರಿಕದ ಕರೆನ್ಸಿ ನೋಟಲ್ಲಿ ಟ್ರಂಪ್ ಸಹಿ



• **ವಾಷಿಂಗ್ಟನ್:** ಇನ್ನು ಮುಂದೆ ಅಮೆರಿಕದಲ್ಲಿ ಮುದ್ರಣವಾಗುವ ಕರೆನ್ಸಿ ನೋಟುಗಳಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸಹಿ ಇರಲಿದೆ ಎಂದು ಖಜಾನೆ ಇಲಾಖೆ ಘೋಷಿಸಿದೆ. ಈ ಮೂಲಕ ಕರೆನ್ಸಿಯಲ್ಲಿ ಹೆಸರು ಕಾಣಿಸಿಕೊಳ್ಳುವ ಮೊದಲ ಹಾಲಿ ಅಧ್ಯಕ್ಷರು ಎಂಬ ಹೆಗ್ಗಳಿಗೆಕೂ ಟ್ರಂಪ್ ಪಾತ್ರರಾಗಲಿದ್ದಾರೆ. ಈ ಮೂಲಕ ಅಧ್ಯಕ್ಷ ಟ್ರಂಪ್ ನಾಯಕತ್ವದಲ್ಲಿ, ನಾವು ಅಭೂತಪೂರ್ವ ಆರ್ಥಿಕ ಬೆಳವಣಿಗೆ, ಶಾಶ್ವತ ಡಾಲರ್ ಪ್ರಾಬಲ್ಯ ಮತ್ತು ಹಣಕಾಸಿನ ಶಕ್ತಿ ಮತ್ತು ಸ್ಥಿರತೆಯ ಹಾದಿಯಲ್ಲಿದ್ದೇವೆ ಎಂದು ತಿಳಿಸಿದ್ದಾರೆ. 1 ಡಾಲರ್‌ನ 24 ಕ್ಯಾರೆಟ್ ಚಿನ್ನದ ನಾಣ್ಯದಲ್ಲಿ ಟ್ರಂಪ್ ಅವರ ಚಿತ್ರವನ್ನು ಈ ಹಿಂದೆ ಮುದ್ರಿಸಲಾಗಿತ್ತು. ಈ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಕಳವಾದ ಪುರಾತನ 3 ಶಿಲ್ಪ ಮರಳಿ ಭಾರತಕ್ಕೆ

• **ವಾಷಿಂಗ್ಟನ್:** ತಮಿಳುನಾಡಿನ ದೇವಾಲಯಗಳಿಂದ ಕಳವು ಮಾಡಲಾಗಿದೆ ಎಂದು ಸಂಶೋಧನೆ ದೃಢಪಡಿಸಿದ ನಂತರ ಸ್ಮಿತ್ಸೋನಿಯನ್‌ನ ನ್ಯಾಷನಲ್ ಮ್ಯೂಸಿಯಂ ಆಫ್ ಏಷ್ಯನ್ ಆರ್ಟ್‌ನಿಂದ ಮೂರು ಪುರಾತನ ಶಿಲ್ಪಗಳು ಭಾರತಕ್ಕೆ ಮರಳಲು ಸಜ್ಜಾಗಿವೆ. ಒಂಬತ್ತನೇ ಶತಮಾನದ ಶಿವ ನಟರಾಜ ಕಂಚು, 12ನೇ ಶತಮಾನದ ಶಿವ ಮತ್ತು ಉಮಾ ಶಿಲ್ಪ ಮತ್ತು 16ನೇ ಶತಮಾನದ ಸಂತ ಸುಂದರಾರ್ ಅವರ ಪರವಿಯೊಂದಿಗೆ ಚಿತ್ರಣವನ್ನು ಹಿಂದಿರುಗಿಸಲು ಅಮೆರಿಕದ ಭಾರತದ ನಿಯೋಗದ ಉಪ ಮುಖ್ಯಸ್ಥ ನ್ಯಾಮ್ಸ್‌ಗೆ ಖಂಬಾ ಅವರು ನ್ಯಾಷನಲ್ ಮ್ಯೂಸಿಯಂ ಆಫ್ ಏಷ್ಯನ್ ಆರ್ಟ್ (ಎನ್‌ಎಂಎಎ) ನಿರ್ದೇಶಕ ಚೇಸ್ ರಾಬಿನ್ಸನ್ ಅವರೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದರು.

ಹಿಮಪಾತ; 7 ಜನ ಸಾವು

• **ಶ್ರೀನಗರ:** ಲಡಾಖ್‌ನ ಜೋಜಿ ಲಾದಲ್ಲಿ ಶ್ರೀನಗರ-ಲೇಹ್ ಹೆದ್ದಾರಿಯಲ್ಲಿ ಭಾರೀ ಹಿಮಪಾತ ಸಂಭವಿಸಿ ಕನಿಷ್ಠ ಏಳು ಮಂದಿ ಮೃತಪಟ್ಟಿದ್ದು, ಇತರೆ ಏಳು ಮಂದಿ ಗಾಯಗೊಂಡಿದ್ದಾರೆ. ಅಧಿಕಾರಿಗಳ ಪ್ರಕಾರ, ಮಧ್ಯಾಹ್ನ ಭಾರೀ ಹಿಮಪಾತದ ನಂತರ ಕನಿಷ್ಠ 15 ವಾಹನಗಳು ಸಂಪೂರ್ಣವಾಗಿ ಹಿಮದೊಳಗೆ ಸಿಲುಕಿಕೊಂಡಿದೆ. ಏತನ್ಮಧ್ಯೆ, ಆಡಳಿತವು ಪೊಲೀಸರು, ಸೇನೆ, ಗಡಿ ರಸ್ತೆಗಳ ಸಂಸ್ಥೆ, ಎಸ್‌ಡಿಆರ್‌ಎಫ್ ಮತ್ತು ಸೋನಾಮಾರ್ಗ್ ಮತ್ತು ದ್ರಾಸ್‌ನ ಜಿಲ್ಲಾ ಆಡಳಿತಗಳನ್ನು ಒಳಗೊಂಡ ಪ್ರಮುಖ ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ.

ಮೋದಿ, ನಾನು ಸೇರಿದರೆ ಎಲ್ಲವೂ ಸಾಧ್ಯ: ಟ್ರಂಪ್

• **ಹೊಸದಿಲ್ಲಿ:** ನಾನು ಮತ್ತು ಭಾರತದ ಪ್ರಧಾನಿ ನರೇಂದ್ರ ಮೋದಿ ನಮ್ಮ ಚಿಂತನೆಗಳನ್ನು ನೇರ ಕೃತಿರೂಪಕ್ಕಿಳಿಸುವವರು. ಈ ತಾಕತ್ತು ಬಹುತೇಕರಿಗೆ ಇರುವುದಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪಶ್ಚಿಮ ಏಷ್ಯಾ ಸಮರ ಮಧ್ಯೆ ಪ್ರಧಾನಿ ಮೋದಿ ಅವರನ್ನು ಮಗದೊಮ್ಮೆ ಹೊಗಳಿದ್ದಾರೆ. ಭಾರತದಲ್ಲಿನ ಅಮೆರಿಕ ದೂತಾವಾಸದಲ್ಲಿ ಶುಕ್ರವಾರ ಅಂಟಿಸಿರುವ ಪೋಸ್ಟ್ ಒಂದರಲ್ಲಿ ಈ ರೀತಿ ಉಲ್ಲೇಖವಿದೆ. ಪೋಸ್ಟ್‌ನಲ್ಲಿ ಇಬ್ಬರೂ ನಾಯಕರ ಫೋಟೋಗಳಿವೆ. ಪ್ರಧಾನಿ ಮೋದಿ ಅವರು ಸಮರ್ಥ ನಾಯಕನೆಂದು ಟ್ರಂಪ್ ಪ್ರಶಂಸಿಸುವ ಮುಖೇನ, ಭಾರತದೊಂದಿಗೆ ಅಮೆರಿಕದ ಬಾಂಧವ್ಯ ಬಲಿಷ್ಠವಾಗಿದೆ ಎಂದು ಬಿಂಬಿಸಲಾಗಿದೆ. ಭಾರತದೊಂದಿಗಿನ ನಮ್ಮ ಅಭೂತಪೂರ್ವ ಬಾಂಧವ್ಯ ಮುಂದೆ ಇನ್ನಷ್ಟು ಬಲಿಷ್ಠವಾಗಿ ಮುಂದುವರಿಯಲಿದೆ ಎಂದು ಚಿತ್ರದಲ್ಲಿರುವ ಟ್ರಂಪ್ ಸಂದೇಶದಲ್ಲಿ ಹೇಳಲಾಗಿದೆ. ಪ.ಏಷ್ಯಾ ಸಂಘರ್ಷಕ್ಕೆ ಸಂಬಂಧಿಸಿ ಪ್ರಧಾನಿ ನರೇಂದ್ರ ಮೋದಿ ಅಮೆರಿಕ ಅಧ್ಯಕ್ಷ ಟ್ರಂಪ್‌ರೊಂದಿಗೆ ಮಂಗಳವಾರ ಫೋನ್ ಸಂಭಾಷಣೆ ನಡೆಸಿದ ಬೆರಳೆಣಿಕೆ ದಿನಗಳಲ್ಲಿ ಅಮೆರಿಕ ದೂತಾವಾಸದಲ್ಲಿ ಈ ಪೋಸ್ಟ್ ಹಾಕಲಾಗಿದೆ. ಪ.ಏಷ್ಯಾದಲ್ಲಿ ಸಮರ ನಿಲ್ಲಬೇಕು ಮತ್ತು ಆದಷ್ಟು ಶೀಘ್ರ ಶಾಂತಿ ಮರುನೆಲೆಸಬೇಕೆಂಬುದು ಭಾರತದ ಆಶಯ ಮತ್ತು ಭಾರತ ಇದನ್ನು ಬೆಂಬಲಿಸುತ್ತದೆ. ಹಾರ್ಮುಜ್ ಜಲಸಂಧಿಯನ್ನು ಜಾಗತಿಕ ನೌಕಾಯಾನಕ್ಕೆ ಮುಕ್ತಗೊಳಿಸುವುದಕ್ಕೆ ಪ್ರಾಧಾನ್ಯತೆ ಮುಖ್ಯವೆಂದು ಪ್ರಧಾನಿ ಮೋದಿ ಟ್ರಂಪ್ ಜತೆಗಿನ ಫೋನ್ ಸಂಭಾಷಣೆಯಲ್ಲಿ ಹೇಳಿದ್ದರು.

ಬಲವಂತದ ಮತಾಂತರ ತಡೆಗಾಗಿ ಕಠಿಣ ಕಾಯ್ದೆ

• **ಹೊಸದಿಲ್ಲಿ:** ಬಲವಂತದ ಮತಾಂತರಗಳು ರಾಷ್ಟ್ರೀಯ ಭದ್ರತೆಗೆ ಗಂಡಾಂತರವಾಗಿ ಪರಿಣಮಿಸಿದೆ ಮತ್ತು ಬುಡಕಟ್ಟು ಸಮುದಾಯದ ಸಾಂಸ್ಕೃತಿಕ ಅಸ್ಮಿತೆಯನ್ನು ವ್ಯವಸ್ಥಿತವಾಗಿ ನಾಶಪಡಿಸುತ್ತಿದೆ. ಈ ಅಪಾಯ ತಡೆಯಲು, ಬಲವಂತದ ಮತಾಂತರ ವಿರುದ್ಧ ಕೇಂದ್ರ ಸರ್ಕಾರ ಕಠಿಣ ಕಾಯಿದೆ ಜಾರಿಗೊಳಿಸಬೇಕೆಂದು ಮಧ್ಯಪ್ರದೇಶದ ಬಿಜೆಪಿ ಸಂಸದ ಸುಮೇರ್ ಸಿಂಗ್ ಸೋಲಂಕಿ ಶುಕ್ರವಾರ ಆಗ್ರಹಿಸಿದ್ದಾರೆ. ಸಂವಿಧಾನವು ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ನೀಡಿದೆ. ಇದೇ ವೇಳೆ ವಂಚನೆ, ಒತ್ತಡ, ಶೋಷಣೆ ಮುಖೇನ ಮತಾಂತರವು ಕಾನೂನು ಪ್ರಕಾರ ಮತ್ತು ನೈತಿಕವಾಗಿಯೂ ಅಪರಾಧವಾಗಿದೆ ಎಂದು ಸೋಲಂಕಿ ರಾಜ್ಯಸಭೆಯಲ್ಲಿ ಶೂನ್ಯವೇಳೆಯಲ್ಲಿ ವಿಷಯವೆತ್ತಿ ಆರೋಪಿಸಿದರು. ಈ ರೀತಿಯ ಮತಾಂತರಗಳು ನಮ್ಮ ದೇಶದ ರಾಷ್ಟ್ರೀಯ ಭದ್ರತೆಗೆ ಗಂಡಾಂತರವಾಗಿ ಪರಿಣಮಿಸಿದೆ ಮತ್ತು ಇದಕ್ಕೆ ತುರ್ತಾಗಿ ಕಡಿವಾಣ ಹಾಕಬೇಕಿದೆ ಎಂದು ಆಗ್ರಹಿಸಿದರು. ಬುಡಕಟ್ಟು ಸಮುದಾಯಗಳ ಅಸ್ಮಿತೆಗೆ ಸನಾತನ ಧರ್ಮ ಸಂಸ್ಕೃತಿ ಮತ್ತು ಸಂಪ್ರದಾಯಗಳೇ ಮೂಲಬುನಾದಿಯಾಗಿದೆ. ಈ ಸಮುದಾಯದ ಜನರನ್ನು ಬೆದರಿಸಿ, ಮೋಸದಿಂದ, ಉದ್ಯೋಗಾವಕಾಶ ಕೊಡಿಸುವ, ವೈದ್ಯಕೀಯ ಚಿಕಿತ್ಸೆ ಮತ್ತು ಶಿಕ್ಷಣ ಕೊಡಿಸುವ ಆಮಿಷವೊಡ್ಡಿ, ಮೂಢನಂಬಿಕೆಗಳು ಮತ್ತು ತಪ್ಪುಮಾಹಿತಿ ಮುಖೇನ ನಂಬಿಸಿ ಮೋಸದಿಂದ ಮತಾಂತರಿಸಲಾಗುತ್ತಿದೆ. ಇವರ ಅನಕ್ಷರತೆ ಮತ್ತು ಬಡತನವನ್ನು ದೌರ್ಬಲ್ಯವಾಗಿಸಿಕೊಂಡು ಮೋಸದಿಂದಲೇ ಇವರನ್ನು ವಿವಾಹಗಳಿಗೆ ಒಪ್ಪಿಸಲಾಗುತ್ತದೆ. ಇಂತಹ ಸಂಘಟಿತ ಮತ್ತು ಸಾಮೂಹಿಕ ಮತಾಂತರಗಳು ಸಂಘಟಿತ ಅಪರಾಧಕ್ಕೆ ಸಮಾನವೆಂದು ಸೋಲಂಕಿ ಆರೋಪಿಸಿದರು.

ನೋಯ್ಡಾ ಏರ್‌ಪೋರ್ಟ್ ಹಂತ 1ಕ್ಕೆ ಇಂದು ಚಾಲನೆ

• **ಹೊಸದಿಲ್ಲಿ:** ಬಹುನಿರೀಕ್ಷಿತ ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೊದಲ ಹಂತವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಉದ್ಘಾಟಿಸಲಿದ್ದಾರೆ. ಇದು ರಾಷ್ಟ್ರ ರಾಜಧಾನಿ ಪ್ರದೇಶದ ಎರಡನೇ ಪ್ರಮುಖ ವಿಮಾನ ನಿಲ್ದಾಣವಾಗಿದೆ. ಅಂತೆಯೇ ಇದು ದೇಶದ ಅತಿದೊಡ್ಡ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣ ಯೋಜನೆಗಳಲ್ಲಿ ಒಂದಾಗಿದೆ. ಈ ವಿಮಾನ ನಿಲ್ದಾಣದ ಅಭಿವೃದ್ಧಿಗೆ 11,200 ಕೋಟಿ ರೂ. ವೆಚ್ಚ ಮಾಡಲಾಗಿದೆ. ಸುಸ್ಥಿರ ಮತ್ತು ಭವಿಷ್ಯದ ಸಿದ್ಧ ಮೂಲಸೌಕರ್ಯ ಯೋಜನೆಯಾಗಿ ವಿನ್ಯಾಸಗೊಳಿಸಲಾದ ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಶೂನ್ಯ ಇಂಧನ ಹೊರಸೂಸುವಿಕೆ ಸೌಲಭ್ಯವಾಗಿ ಕಾರ್ಯನಿರ್ವಹಿಸುವ ಗುರಿ ಹೊಂದಿದೆ. ಇಂಧನ-ದಕ್ಷ ವ್ಯವಸ್ಥೆಗಳು ಮತ್ತು ಪರಿಸರ ಜವಾಬ್ದಾರಿಯುತ ವ್ಯವಸ್ಥೆಯನ್ನು ಸಂಯೋಜಿಸುತ್ತದೆ. ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪೂರಕವಾಗಿನೋಯ್ಡಾ ಅಂತಾರಾಷ್ಟ್ರೀಯವಿಮಾನನಿಲ್ದಾಣವನ್ನು ದಿಲ್ಲಿ-ಎನ್‌ಸಿಆರ್ ಪ್ರದೇಶದ ಎರಡನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಅಭಿವೃದ್ಧಿಪಡಿಸಲಾಗಿದೆ. ಈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಸದ್ಯ ವರ್ಷಕ್ಕೆ 12 ದಶಲಕ್ಷ ಪ್ರಯಾಣಿಕರನ್ನು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಸಂಪೂರ್ಣವಾಗಿ ಅಭಿವೃದ್ಧಿಗೊಂಡ ನಂತರ, ವಿಮಾನ ನಿಲ್ದಾಣವು ಒಟ್ಟು 7 ಕೋಟಿ ಪ್ರಯಾಣಿಕರ ನಿರ್ವಹಣಾ ಸಾಮರ್ಥ್ಯವನ್ನು ಹೊಂದಿರುತ್ತದೆ. ಇದು ರಾಷ್ಟ್ರ ರಾಜಧಾನಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ದಟ್ಟಣೆಯನ್ನು ಕಡಿಮೆ ಮಾಡುತ್ತದೆ.

ರೈಲ್ವೆಯ ಸಾವಿರ ಹೆಕ್ಟೇರ್ ಭೂಮಿ ಅತಿಕ್ರಮಣ!

• **ಹೊಸದಿಲ್ಲಿ:** ಭಾರತೀಯ ರೈಲ್ವೆ ಒಡೆತನದ ಸುಮಾರು 1,068 ಹೆಕ್ಟೇರ್ ಭೂಮಿ ದೇಶಾದ್ಯಂತ ಅತಿಕ್ರಮಣವಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಶುಕ್ರವಾರ ರಾಜ್ಯಸಭೆಗೆ ತಿಳಿಸಿದ್ದಾರೆ. ಪ್ರಶ್ನೋತ್ತರ ಅವಧಿಯಲ್ಲಿ ಪೂರಕ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಎಲ್ಲಾ ರೈಲ್ವೆ ಭೂಮಿ ಬಳಕೆಯನ್ನು ನೋಡಿದರೆ, ಸುಮಾರು ಶೇ.80 ರಷ್ಟು ಭೂಮಿ ಹಳಿಗಳಿವೆ. ಅದರ ಸುತ್ತಲೂ ಶೇ.5ರಷ್ಟು ಭೂಮಿ ಇದೆ. ಉಳಿದ ಶೇ.15ರಷ್ಟು ಭೂಮಿಯನ್ನು ನಿಲ್ದಾಣಗಳು, ವಸಾಹತುಗಳು, ಆಸ್ಪತ್ರೆಗಳು ಮತ್ತು ಇತರ ವಸ್ತುಗಳ ಅಭಿವೃದ್ಧಿಗೆ ಬಳಸಲಾಗುತ್ತದೆ ಎಂದು ಹೇಳಿದರು. ದೇಶದಲ್ಲಿ ಸುಮಾರು ಶೇ. 0.01ರಷ್ಟು ರೈಲ್ವೆ ಭೂಮಿಯು ಅಕ್ರಮ ಅತಿಕ್ರಮಣದಲ್ಲಿದೆ ಎಂದು ಅವರು ಸದನದಲ್ಲಿ ಸದಸ್ಯರಿಗೆ ತಿಳಿಸಿದರು. ಭೂಮಿಯ ಮೇಲಿನ ಈ ಅಕ್ರಮ ಅತಿಕ್ರಮಣವು ಗಂಭೀರ ಸಮಸ್ಯೆಯಾಗಿದೆ. ಇದಕ್ಕೆ ಸೂಕ್ತ ಕ್ರಮವನ್ನು ಸಹ ತೆಗೆದುಕೊಳ್ಳಲಾಗಿದೆ. ಆದರೆ ಸಕಾಲಿಕ ಕ್ರಮವನ್ನೂ ತೆಗೆದುಕೊಳ್ಳಲಾಗಿದೆ. ಅಂತಹ ಕ್ರಮವನ್ನು ಕೈಗೊಂಡಾಗಲೆಲ್ಲಾ, ಮಾನವೀಯ ವಿಧಾನವನ್ನು ಅಳವಡಿಸಿಕೊಳ್ಳಲಾಗುತ್ತದೆ. ಸಾಧ್ಯವಾದಲ್ಲೆಲ್ಲಾ, ರಾಜ್ಯ ಸರ್ಕಾರಗಳೊಂದಿಗೆ ಒಟ್ಟಾಗಿ ಪ್ರಾಯೋಗಿಕ ಪರಿಹಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು.



ಅಯೋಧ್ಯೆ: ರಾಮನವಮಿ ಹಿನ್ನೆಲೆ ರಾಮಲಲಾನ ದರ್ಶನ ಪಡೆದ ಲಕ್ಷಾಂತರ ಭಕ್ತರು

ಅಭಿಜಿತ್ ಮುಹೂರ್ತದಲ್ಲಿ ರಾಮನಿಗೆ ಸೂರ್ಯತಿಲಕ

• **ಅಯೋಧ್ಯೆ:** ಚೈತ್ರ ನವರಾತ್ರಿಯ ಒಂಭತ್ತನೇ ದಿನ ಅವತರಿಸಿದ ಭಗವಾನ್ ಶ್ರೀರಾಮಚಂದ್ರನ ಅಯೋಧ್ಯಾ ಮಂದಿರದಲ್ಲಿ ಶುಕ್ರವಾರ ಲಕ್ಷಾಂತರ ಭಕ್ತರು ಸೇರಿದ್ದರು. ರಾಮನವಮಿ ಹಿನ್ನೆಲೆಯಲ್ಲಿ ದ್ವಿತೀಯ ಬಾರಿ ವಿಶಿಷ್ಟವಾಗಿ ಸೂರ್ಯತಿಲಕದಿಂದ ಪ್ರಕಾಶಿತ, ಪುಷ್ಪ -ಆಭರಣಗಳಿಂದ ಶೋಭಿತ ರಾಮಲಲಾನ ಕಾಣಲು, ಬಾಲರಾಮನ ದರ್ಶನ ಮಾತ್ರದಿಂದಲೆ ಪುನೀತರಾಗಲು ಭಕ್ತರು ಮುಂಜಾನೆಯಿಂದಲೇ ಪ್ರವಾಹೋಪಾದಿಯಲ್ಲಿ ಶ್ರೀರಾಮಮಂದಿರದತ್ತ ಹೆಜ್ಜೆ ಹಾಕಿದ್ದರು.

ಮಧ್ಯಾಹ್ನ 12 ಗಂಟೆಗೆ ಪವಿತ್ರ ಅಭಿಜಿತ್ ಮುಹೂರ್ತದಲ್ಲಿ ಬಾಲರಾಮನಿಗೆ ಸೂರ್ಯ ತಿಲಕ ವಿಧಿಯನ್ನು ವಿಧಿಬದ್ಧವಾಗಿ ನೆರವೇರಿಸಲಾಯಿತು. ವಿಧಿಪ್ರಕಾರ ಆದಿತ್ಯನ ತೇಜೋಮಯ ಪ್ರಖರ ರಶ್ಮಿಗಳು ಭಗವಂತನ ಹಣೆ ಭಾಗವನ್ನು ನೇರವಾಗಿ ಸ್ಪರ್ಷಿಸಿದ್ದವು. ವಿಶೇಷವಾಗಿ ತಯಾರಾದ ಲೆನ್ಸ್‌ಗಳ ನೆರವಿನಿಂದ ಈ ವಿಧಿಯನ್ನು ನಿರ್ವಿಘ್ನ 9 ನಿಮಿಷಗಳ ಕಾಲ ನಿರ್ವಹಿಸಲಾಯಿತು. ಗರ್ಭಗುಡಿಯಲ್ಲಿ ವೇದ ಸಂಪ್ರದಾಯಗಳಂತೆ ಸುಮಾರು 14 ಅರ್ಚಕರು ವಿಧಿ ವಿಧಾನಗಳನ್ನು ನೆರವೇರಿಸಿದರು. ಇದಾದ ಬೆನ್ನಲ್ಲೇ ಭಗವಂತನಿಗೆ 56 ಬಗೆಯ ನೈವೇದ್ಯಗಳ ಉಣಬಡಿಸಿ ಅಲ್ಪಾವಧಿಗೆ ಗರ್ಭಗುಡಿ ಬಾಗಿಲು ಹಾಕಲಾಯಿತು ಎಂದು ದೇಗುಲ ಟ್ರಸ್ಟ್ ಸದಸ್ಯರು ತಿಳಿಸಿದ್ದಾರೆ. ಮುಂಜಾನೆ ಭಗವಂತನಿಗೆ ಪೀತವರ್ಣದ ಪಟ್ಟೆಪೀತಾಂಬರ ತೊಡಿಸಲಾಗಿತ್ತು. ಮುಂಜಾನೆ 5.30ಕ್ಕೆ ಬೆಳಗಿನ ಆರತಿ ಎತ್ತಲಾಗಿತ್ತು. ಶ್ರೀರಾಮಲಲಾ ವಿಗ್ರಹಕ್ಕೆ ಪ್ರಾಣಪ್ರತಿಷ್ಠೆಯಾದ ನಂತರದಲ್ಲಿ ಭಗವಂತನ ಹಣೆಯನ್ನು ಸೂರ್ಯಕಿರಣಗಳು ಭಕ್ತಿಪ್ರೀತಿಯೊಂದಿಗೆ ಮುತ್ತಿಕ್ಕಿದ್ದು ಇದು ಸತತ ದ್ವಿತೀಯ ಬಾರಿ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಶೇಷ ವಿನ್ಯಾಸದ ಪರಿಕರ ವ್ಯವಸ್ಥೆ: ಸುಮಾರು 65 ಅಡಿ ಎತ್ತರದಿಂದ ಭಾಸ್ಕರನ ಕಿರಣಗಳು ಭಗವಂತನ ಹಣೆಯನ್ನು ಸ್ಪರ್ಶಿಸಲು ಪೂರಕವಾಗುವಂತೆ 20ಅಷ್ಟಧಾತು ಪೈಪ್‌ಗಳು , ನಾಲ್ಕು ಲೆನ್ಸ್‌ಗಳು ಮತ್ತು ನಾಲ್ಕು ಕನ್ನಡಿಗಳನ್ನು ಒಳಗೊಂಡ ವಿಶೇಷ ವಿನ್ಯಾಸದ ಪರಿಕರವನ್ನು ಸಿದ್ಧಪಡಿಸಲಾಗಿತ್ತು.

ಪ್ರಧಾನ ಆಕರ್ಷಣೆ: ಮಧ್ಯಾಹ್ನ ಭಗವಂತನ ವಿಶಾಲವಾದ ಹಣೆಭಾಗವನ್ನು ಸೂರ್ಯರಶ್ಮಿಗಳು ಪ್ರೀತಿಯಿಂದ ಸ್ಪರ್ಶಿಸುವ ವಿಧಿಯು ಪ್ರಧಾನ ಆಕರ್ಷಣೆಯೆಂದು ರಾಮ ದೇವಾಲಯದ ಟ್ರಸ್ಟ್ ಸದಸ್ಯ ಅನಿಲ್ ಮಿಶ್ರಾ ಸುದ್ದಿಗಾರರಲ್ಲಿ ಅಭಿಪ್ರಾಯಿಸಿದ್ದಾರೆ. ಸುಮಾರು 10ಲಕ್ಷ ಭಕ್ತರು ದೇಗುಲಕ್ಕೆ ಭೇಟಿ ನೀಡಿದ್ದಾರೆ. ದೇವಾಲಯ ಸಂಕೀರ್ಣ, ರಾಮಪಥ, ಭಕ್ತಿಪಥ ಹಾಗೂ ಜನ್ಮಭೂಮಿ ಪಥ ಸಹಿತ ಮಂದಿರ ಪರಿಸರದ ಅಕ್ಕಪಕ್ಕದ ದಾರಿಗಳೆಲ್ಲವೂ ರಾಮಭಕ್ತರಿಂದ ಗಿಜಿಗುಡುತ್ತಿದ್ದವು. ಬಿಗು ಭದ್ರತಾ ವ್ಯವಸ್ಥೆಯೊಂದಿಗೆ ರಾಮ ನವಮಿ ಉತ್ಸವ ಶಾಂತಿಯುತ ಆಚರಿಸಲ್ಪಟ್ಟಿತು ಎಂದು ಅಧಿಕಾರಿಗಳು ಸಂತಸ ವ್ಯಕ್ತಪಡಿಸಿದ್ದಾರೆ.



ಸಾಕ್ಷಿಯಾದ ಪ್ರಧಾನಿ ಮೋದಿ

ಅಯೋಧ್ಯೆಯ ರಾಮಮಂದಿರದಲ್ಲಿ ನಡೆದ ಸೂರ್ಯ ತಿಲಕ ಸಮಾರಂಭಕ್ಕೆ ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ವರ್ಚುವಲ್ ಆಗಿ ಸಾಕ್ಷಿಯಾದರು. ಅಯೋಧ್ಯೆ ಶ್ರೀ ರಾಮ ಜನ್ಮಭೂಮಿ ಮಂದಿರದಲ್ಲಿ ನಡೆದ ಸೂರ್ಯ ತಿಲಕದ ದರ್ಶನವಾಯಿತು. ಪ್ರಭು ಶ್ರೀ ರಾಮನ ಆಶೀರ್ವಾದವು ನಮ್ಮ ಮೇಲೆ ಯಾವಾಗಲೂ ಇರಲಿ ಎಂದು ಮೋದಿ ಎಕ್ಸ್ ಪೋಸ್ಟ್‌ನಲ್ಲಿ ಹೇಳಿದ್ದಾರೆ.

ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅಭಿಮತ

ನಾವು ಮೌಲ್ಯಾಧಾರಿತ ಸಮಾಜದೆಡೆಗೆ ಸಾಗುವಂತಾಗಲಿ

ಮೈಸೂರು: ನಿಯಮಾಧಾರಿತವಾಗಿರುವ ಸಮಾಜದಿಂದ ಮೌಲ್ಯಾಧಾರಿತ ಸಮಾಜದೆಡೆಗೆ ಸಾಗಬೇಕಾದ ಅನಿವಾರ್ಯತೆ ಇದೆ ಎಂದು ಭಾರತೀಯ ಜನತಾಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಹೇಳಿದರು.

ಪ್ರಜ್ಞಾ ಪ್ರವಾಹ ಕರ್ನಾಟಕದ ವತಿಯಿಂದ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾದ ಮೂರನೇ ದಿನವಾದ ಶುಕ್ರವಾರ ನಡೆದ 'ಏಕಾತ್ಮ ಮಾನವ ದರ್ಶನ: ಭಾರತದ ವಿಶ್ವದೃಷ್ಟಿ' ವಿಚಾರ ಸಂಕಿರಣದಲ್ಲಿ Philosophy to Policy Contemporary Political, Economic and Civilizational Challenges: Bharatiya Perspective ವಿಷಯ ಕುರಿತು ನಡೆದ ವಿಶೇಷ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಒಬ್ಬ ವ್ಯಕ್ತಿ ತನ್ನ ಮೌಲ್ಯಗಳಿಂದ ದೇವರಾಗಬಹುದು ಎನ್ನುವುದನ್ನು ತೋರಿಸಿಕೊಟ್ಟು, ಸಕಲ ಕಾಲಕ್ಕೂ ಮಾದರಿಯಾದವನು ಪ್ರಭು ಶ್ರೀರಾಮ ಎಂದರು.

ಭಾರತೀಯ ದೃಷ್ಟಿಕೋನದ ಅನುಷ್ಠಾನಕ್ಕೆ ವ್ಯಕ್ತಿ, ಸಮಾಜ, ಶಿಕ್ಷಣ ಕ್ಷೇತ್ರ, ನೀತಿ ನಿರೂಪಕರು ಮತ್ತು ಅಧಿಕಾರಿ ವರ್ಗ, ಜನಪ್ರತಿನಿಧಿಗಳ ಹಂತಗಳಲ್ಲಿ ಸವಾಲುಗಳು ಎದುರಾಗಬಹುದು. ಇದೆಲ್ಲದಕ್ಕಿಂತಲೂ ಒಂದು ದೊಡ್ಡ ಸವಾಲಾಗಿ ಪಾಶ್ಚಾತ್ಯ ಯೋಚನೆ, ಜೀವನ ಶೈಲಿಯಿಂದ ಪ್ರಭಾವಕ್ಕೆ ಒಳಗಾಗಿರುವ ಜನಮಾನಸ ನಮ್ಮ ಮುಂದಿದೆ. ಸಮಾಜವನ್ನು ನಿರ್ವಸಾಹತೀಕರಣ ಮಾಡಬೇಕು. ಆದರೆ ಅದಕ್ಕಾಗಿ ಪ್ರಯತ್ನಿಸುವವರೇ ವಸಾಹತುಶಾಹಿ ಮಾನಸಿಕತೆಗೆ ಒಳಗಾಗಿರುವಾಗ ಈ ಪ್ರಯತ್ನ ಸಫಲಗೊಳ್ಳುವುದಾದರೂ ಹೇಗೆ ಎಂದು ಪ್ರಶ್ನಿಸಿದರು.

ವಿಮರ್ಶೆ ಮುಖ್ಯವಾಗಲಿ

ಶಿಕ್ಷಣ ಕ್ಷೇತ್ರದಲ್ಲಿ ಅಧ್ಯಯನ ಮತ್ತು ಅಧ್ಯಾಪನದ ವಸ್ತು ಹೇಗಿದೆ ಮತ್ತು ಹೇಗಿರಬೇಕು ಎನ್ನುವುದರ ವಿಮರ್ಶೆ ಮುಖ್ಯ. ನಾವು ಪ್ರಸ್ತುತ ಅಳವಡಿಸಿಕೊಂಡಿರುವ ಅಧ್ಯಯನ ಮತ್ತು ಅಧ್ಯಾಪನದ ಮಾದರಿ ಸರಿಯಿದೆಯೇ ಎಂದು ಅಳೆಯುವುದಕ್ಕೆ ಸರಿಯಾದ ಮಾನದಂಡಗಳನ್ನು ಗುರುತಿಸಬೇಕು. ಈಗಾಗಲೇ ಏಕಾತ್ಮಮಾನವ ದರ್ಶನದ ಹಾದಿಯಲ್ಲಿ ಮುನ್ನಡೆಯುತ್ತಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘ, ರಾಷ್ಟ್ರೋತ್ಥಾನ ಪರಿಷತ್, ಅನೇಕ ಗುರುಕುಲಗಳು, ರಾಮಕೃಷ್ಣ ಮಿಷನ್ ಆದಿಯಾಗಿ ಅನೇಕ ಸಾಮಾಜಿಕ ಮತ್ತು ಧಾರ್ಮಿಕ ಸಂಸ್ಥೆಗಳು ಅಳವಡಿಸಿಕೊಂಡಿರುವ ಮಾದರಿಗಳನ್ನು ನಮ್ಮ ಅನೇಕ ಕ್ಷೇತ್ರಗಳಲ್ಲಿ ಅಳವಡಿಸಿಕೊಳ್ಳಬೇಕಾದ ಆವಶ್ಯಕತೆ ಇದೆ ಎಂದು ಬಿ.ಎಲ್. ಸಂತೋಷ್ ಹೇಳಿದರು.



ಸಿದ್ಧಾಂತಹೀನ ಮತದಾರ, ಸಿದ್ಧಾಂತ ಹೀನ ರಾಜ್ಯ ವ್ಯವಸ್ಥೆಯನ್ನು ನಿರ್ಮಿಸುತ್ತಾನೆ. ಇದರಿಂದಾಗಿ ಭವಿಷ್ಯದಲ್ಲಿ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಅನ್ಯ ರಾಜ್ಯಗಳಲ್ಲಿ ರಾಜ ಮತ್ತು ಋಷಿಯ ವ್ಯವಸ್ಥೆ ಇದೆ. ಭಾರತದಲ್ಲಿ ಮಾತ್ರ ಅವುಗಳ ಸಮನ್ವಯಗೊಂಡ ರಾಜರ್ಷಿ ಎಂಬ ಕಲ್ಪನೆಯೂ ಇದೆ. ಎಲ್ಲಾ ರಾಜಕೀಯ ವ್ಯವಸ್ಥೆಯಲ್ಲಿ ಉತ್ತಮ ಜನಪ್ರತಿನಿಧಿಗಳಿದ್ದಾರೆ. ಆದರೆ, ಪೀಳಿಗೆಗೊಬ್ಬ ಉತ್ತಮ ಜನಪ್ರತಿನಿಧಿಯ ನಿರ್ಮಾಣವಾಗುತ್ತಿದೆ. ಅಂತಹವರ ಸಂಖ್ಯೆ ಹೆಚ್ಚಾಗಬೇಕು. ರಾಜ್ಯದ ನಿಯಂತ್ರಣ ಕಡಿಮೆಯಾಗಿ ಸಮಾಜ ಕೇಂದ್ರಿತ ನಿರ್ವಹಣೆ ಜಾಸ್ತಿಯಾಗಬೇಕು. ಹೆಚ್ಚು ಮೌಲ್ಯಗಳು ಮುನ್ನೆಲೆಗೆ ಬರಬೇಕು. ಅದಕ್ಕಾಗಿ ಮತದಾರ ಜಾಗೃತನಾಗಬೇಕು ಎಂದು ತಿಳಿಸಿದರು.

ಪ್ರಧಾನ ಮಂತ್ರಿಗಳ ಆರ್ಥಿಕ ಸಲಹಾ ಮಂಡಳಿಯ ಸದಸ್ಯ ಪ್ರೊ.ಕೆ.ವಿ.ರಾಜು, ವಿವಿಧ ಕ್ಷೇತ್ರದಲ್ಲಿ ಏಕಾತ್ಮಮಾನವ ದರ್ಶನವನ್ನು ಯಾವ ಹಂತದಲ್ಲಿ ಅಳವಡಿಸಿಕೊಳ್ಳಬೇಕು ಎಂಬ ಸ್ಪಷ್ಟತೆ ನಮಗೆ ಇರಬೇಕು ಎಂದರು.

ನವದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶಾಂತಿಶ್ರೀ ಧುಲಿಪುಡಿ ಪಂಡಿತ ಮಾತನಾಡಿ, ಭಾರತೀಯ ಕಥನವನ್ನು ಸಮರ್ಥವಾಗಿ ಜಗತ್ತಿನ ಎದುರು ಇಡುವುದಕ್ಕೆ ಸಹಕಾರಿಯಾಗುವಂತೆ ಶಿಕ್ಷಣ ವ್ಯವಸ್ಥೆಯನ್ನು ಸಿದ್ಧಪಡಿಸಬೇಕು. ಧ್ರುವೀಕರಣಗೊಂಡಿರುವ ಇಂದಿನ ಜಾಗತಿಕ ಪರಿಸ್ಥಿತಿಯಲ್ಲಿ ಭಾರತೀಯ ನಾಗರಿಕತೆಯ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಪಸರಿಸುವ ಆವಶ್ಯಕತೆ ಹೆಚ್ಚಿದೆ ಎಂದರು.

ಶ್ರೀರಾಮ ನವಮಿ



ಬೆಂಗಳೂರಿನ ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಶುಕ್ರವಾರ ಶ್ರೀರಾಮ ನವಮಿ ಆಚರಣೆ ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಭಾಗವಹಿಸಿದ್ದರು. ಬೆಂಗಳೂರು ವಿಭಾಗ ಪ್ರಭಾರಿ ರಾಜಣ್ಣ, ಸಹ ಪ್ರಭಾರಿ ಕಿರಣ್ ಇದ್ದರು.

ಕಿರುಸುದ್ದಿ

ಇಂದು ವೈರಮುಡಿ ಕಿರೀಟ ಧಾರಣೆ

ಮಂಡ್ಯ: ಮಾ. 28 ರಂದು ಶ್ರೀ ವೈರಮುಡಿ ಕಿರೀಟಧಾರಣೆ ಉತ್ಸವ ನಡೆಯಲಿದೆ. ವೈರಮುಡಿ ಬ್ರಹ್ಮೋತ್ಸವ ಸಂಬಂಧ ದೇವಾಲಯ ಮತ್ತು ಇತರೆ ಇಲಾಖೆಗಳಿಂದ ಕ್ಷೇತ್ರದಲ್ಲಿ ಕೈಗೊಳ್ಳಬೇಕಾಗಿರುವ ಪೂರ್ವಸಿದ್ಧತೆ ಮತ್ತು ಮುಂಜಾಗ್ರತಾ ಕ್ರಮಗಳ ಸಿದ್ಧತಾ ಪೂರ್ವಭಾವಿ ಸಭೆಗಳನ್ನು ನಡೆಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ತಿಳಿಸಿದರು. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ವೈರಮುಡಿ ಕಿರೀಟಧಾರಣೆ ಉತ್ಸವಕ್ಕೆ ಆಗಮಿಸುವ ಭಕ್ತಾದಿಗಳ ಅನುಕೂಲಕ್ಕಾಗಿ ಸಾರಿಗೆ ಸಂಸ್ಥೆ ವತಿಯಿಂದ ಮೇಲುಕೋಟೆಗೆ ಸಂಪರ್ಕ ಕಲ್ಪಿಸುವ ಎಲ್ಲಾ ಪ್ರಮುಖ ಪಟ್ಟಣ, ನಗರ ಭಾಗಗಳಿಂದ ಸುಮಾರು 140 ಬಸ್ಸುಗಳ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಮುಂಗಡ ಸೀಟು ಕಾಯ್ದಿರಿಸುವ ವ್ಯವಸ್ಥೆ ಹಾಗೂ ಮಂಡ್ಯ ನಗರದಿಂದ ನಿರಂತರ ಬಸ್ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ದಾಸೋಹ ವ್ಯವಸ್ಥೆ: ದೇವಾಲಯದ ದಾಸೋಹ ಭವನದಲ್ಲಿ ವೈರಮುಡಿ ಬ್ರಹ್ಮೋತ್ಸವ ನಡೆಯುವ ದಿನ ಭಕ್ತಾದಿಗಳಿಗೆ ದಾಸೋಹ ವ್ಯವಸ್ಥೆ ಮಾಡಲಾಗಿದೆ. ಮಾ 28 ರಂದು ಬೆಳಗ್ಗೆ 08. 00 ಗಂಟೆಯಿಂದ ಮಾ. 29 ರಂದು ಬೆಳಗ್ಗೆ 08-00 ಗಂಟೆಯವರೆಗೆ ನಿರಂತರವಾಗಿ ಭಕ್ತಾದಿಗಳಿಗೆ ಪ್ರಸಾದ ವಿತರಣೆಗೆ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

24ಗಂಟೆಗಳ ಆರೋಗ್ಯ ಸೇವೆ: ವೈರಮುಡಿ ಬ್ರಹ್ಮೋತ್ಸವಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಮತ್ತು ಸಾರ್ವಜನಿಕರು ಭಾಗವಹಿಸುವುದರಿಂದ ತುರ್ತು ವೈದ್ಯಕೀಯ ಸೇವೆ ಹಾಗೂ ಇತರೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ವಿವರಿಸಿದರು.

ಮೂರು ಮಕ್ಕಳ ಸಹಿತ ತಾಯಿ ಆತ್ಮಹತ್ಯೆ

ಇಂಡಿ: ಜೀವನದಲ್ಲಿ ಜಿಗುಪ್ಸೆಗೊಂಡು ಮಹಿಳೆಯೊಬ್ಬಳು ತನ್ನ ಮೂರು ಮಕ್ಕಳೊಂದಿಗೆ ಬಾವಿಯಲ್ಲಿ ಜಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ತಾಲೂಕಿನ ಮಿರಗಿ ಗ್ರಾಮದ ಜಮೀನೊಂದರಲ್ಲಿ ಸಂಭವಿಸಿದೆ. ಮೃತ ಮಹಿಳೆ ಮಿರಗಿ ಗ್ರಾಮದ ರಾಜಶ್ರೀ ಶಂಕ್ರೆಪ್ಪ ಹಳ್ಳೂರ(29) ಎಂದು ಗುರುತಿಸಲಾಗಿದ್ದು, ತನ್ನ ತವರು ಮನೆ ಸಾಂಗಲಿ ಜಿಲ್ಲೆಯ ಜತ್ತ ತಾಲೂಕಿನ ಧರಿಕೋಣ್ಣೂರು ಗ್ರಾಮಕ್ಕೆ ಹೋಗಿ ಬರುತ್ತೇನೆ ಎಂದು ತನ್ನ ಗಂಡನನ್ನು ಕೇಳಿದಾಗ ಇಂದು ಬೇಡ ನಾಳೆ ಹೋಗು ಎಂದು ಮುಂದುಡುತ್ತಾ ಬಂದ ಪರಿಣಾಮ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎನ್ನಲಾಗಿದೆ. ಮಹಿಳೆ ತನ್ನ ಮಕ್ಕಳಾದ ಅನುಶ್ರೀ(6), ತನುಶ್ರೀ (3), ಸಂತೋಷ(1) ಮುಗ್ಧ ಮಕ್ಕಳನ್ನು ಬಾವಿಗೆ ತಳ್ಳಿ ತಾನು ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಈ ಕುರಿತು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈಜಲು ಹೋದ ನಾಲ್ವರ ಸಾವು

ರಾಯಚೂರು: ಆಂಧ್ರ ಪ್ರದೇಶದ ಕರ್ನೂಲ ಜಿಲ್ಲಾ ಆದೋನಿ ತಾಲೂಕಿನ ಕಂದುಕೂರು ಬಳಿ ತುಂಗಭದ್ರಾ ನದಿಯಲ್ಲಿ ಈಜಲು ಹೋದ ಜಿಲ್ಲೆಯ ನಾಲ್ವರು ಮೃತಪಟ್ಟ ಘಟನೆ ನಡೆದಿದೆ. ಮೃತರನ್ನು ಜಿಲ್ಲೆಯ ಮಾನ್ವಿ ತಾಲೂಕಿನ ಕುರಿಡಿ ಗ್ರಾಮದ ದಾಸರಿ ಉಮಾಮತಿ (28), ದಾಸರಿ ರತ್ನಮ್ಮ (26), ದಾಸರಿ ಶಿವಾನಂದ (20) ಮತ್ತು ದಾಸರಿ ಮಹೇಶ್ (20) ಎಂದು ಗುರುತಿಸಲಾಗಿದೆ. ಮೃತರು ಆಂಧ್ರ ಪ್ರದೇಶದ ಕಂದಕೂರು ಗ್ರಾಮದಲ್ಲಿ ಮದುವೆ ಸಮಾರಂಭದಲ್ಲಿ ಪಾಲ್ಗೊಂಡು ಮರಳಿ ಸ್ವಗ್ರಾಮಕ್ಕೆ ಮರಳುವ ಸಂದರ್ಭದಲ್ಲಿ ಬಿಸಿಲಿನ ತಾಪವನ್ನು ತಾಳಲಾರದೇ ನದಿಯಲ್ಲು ಈಜಲು ಹೋಗಿದ್ದಾರೆ. ಆದರೆ, ಇವರು ನದಿಯಲ್ಲಿ ಈಜಲು ಹೋದ ಜಾಗ ಬಹಳ ಆಳವಿದ್ದ ಕಾರಣ ಇವರು ಕಾಲು ಜಾರಿ ಗುಂಡಿಗೆ ಬಿದ್ದ ಕಾರಣ ಇವರೆಲ್ಲ ಮೃತಪಟ್ಟಿದ್ದಾರೆ.

ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸರ್ಕಾರ ನಿರ್ದೇಶನ

ಬಾಕಿ ಹಣ ನೀಡದ ಸಕ್ಕರೆ ಕಾರ್ಖಾನೆಗಳಿಗೆ ನೋಟಿಸ್

ಬೆಂಗಳೂರು: ರಾಜ್ಯದಲ್ಲಿ ಪ್ರಸಕ್ತ ಹಂಗಾಮಿನಲ್ಲಿ ಒಟ್ಟು 81 ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸಿದ್ದು, ನಾಲ್ಕು ಸಹಕಾರಿ ಸೇರಿದಂತೆ ಒಟ್ಟು 16 ಸಕ್ಕರೆ ಕಾರ್ಖಾನೆಗಳು ನಿಯಮಾನುಸಾರ ಕಬ್ಬಿನ ಬಿಲ್ ಪಾವತಿ ಮಾಡದ ಕಾರಣ ರಿಕವರಿ ಸರ್ಟಿಫಿಕೇಟ್ (ವಸೂಲಾತಿ ದೃಢೀಕರಣ ಪತ್ರ) ಜಾರಿ ಮಾಡಲಾಗಿದೆ.

ರೈತರಿಗೆ ಕೊಡಬೇಕಾದ ಕಬ್ಬಿನ ಬಿಲ್ ಬಾಕಿಯನ್ನು ಕಂದಾಯ ಬಾಕಿ ಎಂದು ಪರಿಗಣಿಸಿ ಪ್ರತಿಶತ 15 ರಷ್ಟು ಬಡ್ಡಿಯೊಂದಿಗೆ ರೈತರಿಗೆ ಕೊಡಿಸಬೇಕು ಎಂದು ಕಬ್ಬು ಅಭಿವೃದ್ಧಿ ಆಯುಕ್ತರು ಹಾಗೂ ಸಕ್ಕರೆ ನಿರ್ದೇಶಕ ಗೋವಿಂದರೆಡ್ಡಿ ಅವರು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಕೆಲವು ಸಕ್ಕರೆ ಕಾರ್ಖಾನೆಗಳು ಕಬ್ಬಿನ ಬಿಲ್ ಬಾಕಿ ಉಳಿಸಿಕೊಂಡಿದ್ದು, ಅಂತಹ ಕಾರ್ಖಾನೆಗಳಿಗೆ ಬಾಕಿಯನ್ನು ತಕ್ಷಣ ಪಾವತಿ ಮಾಡಬೇಕು ಎಂದು ನೋಟಿಸ್ ಜಾರಿ ಮಾಡಲಾಗಿತ್ತು. ನೋಟಿಸ್ ನೀಡಿದ ನಂತರವೂ ಕೆಲವು ಕಾರ್ಖಾನೆಗಳು ಬಾಕಿ ಉಳಿಸಿಕೊಂಡ ಹಿನ್ನೆಲೆಯಲ್ಲಿ ರಿಕವರಿ ಸರ್ಟಿಫಿಕೇಟ್ ಜಾರಿ ಮಾಡಲಾಗಿದೆ ಎಂದು ಕಬ್ಬು ಅಭಿವೃದ್ಧಿ ಆಯುಕ್ತರು ತಿಳಿಸಿದ್ದಾರೆ.

ಕಳೆದ ಹಂಗಾಮಿಗೆ ಹೋಲಿಕೆ ಮಾಡಿದರೆ ಕಾರ್ಖಾನೆಗಳು ಘೋಷಿಸಿದ ದರದಂತೆ ಪ್ರತಿ ಟನ್ ಕಬ್ಬಿಗೆ 250 ರಿಂದ 300 ರೂ. ಹೆಚ್ಚಳವಾಗಿದೆ.

300 ಕೋಟಿ ರೂ. ನೆರವು ಬಿಡುಗಡೆ



ರಾಜ್ಯ ಸರ್ಕಾರ ಘೋಷಣೆ ಮಾಡಿದಂತೆ ಎಫ್‌ಆರ್‌ಪಿ ಮೇಲೆ ಪ್ರತಿ ಟನ್ ಕಬ್ಬಿಗೆ 50 ರೂ.ಗಳ ಆರ್ಥಿಕ ನೆರವನ್ನು ಕಬ್ಬು ಪೂರೈಕೆ ಮಾಡಿದ ರೈತರಿಗೆ ನೀಡಲು ರಾಜ್ಯ ಸರ್ಕಾರ 300 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ಕಬ್ಬು ಬೆಳೆಗಾರರ ಅಭಿಪ್ರಾಯದಂತೆ ಈ ಹಣವನ್ನು ಸಕ್ಕರೆ ಕಾರ್ಖಾನೆಗಳಿಗೆ ಬಿಡುಗಡೆ ಮಾಡಲಾಗಿದೆ. ಸಕ್ಕರೆ ಕಾರ್ಖಾನೆಗಳ ಪಾಲಿನ 50 ರೂ. ಆರ್ಥಿಕ ನೆರವು ಸೇರಿ ಒಟ್ಟು ನೂರು ರೂ.ಗಳನ್ನು ಕಬ್ಬು ಬೆಳೆಗಾರರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಬೇಕು ಎಂದು ಕಬ್ಬು ಅಭಿವೃದ್ಧಿ ಆಯುಕ್ತರು ಸಕ್ಕರೆ ಕಾರ್ಖಾನೆಗಳಿಗೆ ಸೂಚನೆ ನೀಡಿದ್ದಾರೆ.



ಕಬ್ಬಿನ ಬಿಲ್ ಪಾವತಿಯನ್ನು ಹೋಲಿಕೆ ಮಾಡಿದರೆ ಕಳೆದ ಹಂಗಾಮಿಗಿಂತ 4.709 ಕೋಟಿ ರೂ. ಹೆಚ್ಚಳವಾಗಲಿದೆ. ಕಬ್ಬಿನ ಬಿಲ್ ಪಾವತಿಯಲ್ಲಿ ಇತರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕ ಮೊದಲ ಸ್ಥಾನದಲ್ಲಿದೆ ಎಂದು ಹೇಳಿದ್ದಾರೆ.

2022-23ರ ಹಂಗಾಮಿನಲ್ಲಿ ಪ್ರತಿಶತ 102ರಷ್ಟು, 2023-24ರ ಹಂಗಾಮಿನಲ್ಲಿ ಪ್ರತಿಶತ 104ರಷ್ಟು ಹಾಗೂ 2024-25ನೇ ಹಂಗಾಮಿನಲ್ಲಿ ಪ್ರತಿಶತ 107.39ರಷ್ಟು ಹಣವನ್ನು ಪಾವತಿ ಮಾಡಲಾಗಿದ್ದು, ಇದು ಎಫ್.ಆರ್.ಪಿ ದರಕ್ಕಿಂತ ಹೆಚ್ಚಿದೆ. ಕಳೆದ ಹಂಗಾಮಿಗೆ ಹೋಲಿಕೆ ಮಾಡಿದರೆ ಈ ಹಂಗಾಮಿನಲ್ಲಿ, ಕಬ್ಬು ನುರಿಸುವಿಕೆ ಮತ್ತು ಸಕ್ಕರೆ ಉತ್ಪಾದನೆ ಪ್ರಮಾಣದಲ್ಲಿ ಪ್ರತಿಶತ 9 ರಷ್ಟು ಏರಿಕೆಯಾಗಿದೆ.ಈ ಮೂಲಕ ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ ಸರ್ಕಾರ ಕೈಗೊಂಡ ಕ್ರಮಗಳ ಪರಿಣಾಮ ಸಕ್ಕರೆ ಇಳುವರಿ ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ಮಾಹಿತಿ ನೀಡಿದ್ದಾರೆ.

2025-26ನೇ ಹಂಗಾಮಿನ ಅಂತ್ಯಕ್ಕೆ ಸುಮಾರು 574 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸಿ ಸುಮಾರು 23,250 ಕೋಟಿ ರೂ.ಗಳಷ್ಟು ಹಣವನ್ನು ಕಬ್ಬು ಪೂರೈಕೆ ಮಾಡಿದ ರೈತರಿಗೆ ಪಾವತಿಸುವ ಅಂದಾಜು ಇದೆ ಎಂದು ವಿವರಿಸಿದ್ದಾರೆ.

ದರ ಏರಿಕೆ ಮಾಡಿದರೆ ಹೋರಾಟ: ಅಶೋಕ

ಬೆಂಗಳೂರು: ಕೇಂದ್ರ ಸರ್ಕಾರ ಪೆಟ್ರೋಲ್ ಡೀಸೆಲ್ ದರ ಇಳಿಸಲು ಕ್ರಮ ವಹಿಸಿದೆ. ಆದರೆ, ಕಾಂಗ್ರೆಸ್ ಸರ್ಕಾರ ದರ ಏರಿಕೆ ಮಾಡಿ ಲಾಭ ಮಾಡಿಕೊಳ್ಳಲು ಮುಂದಾದರೆ ತೀವ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಎಚ್ಚರಿಕೆ ನೀಡಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ಶ್ರೀರಾಮನವಮಿಯ ಸಮಯದಲ್ಲಿ ಪೆಟ್ರೋಲ್-ಡೀಸೆಲ್ ದರ ಇಳಿಸಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿಯವರಿಗೆ ಧನ್ಯವಾದ ಸಲ್ಲಿಸುತ್ತೇನೆ. ಹಿಂದೆ ತುಪ್ಪದ ಮೇಲಿನ ಜಿಎಸ್‌ಟಿ ಇಳಿಸಿದಾಗ ಕಾಂಗ್ರೆಸ್ ಸರ್ಕಾರ ದರ ಏರಿಕೆ ಮಾಡಿತ್ತು. ಈಗ ತೈಲ ದರ ಏರಿಸಲು ಮುಂದಾದರೆ ತೀವ್ರ ಹೋರಾಟ ಮಾಡುತ್ತೇವೆ. ದರ ಇಳಿಕೆಯನ್ನು ಚುನಾವಣೆಗೆ ಲಿಂಕ್ ಮಾಡಬಾರದು. ದೇಶದಲ್ಲಿ ವರ್ಷವಿಡೀ ಚುನಾವಣೆ ನಡೆಯುತ್ತಿರುತ್ತದೆ. ಯಾವುದೇ ಉತ್ತಮ ಕ್ರಮ ಕೈಗೊಂಡರೂ ಕಾಂಗ್ರೆಸ್ ಪಕ್ಷದವರು ಟೀಕೆ ಮಾಡುತ್ತಾರೆ. ಈಗಲೂ ಹಾಗೆಯೇ ಟೀಕೆ ಮಾಡುತ್ತಿದ್ದಾರೆ ಎಂದರು.

ಮೆಟ್ರೊ ಯೋಜನೆ ಸಂಬಂಧ ಸಂಸದ ಪಿ.ಸಿ.ಮೋಹನ್ ಲೋಕಸಭೆಯಲ್ಲಿ ಕೇಳಿದ ಪ್ರಶ್ನೆಯಲ್ಲಿ ಉತ್ತರ ಬಂದಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ 50:50 ಅನುಪಾತದಲ್ಲಿ ಅನುದಾನ ಹಂಚಿಕೆಯಾಗುತ್ತಿದೆ. ಆದರೆ, ಕೇಂದ್ರ ಕೇವಲ ಶೇ.12 ಪಾಲು ನೀಡಿದೆ ಎಂದು ರಾಜ್ಯ ಸರ್ಕಾರ ಉತ್ತರ ನೀಡಿದೆ. ಜಲಜೀವನ್ ಮಿಷನ್‌ನಲ್ಲಿ ಬಳಕೆಯಾದ ಅನುದಾನದ ಬಗ್ಗೆ ಪ್ರಮಾಣಪತ್ರ ನೀಡಿದೆ ಬಾಕಿ ಹಣ ಬಿಡುಗಡೆಯಾಗಿಲ್ಲ ಎಂದು ಆರ್.ಅಶೋಕ ಹೇಳಿದರು.

ಐಪಿಎಲ್ ಟಿಕೆಟ್ ಕಾರ್ಯಕರ್ತರಿಗೆ ನೀಡುತ್ತೇವೆ

ಬೆಂಗಳೂರಿನಲ್ಲಿ ಐಪಿಎಲ್ ಪಂದ್ಯದ ವೇಳೆ ಸರ್ಕಾರ ಸರಿಯಾದ ಭದ್ರತೆ ಕಲ್ಪಿಸಬೇಕಿದೆ. ಈ ಹಿಂದೆ ಪೊಲೀಸ್ ಭದ್ರತೆ ನೀಡದೆಯೇ ಸಚಿವರ ಕುಟುಂಬದವರು ಫೋಟೋ ಶೂಟ್ ಮಾಡಿಕೊಂಡು 11 ಅಮಾಯಕರ ಸಾವಾಗಿತ್ತು. ಇಂತಹ ಘಟನೆ ಮರುಕಳಿಸದಂತೆ ಕ್ರಮ ವಹಿಸಬೇಕು. ಅನಾಹುತವಾದರೆ ಸರ್ಕಾರವೇ ಹೊಣೆಯಾಗುತ್ತದೆ. ಶಾಸಕರಿಗೆ ಟಿಕೆಟ್ ನೀಡಿದರೆ ಅದನ್ನು ಕಾರ್ಯಕರ್ತರಿಗೆ ನೀಡುತ್ತೇವೆ. ನಾನೇನೂ ಐಪಿಎಲ್ ಪಂದ್ಯ ನೋಡಲು ಹೋಗುವುದಿಲ್ಲ. ಬೇರೆಯವರಿಗೆ ಅವಕಾಶ ನೀಡಲು ವಿಐಪಿ ಟಿಕೆಟ್ ಕೊಡಬಹುದು. ಇದಕ್ಕಾಗಿ ನೀತಿ ನಿಯಮ ರೂಪಿಸಬೇಕೆಂದು ಚರ್ಚೆಯಾಗಿದೆ. ಆನ್‌ಲೈನ್‌ನಲ್ಲೇ ಕೊಡಿ ಎಂದು ನಾವು ಕೇಳಿದ್ದೇವೆ ಎಂದು ಅಶೋಕ ಹೇಳಿದರು.

ಅಲುಗಾಡುತ್ತಿರುವ ಸಿಎಂ ಕುರ್ಚಿ: ಶ್ರೀರಾಮುಲು

ಬಾಗಲಕೋಟೆ: ವಿಧಾನಸಭೆಯ ಸ್ಪೀಕರ್ ಯು.ಟಿ.ಖಾದರವರು ವಿಧಾನಸಭೆಯ ದ್ವಾರ ಬಾಗಿಲು, ಮೆಟ್ಟಿಲುಗಳನ್ನು ಹೊಸದು ಮಾಡಲು ಲಕ್ಷಾಂತರ ರೂ. ಖರ್ಚು ಮಾಡುತ್ತಾರೆ. ಆದರ ಜತೆಗೆ ಮುಖ್ಯಮಂತ್ರಿ ಯವರ ಕುರ್ಚಿಯ ನಟ್ಟು, ಬೋಲ್ಟ್ ಕೂಡ ರಿಪೇರಿ ಮಾಡಿಸಬೇಕು ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ವಿಧಾನಸಭೆಯ ಮುಂಭಾಗ ಶಾಸಕರ ಫೋಟೋ ಶೂಟ್ ಆಗಿದ್ದನ್ನು ನೋಡಿದರೆ ಸಭಾಧ್ಯಕ್ಷರಿಗೆ ಸಿಎಂ ಇಳಿಯುವ ಮುನ್ಸೂಚನೆ ದೊರೆತಿರುವ ಕಾರಣದಿಂದಲೇ ಶಾಸಕರೊಂದಿಗೆ ಫೋಟೋ ತೆಗೆಸಿಕೊಳ್ಳಲಾಗಿದೆ. ಸಿಎಂ ಕುರ್ಚಿಯನ್ನು ಕೂಡ ಗಟ್ಟಿಯಾಗಿ ದುರಸ್ತಿ ಮಾಡಿಸಬೇಕಾಗಿದೆ ಎಂದು ಸ್ಪೀಕರ್ ಅವರಿಗೆ ಹೇಳಿದರು.

ಬಿಜೆಪಿ ಸರ್ಕಾರವಿದ್ದಾಗ ಪರಿಶಿಷ್ಟ ಪಂಗಡದವರಿಗೆ ಶೇ.3 ರಿಂದ 7ಕ್ಕೆ ಏರಿಸಲಾಯಿತು. ಪರಿಶಿಷ್ಟ ಜಾತಿಯವರಿಗೆ ಶೇ.17ಕ್ಕೆ ಏರಿಸಲಾಯಿತು. ಆವಾಗಲೂ ಸಚಿವ ಸತೀಶ ಜಾರಕಿ ಹೊಳಿ ಮಾತನಾಡಲಿಲ್ಲ, ಈಗಿನ ಕಾಂಗ್ರೆಸ್ ಸರ್ಕಾರ ಮೀಸಲಾತಿಯಲ್ಲಿ ಸಮುದಾಯದ ಜನರಿಗೆ ಕಡಿಮೆಯದಾಗ ಬಗ್ಗೆ, ವಾಲ್ಮೀಕಿ ನಿಗಮದ ಹಣದಲ್ಲಿ ನಡೆದ ಹಗರಣ ಕುರಿತು ಧ್ವನಿ ಎತ್ತಲಿಲ್ಲ, ವಾಲ್ಮೀಕಿ ಸಮುದಾಯಕ್ಕೆ ಅನ್ಯಾಯವಾದರೂ ಸಚಿವರು ಮಾತನಾಡು ವುದಿಲ್ಲ ಎಂದರು.

ಸತೀಶ ಜಾರಕಿಹೊಳಿ ಒಬ್ಬ ಸೀಜನ್ ಪಾಲಿಟಿಕ್ಸ್ ಗಿಮಿಕ್‌ದಿಂದ ಚುನಾವಣೆಯನ್ನು ಗೆಲ್ಲಲು ಹೊರಟ್ಟಿದ್ದಾರೆ. ಆದರೆ, ಸಮುದಾಯದವರಿಗೆ ಒಳಮೀಸಲಾತಿಯಲ್ಲಿ ಕಡಿಮೆಯಾದರೂ ತುಟಿಬಿಡಲಿಲ್ಲ, ತಮ್ಮ ಸ್ವಾರ್ಥಕ್ಕೆ ಪ್ರಚಾರ ನಡೆಸುತ್ತಿದ್ದಾರೆ. ಸಮುದಾಯಕ್ಕೆ ಮಾತ್ರ ನ್ಯಾಯ ಕೊಡಿಸುವ ಕೆಲಸ ಮಾಡಲಿಲ್ಲ ಎಂದರು.

ಎಸ್ಸಿ ಪಟ್ಟಿಯಲ್ಲಿ ಇರಲಿ

ಲಂಬಾಣಿ,ಕೊರಮ, ಕೊರಚ, ಭೋವಿ ಸೇರಿದಂತೆ ಇನ್ನಿತರ ಸಣ್ಣ ಸಮುದಾಯವನ್ನು ಎಸ್ಸಿ ಪಟ್ಟಿಯಿಂದ ತೆಗೆಯಬಾರದು ಎಂದು 101 ಜಾತಿಗಳು ಕೂಡ ಎಸ್ಸಿ ಪಟ್ಟಿಯಲ್ಲಿ ಇರಬೇಕು ಎಂದು ಕೇಂದ್ರಕ್ಕೆ ಶಿಫಾರಸು ಮಾಡಿ ಕಳುಹಿಸಿದ್ದು ಬಿಜೆಪಿ ಸರ್ಕಾರದಲ್ಲಿದ್ದಾಗ, ಸುಪ್ರೀಂಕೋರ್ಟ್ ಕೂಡ ನಾವು ಕಳುಹಿಸಿದ್ದ ಶಿಫಾರಸು ಎತ್ತಿ ಹಿಡಿದಿದೆ ಎಂದು ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ ಹೇಳಿದರು.

ಕೇಂದ್ರ ವಿರುದ್ಧ ಟೀಕೆ ಸಲ್ಲದು: ಬಿವೈವಿ

ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವು ಕೇಂದ್ರ ಸರ್ಕಾರವನ್ನು ಟೀಕೆ ಮಾಡುವುದರಲ್ಲೇ 3 ವರ್ಷಗಳ ಕಾಲಹರಣ ಮಾಡಿದೆ. ಆದರೆ, ಮೋದಿ ಅವರ ಜನಪರ ಕಾಳಜಿ ಏನೆಂಬುದನ್ನು ರಾಜ್ಯದ ಮುಖ್ಯಮಂತ್ರಿ, ಅವರ ಸಚಿವಸಂಪುಟದ ಸದಸ್ಯರು ಅರ್ಥ ಮಾಡಿಕೊಳ್ಳಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.



ಮಾಧ್ಯಮ ಪ್ರತಿನಿಧಿಗಳ ಜತೆ ಶುಕ್ರವಾರ ಮಾತನಾಡಿ, ಪ್ರಧಾನಿಯವರು ತಮ್ಮ ನಿರ್ಧಾರದಿಂದ ದೇಶದಲ್ಲಿ ಪೆಟ್ರೋಲ್-ಡೀಸೆಲ್ ಮೇಲೆ ಅಬಕಾರಿ ಸುಂಕ 10 ರೂ. ಕಡಿಮೆ ಮಾಡಿದ್ದಾರೆ. ಜನರ ಮೇಲೆ ಬೀಳುವ ಹೊರೆಯನ್ನು ಕೇಂದ್ರ ಸರ್ಕಾರವೇ ಜವಾಬ್ದಾರಿ ತೆಗೆದುಕೊಳ್ಳುವ ಮೂಲಕ ದೇಶದ ಸಾಮಾನ್ಯ ಜನರ ಪರವಾಗಿ ದೃಢನಿರ್ಧಾರ ತೆಗೆದು ಕೊಂಡಿದ್ದಾರೆ. ಯುದ್ಧದ ಈ ಸಂದರ್ಭದಲ್ಲಿ ರಾಜ್ಯ- ದೇಶದ ಜನತೆ ಪರವಾಗಿ ಹೆಮ್ಮೆಯ ಪ್ರಧಾನಮಂತ್ರಿ ಮೋದಿ ಅವರಿಗೆ ಹಾಗೂ ಪೆಟ್ರೋಲಿಯಂ ಸಚಿವರಿಗೆ ಅಭಿನಂದನೆಗಳನ್ನು ತಿಳಿಸಲು ಬಯಸುವುದಾಗಿ ಹೇಳಿದರು.

ಅಮೆರಿಕ, ಆಸ್ಟ್ರೇಲಿಯ ಮೊದಲಾದ ಕಡೆ ಜನರ ಮೇಲೆ ಶೇ. 25, ಶೇ. 30ರಷ್ಟು ಹೊರೆ ಬೀಳುವಂತಾಗಿದೆ. ಆದರೆ, ಅಬಕಾರಿ ಸುಂಕ ಕಡಿಮೆ ಮಾಡುವ ಕೇಂದ್ರ ಸರ್ಕಾರದ ದೃಢನಿರ್ಧಾರದಿಂದ ಜನರಿಗೆ ಅನುಕೂಲ ಆಗುತ್ತಿದೆ. ಇದು ಸ್ವಾಗತಾರ್ಹ ಎಂದು ತಿಳಿಸಿದರು.

ತಮ್ಮ ವೈಫಲ್ಯಗಳನ್ನು ಮುಚ್ಚಿ ಹಾಕುವ ಸಲುವಾಗಿ ಬೇರೆಯವರ ಮೇಲೆ ಗೂಬೆ ಕೂರಿಸುವ ಚಾಳಿ, ಚಟ ಕಾಂಗ್ರೆಸ್ಸಿನವರಿಗೆ ಮುಂಚಿನಿಂದಲೂ ಬಂದಿದೆ. ಕೇಂದ್ರವನ್ನು ದೂರುತ್ತಲೇ ಮುಖ್ಯಮಂತ್ರಿಗಳು 3 ವರ್ಷಗಳ ಅವಧಿ ಪೂರೈಸಿದ್ದಾರೆ. ಅದು ಬಿಟ್ಟು ಬೇರೆ ಏನು ಸಾಧನೆ ಮಾಡಿದ್ದಾರೆ? ಕಳೆದ 3 ವರ್ಷಗಳಲ್ಲಿ ಕಾಂಗ್ರೆಸ್ ಸರ್ಕಾರದ ಸಾಧನೆ ಏನು? ಜನರೂ ಇದನ್ನು ಪ್ರಶ್ನಿಸುತ್ತಿದ್ದಾರೆ ಎಂದರು.

ಐಪಿಎಲ್ ಟಿಕೆಟ್ ಹೇಳಿಕೆಗಿಲ್ಲ ಸಮ್ಮತಿ

ಶಾಸಕರಿಗೆ ಐಪಿಎಲ್ ಟಿಕೆಟ್ ವಿಚಾರದ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ಗುರುವಾರ ಆಡಳಿತ ಪಕ್ಷ, ಪ್ರತಿಪಕ್ಷಗಳ ಶಾಸಕರ ಹೇಳಿಕೆ ಗಮನಿಸಿದ್ದೇನೆ. ವೈಯಕ್ತಿಕವಾಗಿ ಅವರ ಹೇಳಿಕೆಗಳನ್ನು ಒಪ್ಪುವುದಿಲ್ಲ, ರಾಜಕಾರಣಿಗಳೆಂದರೆ, ಜನಸಾಮಾನ್ಯರು ನಮ್ಮನ್ನು ಯಾವ ರೀತಿ ನೋಡುತ್ತಾರೆ ಎಂಬುದನ್ನು ಪತ್ರಿಕೆಗಳು, ಟಿ.ವಿ.ಗಳಲ್ಲಿ ನೋಡುತ್ತಿದ್ದೇವೆ. ಕಳೆದ ಬಾರಿ ಇದೇ ಐಪಿಎಲ್ ಮ್ಯಾಚ್ ಸಂದರ್ಭದಲ್ಲಿ ಆಡಳಿತ ಪಕ್ಷದ ಮೂರ್ಖತನದಿಂದ 11 ಜನ ಮುಗ್ಧರು ಪ್ರಾಣ ಕಳೆದುಕೊಂಡರು. ಅದನ್ನು ರಾಜ್ಯದ, ದೇಶದ ಜನರು ಮರೆತಿಲ್ಲ, ಇಂಥ ಸಂದರ್ಭದಲ್ಲಿ ಇಂಥ ಹೇಳಿಕೆಗಳ ಆವಶ್ಯಕತೆ ಇತ್ತೇ ಎಂಬುದು ನನಗಂತೂ ಅರ್ಥವಾಗುವುದಿಲ್ಲ, ನಾನಿದರ ಪರವಾಗಿ ಇಲ್ಲ ಎಂದು ಸ್ಪಷ್ಟಪಡಿಸಿದರು.

ಒಬ್ಬ ಶಾಸಕ, ಜನಪ್ರತಿನಿಧಿ ಆಗಿರುವವರು ಜನಸಾಮಾನ್ಯರಿಗಿಂತ ವಿಭಿನ್ನ, ವಿಐಪಿ ಎಂಬುದು ಖಂಡಿತವಾಗಿ ಒಳ್ಳೆಯ ಬೆಳವಣಿಗೆ ಅಲ್ಲ ಎಂದು ಪ್ರತಿಕ್ರಿಯೆ ನೀಡಿದರು. ಇದಕ್ಕೆ ನನ್ನ ಬೆಂಬಲ ಇಲ್ಲ ಎಂದು ಹೇಳಿದರು.

ಕಡ್ಡಾಯವಾಗಿ ವೇತನಸಹಿತ ರಜೆ

ಬೆಂಗಳೂರು: ರಾಜ್ಯದ 2 ವಿಧಾನ ಸಭಾ ಕ್ಷೇತ್ರಗಳಿಗೆ ನಡೆಯಲಿರುವ ಉಪ ಚುನಾವಣೆಯ ಹಿನ್ನೆಲೆಯಲ್ಲಿ, ಮತದಾನದ ದಿನದಂದು ಅರ್ಹ ಕಾರ್ಮಿಕರಿಗೆ ಮತ ಚಲಾಯಿಸಲು ಅನುಕೂಲವಾಗುವಂತೆ ವೇತನ ಸಹಿತ ರಜೆ ಘೋಷಿಸಿ ಕಾರ್ಮಿಕ ಇಲಾಖೆ ಆದೇಶ ಹೊರಡಿಸಿದೆ.

ಚುನಾವಣಾ ಕ್ಷೇತ್ರಗಳಾದ 24-ಬಾಗಲಕೋಟೆ ಹಾಗೂ 107-ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳಲ್ಲಿ ಏ.9ರಂದು ಚುನಾವಣೆ ನಡೆಯಲಿದೆ. ಈ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮತದಾರರಾಗಿ ನೋಂದಾಯಿತರಾಗಿರುವ ಎಲ್ಲಾ ಅರ್ಹ ಕಾರ್ಮಿಕರಿಗೆ ಈ ರಜೆ ಅನ್ವಯವಾಗಲಿದೆ. 1963ರ ಕರ್ನಾಟಕ ಔದ್ಯೋಗಿಕ ಸಂಸ್ಥೆಗಳ (ರಾಷ್ಟ್ರೀಯ ಹಾಗೂ ಹಬ್ಬದ ರಜಾದಿನಗಳು) ಕಾಯ್ದೆಯ ಕಲಂ 3-ಎ ಪ್ರಕಾರ ಈ ರಜೆಯನ್ನು ನೀಡಲಾಗುತ್ತಿದೆ.

ಕಲಬುರಗಿ: ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಧಾರವಾಡದಲ್ಲಿ ನಡೆಸಿದ ಪ್ರತಿಭಟನೆಗೆ ಮಣಿದು ತಿಂಗಳೊಳಗೆ 57 ಸಾವಿರ ಹುದ್ದೆಗಳ ನೇಮಕಾತಿ ಪ್ರಾರಂಭ ಮಾಡುವುದಾಗಿ ಭರವಸೆ ನೀಡಿದ ರಾಜ್ಯ ಸರ್ಕಾರ,ಇದೀಗ ವಿಳಂಬ ಧೋರಣೆ ತೋರುತ್ತಿರುವುದು ಯಾವ ಪುರುಷಾರ್ಥಕ್ಕಾಗಿ. ರಾಜ್ಯದ ಯುವಕರಿಗೆ ಸರ್ಕಾರದ ಯಾವುದೇ ಬಿಟ್ಟಿ ಭಾಗ್ಯಗಳು ಅಗತ್ಯವಿಲ್ಲ, ಬದಲಾಗಿ, ಉದ್ಯೋಗ ಅಗತ್ಯವಿದೆ ಎಂದು ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಕಾಂತಕುಮಾರ್ ಆಕ್ರೋಶ ಹೊರಹಾಕಿದರು.

ಅಕ್ಸಾ ಸೇರಿದಂತೆ ವಿವಿಧ ಸಂಘಟನೆಗಳ ಬೆಂಬಲದೊಂದಿಗೆ ನಗರದ ಜಗತ್ ವೃತ್ತದಿಂದ ಡಿಸಿ ಕಚೇರಿಯವರೆಗೆ ಸಾವಿರಾರು ವಿದ್ಯಾರ್ಥಿಗಳು ಪಾದಯಾತ್ರೆ ಮೂಲಕ ಆಗಮಿಸಿ ನಡೆಸಿದ ಬೃಹತ್ ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಅವರು, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸುಮಾರು 2,84,000 ಸರ್ಕಾರಿ ಹುದ್ದೆ ಖಾಲಿಯಿದ್ದು,ಕಳೆದ 5–6 ವರ್ಷಗಳಿಂದ ರಾಜ್ಯದಲ್ಲಿ ಸರಿಯಾಗಿ ನೇಮಕಾತಿ ಪ್ರಕ್ರಿಯೆ ನಡೆದಿಲ್ಲ. ಪರಿಣಾಮ ರಾಜ್ಯದ ಯುವಕರು ನಿರುದ್ಯೋಗ ಸಮಸ್ಯೆ, ಮಾನಸಿಕವಾಗಿ ಒತ್ತಡಕ್ಕೆ ಒಳಗಾಗಿದ್ದು, ಸರ್ಕಾರ ತಕ್ಷಣ ಕ್ರಮ ಕೈಗೊಳ್ಳದಿದ್ದರೆ ರಾಜ್ಯಾದ್ಯಂತ ಹೋರಾಟ ತೀವ್ರಗೊಳಿಸಲಾಗುವುದು ಎಂದರು.

ಸರ್ಕಾರಿ ನೇಮಕಾತಿ ಪ್ರಕ್ರಿಯೆ ವಿಳಂಬ ಹಿನ್ನೆಲೆ ವಿದ್ಯಾರ್ಥಿ ಹಾಗೂ ಉದ್ಯೋಗಾಕಾಂಕ್ಷಿಗಳ ಅಸಮಾಧಾನ ತೀವ್ರಗೊಂಡಿದೆ. ಸರ್ಕಾರ 3 ವರ್ಷದಿಂದ ಸುಳ್ಳು ಭರವಸೆ ನೀಡುತ್ತಿದೆ. ವಿದ್ಯಾರ್ಥಿಗಳು ಲೈಬ್ರರಿಗಳಲ್ಲಿ ಕುಳಿತು ಶ್ರಮಪಟ್ಟು ಓದಿದರೂ ಪರೀಕ್ಷಾ ಅಕ್ರಮಗಳಿಂದ ಮಾನಸಿಕ ಒತ್ತಡಕ್ಕೆ ಒಳಗಾಗುತ್ತಿದ್ದಾರೆ ಜೊತೆಗೆ ಕೆಪಿಎಸ್ಸಿ ಮೂಲಕ ನಡೆಯುವ ನೇಮಕಾತಿಗಳಲ್ಲಿ ಪಾರದರ್ಶಕತೆ ಕೊರತೆಯಿದೆ. ಕೆಪಿಎಸ್ಸಿ ಹಗರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದರು.

ಪ್ರತಿಭಟನೆಯಲ್ಲಿ ಶಿವಸೇನಾ ಪಕ್ಷದ ರಾಜ್ಯಾಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ ಮಾತನಾಡಿದರು. ರವಿ ದೇಗಾಂವ್, ಎಂ.ಎಸ್. ಪಾಟೀಲ್ ನರಿಬೋಳ, ಸಿದ್ರಾಮಯ್ಯ ಹಿರೇಮಠ, ಭೂಮಿಕಾ ಹಾವೇರಿ, ಮಲ್ಲಿಕಾರ್ಜುನ, ಅರ್ಜುನ್ ಕವಲಗಾ, ಸಂತೋಷ ಬೆಳಮಗಿ, ಈರಣ್ಣಾ, ರವಿ, ಜಮೀರ್, ಬಾಬಾಸಾಹೇಬ ಸಂಗೋಳಗಿ, ಅನಿಲ್, ಸಿರಾಜ್, ಶಿವರಾಜ್,ಸಚಿನ ಕಡಗಂಚಿ,ಶಿವ ಅಷ್ಟಗಿ, ಹಣಮಂತ ಶೇರಿಕರ್ ಸೇರಿದಂತೆ ಸಾವಿರಾರು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ದೂರದಿಂದ ಬಂದು ಪ್ರತಿಭಟನೆಯಲ್ಲಿ ಭಾಗಿಯಾದ 700ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಬಿಜೆಪಿ ನಗರಾಧ್ಯಕ್ಷ ಚಂದು ಪಾಟೀಲ್ ಊಟದ ವ್ಯವಸ್ಥೆ ಮಾಡಿದ್ದರು.



ಅಸಮರ್ಥ ಸರ್ಕಾರ

ಪ್ರತಿ ಬಾರಿ ಸಂವಿಧಾನ, ಪ್ರಜಾಪ್ರಭುತ್ವ ಅಂತೆಲ್ಲಾ ಹೇಳುವವರು ಅದರಂತೆ ನಡೆಯುತ್ತಿಲ್ಲ. ಯಾರು ಸರ್ಕಾರದ ವಿರುದ್ಧ ಧ್ವನಿ ಎತ್ತುತ್ತಾರೆ ಅಂತವರ ವಿರುದ್ಧ ಕೇಸ್ ಹಾಕುವ ಕೆಲಸ ನಡೆದಿದೆ. ಕಲಬುರಗಿಯಲ್ಲಿ ಬರೀ ರಿಪಬ್ಲಿಕ್ ಕಲಬುರಗಿ ಮಾಡುವುದೇ ನಡೆದಿದೆ. ಕಾಂಗ್ರೆಸ್ ಸರ್ಕಾರದಲ್ಲಿ 80% ಪಡೆದವರಿಗೆ ಉದ್ಯೋಗ ಸಿಗುತ್ತಿಲ್ಲ 30% ಇದ್ದವರಿಗೆ ಸ್ಥಾನ ನೀಡುತ್ತಿದೆ.ಯುವಕರ ಹಿತ ಕಾಪಾಡಲು ವಿಫಲವಾಗಿರುವ ಈ ಸರ್ಕಾರ, ಅಸಮರ್ಥ ಸರ್ಕಾರವಾಗಿದೆ. ವಿದ್ಯಾರ್ಥಿಗಳ ನ್ಯಾಯಕ್ಕಾಗಿ ನಾವು ಸದಾ ನಿಮ್ಮೊಂದಿಗೆ ಇರಲಿದ್ದೇವೆ ಎಂದು ಬಿಜೆಪಿ ನಗರಾಧ್ಯಕ್ಷ ಚಂದು ಪಾಟೀಲ ಹೇಳಿದರು.

“ ಕಳೆದ ಹಲವು ವರ್ಷಗಳಿಂದ ನೇಮಕಾತಿ ಪ್ರಕ್ರಿಯೆ ನಡೆದಿಲ್ಲ. ರಾಜ್ಯದಲ್ಲಿ ಪಠ್ಯ ಪುಸ್ತಕಗಳಿವೆ. ಆದರೆ, ಬೋಧನೆಗೆ ಶಿಕ್ಷಕರಿಲ್ಲ. ರಾಜ್ಯ ಸರ್ಕಾರ ನೀಡುತ್ತಿರುವ ಶಕ್ತಿ ಯೋಜನೆ, ಗೃಹಲಕ್ಷ್ಮಿ ಯೋಜನೆ ಯಾರಿಗೂ ಅವಶ್ಯಕತೆಯಿಲ್ಲ, ಇವುಗಳ ಬದಲು ಉದ್ಯೋಗ ನೀಡಬೇಕು. ಬಿಟ್ಟಿ ಭಾಗ್ಯಗಳಿಂದ ಜನರು ನೆಮ್ಮದಿಯಿಂದ ಇದ್ದಾರೆ ಎನ್ನುವ ಭ್ರಮೆಯಿಂದ ಸರ್ಕಾರ ಹೊರಬರಬೇಕು.

■ ಭೂಮಿಕಾ ಹಾವೇರಿ, ವಿದ್ಯಾರ್ಥಿನಿ

“ ರಾಜ್ಯದ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಸರ್ಕಾರ ಕಿಂಚಿತ್ತೂ ಕಾಳಜಿ ತೋರಿಸುತ್ತಿಲ್ಲ. ಶಿಕ್ಷಣ ಕ್ಷೇತ್ರದಲ್ಲೂ ಅಸಮರ್ಪಕತೆಗಳಿವೆ. ಶಾಶ್ವತ ಶಿಕ್ಷಕರ ಹುದ್ದೆ ಭರ್ತಿ ಮಾಡದೇ, ಕಡಿಮೆ ಸಂಬಳದಲ್ಲಿ ಅತಿಥಿ ಶಿಕ್ಷಕರನ್ನು ನೇಮಿಸುತ್ತಿರುವುದು ತಪ್ಪು ನೀತಿ. ಯುವನಿಧಿ ನೀಡುವುದಕ್ಕಿಂತ ಉದ್ಯೋಗ ನೀಡಿದರೆ ಯುವಕರು ಸ್ವಾವಲಂಬಿಯಾಗುತ್ತಾರೆ.

■ ಭಾಗ್ಯಶ್ರೀ ಜಮಖಂಡಿ, ಎಂಎಬಿಎಡ್ ವಿದ್ಯಾರ್ಥಿನಿ

ಸಹಸ್ರಾರು ಭಕ್ತರ ಮಧ್ಯೆ ನಡೆದ ವೆಂಕಟೇಶ್ವರ ಜಾತ್ರೆ

ರಾಮದುರ್ಗ: ಯುಗಾದಿ ಹಬ್ಬದ ಕೊನೆಯ ರಾಮನವಮಿ ಮಾರನೇ ದಿನವಾದ ಶುಕ್ರವಾರ ಸಹಸ್ರಾರು ಜನ ಭಕ್ತರ ಸಮ್ಮುಖದಲ್ಲಿ ಪಟ್ಟಣದ ಮಲಪ್ರಭಾ ನದಿಯ ದಂಡೆಯ ಮೇಲಿರುವ ವೆಂಕಟೇಶ್ವರ ಜಾತ್ರೆ ಶ್ರದ್ಧಾಭಕ್ತಿಯಿಂದ ನಡೆಯಿತು.

ಬೆಳಗ್ಗೆ 9–20ಕ್ಕೆ ಸರ್ಕಾರದ ಮುಖ್ಯಸಚೇತಕ ಅಶೋಕ ಪಟ್ಟಣ, ತಹಶೀಲ್ದಾರ್ ಪ್ರಕಾಶ ಹೊಳೆಪ್ಪಗೋಳ, ಪುರಸಭೆ ಮಾಜಿ ಅಧ್ಯಕ್ಷರಾದ ಸುರೇಶ ಪತ್ತೇಪೂರ, ರಾಜು ಮಾನೆ, ಜಾತ್ರಾ ಸಮಿತಿ, ಬಿಜೆಪಿ ಅಧ್ಯಕ್ಷ ಡಾ.ಕೆ.ವಿ.ಪಾಟೀಲ ಸದಸ್ಯರಾದ ಗಿರೀಶ ನೇಮಗೌಡ ಸೇರಿದಂತೆ ಅನೇಕ ಗಣ್ಯರು ಐದಡಿ ಎತ್ತರ ಕಲ್ಲಿನ ಗಾಲಿಗಳಿಗೆ ತೆಂಗಿನ ಕಾಯಿ ಒಡೆಯುವ ಮೂಲಕ ಜಾತ್ರೆಗೆ ಚಾಲನೆ ನೀಡಿದರು. ಪಟ್ಟಣದ ಗಣ್ಯರು ಸಹಸ್ರಾರು ಭಕ್ತರು ಪಾಲ್ಗೊಂಡಿದ್ದರು.

ಮಲಪ್ರಭಾ ನದಿಯ ಪಕ್ಕದ ಭವ್ಯ ದೇವಸ್ಥಾನದಿಂದ ಎಡಕ್ಕೆ ಹನಮಂತ ದೇವಸ್ಥಾನದ ತನಕ ಉತ್ಸವ ಮೂರ್ತಿಯನ್ನು ಹೊತ್ತ ಕಲ್ಲಿನ ತೇರನ್ನು ಭಕ್ತಿಭಾವ ತುಂಬಿದ ಜನಸ್ತೋಮ ಎಳೆದುಕೊಂಡು ತಂದಿತು. ಅಲ್ಲಿ ಸುಮಂಗಲೆಯರು ಆರತಿ ಎತ್ತಿ ಮೂರ್ತಿಗಳಿಗೆ ಪೂಜೆ ಸಲ್ಲಿಸಿದರು. ಭಕ್ತರು ರಥದ ಕಡೆಗೆ ಬಾಳೆಹಣ್ಣು, ಹೂವು, ಉತ್ತತ್ತಿ ಎಸೆದರು. ಪಟ್ಟಣ ಮಾತ್ರವಲ್ಲದೇ ವಿವಿಧ ಗ್ರಾಮಗಳಿಂದ ಬಂದಿದ್ದ ಸಹಸ್ರಾರು ಭಕ್ತರು, ಮಹಿಳೆಯರು, ಮಕ್ಕಳು ಜಾತ್ರೆಯಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.

ಹನಮಂತ ದೇವರ ಗುಡಿಯ ಹತ್ತಿರ ಕೇವಲ ಅರ್ಧ ಗಂಟೆಯಲ್ಲಿ ತಂದು ರಥವನ್ನು ನಿಲ್ಲಿಸಲಾಯಿತು. ಸುಮಾರು 30 ಡಿಗ್ರಿ ಇಳಿಜಾರಿನಲ್ಲಿ ವಾಲಿದ ತೇರನ್ನು ಭೋವಿ ಸಮಾಜದವರು ಕಲ್ಲಿನ ಗಾಲಿಗಳಿಗೆ ಸನ್ನೆಗೋಲು ಹಾಕಿ ಸಂಪೂರ್ಣ ತೇರನ್ನು ಗುಡಿಯ ಕಡೆಗೆ ತಿರುಗಿಸಿ ನಿಲ್ಲಿಸಿದರು. ಈ ಕಾರ್ಯಕ್ಕೆ ಸುಮಾರು ಒಂದೂವರೆ ಗಂಟೆ 20–30 ಜನ ನಿರಂತರ ಶ್ರಮವಹಿಸಿ ರಥವನ್ನು ತಿರುಗಿಸಿ ನಿಲ್ಲಿಸಿದರು.

ಬಹುಶಃ ಇಷ್ಟೊಂದು ರೋಮಾಂಚನಕಾರಿಯಾಗಿ ರಥವನ್ನು ತಿರುಗಿಸಿ ನಿಲ್ಲಿಸುವುದು ರಾಮದುರ್ಗ ಪಟ್ಟಣದಲ್ಲಿ ಮಾತ್ರ ನಡೆಯುತ್ತಿದೆ. ಕಳೆದ 8 ದಶಕಗಳಿಂದಲೂ ಈ ಪದ್ಧತಿ ನಡೆದುಕೊಂಡು ಬಂದಿದೆ. ಆದರಲ್ಲೂ ಬೆಳಗಿನ ವೇಳೆಯಲ್ಲಿ ರಥೋತ್ಸವ ನಡೆಯುವುದು ಮತ್ತೊಂದು ವಿಶೇಷವಾಗಿದೆ.



ಹೊಸ ಪ್ರತಿಭೆಗಳಿಗೆ ವೇದಿಕೆಗಳು ವಿಪುಲ: ಡಿಸಿ

ಧಾರವಾಡ: ಸ್ಪರ್ಧೆಗಳಲ್ಲಿ ಗೆಲುವು ಮುಖ್ಯವಲ್ಲ, ಆದರಿಂದ ಕಲಿಯುವುದು ಬಹಳ ಮುಖ್ಯ. ಸಮಾಜದಲ್ಲಿ ಹೊಸ ಪ್ರತಿಭೆಗಳ ಆಗಮನಕ್ಕೆ ವೇದಿಕೆ ಕಾದು ಕುಳಿತಿವೆ. ಅವುಗಳನ್ನು ಸದ್ಬಳಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್ ಸಲಹೆ ನೀಡಿದರು.

ನಗರದ ಜನತಾ ಶಿಕ್ಷಣ ಸಮಿತಿಯ ಸನ್ನಿಧಿ ಕಲಾಕ್ಷೇತ್ರದಲ್ಲಿ ಶುಕ್ರವಾರ ನಡೆದ ಸಂಕಲ್ಪ–2026 ಉತ್ಸಕ್ಕೆಚಾಲನೆನೀಡಿದಅವರು, ಬದುಕಿನಗುರಿತಲುಪಲು ಮಾರ್ಗದರ್ಶನ ಅಗತ್ಯ. ಮಕ್ಕಳಿಗೆ ಆತ್ಮವಿಶ್ವಾಸ ಮತ್ತು ಧೈರ್ಯ ತುಂಬಬೇಕು ಎಂದರು. ವಿದ್ಯಾರ್ಥಿಗಳಲ್ಲಿ ವರ್ಷದಿಂದ ವರ್ಷಕ್ಕೆ ಪ್ರತಿಭೆ ಮತ್ತು ಕೌಶಲ್ಯ ಹೆಚ್ಚಬೇಕು. ಇದು ವಿದ್ಯಾರ್ಥಿಗಳ ಜನಪ್ರಿಯತೆ ಹೆಚ್ಚಿಸುವ ಜೊತೆಗೆ ಗೌರವ ಕೂಡ ಲಭಿಸುವಂತೆ ಮಾಡಲಿದೆ. ವಿದ್ಯಾರ್ಥಿಗಳು ಪರಸ್ಪರ ಸ್ನೇಹ, ಸೌಹಾರ್ದತೆ ಕಾಪಾಡಲು ಸಲಹೆ ನೀಡಿದರು. ಖ್ಯಾತ ಗಾಯಕ ನವೀನ ಸಜ್ಜು ಮಾತನಾಡಿ, ಬದುಕಿಗೆ ಹಣಕ್ಕಿಂತ ನೆಮ್ಮದಿಯೇ ಮುಖ್ಯ. ಇರುವಷ್ಟು ದಿನಗಳು ಪರರಿಗೆ ಸಹಾಯ ಮತ್ತು ಮಾನವೀಯತೆಯಿಂದ ನಡೆದುಕೊಳ್ಳಬೇಕು. ಪಾಲಕರು ಮತ್ತು ಶಿಕ್ಷಕರನ್ನು ಗೌರವಿಸುವಂತೆ ಕಿವಿಮಾತು ಹೇಳಿದರು. ವಿದ್ಯಾರ್ಥಿಗಳು ಸುಂದರ ಬದುಕು ಕಟ್ಟಿಕೊಳ್ಳಬೇಕು. ನಾವು ಮಾಡುವ ಕೆಲಸ ಶಾಸ್ವತ ಎಂಬುದಕ್ಕೆ ಸಂಸ್ಥೆಯ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಅವರ ಶಿಸ್ತು, ಕಾರ್ಯವೈಖರಿ, ಬದುಕಿನ ಉತ್ಸಾಹ, ಪರಿಶ್ರಮ, ಪಯತ್ನ ಮುಕ್ತಕಂಠದಿಂದ ಶ್ಲಾಘಿಸಿದರು. ಅಧ್ಯಕ್ಷತೆ ವಹಿಸಿದ್ದ ಜೆಎಸ್ಸೆಸ್ ಕಾರ್ಯದರ್ಶಿ ಡಾ.ಅಜಿತ ಪ್ರಸಾದ, ಪಾಠ–ಪ್ರವಚನಗಳಿಂದ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿ ಅಸಾಧ್ಯ. ಅಂಕಗಳೊಂದಿಗೆ ಕೌಶಲ್ಯಗಳೂ ಕೂಡ ಇದ್ದಾಗ ಮಾತ್ರ ಉನ್ನತ ಸ್ಥಾನ ಅಲಂಕರಿಸಲು ಸಾಧ್ಯವಿದೆ ಎಂದರು.



ವಿದ್ಯಾರ್ಥಿಗಳು ಪ್ರತಿಭೆ ಅನಾವರಣಕ್ಕೆ ಹಿಂಚರಿಕೆ ಪಡಬಾರದು. ಸಾಹಸಿಗಳಾಗಿ ಸತ್ಯ, ನಿಷ್ಠೆಯಿಂದ ಚಟುವಟಿಕೆಗಳಲ್ಲಿ ಪಾಲ್ಗೊಂಡರೆ, ಜಯ ಗಳಿಸಬಹುದಾಗಿದೆ. ಪಾಲಕರ ಸಹಕಾರ, ಶಿಕ್ಷಕರ ಮಾರ್ಗದರ್ಶನಿಂದ ಸೂಕ್ತ ನಿರ್ಧಾರ ಕೈಗೊಳ್ಳಲು ಹೇಳಿದರು. ಸಮಾರಂಭದಲ್ಲಿಡಾ.ವೆಂಕಟೇಶ ಮುತಾಲಿಕ್, ಡಾ.ಆರ್.ವಿ.ಚಿಟಗುಪ್ಪಿ, ವಿವೇಕ ಲಕ್ಷ್ಮೇಶ್ವರ, ಡಾ.ಜಿನ್ನಪ್ಪ ಕುಂದಗೋಳ, ಡಾ.ರೋನಿಲ್ ಮನೋಹರ, ಶ್ರುತಿ ಶೆಟ್ಟಿ, ಶ್ರವಣಕುಮಾರ ಯೋಗಿ, ಮಹಾವೀರ ಉಪಾದ್ಯೆ ಸೇರಿದಂತೆ ಸಿಬ್ಬಂದಿಗಳು ಪಾಲ್ಗೊಂಡಿದ್ದರು. ಲಲಿತ ಕಲಾ ಸಂಘದ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಜೆ.ಎಸ್.ಎಸ್. ಎಂಸಿಎ ಕಾಲೇಜಿನ ನಿರ್ದೇಶಕ ಸೂರಜ್ ಜೈನ್ ಸ್ವಾಗತಿಸಿದರು. ಸುದರ್ಶನ ಗೋಕರ್ ಪರಿಚಯಿಸಿದರು. ಎನ್.ಎಂ.ರಶ್ಮಿ ನಿರೂಪಿಸಿದರು ಹಾಗೂ ಎಸ್.ಎಚ್.ರಶ್ಮಿ ವಂದಿಸಿದರು.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಆಲಸಂದೆ ಕಾಳು	1510	5670
ಕಡಲೆಕಾಳು	3270	5325
ಉದ್ದಿನಕಾಳು	3819	3819
ತೆಂಗಿನಕಾಯಿ	41000	41000
ಹತ್ತಿ	7350	7425
ಒಣ ಮೆಣಸಿನಕಾಯಿ	45559	45559
ಹೆಸರುಕಾಳು	2650	4950
ಜೋಳ	1209	4015
ಮೆಕ್ಕೆಜೋಳ	1600	1819
ಮಡಿಕೆ (ಮಟಕಿ)	9011	9211
ಈರುಳ್ಳಿ	500	2000
ಆಲೂಗಡ್ಡೆ	1300	1700
ಅಕ್ಕಿ	2100	2100
ಕುಸುಬೆ	4900	5091
ಸೋಯಾಬಿನ್	5005	5480
ತೊಗರಿ	3039	5038
ಗೋಧಿ	1999	4636

ದ್ವಿಚಕ್ರ ವಾಹನ ಸವಾರನಿಗೆ ಗಾಯ

ದಾಂಡೇಲಿ: ತಾಲೂಕಿನ ಬೊಮ್ಮನಳ್ಳಿ–ಕುಳಗಿ ರಸ್ತೆಯಲ್ಲಿ ದ್ವಿಚಕ್ರ ವಾಹನವೊಂದು ಸವಾರನ ನಿಯಂತ್ರಣ ತಪ್ಪಿ ಸ್ಕಿಡ್ ಆಗಿ ಬಿದ್ದು, ಗಾಯಗೊಂಡ ಘಟನೆ ಶುಕ್ರವಾರ ಸಂಜೆ 4ಗಂಟೆಗೆ ನಡೆದಿದೆ.

ಹರ್ನೋಡಾ ನಿವಾಸಿ ಬಾಬು ವಿಠ್ಠು ಮಲಗೊಂಡೆ ಎಂಬವರೇ ಗಾಯಗೊಂಡ ಸವಾರರಾಗಿದ್ದಾರೆ. ಇವರು ಬೊಮ್ಮನಳ್ಳಿ ಕಡೆಯಿಂದ ಕುಳಗಿಗೆ ಬರುವಾಗ ಈ ಘಟನೆ ನಡೆದಿದೆ. ಮುಖಕ್ಕೆ, ಕೈಗೆ, ಕಾಲಿಗೆ ಗಾಯಗೊಂಡ ಇವರನ್ನು ತಕ್ಷಣವೇ ದಾಂಡೇಲಿಯ ಸಾರ್ವಜನಿಕ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆತರಲಾಗಿದೆ. ಸಾರ್ವಜನಿಕ ಆಸ್ಪತ್ರೆಗೆ ಪೊಲೀಸರು ಭೇಟಿ ನೀಡಿ ಪರಿಶೀಲನೆಯನ್ನು ನಡೆಸಿ ಮುಂದಿನ ಕ್ರಮವನ್ನು ಕೈಗೊಂಡಿದ್ದಾರೆ.

ಬಾಗಲಕೋಟೆ ಕ್ಷೇತ್ರದಲ್ಲಿ 2.59ಲಕ್ಷ ಮತದಾರರು: ಡಿಸಿ

ಬಾಗಲಕೋಟೆ: ಬಾಗಲಕೋಟೆಯ ವಿಧಾನಸಭೆಯ ಮತಕ್ಷೇತ್ರದಲ್ಲಿ ಅಂತಿಮ ಮತದಾರರ ಪಟ್ಟಿ ಹೊರಬಿದ್ದಿದ್ದು 2,59,797 ಮತದಾರರು ಇದ್ದು ಇದರಲ್ಲಿ 1,26,999 ಗಂಡು, 1,32,775 ಹೆಣ್ಣು ಹಾಗೂ 23 ಇತರೆ ಮತದಾರರು ಇದ್ದಾರೆ.

ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿ, ಏ.9ರಂದು ನಡೆಯುವ ಮತದಾನಕ್ಕೆ 319 ಮತಗಟ್ಟೆಗಳನ್ನು ಮಾಡಲಾಗಿದೆ. 1200 ಮತದಾರರಕ್ಕಿಂತ ಹೆಚ್ಚು ಮತದಾರರನ್ನು ಹೊಂದಿರುವ 3 ಮತಗಟ್ಟೆಯಲ್ಲಿ ಹೆಚ್ಚುವರಿ ಮತಗಟ್ಟೆ ಮಾಡಲಾಗಿದೆ. 91 ಗಂಡು, 80 ಹೆಣ್ಣು ಸೇರಿ 171 ಮತದಾರರನ್ನು ಮತಪಟ್ಟಿಯಿಂದ ತೆಗೆದು ಹಾಕಲಾಗಿದೆ .2109 ಗಂಡು, 2278 ಮಹಿಳೆ ಸೇರಿ 4387 ಯುವ ಮತದಾರರು, 85 ವರ್ಷ ಮೇಲ್ಪಟ್ಟವರಲ್ಲಿ 1264 ಗಂಡು, 1753 ಹೆಣ್ಣು ಸೇರಿ 3017 ಮತದಾರರು ಇದ್ದಾರೆ. 385 ಸೇವಾ ಮತದಾರರು, 2643 ವಿಶಿಷ್ಟಚೇತನ ಮತದಾರರು ಇದ್ದಾರೆ ಎಂದರು.

ಉಪಚುನಾವಣೆಗೆ 9597 ಸಿಬ್ಬಂದಿಗಳ ಪೈಕಿ 322 ಮತಗಟ್ಟೆಗಳಿಗೆ ಶೇ.120ರಷ್ಟು ಮತದಾನ ಸಿಬ್ಬಂದಿ ನಿಯೋಜನೆ ಮಾಡಲಾಗಿದೆ. ಅನಧಿಕೃತ ಹಣ ಸಾಗಾಣಿಕೆ, ಸಾಮಾಗ್ರಿ ಬಗ್ಗೆ ಕಣ್ಗಾವಲು ಇಡುವ ಉದ್ದೇಶದಿಂದ 25 ಚೆಕ್‌ಪೋಸ್ಟ್ ರಚನೆ ಮಾಡಲಾಗಿದೆ. ಮಾ.19ರಿಂದ 27ರವರೆಗೆ 89,54,500 ರೂ. ಜಪ್ತಿ ಮಾಡಲಾಗಿದೆ. 1,29,120 ಮೌಲ್ಯದ 495 ಸೀರೆ ಕಮತಗಿ ಚೆಕ್‌ಪೋಸ್ಟ್ ಜಪ್ತಿ ಮಾಡಲಾಗಿದೆ. 66,835 ರೂ.ಮೌಲ್ಯದ ಸಾರಾಯಿಯನ್ನು ಅಬಕಾರಿ ಇಲಾಖೆ, 75,260 ರೂ. ಮೌಲ್ಯದ ಸರಾಯಿಯನ್ನು ಪೊಲೀಸ್ ಇಲಾಖೆ ವಶಕ್ಕೆ ಪಡೆದುಕೊಂಡಿದೆ ಎಂದು ತಿಳಿಸಿದರು.

ಎಸ್ಪಿ ಸಿದ್ಧಾರ್ಥ ಗೋಯಲ್, ಎಸಿ ಸಂತೋಷ ಜಗಲಾಸರ್ ಪತ್ರಿಕಾಗೋಷ್ಠಿಯಲ್ಲಿದ್ದರು.



ಮೂರು ವಿಶೇಷ ಮತಗಟ್ಟೆ ಸ್ಥಾಪನೆ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭೆಯ ಉಪಚುನಾವಣೆ ಹಿನ್ನಲೆಯಲ್ಲಿ ಮೂರು ವಿಶೇಷ ಮತಗಟ್ಟೆ ಮಾಡಲಾಗಿದ್ದು, ಸಖಿ, ಯುವ ಮತದಾರ,ವಿಶಿಷ್ಟಚೇತನರ ವಿಶೇಷ ಮತಗಟ್ಟೆಯನ್ನು ಸ್ಥಾಪಿಸಲಾಗಿದೆ ಎಂದು ಮಾದರಿ ನೀತಿ ಸಂಹಿತೆ ಪಾಲನಾ ನೋಡಲ್ ಅಧಿಕಾರಿ ಶಶಿಧರ ಕುರೇರ ಹೇಳಿದರು. ಒಂದೇ ಮತಗಟ್ಟೆ ಇರುವ ಕಡೆ ಕೊಠಡಿಗಳು ಇರದಿದ್ದರೆ ಶಾಮಿಯಾನ ಹಾಕಿ ಜನರಿಗೆ ನೆರಳಿನ ವ್ಯವಸ್ಥೆ ಮಾಡಲಾಗುವುದು. ನವನಗರದ 195 ಮತಗಟ್ಟೆಯಲ್ಲಿ ಸಖಿ ಮತಗಟ್ಟೆ, 212 ಮತಗಟ್ಟೆಯಲ್ಲಿ ವಿಶಿಷ್ಟಚೇತನರಿಗೆ ವಿಶೇಷ ಮತಗಟ್ಟೆ ಮಾಡಲಾಗುವುದು. 196ರ ಮತಗಟ್ಟೆ ಅಂಬೇಡ್ಕರ ಭವನದಲ್ಲಿ ಯುವ ಮತದಾರರಿಗೆ ಮತಗಟ್ಟೆ ಮಾಡಲಾಗುವುದು ಎಂದು ಹೇಳಿದರು. ಚೆಕ್‌ಪೋಸ್ಟ್‌ದಲ್ಲಿ 10 ಲಕ್ಷಕ್ಕಿಂತ ಕಡಿಮೆ ಮೊತ್ತವನ್ನು ದಾಖಲೆ ಇಲ್ಲದಕ್ಕೆ ವಶಕ್ಕೆ ಪಡೆದುಕೊಳ್ಳಲಾಗಿತ್ತು. 9 ಪ್ರಕರಣದಲ್ಲಿ 8 ಪ್ರಕರದಲ್ಲಿ ದಾಖಲೆ ತಂದವರಿಗೆ ಹಣವನ್ನು ವಾಪಸ್ ನೀಡಲಾಗಿದೆ. ಇನ್ನೊಂದು ಪ್ರಕರಣದಲ್ಲಿ ದಾಖಲೆ ತಂದ ಬಳಿಕ ದುಡ್ಡು ವಾಪಸ್ ನೀಡಲಾಗುವುದು ಎಂದು ಹೇಳಿದರು.

ಕಿರುಸುದ್ದಿ

ದೇವಗಿರಿ ಯಾದವ ರಾಜರ ಗಜಪಡೆ ಉಬ್ಬು ಶಿಲ್ಪ ಪತ್ತೆ



ವಿಜಯಪುರ: ಇಲ್ಲಿನ ಗೌಡಗೆರೆ (ನಗರದ ಮನಗೂಳಿ ಅಗಸಿ ಬಳಿ) ಹಳ್ಳಿಯ ಕೋಟೆಗೋಡೆಯಲ್ಲಿ ಎದುರು-ಬದುರು ನಿಂತು ಕಾಳಗ ಮಾಡುವ ಮದಗಜಗಳ ಅಪರೂಪದ ಉಬ್ಬು ಶಿಲ್ಪ ಪತ್ತೆಯಾಗಿದ್ದು, ರಾಷ್ಟ್ರೀಯ ಸಂಶೋಧನಾ ವೇದಿಕೆಯಿಂದ ಹಮ್ಮಿಕೊಂಡ ಕ್ಷೇತ್ರ ಕಾರ್ಯದಲ್ಲಿ ಉಬ್ಬು ಶಿಲ್ಪವನ್ನು ಸಂಶೋಧಿಸಲಾಗಿದೆ. ಇದೇ ಮೊದಲ ಬಾರಿಗೆ ಇಂತಹ ಅಪರೂಪದ ಶಿಲ್ಪ ಪತ್ತೆಯಾಗಿದ್ದು, ಇದನ್ನು ಇತಿಹಾಸ ಸಂಶೋಧಕ ಹಾಗೂ ರಾಷ್ಟ್ರೀಯ ಸಂಶೋಧನಾ ವೇದಿಕೆಯ ಅಧ್ಯಕ್ಷ ಲಾಯಪ್ಪ ಇಂಗಳೆ ಗುರುತಿಸಿದ್ದಾರೆ. ದೇವಗಿರಿ ಯಾದವರು ಎಂದು ಹೆಸರುವಾಸಿಯಾದ ಸೇವುಣರ ರಾಜ್ಯಧಾನಿ ಗೌಡಗೆರೆ ಹಳ್ಳಿಗೆ ಸೇರಿದ ಕೋಟೆಯಲ್ಲಿ ಕೆತ್ತಲಾದ ಮದಗಜಗಳ ಉಬ್ಬು ಶಿಲ್ಪವು ರಾಜಧಾನಿ ರಕ್ಷಣೆಗೆ ಶಕ್ತಿಶಾಲಿ ಗಜಪಡೆ, ಮತ್ತು ರಕ್ಷಣಾ ವ್ಯವಸ್ಥೆ ಹೊಂದಿರುವುದಕ್ಕೆ ಸಾಕ್ಷಿಯಾಗಿದೆ ಎಂದು ಅವರು ತಿಳಿಸಿದ್ದಾರೆ. ಕ್ಷೇತ್ರಕಾರ್ಯದಲ್ಲಿ ರಾಷ್ಟ್ರೀಯ ಸಂಶೋಧನಾ ವೇದಿಕೆಯ ಪ್ರಮುಖರಾದ ಬಸವರಾಜ ಕುಬಕಡ್ಡಿ, ಉಮೇಶ ಶಿವಶರಣ, ಭೀಮರಾಯ ಕುಂಟೋಜಿ, ಪ್ರಶಾಂತಗೌಡ ಪಾಟೀಲ ಇದ್ದರು.

ಸಾಲಬಾಧೆಯಿಂದ ರೈತ ಸಾವು

ಚಿಕ್ಕೋಡಿ: ತಾಲೂಕಿನ ಯಡೂರವಾಡಿ ಗ್ರಾಮದ ರೈತ ರಾಮಕೃಷ್ಣ ಪಿರಾಜಿ (45) ಸಾಲಬಾಧೆಯಿಂದ ನೊಂದು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಶುಕ್ರವಾರ ಬೆಳಿಗ್ಗೆ ಘಟನೆ ಬೆಳಕಿಗೆ ಬಂದಿದ್ದು, ತನ್ನ ಹೊಲದಲ್ಲಿಯ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಂಕಲಿ ಪೊಲೀಸ್ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಾಗಿದೆ. ಆತ್ಮಹತ್ಯೆ ಮಾಡಿಕೊಂಡ ರೈತನ ಹೆಸರಿನಲ್ಲಿ ಎಷ್ಟು ಸಾಲ ಇತ್ತು ಎಂಬ ನಿಖರ ಮಾಹಿತಿ ಲಭ್ಯವಾಗಿಲ್ಲ.

ವಿಚಾರ ಸಂಕಿರಣ ಇಂದು

ಧಾರವಾಡ: ವಿಶ್ರಾಂತ ಕುಲಪತಿ ಪ್ರೊ. ಎಚ್.ಬಿ.ವಾಲೀಕಾರ ಮತ್ತು ಪ್ರೊ. ಸಿ.ಎಸ್. ಸಾಲಿಮಠ ದತ್ತಿ ಪ್ರಯುಕ್ತ ಗಣಿತ ಪ್ರಾಧ್ಯಾಪಕರ ಬೋಧನಾ ವೃದ್ಧಿ ಕಾರ್ಯಾಗಾರ ಮಾ.28ರಿಂದ 30ರವರೆಗೆ ಕರ್ನಾಟಕ ವಿಶ್ವವಿದ್ಯಾಯದ ಸೆನೆಟ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಗಣಿತ ಪ್ರಾಧ್ಯಾಪಕ ಡಾ.ಧನಂಜಯ ಎಂ. ಉದ್ಘಾಟಿಸಲಿದ್ದು, ಕವಿವಿ ಪಿಎಂಇಬಿ ನಿರ್ದೇಶಕ ಪ್ರೊ. ಡೆವಿಡ್, ಪ್ರೊ. ಆರ್.ಎಫ್.ಭಜಂತ್ರಿ, ಪ್ರೊ. ಕೃಷ್ಣಾ ಬಿ.ಸಿ., ಡಾ.ರಘುನಾಥ ಕೆ.ಆರ್. ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಕವಿವಿ ಕುಲಸಚಿವ ಡಾ.ಶಂಕರಪ್ಪ ವಣಿಕ್ಯಾಳ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ವಿಭಾಗದ ಮುಖ್ಯಸ್ಥ ಪ್ರೊ. ಎಸ್.ಸಿ.ಶಿರಾಳಶೆಟ್ಟಿ ತಿಳಿಸಿದ್ದಾರೆ.

ಸಂಸ್ಕೃತಿ ಕುಂಭ-ಮಲೆನಾಡ ಉತ್ಸವ 2026 ಉದ್ಘಾಟನೆ

ಮಕ್ಕಳಲ್ಲಿ ವಿಜ್ಞಾನ ತಂತ್ರಜ್ಞಾನದ ಅರಿವು ಮೂಡಿಸಿ

ಇಸ್ರೋ ಮಾಜಿ ಅಧ್ಯಕ್ಷ ಡಾ.ಕಿರಣ್ ಕುಮಾರ್ ಸಲಹೆ

ಹೊನ್ನಾವರ: ಪ್ರತಿಯೊಂದು ಮಾನವನ ದೈನಂದಿನ ಬದುಕಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಅತ್ಯಗತ್ಯವಾಗಿದ್ದು, ವಿಜ್ಞಾನ ತಂತ್ರಜ್ಞಾನ ಹೊರತು ಪಡಿಸಿದ ಜೀವನವನ್ನು ಊಹಿಸಲೂ ಅಸಾಧ್ಯವಾಗಿದೆ ಎಂದು ಇಸ್ರೋ ಮಾಜಿ ಅಧ್ಯಕ್ಷ ಡಾ.ಎ.ಎಸ್.ಕಿರಣ್ ಕುಮಾರ್ ಹೇಳಿದರು.

ಅವರು ತಾಲೂಕಿನ ಗೇರುಸೊಪ್ಪದಲ್ಲಿರುವ ಶ್ರೀ ಕ್ಷೇತ್ರ ಬಂಗಾರಮಕ್ಕಿ ಶ್ರೀ ವೀರಾಂಜನೇಯ ದೇವಸ್ಥಾನದಿಂದ ನಡೆಯುತ್ತಿರುವ ಸಂಸ್ಕೃತಿ ಕುಂಭ-ಮಲೆನಾಡ ಉತ್ಸವ-2026 ಕಾರ್ಯಕ್ರಮವನ್ನು ಶುಕ್ರವಾರ ಉದ್ಘಾಟಿಸಿ ಬಳಿಕ ಸಮಾರಂಭವನ್ನುದ್ದೇಶಿಸಿ ಮಾತನಾಡಿದರು.

ದೇಶ ಸ್ವತಂತ್ರಗೊಂಡ ಬಳಿಕ ವಿಜ್ಞಾನ ತಂತ್ರಜ್ಞಾನದ ಕಡೆಗೆ ಗಮನ ಹರಿಸುವುದಕ್ಕಿಂತ ದೇಶದ ಮೂಲ ಸೌಕರ್ಯಗಳ ಅಭಿವೃದ್ಧಿ, ಬಡತನ ನಿವಾರಣೆ, ಜನರ ಜೀವನ ಮಟ್ಟ ಸುಧಾರಿಸುವ ಸವಾಲುಗಳು ಹೆಚ್ಚಿದ್ದವು. ಆದರೂ ದೇಶದ ವಿಜ್ಞಾನಿಗಳ ಪ್ರಯತ್ನದಿಂದ ದೇಶವು ಅಲ್ಪಾವಧಿಯಲ್ಲಿಯೇ ಬಾಹ್ಯಾಕಾಶ ಕ್ಷೇತ್ರದಲ್ಲಿ ಅಮೋಘ ಸಾಧನೆ ಮಾಡಿವೆ. ಇತ್ತೀಚೆಗೆ ಬಾಹ್ಯಾಕಾಶದಲ್ಲಿ ದೇಶದ ಸಾಧನೆ ವಿಶ್ವದ ಗಮನ ಸೆಳೆಯುತ್ತಿದೆ ಎಂದು ಅವರು ಶ್ಲಾಘಿಸಿದರು.

ಶ್ರೀ ಮಾರುತಿ ಗುರೂಜಿ ಅವರು ಬಂಗಾರಮಕ್ಕಿ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆಧ್ಯಾತ್ಮಿಕ ಜಾಗೃತಿ ಬೆಳೆಸಿದ್ದಾರೆ. ಆಧ್ಯಾತ್ಮಿಕತೆಯ ಜೊತೆಗೆ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಕಾರ್ಯಗಳನ್ನು ನಡೆಸುತ್ತಿರುವ ಗುರೂಜಿಯವರ ಸೇವೆಯು ಇಡೀ ದೇಶಕ್ಕೇ ಮಾದರಿಯಾಗಿದೆ. ಎರಡು ದಶಕಗಳಿಂದ ನಡೆಸುತ್ತಿರುವ ಸಂಸ್ಕೃತಿ ಕುಂಭ-ಮಲೆನಾಡ ಉತ್ಸವ ಕಾರ್ಯಕ್ರಮದಲ್ಲಿ ವಿಜ್ಞಾನ ವಸ್ತು ಪ್ರದರ್ಶನದ ಮೂಲಕ ವಿಜ್ಞಾನ ತಂತ್ರಜ್ಞಾನದ ಬಗ್ಗೆ ಗ್ರಾಮೀಣ ಮಕ್ಕಳಲ್ಲಿ ಅರಿವು ಮತ್ತು ಆಸಕ್ತಿ ಮೂಡಿಸುತ್ತಿರುವುದು ಮಾರುತಿ ಗುರೂಜಿಯವರಲ್ಲಿ ಅಡಗಿರುವ ದೂರದೃಷ್ಟಿಯ ಸಂಕೇತವಾಗಿದೆ ಎಂದರು.



ಮಾಜಿ ಶಾಸಕ ಸುನಿಲ್ ನಾಯ್ಕ ಮಾತನಾಡಿ, ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಜನ ವಿರೋಧಿ ಮಾತ್ರವಲ್ಲದೆ ಪಶ್ಚಿಮ ಘಟ್ಟಕ್ಕೆ ಮಾರಕವಾಗಿದೆ. ಇದರ ವಿರುದ್ಧ ಮಾರುತಿ ಗುರೂಜಿ ಅವರು ಗಟ್ಟಿ ಧ್ವನಿಯಾಗಿದ್ದಾರೆ. ಈ ಮೂಲಕ ಹೋರಾಟಕ್ಕೆ ಅವರು ಶಕ್ತಿ ತುಂಬಿದ್ದಾರೆ ಎಂದರು.

ಬೆಂಗಳೂರು ಶ್ರೀ ಸಹಸ್ರಾರ ಯೋಗೀಶ್ವರ ಸ್ವಾಮಿ ಮಹಾಪೀಠಂ ಇದರ ಶ್ರೀಮತ್ ಪರಮಹಂಸ ಪರಿವ್ರಾಜಕಾಚಾರ್ಯ ಯೋಗೀಶ್ವರ ಮಹಾಸ್ವಾಮಿ ಉಪದೇಶ ನೀಡಿದರು. ಶ್ರೀ ಕ್ಷೇತ್ರ ಬಂಗಾರಮಕ್ಕಿ ಧರ್ಮಾಧಿಕಾರಿ ಮಾರುತಿ ಗುರೂಜಿ ಕಾರ್ಯಕ್ರಮದ ಅಧ್ಯಕ್ಷತೆ ಮತ್ತು ದಿವ್ಯ ಸಾನ್ನಿಧ್ಯ ವಹಿಸಿದ್ದರು. ಉದ್ಯಮಿ ಮಾಸ್ತಪ್ಪ ನಾಯ್ಕ, ಸಂಗೀತ ಸಂಯೋಜಕರಾದ ಸಂವತ್ಸರ, ನಗರ ಬಸ್ತಿಕೇರಿ ಗ್ರಾಪಂ ಮಾಜಿ ಅಧ್ಯಕ್ಷೆ ಸುನೀತಾ ಹೆಗಡೆ, ಮಾಜಿ ಸದಸ್ಯ ಮಹೇಶ ನಾಯ್ಕ, ಹೊನ್ನಾವರ ಮಂಡಳ ಬಿಜೆಪಿ ಅಧ್ಯಕ್ಷ ಮಂಜುನಾಥ ನಾಯ್ಕ ಮಾತನಾಡಿದರು. ತೃಪ್ತಿ ಮತ್ತು ಪಾವಣಿ ಪ್ರಾರ್ಥನೆಗೈದರು. ಮಾರುತಿ ವಸತಿ ಪಿಯು ಕಾಲೇಜಿನ ಶಿಕ್ಷಕಿಯರು ನಾಡಗೀತೆ ಹಾಡಿದರು. ನೂರ್ ಅಹ್ಮದ್ ಸ್ವಾಗತಿಸಿ ಪ್ರಸ್ತಾವನೆಗೈದರು. ಗಣಪತಿ ಹೆಗಡೆ ಧನ್ಯವಾದಗೈದರು. ಶೈಲೇಶ್, ಸೌಮ್ಯ, ತೃಪ್ತಿ ಧನ್ಯವಾದ ಸಲ್ಲಿಸಿದರು.

ಹನುಮಂತ ದೇವರ ರಥೋತ್ಸವ ಸಂಪನ್ನ

ಭಟ್ಕಳ: ಪಟ್ಟಣದ ಗ್ರಾಮದೇವ ಎಂದೇ ಕರೆಯಲ್ಪಡುವ ಹನುಮಂತ ದೇವರ ಬ್ರಹ್ಮರಥೋತ್ಸವ ಶುಕ್ರವಾರ ಸಂಜೆ ಅದ್ದೂರಿಯಾಗಿ ಸಂಪನ್ನಗೊಂಡಿತು.

ಶುಕ್ರವಾರ ಸಂಜೆ 5.30ಕ್ಕೆ ಹನುಮಂತ ದೇವರ ಉತ್ಸವ ಮೂರ್ತಿಯನ್ನು ಹೊತ್ತ ಬ್ರಹ್ಮರಥವನ್ನು ನೆರೆದಿದ್ದ ಸಾವಿರಾರು ಭಕ್ತರ ಸಮ್ಮುಖದಲ್ಲಿ ಎಳೆಯಲಾಯಿತು. ದೇವಸ್ಥಾನದ ತಾಂತ್ರಿಕರು, ಮುಖ್ಯ ಅರ್ಚಕರು ಸೇರಿದಂತೆ ಮತ್ತಿತರ ಅರ್ಚಕರು ರಥೋತ್ಸವದ ಧಾರ್ಮಿಕ ಕಾರ್ಯಕ್ರಮಗಳನ್ನು ವಿಧಿವತ್ತಾಗಿ ನಡೆಸಿಕೊಟ್ಟರು. ಶುಕ್ರವಾರ ಬೆಳಗ್ಗೆಯಿಂದ ಸಂಜೆಯವರೆಗೂ ಸಾವಿರಾರು ಭಕ್ತರು ಸರದಿ ಸಾಲಿನಲ್ಲಿ ನಿಂತು ಗ್ರಾಮ ದೇವನಾದ ಹನುಮಂತನಿಗೆ ಪೂಜೆ, ಹರಕೆ ಹಾಗೂ ರಥ ಕಾಣಿಗೆ ಸಲ್ಲಿಸಿದರು. ರಥೋತ್ಸವದಲ್ಲಿ ಭಜನೆ, ಚಂಡೆ ವಾದ್ಯ, ಹುಲಿ ಕುಣಿತ, ತಟ್ಟಿರಾಯ ಕುಣಿತ ಜನರ ಗಮನ ಸೆಳೆದವು. ರಥೋತ್ಸವದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್.ವೈದ್ಯ, ಮಾಜಿ ಸಚಿವ ಶಿವಾನಂದ ನಾಯ್ಕ, ಮಾಜಿ ಶಾಸಕ ಸುನೀಲ ನಾಯ್ಕ, ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಶ್ರೀಧರ ಮೊಗೇರ, ಶಿವರಾಮ ನಾಯ್ಕ, ಸುರೇಂದ್ರ ಭಟ್ಕಳ ಹಾಗೂ ಸದಸ್ಯರು, ಪ್ರಮುಖರಾದ ರಾಜೇಶ ನಾಯಕ, ಗೋವಿಂದ ನಾಯ್ಕ, ಕೃಷ್ಣಾ ನಾಯ್ಕ, ರಾಜೇಶ ನಾಯ್ಕ, ಸುಬ್ರಾಯ ದೇವಡಿಗ, ಶಾಂತರಾಮ ಭಟ್ಕಳ, ರಾಮಕೃಷ್ಣ ನಾಯ್ಕ, ನಾಗೇಶ ಭಟ್ ಸೇರಿದಂತೆ ಪಾಲ್ಗೊಂಡಿದ್ದರು.

ಭಟ್ಕಳ ಹಾಗೂ ವಿವಿಧ ತಾಲೂಕಿನಿಂದ ಬಂದ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳು ಬಂದೋಬಸ್ತ್‌ನಲ್ಲಿದ್ದರು. ಮುಂಜಾಗ್ರತಾ ಕ್ರಮವಾಗಿ ಎಲ್ಲೆಡೆ ಬಿಗು ಬಂದೋಬಸ್ತ್ ಏರ್ಪಡಿಸಲಾಗಿತ್ತು. ಬ್ರಹ್ಮರಥೋತ್ಸವ ವೀಕ್ಷಿಸಲು ಊರ ಹಾಗೂ ಪರ ಊರಿನ ಸಾವಿರಾರು ಜನರು ಪಾಲ್ಗೊಂಡಿದ್ದರು. ಬ್ರಹ್ಮರಥೋತ್ಸವವನ್ನು ಮುಸ್ಲಿಂ ಸಮುದಾಯದವರೂ ಸಹ ನಿಂತು ವೀಕ್ಷಿಸಿದರು.



ಹತ್ಯಾ ಯತ್ನದ ಪ್ರಕರಣದ ತನಿಖೆ: ಪೊಲೀಸರಿಂದ ಸ್ಥಳ ಮಹಜರು



ಅಂಕೋಲಾ: ಕೆಪಿಸಿಸಿ ಮಾಜಿ ಕಾರ್ಯದರ್ಶಿ ಗೋಪಾಲಕೃಷ್ಣ ನಾಯಕ ಹತ್ಯೆಗೆ ಯತ್ನಿಸಿದ ಪ್ರಕರಣದಲ್ಲಿ ಬಂಧಿತ ನಾಲ್ವರು ಆರೋಪಿಗಳನ್ನು ಶುಕ್ರವಾರ ಘಟನಾ ಸ್ಥಳಕ್ಕೆ ಕರೆ ತಂದು ಶುಕ್ರವಾರ ಸ್ಥಳ ಮಹಜರು ನಡೆಸಿದರು.

ಇದರ ಬೆನ್ನಿಗೇ ಈ ಪ್ರಕರಣದ ಹಿಂದಿನ ರಹಸ್ಯ ಬೇಧಿಸಲು ಪೊಲೀಸರು ತನಿಖೆ ಚುರುಕುಗೊಳಿಸಿದ್ದು, ಶಂಕಿತರು ಇರುವ ಸ್ಥಳಗಳ ಮೇಲೆ ದಾಳಿ ನಡೆಸಿ ಮಾಹಿತಿ ಕಲೆಹಾಕಿದ್ದಾರೆ. ಇನ್ನು ನಾಪತ್ತೆಯಾದ ಆರೋಪಿಗಳ ಪತ್ತೆಗಾಗಿ ಪೊಲೀಸ್ ಇಲಾಖೆ ವ್ಯಾಪಕ ಶೋಧ ಕಾರ್ಯ ಆರಂಭಿಸಿದೆ.

ಈ ಪ್ರಕರಣದಲ್ಲಿ ಜಾಕೀರ, ನೈಜಲ್, ಸದ್ದಾಂ ಮತ್ತು ಇರ್ಫಾನ್ ಆರೋಪಿಗಳೆಂದು ಗುರುತಿಸಲಾಗಿದ್ದು, ಇವರು ಕ್ರಮವಾಗಿ ರಿಯಲ್ ಎಸ್ಟೇಟ್, ಬೌನ್ಸರ್, ವೆಲ್ಡರ್ ಹಾಗೂ ಡ್ರೈವರ್ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದರು ಎಂದು ತಿಳಿದುಬಂದಿದೆ. ಘಟನೆಯಲ್ಲಿ ಪ್ರಮುಖ ಆರೋಪಿಗಳು ತಲೆಮರೆಸಿಕೊಂಡಿದ್ದು, ಅವರನ್ನು ಬಂಧಿಸಲು ವಿಶೇಷ ತಂಡಗಳನ್ನು ರಚಿಸಿ ಶೋಧ ಕಾರ್ಯ ತೀವ್ರಗೊಳಿಸಲಾಗಿದೆ.

ಪೊಲೀಸರು ಈಗಾಗಲೇ ಕೆಲವು ಮಹತ್ವದ ಸುಳಿವುಗಳನ್ನು ಪಡೆದಿದ್ದು, ಪ್ರಕರಣದ ಹಿಂದಿನ ಸೂತ್ರಧಾರರನ್ನು ಪತ್ತೆಹಚ್ಚಲು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದಾರೆ. ತಾಲೂಕಿನಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಪೊಲೀಸರು ಶೀಘ್ರದಲ್ಲೇ ಆರೋಪಿಗಳನ್ನು ಬಂಧಿಸುವ ವಿಶ್ವಾಸ ವ್ಯಕ್ತಪಡಿಸಿದ್ದು, ಪ್ರಕರಣದ ಸಂಪೂರ್ಣ ಸತ್ಯಾಂಶ ಹೊರಬರುವ ನಿರೀಕ್ಷೆ ಇದೆ.

ಜೈಲಿನಲ್ಲಿ ನಿಷೇಧಿತ ವಸ್ತುಗಳ ಸಾಗಾಟ

ಜೈಲು ಸಿಬ್ಬಂದಿ-ಚಾಲಕ ಬಂಧನ

ಧಾರವಾಡ: ನಗರದ ಕೇಂದ್ರ ಕಾರಾಗೃಹದೊಳಗೆ ಸಿಗರೇಟ್, ಗುಟ್ಕಾ, ತಂಬಾಕು ಇತ್ಯಾದಿ ನಿಷೇಧಿತ ವಸ್ತುಗಳು ಸಾಗಿಸಿದ ಆರೋಪದಡಿ ಜೈಲು ಸಿಬ್ಬಂದಿ, ಓರ್ವ ಆಟೋ ಚಾಲಕನನ್ನು ಬಂಧಿಸಿರುವುದಾಗಿ ಮಹಾನಗರ ಪೊಲೀಸ್ ಆಯುಕ್ತ ಎನ್.ಶಶಿಕುಮಾರ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜೈಲು ಸಿಬ್ಬಂದಿಗಳಾದ ಅಲ್ತಾಫ್ ಶೇಖ್ ಸನದಿ, ರಾಜು ಸೊಲಬಣ್ಣವರ, ಆಟೋ ಚಾಲಕನಾದ ಮುನಿರ್ ಅಹ್ಮದ್ ಬೆಟಗೇರಿ ಬಂಧಿತರಾಗಿದ್ದು, ಅವರಿಂದ ರೂ.75 ಸಾವಿರ ಮೌಲ್ಯದ ವಸ್ತುಗಳ ವಶಕ್ಕೆ ಪಡೆದಿದ್ದಾಗಿ ತಿಳಿಸಿದರು.

ಮಾ.8ರಂದು ಬೆಳಗ್ಗೆ 3ಕ್ಕೆ ಜೈಲಿನೊಳಗೆ ವಿಚಾರಣಾಧೀನ ಕೈದಿಗಳಿಗೆ ತಂಬಾಕು ಉತ್ಪನ್ನ ಎರಡು ಚೀಲಗಳನ್ನು ಸಾಗಿಸುವುದು ಗಮನಕ್ಕೆ ಬಂದಿದ್ದು, ಈ ಕುರಿತು ಜೈಲು ಅಧಿಕಾರಿ ನಿರ್ಮಲಾ ಅವರು ಉಪನಗರ ಠಾಣೆಯಲ್ಲಿ ದೂರು ನೀಡಿದ್ದಾಗಿ ಆಯುಕ್ತರು ಮಾಹಿತಿ ನೀಡಿದರು.

ಜೈಲಿನೊಳಗೆ ನಿಷೇಧಿತ ಪದಾರ್ಥಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಿರುವ ಮಾಹಿತಿ ಇದೆ. ಈ ಜಾಲದಲ್ಲಿ ಜೈಲು ಸಿಬ್ಬಂದಿ ಮಾತ್ರವಲ್ಲ, ಹೊರಗಿನ ವ್ಯಕ್ತಿಗಳು ಮತ್ತು ಜೈಲಿನೊಳಗಿನ ಕೆಲವು ಕೈದಿಗಳು ಭಾಗಿಯಾದ ಶಂಕೆ ಇದೆ. ಈ ಕುರಿತು ತನಿಖೆ ನಡೆಸುವುದಾಗಿ ತಿಳಿಸಿದರು.

ಕಾನೂನು ರಕ್ಷಿಸಬೇಕಾದವರೇ ಇಂತಹ ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗುವುದು ಗಂಭೀರ ಅಪರಾಧ. ಇಲಾಖೆಯ ಶಿಸ್ತನ್ನು ಕಾಪಾಡಲು ಮತ್ತು ಜೈಲಿನ ಭದ್ರತಾ ನಿಯಮ ಉಲ್ಲಂಘಿಸಿದವರ ವಿರುದ್ಧ ಮುಲಾಜಿಲ್ಲದೆ, ಕಠಿಣ ಕ್ರಮ ಕೈಗೊಳ್ಳುವುದಾಗಿ ಪ್ರಶ್ನೆಗೆ ಉತ್ತರಿಸಿದರು.

> **ಐಪಿಎಲ್ ಕ್ರಿಕೆಟ್ ಪ್ರಾರಂಭವಾಗಿದ್ದು, ಅವಳಿನಗರದಲ್ಲಿ ಬೆಟ್ಟಿಂಗ್ ದಂಧೆಯಲ್ಲಿ ತೊಡಗಿದವರ ವಿರುದ್ಧ ಕ್ರಮ ವಹಿಸಲು ಠಾಣೆವಾರು ಸಭೆ ನಡೆಸಲು ಸೂಚಿಸಿದೆ. ಅಲ್ಲದೇ, ಹಿಂದಿನ ವರ್ಷದಲ್ಲಿ ಕೃತ್ಯದಲ್ಲಿ ಭಾಗಿಯಾದವರ ವಿಚಾರಣೆ ನಡೆಸಲು ಆದೇಶಿಸಿದೆ.**
> **■ ಎನ್.ಶಶಿಕುಮಾರ, ಹು-ಧಾ ಪೊಲೀಸ್ ಆಯುಕ್ತರು**

ರಾಜ್ಯದಲ್ಲಿ ಆಡಳಿತ ಸಂಪೂರ್ಣ ಕುಸಿತ: ಶೆಟ್ಟರ

ಬಾಗಲಕೋಟೆ: ರಾಜ್ಯದಲ್ಲಿ ಆಡಳಿತ ಸಂಪೂರ್ಣ ಕುಸಿದಿದೆ. ಸರ್ಕಾರದಲ್ಲಿ ಮಿತಿಮೀರಿದ ಭ್ರಷ್ಟಾಚಾರ ನಡೆಯುತ್ತಿದ್ದು, ರಾಜ್ಯದ ಜನ ರೋಸಿ ಹೋಗಿದ್ದಾರೆ. ಅಭಿವೃದ್ಧಿಗೆ ಹಣ ಇಲ್ಲ, ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಗಳಿಗೂ ರಾಜ್ಯ ಸರ್ಕಾರ ತಮ್ಮ ಪಾಲಿನ ಹಣ ನೀಡುತ್ತಿಲ್ಲ, ಸಾಲದ ಕೂಪದಲ್ಲಿ ರಾಜ್ಯ ಸರ್ಕಾರವಿದೆ ಎಂದು ಮುಖ್ಯಮಂತ್ರಿ ಜಗದೀಶ ಶೆಟ್ಟರ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಾವಣಗೆರೆ ಮತ್ತು ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ಪರವಾಗಿ ಜನರ ಒಲವು ಇದ್ದು ಎರಡೂ ಕ್ಷೇತ್ರದಲ್ಲಿ ನಿಶ್ಚಿತವಾಗಿ ನಮ್ಮ ಪಕ್ಷದವರು ಗೆಲ್ಲುತ್ತಾರೆ. ಬಾಗಲಕೋಟೆ ಮತಕ್ಷೇತ್ರದಲ್ಲಿ ವೀರಣ್ಣ ಚರಂತಿಮಠವರು ಮಾಡಿರುವ ಅಭಿವೃದ್ಧಿ ಕೆಲಸಕ್ಕೆ ಜನ ಬೆಂಬಲ ನೀಡುತ್ತಿದ್ದಾರೆ ಎಂದರು.

ಸರ್ಕಾರದಲ್ಲಿ ದುಡ್ಡಿಲ್ಲ ಆದರೂ ನಿಗಮ ಮಂಡಳಿ ಅಧ್ಯಕ್ಷರಿಗೆ ಕ್ಯಾಬಿನೆಟ್ ದರ್ಜೆಯ ಸೌಲಭ್ಯ ಕೊಡುತ್ತಾರೆ. ಒಟ್ಟಿನಲ್ಲಿ ನಮ್ಮ ಖರ್ಚು ಉಳಿದರೆ ಸಾಕು ರಾಜ್ಯದ ಅಭಿವೃದ್ಧಿ ಬೇಕಾಗಿಲ್ಲ ಎಂಬ ಭಾವನೆ ಮುಖ್ಯಮಂತ್ರಿಗಳದ್ದಾಗಿದೆ ಎಂದರು.

ಇರಾನ್, ಅಮೆರಿಕಾ, ಇಸ್ರೆಲ್ ದೇಶಗಳ ನಡುವೆ ಯುದ್ಧ ನಡೆಯುತ್ತಿದ್ದರೂ ದೇಶದಲ್ಲಿ ಇಂಧನ ಕೊರತೆ ಉಂಟಾಗಿಲ್ಲ, ಇಂತಹ ಸಂದರ್ಭದಲ್ಲಿ ಬೆಲೆ ಏರಿಕೆಯಾಗಬಹುದು ಎಂದು ಜನ ಮಾತನಾಡಿಕೊಳ್ಳುತ್ತಿದ್ದರು. ಆದರೆ, ದೇಶದ ಪ್ರಧಾನಿ ನರೇಂದ್ರ ಮೋದಿಯವರು ಕಚ್ಚಾ ತೈಲದ ಮೇಲಿನ ಅಬಕಾರಿ ಸುಂಕವನ್ನು ಕಡಿಮೆ ಮಾಡುವ ಮೂಲಕ ದೇಶದ ಜನರಿಗೆ ಸಿಹಿ ನೀಡಿದರು.

ರಾಜ್ಯಸಭೆ ಸದಸ್ಯ ನಾರಾಯಣಸಾ ಭಾಂಡಗೆ, ಅರುಣ್ ಶಹಾಪುರ, ಶರಣು ತಳ್ಳಿಕೇರಿ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಬಸವರಾಜ ಯಂಕಂಚಿ, ಸತ್ಯನಾರಾಯಣ ಹೇಮಾದ್ರಿ ಪತ್ರಿಕಾಗೋಷ್ಠಿಯಲ್ಲಿದ್ದರು.

ಯಡೂರು ಗ್ರಾಮಕ್ಕೆ ಇಂದು ಮೋಹನ ಭಾಗವತ್

ಮಾಂಜರಿ : ದಕ್ಷಿಣ ಕಾಶಿ ಎಂದು ಪ್ರಖ್ಯಾತವಾಗಿರುವ ಹಾಗೂ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯದ ಹಲವಾರು ಭಕ್ತಾದಿಗಳ ಶ್ರದ್ಧಾ ಸ್ಥಾನವಾಗಿರುವ ಸಮೀಪದ ಸುಕ್ಷೇತ್ರ ಯಡೂರು ಗ್ರಾಮಕ್ಕೆ ಮಾ.28ರಂದು ಬೆಳಗ್ಗೆ 8.45ಕ್ಕೆ ಆರ್‌ಎಸ್‌ಎಸ್‌ನ ಸರಸಂಘಚಾಲಕ ಡಾ.ಮೋಹನ ಭಾಗವತ್ ಆಗಮಿಸಲಿದ್ದು, ವೀರಭದ್ರೇಶ್ವರ ದೇವಸ್ಥಾನದ ಗುರುಕುಲ ಸಭಾಭವನದ ಉದ್ಘಾಟನೆ, ಗೋ ತುಲಾಭಾರ ಕಾರ್ಯಕ್ರಮಕ್ಕೆ ಚಾಲನೆ ಮತ್ತು ಬೆಳಗ್ಗೆ 10 ಗಂಟೆಗೆ, ವಿದ್ಯಾರ್ಥಿಗಳೊಂದಿಗೆ ಸಂವಾದ ಮತ್ತು ಯುವಕರಿಗೆ ಮಾರ್ಗದರ್ಶನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ತಿಳಿಸಿದ್ದಾರೆ.

ಸಮೀಪದ ಸುಕ್ಷೇತ್ರ ಯಡೂರಿನ ಶ್ರೀ ಕಾಡಸಿದ್ದೇಶ್ವರ ಮಠದಲ್ಲಿ ಏರ್ಪಡಿಸಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹುಕ್ಕೇರಿಯ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿ, ನೂಲದ ಗುರುಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮೀಜಿ, ಆರ್‌ಎಸ್‌ಎಸ್‌ನ ಬೆಳಗಾವಿ ವಿಭಾಗ ಕಾರ್ಯವಾಹ ಸಂಜಯ ಅಡಕೆ, ಅ.ಭಾ.ವೀ.ಮ, ಸಭೆಯ ಜಿಲ್ಲಾಧ್ಯಕ್ಷ ಶಿವಲಿಂಗಯ್ಯಾ ಅಲ್ಲಯ್ಯನವರಮಠ ಮುಂತಾದವರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.



ಡಾ.ಮೋಹನ ಭಾಗವತ್ ಅವರು ಮುಂಜಾನೆ 8.45ರಿಂದ ಮಧ್ಯಾನ 2.30ರವರೆಗೆ ಯಡೂರಿನಲ್ಲಿರುವರು ರಾಷ್ಟ್ರದ ಉಜ್ವಲ ಭವಿಷ್ಯಕ್ಕಾಗಿ ಯುವ ಪೀಳಿಗೆಗೆ ಸ್ಫೂರ್ತಿ ನೀಡುವ ಸಂಘದ ಕಾರ್ಯ ಮತ್ತು ಮಹಾರಾಷ್ಟ್ರ, ಆಂಧ್ರ ಮತ್ತು ಕರ್ನಾಟಕದಲ್ಲಿ ವೀರಶೈವ ಅಂಗಾಯತ ಸಮುದಾಯದ ಕೊಡುಗೆಯ ಕುರಿತು ಮಾರ್ಗದರ್ಶನ ನೀಡಲಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನೂಲಿನ ಗುರು ಸಿದ್ದೇಶ್ವರ ಶಿವಾಚಾರ್ಯ ಮಹಾ ಸ್ವಾಮೀಜಿಗಳು, ಶ್ರೀಕಾಂತ ಉಮರಾಣಿ, ಶಿವಾನಂದ ಹಕಾರೆ, ಅಡವಯ್ಯಾ ಅರಳಿಕಟ್ಟಿಮಠ, ಮುತ್ತಯ್ಯಾ ಮಠದ ವಿಶ್ವರಾಧ್ಯ ಹಿರೇಮಠ ಸೇರಿದಂತೆ ಆರ್‌ಎಸ್‌ಎಸ್‌ನ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಬೆಂಗಳೂರಲ್ಲಿಂದು ಉದ್ಘಾಟನಾ ಪಂದ್ಯ | 19ನೇ ಆವೃತ್ತಿಗೆ ಚಾಲನೆ

ಮನರನ್‌ಜನಾ ಹಬ್ಬ ಶುರು



ಬೆಂಗಳೂರು: ಭಾರತ ಕ್ರಿಕೆಟ್ ಅಭಿಮಾನಿಗಳ ನಡುವೆ ಇರುವ ಭಾಯಿಚಾರಾ ಕೆಲವು ದಿನಗಳ ಮಟ್ಟಿಗೆ ನಿಲ್ಲಲಿದೆ. ಸುಮಾರು 2 ತಿಂಗಳ ಮಟ್ಟಿಗೆ ಒಬ್ಬರಿಗೊಬ್ಬರು ಟೀಕಿಸಲು ವಿವಿಧ ತಂಡಗಳ ಅಭಿಮಾನಿಗಳು ಸಿದ್ಧರಾಗಿದ್ದಾರೆ. ತಮ್ಮ ನೆಚ್ಚಿನ ಆಟಗಾರರನ್ನು ಬೆಂಬಲಿಸಲು, ಕ್ರಿಕೆಟ್ ಆನಂದಿಸಲು ಸಮಸ್ತ ಕ್ರೀಡಾಭಿಮಾನಿಗಳು ಅಣಿಯಾಗಿದ್ದಾರೆ. ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಸನ್‌ರೈಸರ್ಸ್ ಹೈದರಾಬಾದ್ ನಡುವಿನ ಪಂದ್ಯದೊಂದಿಗೆ ಐಪಿಎಲ್ ಶುರುವಾಗಲಿದೆ. ಎಲ್ಲಾ ಹತ್ತು ತಂಡಗಳು ಭರ್ಜರಿ ಸಿದ್ಧತೆಗಳೊಂದಿಗೆ ಕಣಕ್ಕಿಳಿಯುತ್ತಿವೆ. ಹಾಲಿ ಚಾಂಪಿಯನ್ ಆರ್‌ಸಿಬಿ ಟ್ರೋಫಿ ಉಳಿಸಿಕೊಳ್ಳಲು ಫೈಟ್ ನಡೆಸಲಿದೆ. 19ನೇ ಆವೃತ್ತಿಯಲ್ಲಿ 84 ಪಂದ್ಯಗಳು ನಡೆಯಲಿವೆ ಎಂದು ಹೇಳಲಾಗಿತ್ತು. ಆದರೆ ಬಿಸಿಸಿಐ 70 ಪಂದ್ಯಗಳ ವೇಳಾಪಟ್ಟಿ ಪ್ರಕಟಿಸಿದೆ. ಇನ್ನೂ 4 ನಾಕೌಟ್ ಪಂದ್ಯಗಳ ವೇಳಾಪಟ್ಟಿ ಪ್ರಕಟಿಸಬೇಕಿದೆ. ಅಂದರೆ ಈ ಬಾರಿ ಕೂಡ 74 ಪಂದ್ಯಗಳು ಮಾತ್ರ ನಡೆಯಲಿವೆ. ಯಥಾಸ್ಥಿತಿ ಲೀಗ್ ಹಂತದ ರೌಂಡ್ ರಾಬಿನ್ ಆಮೇಲೆ ನಾಕೌಟ್ ಮತ್ತು ಫೈನಲ್ ಪಂದ್ಯ ನಡೆಯಲಿವೆ. ವಿಶೇಷವಾಗಿ ಈ ಬಾರಿ ಕೆಲವು ನಿಯಮಗಳನ್ನು ತರಲಾಗಿದೆ. 8 ವಾರದ ಹಿಂದಷ್ಟೇ ಟಿ20 ಮಾದರಿಯಲ್ಲಿ ಭಾರತ ವಿಶ್ವಕಪ್ ಗೆದ್ದಿದೆ. ಎಲ್ಲಾ ಕ್ರಿಕೆಟ್ ಅಭಿಮಾನಿಗಳ ಮನಸ್ಥಿತಿ ಈಗ ಟಿ20ಗೆ ಹೊಂದಿಕೊಂಡಿದೆ.

74	12	14	8	44
ಈ ಬಾರಿಯ ಪಂದ್ಯಗಳು	ನಗರಗಳಲ್ಲಿ ಪಂದ್ಯ	ತಂಡಕ್ಕೆ ಪಂದ್ಯಗಳು	ಡಬಲ್ ಹೆಡರ್‌ಗಳು	ಧೋನಿ ಅತಿ ಹಿರಿಯ ಆಟಗಾರ



ಗಮನಿಸಿ
- ವಾಹನದ ಬದಲು ಮೆಟ್ರೋದಲ್ಲಿ ಪ್ರಯಾಣಿಸಿ, ಟಿಕೆಟ್ ಉಚಿತ
- ಮೈದಾನದ ಸುತ್ತ ಪಾರ್ಕಿಂಗ್ ನಿಷೇಧ, 4 ಸ್ಥಳಗಳಲ್ಲಿ ಪಾರ್ಕಿಂಗ್
- ಪಾರ್ಕಿಂಗ್ ಲಾಟ್‌ನಿಂದ ಮೈದಾನದವರೆಗೆ ಬಸ್ ವ್ಯವಸ್ಥೆ
- ಕ್ವೀನ್ಸ್ ರೋಡ್‌ನಿಂದ ಮೈದಾನದೊಳಕ್ಕೆ ಪ್ರವೇಶ ಬಂದ್
- ಟಿಕೆಟ್ ಇಲ್ಲದಿದ್ದರೆ ಮೈದಾನದ ಕಡೆ ನಿಲ್ಲದಿರಿ, ಕಠಿಣ ಕ್ರಮ

ಟ್ರೋಫಿ ವಿಶೇಷತೆ
ಐಪಿಎಲ್‌ನಲ್ಲಿ ಮೊದಲಿಗೆ ಭಾರತ ನಕ್ಷೆ ಇರುವ ಟ್ರೋಫಿಯನ್ನು ನೀಡಲಾಗುತ್ತಿತ್ತು. ನಂತರ ಬದಲಾಯಿಸಿ ಹೊಸ ವಿನ್ಯಾಸದ ಟ್ರೋಫಿ ನೀಡುವ ವಾಡಿಕೆ ಮಾಡಿಕೊಂಡಿತು. ಟ್ರೋಫಿ ಬಂಗಾರದ್ದಾಗಿರುತ್ತದೆ. ಟ್ರೋಫಿ ಮೇಲೆ (where talent meets opportunity) ಎಂದು ಬರೆಯಲಾಗಿದೆ.



ಮೊದಲ ಬಾರಿಯ ಚಾಂಪಿಯನ್
- ರಾಜಸ್ಥಾನ ರಾಯಲ್ಸ್

ಹಾಲಿ ಚಾಂಪಿಯನ್ಸ್
- ರಾಯಲ್ ಚಾಲೆಂಜರ್ಸ್ ಬೆಂಗಳೂರು

ಹೆಚ್ಚು ಬಾರಿ ಗೆದ್ದವರು
- ಮುಂಬೈ ಇಂಡಿಯನ್ಸ್, ಚೆನ್ನೈ ಸೂಪರ್ ಕಿಂಗ್ಸ್(5 ಟ್ರೋಫಿ)

ಅತಿ ಹೆಚ್ಚು ರನ್ ಬಾರಿಸಿದ ಆಟಗಾರ
- ವಿರಾಟ್ ಕೊಹ್ಲಿ (8661 ರನ್)

ಅತಿ ಹೆಚ್ಚು ವಿಕೆಟ್ ಪಡೆದ ಆಟಗಾರ
- ಯಜುವೇಂದ್ರ ಚಾಹಲ್ (221 ವಿಕೆಟ್)

ಅತಿ ಹೆಚ್ಚು ವೈಯಕ್ತಿಕ ಸ್ಕೋರ್
- ಕ್ರಿಸ್ ಗೇಲ್ (175)

ಅತಿ ಹೆಚ್ಚು ರನ್ ಗಳಿಸಿದ ತಂಡ
- ಸನ್‌ರೈಸರ್ಸ್ ಹೈದರಾಬಾದ್ 287/2

ಬೆಸ್ಟ್ ಬೌಲಿಂಗ್:
- ಅಲ್ಜಾರಿ ಜೋಸೆಫ್ (12/6)

ಹೆಚ್ಚು ಕ್ಯಾಚ್ ಪಡೆದ ಫೀಲ್ಡರ್
- ವಿರಾಟ್ ಕೊಹ್ಲಿ (110+)

ಹೆಚ್ಚು ಟ್ರೋಫಿ ಗೆದ್ದ ನಾಯಕ
- ರೋಹಿತ್ ಶರ್ಮ, ಮಹೇಂದ್ರ ಸಿಂಗ್ ಧೋನಿ(5)

ಬಹುಮಾನ
ಐಪಿಎಲ್ ಗೆದ್ದ ತಂಡಕ್ಕೆ
20 ಕೋಟಿ ರೂ. ನಗದು ಬಹುಮಾನ

ರನ್ನರ್-ಅಪ್ ತಂಡಕ್ಕೆ
13 ಕೋಟಿ ರೂ. ನಗದು ಬಹುಮಾನ





ಐಪಿಎಲ್ ಯಾಕೆ ಭಿನ್ನ ಕ್ರಿಕೆಟ್?

3 ಸೂಪರ್ ಓವರ್
ಪಂದ್ಯಗಳು ಟೈ ಆದರೆ ಐಪಿಎಲ್‌ನಲ್ಲಿ ಮೂರು ಸೂಪರ್ ಓವರ್ ಆಡಿಸಲಾಗುತ್ತದೆ. ಐಸಿಸಿ ಕ್ರಿಕೆಟ್‌ನಲ್ಲಿ ಒಂದು ಅಥವಾ ಎರಡು ಸೂಪರ್ ಓವರ್‌ಗಳ ನಂತರ ಪಂದ್ಯ ನಿರ್ಧರಿಸುವುದಕ್ಕೆ ಬೌಂಡರಿ ಎಣಿಕೆ ಬಳಸುತ್ತಿತ್ತು. ಬಳಿಕ ಫಲಿತಾಂಶ ಬರುವವರೆಗೂ ಸೂಪರ್ ಓವರ್ ಎಂಬ ಘೋಷಣೆ ಮಾಡಿತು. ಐಪಿಎಲ್‌ನಲ್ಲಿ ಮೂರು ಸೂಪರ್ ಓವರ್ ಆಡಿಸಲಾಗುತ್ತದೆ.

ಡಿಆರ್‌ಎಸ್ ಬಳಕೆ ವಿಸ್ತಾರ
ಐಸಿಸಿಯಲ್ಲಿ ಕೆಲವು ನಿರ್ಧಾರಗಳಿಗೆ ಮಾತ್ರ ಡಿಆರ್‌ಎಸ್ ಬಳಸಿಕೊಳ್ಳಬಹುದಾಗಿದೆ. ಆದರೆ ಐಪಿಎಲ್‌ನಲ್ಲಿ ಪ್ರತಿಯೊಂದಕ್ಕೂ ಡಿಆರ್‌ಎಸ್ ಬಳಸಿಕೊಳ್ಳುವ ಆಯ್ಕೆ ತಂಡಗಳ ಮುಂದಿರುತ್ತವೆ. ಅಂದರೆ ವೈಡ್, ನೋ ಬಾಲ್, ಓವರ್ ಬೌನ್ಸ್‌ಗೂ ಆಟಗಾರರು ಡಿಆರ್‌ಎಸ್ ತೆಗೆದುಕೊಳ್ಳಬಹುದಾಗಿದೆ.



ಇಂಪ್ಯಾಕ್ಟ್ ಪ್ಲೇಯರ್
- ಪ್ರತಿ ತಂಡವು ಪಂದ್ಯಕ್ಕೆ ಮುನ್ನ 11 ಆಟಗಾರರ ಜೊತೆಗೆ 5 ಸಬ್‌ಸ್ಟಿಟ್ಯೂಟ್ ಆಟಗಾರರನ್ನು ಘೋಷಿಸುತ್ತದೆ.
- ಈ 5ರಲ್ಲಿ ಒಬ್ಬರನ್ನು ಪಂದ್ಯದ ವೇಳೆ ಇಂಪ್ಯಾಕ್ಟ್ ಪ್ಲೇಯರ್ ಆಗಿ ಬಳಸಬಹುದು.

ಯಾವಾಗಬಳಸಬಹುದು?
- ಇನಿಂಗ್ಸ್ ಆರಂಭಕ್ಕೂ ಮೊದಲು
- ಓವರ್ ಮುಗಿದ ನಂತರ
- ವಿಕೆಟ್ ಬಿದ್ದ ನಂತರ
- ಬ್ಯಾಟರ್ ನಿವೃತ್ತಿಯಾದಾಗ

ಟಿ20 ಮಾದರಿಯ ವಿಭಿನ್ನ ಕ್ರಿಕೆಟ್ ಐಪಿಎಲ್
ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಜನರ ಮನದಲ್ಲಿ ಅಚ್ಚಳಿಯದಂತೆ ಕೂತಿದೆ. 2008ರಲ್ಲಿ ಶುರುವಾದಾಗಿನಿಂದಲೂ ಅತ್ಯಂತ ಜನಪ್ರಿಯ ಆಟ ಅನ್ನಿಸಿಕೊಂಡಿದೆ. ಇತ್ತೀಚಿನ ವರ್ಷಗಳಲ್ಲಿ ಇನ್ನೂ ಹೆಚ್ಚು ಪರಿಣಾಮ ಬೀರಿದೆ. ವಿದೇಶಗಳಲ್ಲಿ ನಡೆಸಲಾಗುವ ಟಿ20 ಲೀಗ್‌ಗಿಂತಲೂ ಹೆಚ್ಚು ಪ್ರಸಿದ್ಧತೆ ಪಡೆದು ನಿಂತಿದೆ. ಜಗತ್ತಿನಲ್ಲಿ ಹತ್ತಾರು ಕಡೆ ಹತ್ತಾರು ಹೆಸರುಗಳಲ್ಲಿ ಟಿ20 ಕೂಟಗಳು ನಡೆಯುತ್ತವೆ. ಆದರೆ ಐಪಿಎಲ್‌ಗಿದ್ದಷ್ಟು ಪ್ರಾಮುಖ್ಯತೆ ಮತ್ತು ಕ್ರೇಜ್ ಬೇರ್‍ಯಾವ ಪಂದ್ಯಾವಳಿಗೂ ಇಲ್ಲ.

ವಿಭಿನ್ನ ರೂಲ್ಸ್
ಐಪಿಎಲ್ ಅನ್ನು ವಿಭಿನ್ನ ನಿಯಮಗಳು ವಿಶೇಷಗೊಳಿಸಿದೆ. ಮೊದಲಿನ ಐಪಿಎಲ್ ನಿಂದಲೂ ಐಸಿಸಿ ಟಿ20 ಕ್ರಿಕೆಟ್‌ಗೂ ವಿಭಿನ್ನ ನಿಯಮಗಳನ್ನು ಅನುಸರಿಸುತ್ತಾ ಬಂದಿದೆ. ಹಾಗಿದ್ದರೆ ಹೊಸ ಮತ್ತು ಆಕರ್ಷಕ ನಿಯಮಗಳ್ಯಾವವು?

ಪ್ರಮುಖ ನಿಯಮಗಳು
- ಇಂಪ್ಯಾಕ್ಟ್ ಆಟಗಾರ ಬ್ಯಾಟಿಂಗ್, ಬೌಲಿಂಗ್ ಕೂಡ ಮಾಡಬಹುದು
- ಪೂರ್ಣ 4 ಓವರ್‌ಗಳ ಬೌಲಿಂಗ್ ಮಾಡಲು ಅರ್ಹ
- ಒಬ್ಬ ಆಟಗಾರ ಹೊರಗೆ ಹೋದ ಮೇಲೆ ಮತ್ತೆ ಬರುವುದಿಲ್ಲ
- ಒಂದೇ ತಂಡಕ್ಕೆ ಒಂದೇ ಇಂಪ್ಯಾಕ್ಟ್ ಪ್ಲೇಯರ್ ಅವಕಾಶ

ಟೈಮ್-ಔಟ್
ಪಂದ್ಯದ ನಡುವೆ ನಾಲ್ಕು ಟೈಮ್-ಔಟ್‌ಗಳನ್ನು ತೆಗೆದುಕೊಳ್ಳಲಾಗುತ್ತದೆ. ಒಂದು ಇನ್ನಿಂಗ್ಸ್‌ನಲ್ಲಿ ಒಂದು ಬ್ಯಾಟಿಂಗ್ ಮತ್ತು ಒಂದು ಬೌಲಿಂಗ್ ಟೈಮ್ ಔಟ್ ನೀಡಲಾಗುತ್ತೆ.

ಯಾವಾಗ ತೆಗೆದುಕೊಳ್ಳಬಹುದು?
- ಪವರ್‌ಪ್ಲೇ ಮುಗಿದ ನಂತರ
- 6-9ರ ಓವರ್ ಒಳಗಡೆ ಮೊದಲ ವಿರಾಮ
- 13ರಿಂದ 16ನೇ ಓವರ್ ಒಳಗಡೆ ಎರಡನೇ ವಿರಾಮ

ಗೆಲುವಿನ ಭರವಸೆಯಲ್ಲಿ ಆರ್‌ಸಿಬಿ

> ಹಾಲಿ ಚಾಂಪಿಯನ್ ಆಗಿ ಕಣಕ್ಕಿಳಿಯುತ್ತಿರುವುದು ಆಟಗಾರರಲ್ಲಿ ಉತ್ಸಾಹ ತುಂಬಿದೆ. ವಿರಾಟ್ ಕೊಹ್ಲಿ, ರಜತ್ ಪಾಟಿದಾರ್ ನಾಯಕತ್ವದಲ್ಲಿ ತಂಡ ಸಾಧಿಸಬೇಕಾದ್ದನ್ನು ಸಾಧಿಸಿ ತೋರಿಸಿದೆ. ನಾವು ಹೊಸ ಆರಂಭ ಪಡೆಯುವುದಕ್ಕೆ ಸಿದ್ಧ. ಬದಲಾವಣೆಯೊಂದಿಗೆ ಹೊಸ ಸವಾಲುಗಳನ್ನು ಎದುರಿಸಲು ಸಿದ್ಧ.
> — ಆ್ಯಂಡಿ ಫ್ಲವರ್, ಆರ್‌ಸಿಬಿ ಕೋಚ್

ಬೆಂಗಳೂರು: ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಬಲಿಷ್ಠ ಸನ್‌ರೈಸರ್ಸ್ ಹೈದರಾಬಾದ್ ಶನಿವಾರದಂದು ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ 19ನೇ ಆವೃತ್ತಿಯ ಉದ್ಘಾಟನಾ ಪಂದ್ಯದಲ್ಲಿ ಎದುರಾಗಲಿವೆ.

ಕಳೆದ ಕೂಟದಲ್ಲಿ ಅತ್ಯುತ್ತಮ ಪ್ರದರ್ಶನದೊಂದಿಗೆ ಟ್ರೋಫಿ ಗೆದ್ದುಕೊಂಡಿರುವ ಬೆಂಗಳೂರು ಹಾಗೂ ಲೀಗ್ ಹಂತದಲ್ಲಿ ಎಲ್ಲಿಲ್ಲದ ನಿರಾಸೆ ಅನುಭವಿಸಿರುವ ಹೈದರಾಬಾದ್ ಶುಭಾರಂಭ ಮಾಡುವುದಕ್ಕಾಗಿ ಎದುರು ನೋಡುತ್ತಿವೆ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಮೊದಲ ಪಂದ್ಯ ಆಯೋಜಿಸಲಿದೆ. ಹೈದರಾಬಾದ್ ಪ್ಯಾಟ್ ಕಮ್ಮಿನ್ಸ್ ಇಲ್ಲದೆ ಕಣಕ್ಕಿಳಿಯುತ್ತಿದೆ. ಇತ್ತ ಬೆಂಗಳೂರು 3 ವೇಗಿಗಳಿಲ್ಲದೆ ಮೈದಾನಕ್ಕಿಳಿಯುತ್ತಿದೆ. ಉಭಯ ತಂಡಗಳು ಬ್ಯಾಟಿಂಗ್ ಪಡೆಗಳನ್ನು ಹೊಂದಿರುವುದು ಕುತೂಹಲ ಮೂಡಿಸಿದೆ.

ಶೀಘ್ರ ಕಣಕ್ಕೆ ಜೋಶ್: ಹ್ಯಾಜೆಲ್‌ವುಡ್ ಬಗ್ಗೆ ಮಾಹಿತಿ ನೀಡುತ್ತಾ ಆ್ಯಂಡಿ, ಹ್ಯಾಜೆಲ್‌ವುಡ್ ತಂಡ ಸೇರಿಕೊಂಡಿದ್ದಾರೆ. ಸಂಪೂರ್ಣ ಫಿಟ್ ಆಗಿದ್ದಾರೆ. ಆರಂಭಿಕ ಸಮಯದಲ್ಲೇ ನಮ್ಮ ಕ್ಯಾಂಪ್ ಸೇರಿಕೊಂಡಿರುವುದು ಒಳ್ಳೆಯ ವಿಚಾರ. ಆದರೆ ಅವರು ನಾಳೆಯ ಪಂದ್ಯಕ್ಕೆ ಲಭ್ಯವಿರುವುದಿಲ್ಲ ಎಂದು ತಿಳಿಸಿದರು.

ಪಿಚ್: ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಪಿಚ್ ಸಿದ್ಧಗೊಂಡಿದೆ. ಅಭ್ಯಾಸದಲ್ಲಿ ಕಿಶನ್, ವಿರಾಟ್, ಪಡಿಕ್ಕಲ್, ರಜತ್ ಸೇರಿದಂತೆ ವಿವಿಧ ಬ್ಯಾಟಿಗರು ಗಗನದೆತ್ತರದ ಸಿಕ್ಸರ್‌ಗಳನ್ನು ಬಾರಿಸಿ ಮಿಂಚಿದರು. ಪಂದ್ಯದಲ್ಲೂ ಅದೇ ಫಲಿತಾಂಶ ಮೂಡಿ ಬರುವ ಸಾಧ್ಯತೆ ಇದೆ. ಮಳೆ ಸಾಧ್ಯತೆ ಕಮ್ಮಿಯಿದ್ದು, ಸ್ಪಿನ್ನರ್‌ಗಳು ಮುಖ್ಯ ಪಾತ್ರ ವಹಿಸಲು ಸಜ್ಜಾಗಿದ್ದಾರೆ.

ಪಂದ್ಯದ ವಿವರ:
ಯಾವಾಗ: ಶನಿವಾರ
ಎಲ್ಲಿ: ಬೆಂಗಳೂರು
ಸಮಯ: ಸಂಜೆ 7:30
ವೀಕ್ಷಣೆ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್





ಆರ್‌ಸಿಬಿಗೆ ಬೌಲಿಂಗ್ ಪಡೆ ಸವಾಲು
ತಂಡದಲ್ಲಿ ಹೊಸ ಬದಲಾವಣೆಗಳಾದರೂ ಶ್ರೀಲಂಕಾದ ತುಷಾರಾ ಬರದಿರುವುದು ಆರ್‌ಸಿಬಿಗೆ ಆರಂಭಿಕ ಪಂದ್ಯಗಳಲ್ಲಿ ಬಲವಾದ ಪೆಟ್ಟು ನೀಡಿದೆ. ಹ್ಯಾಜೆಲ್ವುಡ್ ಮೊದಲಿನ ಪಂದ್ಯಕ್ಕಿಲ್ಲ. ಯಶ್ ದಯಾಳ್ ಹೊರಬಿದ್ದಿದ್ದಾರೆ. ಈ ನಡುವೆ ತುಷಾರಾ ಕೂಡ ಶ್ರೀಲಂಕಾ ಕ್ರಿಕೆಟ್ ಸಂಸ್ಥೆಯಿಂದ ನಿರಾಕ್ಷೇಪಣಾ ಪತ್ರ ಪಡೆಯುವಲ್ಲಿ ವಿಫಲರಾಗಿದ್ದಾರೆ. ಈ ಬೆನ್ನಲ್ಲೇ ಬೌಲಿಂಗ್ ವಿಚಾರದಲ್ಲಿ ಬೆಂಗಳೂರು ಹಿನ್ನಡೆ ಅನುಭವಿಸಿದೆ. ತಂಡದಲ್ಲಿ ಜೋಕಬ್ ಡಫಿ, ಶೆಫರ್ಡ್, ಭುವನೇಶ್ವರ್ ಕುಮಾರ್ ಜತೆಗೆ ಮಂಗೇಶ್ ಯಾದವ್, ವೆಂಕಟೇಶ್ ಅಯ್ಯರ್ ಮತ್ತು ವೇಗದ ಬೌಲಿಂಗ್ ಮಾಡುವ ಡೆವಿಡ್ ಇದ್ದಾರೆ. ಸ್ಪಿನ್ ವಿಭಾಗದಲ್ಲಿ ಸುಯಶ್ ಮತ್ತು ಕೃಣಾಳ್ ಮಿಂಚಲು ಸಜ್ಜಾಗಿದ್ದಾರೆ.

ಹೈದರಾಬಾದ್ ತಂಡಕ್ಕೆ ಸವಾಲು
ಹೆಡ್, ಅಭಿಷೇಕ್, ಇಶಾನ್ ಕಿಶನ್, ಕ್ಲಾಸೆನ್ ಅಂತಹ ಆಟಗಾರರನ್ನು ಹೊಂದಿದರೂ ಹೈದರಾಬಾದ್ ಹಿನ್ನಡೆ ಅನುಭವಿಸಿದೆ. ಮುಖ್ಯವಾಗಿ ಈ ಹಿಂದೆ ನಡೆದಿರುವ ವಿಶ್ವಕಪ್ ಪಂದ್ಯಾವಳಿಯಲ್ಲಿ ಕಿಶನ್ ಬಿಟ್ಟರೆ ಇನ್ನುಳಿದ ಸ್ಫೋಟಕ ಬ್ಯಾಟಿಗರು ಅಷ್ಟೊಂದು ಪರಿಣಾಮಕಾರಿಯಾಗಿ ಆಡಿಲ್ಲ. ಅದಲ್ಲದೆ, ಬೌಲಿಂಗ್‌ನಲ್ಲಿ ಶಮಿ ಮತ್ತು ಕಮ್ಮಿನ್ಸ್ ಅವರಿಲ್ಲದೆ ಅಲ್ಪ ಸವಾಲು ಎದುರಿಸಲಿದೆ.

ಬಳ್ಳಾರಿಯಲ್ಲಿ ರಾಷ್ಟ್ರೀಯ ಕಬಡ್ಡಿ ಶಿಬಿರ

ಬಳ್ಳಾರಿ: ಅಮೆಚೂರ್ ಕಬಡ್ಡಿ ಫೆಡರೇಷನ್ ಆಫ್ ಇಂಡಿಯಾ, ಮಶಾಲ್ ಸ್ಪೋರ್ಟ್ಸ್‌ನ ಸಹಯೋಗದಲ್ಲಿ, ಬಳ್ಳಾರಿಯ ಇನ್‌ಸ್ಪೈರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್‌ನಲ್ಲಿ ಹೈ-ಪರ್ಫಾರ್ಮೆನ್ಸ್ ಶಕ್ತಿ ಮತ್ತು ಕಂಡೀಷನಿಂಗ್ ಶಿಬಿರವನ್ನು ಪ್ರಾರಂಭಿಸಿತು. ಶುಕ್ರವಾರವೇ ಶುರುವಾದ ಈ ಶಿಬಿರ ಏಪ್ರಿಲ್ 2ರವರೆಗೆ ನಡೆಯಲಿದೆ. ಶಿಬಿರವು ಭಾರತದ ಕಬಡ್ಡಿ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ಪ್ರಮುಖ ಹೆಜ್ಜೆಯಾಗಿದೆ.

ಈ ಉಪಕ್ರಮವು ಮಶಾಲ್ ಸ್ಪೋರ್ಟ್ಸ್ ಮತ್ತು ಕಬಡ್ಡಿ ಆಟಗಾರರ ಸಮಗ್ರ ಅಭಿವೃದ್ಧಿ ಮತ್ತು ಕಲ್ಯಾಣದತ್ತದ ಬದ್ಧತೆಯನ್ನು ಮತ್ತಷ್ಟು ಬಲಪಡಿಸುತ್ತದೆ. ಜೊತೆಗೆ, ಏಷ್ಯನ್ ಗೇಮ್ಸ್ ಸೇರಿದಂತೆ ಪ್ರಮುಖ ಅಂತಾರಾಷ್ಟ್ರೀಯ ಸ್ಪರ್ಧೆಗಳ ಮುನ್ನ ಭಾರತದಿಗಾಗಿ ಬಲಿಷ್ಠ ಪ್ರತಿಭೆಗಳ ಸರಪಳಿಯನ್ನು ನಿರ್ಮಿಸಲು ಸಹಕಾರಿಯಾಗುತ್ತದೆ.



ಅಮೆಚೂರ್ ಕಬಡ್ಡಿ ಫೆಡರೇಷನ್ ಆಫ್ ಇಂಡಿಯಾ ಅಧ್ಯಕ್ಷರಾದ ವಿಭೋರ್ ವಿನೀತ್ ಜೈನ್ ಮಾತನಾಡಿ, ಭಾರತದಲ್ಲಿ ಕಬಡ್ಡಿಯ ಮಟ್ಟವನ್ನು ಹೆಚ್ಚಿಸುವ ನಮ್ಮ ಪ್ರಯತ್ನಗಳಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ. ಮಶಾಲ್ ಸ್ಪೋರ್ಟ್ಸ್‌ನೊಂದಿಗೆ ಸಹಕರಿಸುವ ಮೂಲಕ, ನಮ್ಮ ಆಟಗಾರರಿಗೆ ಆಧುನಿಕ ತರಬೇತಿ ವಿಧಾನಗಳು, ವೈಜ್ಞಾನಿಕ ಬೆಂಬಲ ವ್ಯವಸ್ಥೆಗಳು ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಯಶಸ್ಸು ಸಾಧಿಸಲು ಅಗತ್ಯವಿರುವ ಹೈ-ಪರ್ಫಾರ್ಮೆನ್ಸ್ ವಾತಾವರಣವನ್ನು ಒದಗಿಸುತ್ತಿದ್ದೇವೆ ಎಂದರು.

ಜಾಫರ್ ಇಕ್ಬಾಲ್‌ಗೆ ಹಾಕಿ ಜೀವಮಾನ ಸಾಧನೆ ಪ್ರಶಸ್ತಿ


ಹೊಸದಿಲ್ಲಿ: ಹಾಕಿ ದಿಗ್ಗಜ ಜಾಫರ್ ಇಕ್ಬಾಲ್ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಗಿದೆ. ಮಿಡಲ್ ಫೀಲ್ಡರ್ ಹಾರ್ದಿಕ್ ಸಿಂಗ್ ಮತ್ತು ನವನೀತ್ ಕೌರ್ ಭಾರತದ ವಾರ್ಷಿಕ ಹಾಕಿ ಆಟಗಾರ ಎಂಬ ಪ್ರಶಸ್ತಿ



ಮಾಡಲಾಗಿದೆ. ಶುಕ್ರವಾರದಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ನೇತೃತ್ವದಲ್ಲಿ ಕಾರ್ಯಕ್ರಮವೊಂದು ನಡೆಯಿತು. ವರ್ಷದುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿದ ಆಟಗಾರರಿಗೆ ಈ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಮಹಿಳೆಯರ ತಂಡದ ನವನೀತ್ ಕೌರ್ ಹಾಗೂ ಪುರುಷರ ತಂಡದ ಹಾರ್ದಿಕ್ ಸಿಂಗ್ ಅವರಿಗೆ ವರ್ಷದ ಆಟಗಾರ ಪ್ರಶಸ್ತಿ ನೀಡಲಾಗಿದೆ. ಇದರ ಜೊತೆಗೆ 20 ಲಕ್ಷ ರೂ. ನಗದು ಬಹುಮಾನ ಕೂಡ ನೀಡಲಾಗಿದೆ. 1980ರ ಒಲಿಂಪಿಕ್ಸ್ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಜಾಫರ್ ಇಕ್ಬಾಲ್ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನಿಡಲಾಗಿದೆ. ಏಷ್ಯನ್ ಕಪ್‌ಗಳಲ್ಲೂ ಎರಡು ಬೆಳ್ಳಿ ಪದಕಗಳನ್ನು ಗೆದ್ದುಕೊಂಡ ತಂಡದ ಭಾಗವಾಗಿದ್ದ ಅವರನ್ನು ಗುರುತಿಸಿ ಪ್ರಶಸ್ತಿ ನೀಡಲಾಗಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5936

ಎಡದಿಂದ ಬಲಕ್ಕೆ
2.ತನ್ನ ತಾನೇ ಹೊಗಳಿಕೊಳ್ಳುವುದು (5)
5.ಸಂಗೀತಕ್ಕೆ ಮಾರುಹೋಗುವವನು (4)
6.ದೇವ-ದೇವತೆಗಳ ನೂರು ಹೆಸರುಗಳು (4)
7.ಈತ ತಂದೆಯ ತಮ್ಮ (2)
8.ಹಾರುವಿಕೆ-ಜಿಗಿತವಿದು (2)
10.ವಟವೃಕ್ಷವಿಲ್ಲಿ ತಿರುಗಿ ಕಾಣುತ್ತಿದೆ (2)
13.ತಲೆಕೆಳಗಾಗಿ ಇಟ್ಟ ಬಿದಿರಕೋಲು (2)
15.ಅಂಕುಡೊಂಕಾದ ಚಲನೆಯಿದು (4)
17.ಅರ-ಗಜ ಒಳಗೊಂಡ ಹೆಬ್ಬಾವು (4)
18.ಪ್ರಚಾರಕರೊಂದಿಗೆ ಬಂದ ಸೇವಕ (5)

ಮೇಲಿನಿಂದ ಕೆಳಕ್ಕೆ
1.ಮಾರನಿಗೆ ಕಂಡ ಹೂ ಕಟ್ಟಿ ಮಾರುವವ (4)
2.ಹತ್ತಿರದವರೊಂದಿಗೆ ಮಾಡುವ ಪರಾಮರ್ಶೆ (5)
3.ಆಕರ್ಷಣೆಯ ಸಮಾನಪದ (3)
4.ಕಬ್ಬಿನಿಂದ ಬೆಲ್ಲ ತಯಾರಿಸುವ ಸ್ಥಳ (4)
6.ಶಕ ಮೊದಲಿರುವ ವಸ್ತುವಿನ ಒಂದು ತುಂಡು (3)
9.ಆತ್ಮಸ್ನೇಹ ಹೊಂದಿದ ಹೆಣ್ಣು ಸಂಗಾತಿ (3)
11.ಜೀವಿಗಳ ಉಸಿರಾಟಕ್ಕೆ ಅಗತ್ಯ ಅನಿಲ (5)
12.ಒಂಬತ್ತು ದಿನ ಆಚರಿಸುವ ಹಬ್ಬ (4)
14.ಇದು ವೇದನೆಯ ಕೂಗು (4)
16.ವಿಘ್ನ ನಿವಾರಕ-ವಿನಾಯಕ (3)

5935 ಉತ್ತರ

ಎಡದಿಂದ ಬಲಕ್ಕೆ:
3.ಸುಶೀಲ 4.ರಹಿತ
5.ಸಾಗರ 6.ನಸುನಗು
8.ಸಮಾನ 10.ಸಕಲ
11.ವಕಾಲತ್ತು 14.ಕಲಾಪ
16.ಮಿಗಿಲು 17.ಕೌಶಿಕ

ಮೇಲಿನಿಂದ ಕೆಳಕ್ಕೆ:
1.ನಕಾರ 2.ಪತನ
3.ಸುಮನ 4.ರಸಾಯನ
7.ಗುಣಕ 9.ಮಾಧವ
10.ಸವಕಲು 12.ಕಾರಕ
13.ಸಮಿತ್ತು 15.ಪಠಣ

ಸಂಭ್ರಮದಿಂದ ರಾಮ ನವಮಿ ಆಚರಣೆ

ಹುಬ್ಬಳ್ಳಿ: ನಗರದಲ್ಲಿ ರಾಮ ನವಮಿಯನ್ನು ಶುಕ್ರವಾರ ಭಕ್ತಿ ಭಾವದಿಂದ ಆಚರಿಸಲಾಯಿತು. ಬೆಳಗ್ಗೆಯಿಂದ ಸಂಜೆ ವರೆಗೆ ಮಂದಿರಗಳಲ್ಲಿ ವಿಶೇಷ ಪೂಜೆ, ಹೋಮ ಮತ್ತಿತರ ಧಾರ್ಮಿಕ ಕಾರ್ಯಕ್ರಗಳು ಶ್ರದ್ಧಾ ಭಕ್ತಿಯಿಂದ ಜರುಗಿದವು.

ದೇವಸ್ಥಾನಗಳಿಗೆ ಭಕ್ತರು ಕುಟುಂಬ ಸಮೇತ ತೆರಳಿ ಪೂಜೆ ಸಲ್ಲಿಸಿ, ವಿಶೇಷ ಪ್ರಾರ್ಥನೆ ಸಲ್ಲಿಸಿದರು. ರಾಮ ನವಮಿ ಹಿನ್ನೆಲೆ ದೇವಸ್ಥಾನ, ಮಂದಿರಗಳನ್ನು ಸಿಂಗರಿಸಲಾಗಿತ್ತು. ಬ್ರಾಡ್ ವೇ, ಕೊಪ್ಪಿಕರ ರಸ್ತೆ, ಕೇಶ್ವಾಪುರ ದೇವಾಂಗಪೇಟೆ, ದಾಜೀಬಾನ್ ಪೇಟೆಗಳ ವಾಣಿಜ್ಯ ಕಟ್ಟಡಗಳಿಗೆ ಶ್ರೀರಾಮನ ಬೃಹತ್ ಬ್ಯಾನರ್ ಅಳವಡಿಸಲಾಗಿದೆ. ಹುಬ್ಬಳ್ಳಿಯ ಕಮರಿಪೇಟೆಯ ರಾಮಮಂದಿರದಲ್ಲಿ ದೇವರಿಗೆ ಆಕರ್ಷಕ ಅಲಂಕಾರ ಮಾಡಲಾಗಿತ್ತು. ತೊಟ್ಟಿಲ ಪೂಜೆಯಲ್ಲಿ ಭಕ್ತರು ಪಾಲ್ಗೊಂಡರು.

ದಾಜಿಬಾನ ಪೇಟೆಯ ಗೌಳಿಗಲ್ಲಿ ಎರಡನೇ ತಿರುವಿನಲ್ಲಿರುವ ರಾಮ ಮಂದಿರದಲ್ಲಿ ಭಜನೆ ನಡೆಯಿತು. ಹುಬ್ಬಳ್ಳಿಯ ಶಿರಡಿನಗರದಲ್ಲಿರುವ ಸಾಯಿ ಬಾಬಾಗೆ ಶ್ರೀರಾಮನ ಅಲಂಕಾರ ಮಾಡಲಾಗಿತ್ತು. ನಂತರ ಅನ್ನಪ್ರಸಾದ ವಿತರಣೆ ನಡೆದವು. ಬೀದಿ ಬೀದಿಗಳಲ್ಲಿ ರಿಕ್ಷಾ ನಿಲ್ದಾಣಗಳಲ್ಲಿ, ಪ್ರಮುಖ ವೃತ್ತಗಳಲ್ಲಿ ರಾಮನ ಭಾವಚಿತ್ರವಿಟ್ಟು ಹೂಮಾಲೆ ಹಾಕಿ ಪೂಜೆ ಸಲ್ಲಿಸಿ ಪ್ರಸಾದ ವಿತರಿಸಿದರು. ಯುವಕರು ಬೈಕ್‌ಗಳಿಗೆ ರಾಮ ಧ್ವಜ ಕಟ್ಟಿಕೊಂಡು ಪ್ರಮುಖ ರಸ್ತೆಗಳಲ್ಲಿ ಓಡಾಡಿದರು. ಮಹಿಳೆಯರು ದೇವಸ್ಥಾನಗಳಿಗೆ ಭೇಟಿ ನೀಡಿ ಶ್ರೀರಾಮ, ಲಕ್ಷ್ಮಣ ಹಾಗೂ ಸೀತಾ ದೇವಿಯ ತೊಟ್ಟಿಲದಲ್ಲಿ ಹಾಕಿ ತೂಗಿದರು.



ಸಹನಾಮೂರ್ತಿ ಶ್ರೀರಾಮ

ಹುಬ್ಬಳ್ಳಿ: ಇಲ್ಲಿಯ ಮಂಟೂರ ರಸ್ತೆ ಶಿವಶರಣ ಮೇದಾರ ಚನ್ನಯ್ಯ ಸಮಾಜ ವತಿಯಿಂದ ರಾಮ ನವಮಿ ಆಚರಿಸಲಾಯಿತು. ಮುಖಂಡರಾದ ಸುಭಾಸಿಂಗ ಜಮಾದಾರ ಮಾತನಾಡಿ, ರಾಮನ ಆದರ್ಶನಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಜೀವನದಲ್ಲಿ ಕಷ್ಟಗಳ ಸರಮಾಲೆ ಬಂದರು, ಸಹನೆಯಿಂದ ಎಲ್ಲವನ್ನೂ ಎದುರಿಸಿದ ಶ್ರೀರಾಮ ಎಂದರು. ದೇಶದಲ್ಲಿ ಎಲ್ಲರೂ ರಾಮಾಯಣವನ್ನು ಓದಿಲ್ಲ. ಆದರೂ ಶ್ರೀರಾಮ ಎಲ್ಲರಿಗೂ ಗೊತ್ತು. ಏಕೆಂದರೆ ಶ್ರೀರಾಮ ಭಾರತದ ಮನೆ, ಮನಗಳ ಅವಿಭಾಜ್ಯ ಅಂಗವಾಗಿದ್ದಾರೆ ಎಂದರು. ಈ ಸಂದರ್ಭದಲ್ಲಿ ರಮೇಶ ಕದಂ, ರಂಗನಾಯಕ ತಪೇಲಾ, ವೆಂಕಟೇಶ ಬಳ್ಳಾರಿ, ಮಹೇಶ ತಪೇಲಾ, ಶಿವಬಸಪ್ಪ ಶೆಟ್ಟರ, ಅನೂಪ ಬಿಜವಾಡ, ಪ್ರಶಾಂತ ಜಾಧವ, ಸತೀಶ ಶೇಜವಾಡಕರ, ಶಿವು ಮೆಣಸಿನಕಾಯಿ ಇದ್ದರು.

ಕಿರುಸುದ್ದಿ

ಮಾ.31ಕ್ಕೆ ಮಹಾವೀರ ಜಯಂತಿ

◆ಗದಗ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಭಗವಾನ್ ಮಹಾವೀರರ ಜಯಂತಿಯನ್ನು ಮಾ.31 ರಂದು ಬೆಳಗ್ಗೆ 11ಕ್ಕೆ ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಹಮ್ಮಿಕೊಳ್ಳಲಾಗಿದೆ. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಡಾ.ಶಿವರಾಜ ಎಸ್.ತಂಗಡಗಿ ಕಾರ್ಯಕ್ರಮದ ಉಪಸ್ಥಿತಿ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸರ್ಕಾರಿ ಮುಖ್ಯ ಸಚೇತಕ ಹಾಗೂ ವಿಧಾನ ಪರಿಷತ್ ಶಾಸಕ ಸಲೀಂ ಅಹ್ಮದ್, ಕರ್ನಾಟಕ ರಾಜ್ಯ ಖನಿಜ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜಿ.ಎಸ್.ಪಾಟೀಲ, ಸಂಸದರಾದ ಬಸವರಾಜ ಬೊಮ್ಮಾಯಿ, ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ, ಶಾಸಕರಾದ ಸಿ.ಸಿ.ಪಾಟೀಲ, ಡಾ.ಚಂದ್ರು ಲಮಾಣಿ, ವಿಧಾನ ಪರಿಷತ್ ಶಾಸಕ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ಗದಗ ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಚಿ ಆಗಮಿಸುವರು. ವಿಶೇಷ ಆಹ್ವಾನಿತರಾಗಿ ಯೋಜನೆ ಕಾರ್ಯಕ್ರಮ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಮಣದೀಪ್ ಚೌಧರಿ, ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಾನಕಿ ಕೆ.ಎಂ. ಆಗಮಿಸಲಿದ್ದಾರೆ. ಜಿಲ್ಲಾಧಿಕಾರಿ ಹಾಗೂ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಿ.ಎನ್.ಶ್ರೀಧರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಸವರಾಜ ಬಳ್ಳಾರಿ ತಿಳಿಸಿದ್ದಾರೆ.

ತೋಂಟದಾರ್ಯ ಜಾತ್ರೆ ವಾರಕ್ಕೆ ಸೀಮಿತವಾಗಲಿ



◆ಗದಗ: ತೋಂಟದಾರ್ಯ ಮಠದ ಜಾತ್ರೆ ಏ.1 ರಿಂದ 4ರವರೆಗೆ ನಡೆಯಲಿದ್ದು, ಆದರೆ ನಗರಸಭೆ ಜಾಗದಲ್ಲಿ ಈ ಜಾತ್ರೆ 65 ದಿನಗಳು ನಡೆಯುತ್ತದೆ. ಇದು ಒಂದು ವಾರಕ್ಕೆ ಸೀಮಿತವಾಗಿರಲಿ ಎಂದು ಹಿಂದೂ ವೀರಶೈವ ಲಿಂಗಾಯತ ಯುವ ವೇದಿಕೆ ರಾಜ್ಯ ಸಂಚಾಲಕ ರಾಜು ಖಾನಪ್ಪನವರ ಆಗ್ರಹಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಈ ಜಾತ್ರೆಗೆ ಹೊರ ರಾಜ್ಯದಿಂದ ವ್ಯಾಪಾರಕ್ಕೆ ಆಗಮಿಸುತ್ತಾರೆ. ಇವರು ಜಿಲ್ಲೆಯ ಉದ್ಯೋಗ ಕಸಿದುಕೊಂಡು ಹೋಗುತ್ತಾರೆ. ಬಟ್ಟೆ, ಶೂ, ಪಾತ್ರೆ ಸೇರಿದಂತೆ ಎಲ್ಲವನ್ನೂ ಮಾರಾಟ ಮಾಡಲಾಗುತ್ತದೆ. ಇದರಿಂದ ಸ್ಥಳೀಯ ವ್ಯಾಪಾರಸ್ಥರು ಬಾಡಿಗೆ ಅಂಗಡಿಗಳನ್ನು ಇಟ್ಟುಕೊಂಡು ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದರು.

ಜಾತ್ರಾ ಮಹೋತ್ಸವದ ಅಧ್ಯಕ್ಷರು ಲೆಕ್ಕ ಪತ್ರಗಳನ್ನು ಭಕ್ತರ ಮುಂದೆ ಇಡಬೇಕು. ಈಗಿರುವ ಅಧ್ಯಕ್ಷ ವಿನಾಯಕ ಮಾನ್ವಿ ಒಳ್ಳೆಯ ವ್ಯಕ್ತಿತ್ವವನ್ನು ಹೊಂದಿದ್ದು, ಅವರು ಪ್ರಸಕ್ತ ವರ್ಷದ ಲೆಕ್ಕವನ್ನು ಸಾರ್ವಜನಿಕರ ಮುಂದೆ ಇಡಲಿ. ಜಿಲ್ಲಾಧಿಕಾರಿಗಳು ನಗರಸಭೆ ಜಾಗದಲ್ಲಿ ನಡೆಯುತ್ತಿರುವ ಅನಧಿಕೃತ ವ್ಯಾಪಾರ ತಡೆಯಬೇಕು ಎಂದರು.

ಈ ವೇಳೆ ಮಹೇಶ್ ರೋಖಡೆ, ಶಿವಯೋಗಿ ಹಿರೇಮಠ, ಪಿ.ಎಸ್. ಕಾಳೆ, ಭರತ್ ಲದ್ದಿ, ವೆಂಕಟೇಶ್ ದೊಡ್ಡಮನಿ, ಸತೀಶ್ ಕುಂಬಾರ, ಶಿವು ಲದ್ದಿ, ವಿಶ್ವನಾಥ ಸಿರಿ ಇದ್ದರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜಿ ಶೇಂಗಾ	4969-7412
ಅಜವಾನ	7469-8819
ಅಲಸಂದಿಕಾಳು	5129-6509
ಕಡಲೆ	2897-5359
ಉದ್ದು	3277-3277
ಹವೀಜ	8669-8669
ಗೋವಿನಜೋಳ	1695-1695
ಹೆಸರು	512-6500
ಹುರಳಿ	601-4329
ಜೋಳ	1619-4465
ಸಾಸವಿ	4099-5252
ಕುಸಬಿ	4419-5252
ಸೂರ್ಯಕಾಂತಿ	5669-6319
ತೊಗರಿ	4344-4629
ಮಡಕಿ	10111-10111
ಗೋಧಿ	1612-5269



ನರಗುಂದ: ಯಾವಗಲ್ಲ ವಲಯದ ಕರಮುಡಿ ಕಾರ್ಯಕ್ಷೇತ್ರದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಕುಡಿಯುವ ನೀರಿನ ಕೆರೆಯ ಭೂಮಿಪೂಜೆ ಕಾರ್ಯಕ್ರಮವನ್ನು ಕೆರೆ ಸಮಿತಿ ಅಧ್ಯಕ್ಷ ರಾಮನಗೌಡ ಮೆಣಸಗಿ ಉದ್ಘಾಟಿಸಿದರು. ಎಂಜಿನಿಯರ್ ಸತೀಶ್, ತಾಲೂಕಿನ ಯೋಜನಾಧಿಕಾರಿ ಮಾಲತಿ ದಿನೇಶ್, ಜನಜಾಗೃತಿ ವೇದಿಕೆಯ ಯೋಜನಾಧಿಕಾರಿ ನಾಗೇಶ್ ಸೇರಿದಂತೆ ಇತರರಿದ್ದರು.

ಶ್ರೀರಾಮ ನವಮಿ: ಭಕ್ತಿ ಸಂಗೀತ ಕಾರ್ಯಕ್ರಮ

◆ನರಗುಂದ: ಸ್ಥಳೀಯ ಭಾರತೀಯ ಸಂಗೀತ ವಿದ್ಯಾಲಯದಲ್ಲಿ ಶ್ರೀರಾಮ ನವಮಿ ನಿಮಿತ್ತ ಪ್ರಾಚಾರ್ಯ ಪಂ.ಶ್ರೀನಿವಾಸ ಇನಾಮದಾರ ಅಧ್ಯಕ್ಷತೆಯಲ್ಲಿ ಭಕ್ತಿಯ ಸಂಗೀತ ಕಾರ್ಯಕ್ರಮ ನೆರವೇರಿತು. ಪಂ. ಶ್ರೀನಿವಾಸ ಇನಾಮದಾರ ಅವರು ಭಕ್ತಿ ಮೆ ಶಕ್ತಿ ಎಂಬ ಹಿಂದಿ ಪಾಠವನ್ನು ಉಲ್ಲೇಖಿಸುತ್ತಾ ರಾಮಾಯಣದಲ್ಲಿ ಸಮುದ್ರಕ್ಕೆ ಸೇತುವೆ ನಿರ್ಮಾಣ ಮಾಡುವಾಗ ಆಂಜನೇಯಸ್ವಾಮಿ ರಾಮ ಭಕ್ತಿಯಲ್ಲಿ ತಲ್ಲಿನನಾಗಿ ಕಲ್ಲುಗಳ ಮೇಲೆ ರಾಮ ಎಂದು ಬರೆಯಲು ನೀರಿನಲ್ಲಿ ಕಲ್ಲುಗಳು ತೇಲಲು ಪ್ರಾರಂಭಿಸಿದ ಭಕ್ತಿಯ ಶಕ್ತಿಯ ಕುರಿತು ವಿಶೇಷ ಮಾತನಾಡಿದರು. ನಂತರ ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತದ ಕಾಲಿಂಗಡಾ ರಾಗದಲ್ಲಿ ರಾಮ ನಾಮ ಭಜನೆ ಕರೊ ಎಂಬ ಶಾಸ್ತ್ರೀಯ ಗಾಯನ ಸಾಮೂಹಿಕ ಹಾಡಿಸಿ ರಾಮನಾಮ ಸ್ಮರಣೆ ಮಾಡಿಸಿದರು. ವಿದ್ಯಾಲಯದ ವಿದ್ಯಾರ್ಥಿಗಳಾದ ಮೇಘಾ ಗುಜಮಾಗಡಿ, ಅನ್ವಿತಾ ಆಡ್ಡಣಗಿ, ತನಿಷ್ಕಾ ತಡಸದ, ಆರೋಹಿ ಗುಜಮಾಗಡಿ, ಸಿರಿ ಬೆಂತೂರ, ಶಾಸ್ತ್ರೀಯ ಗಾಯನದಲ್ಲಿ ಬೂಪರಾಗ, ದುರ್ಗಾರಾಗ, ಪ್ರಸ್ತುತ ಪಡಿಸಿದರು. ಮಂಜುಳಾ ಮಿಕ್ಕಲ, ಮಾಣಿಕ್ಯ ಯರಗಟ್ಟಿ, ಸೃಷ್ಟಿ ಬೆಂತೂರ, ನಿತೀನ ಬಿ. ವಿವಿಧ ಗೀತ ಪ್ರಕಾರ ಹಾಡಿದರು. ಚೇತನ ಬಿ., ಧಮಾರ, ತರಾನಾ ಗೀತೆ ಹಾಡಿದರು. ಇವರೆಲ್ಲರಿಗೂ ಹಾರ್ಮೋನಿಯಂ ಸಾಥ್ ಪಂ. ಶ್ರೀನಿವಾಸ ಇನಾಮದಾರ ನೀಡಿದರು. ಮಹಾಮಂಗಲದೊಂದಿಗೆ ಕೊಸಂಬರಿ ಪಾನಕ ಪ್ರಸಾದ ವಿತರಿಸಲಾಯಿತು.



ನರಗುಂದ: ಸ್ಥಳೀಯ ಭಾರತೀಯ ಸಂಗೀತ ವಿದ್ಯಾಲಯದಲ್ಲಿ ಶ್ರೀರಾಮ ನವಮಿ ನಿಮಿತ್ತ ಪ್ರಾಚಾರ್ಯ ಪಂ.ಶ್ರೀನಿವಾಸ ಇನಾಮದಾರ ಅಧ್ಯಕ್ಷತೆಯಲ್ಲಿ ಭಕ್ತಿಯ ಸಂಗೀತ ಕಾರ್ಯಕ್ರಮ ನೆರವೇರಿತು.

ಜೈ ಶ್ರೀರಾಮ್ ಎಂದ ಭಕ್ತಗಣ



ರಾಮತಾರಕ ಹೋಮ

ದೇವಸ್ಥಾನ ಆವರಣದಲ್ಲಿ ರಾಮತಾರಕ ಹೋಮ ನೆರವೇರಿಸಲಾಯಿತು. ಮಂದಿರದ ಅರ್ಚಕರು ಹಾಗೂ ವಿಪ್ರ ಬಾಂಧವರು ಹೋಮದಲ್ಲಿ ಪಾಲ್ಗೊಂಡು, ವಿವಿಧಾನದ ಮೂಲಕ ಅಗ್ನಿಗೆ ಹವಿಸ್ಸು ಅರ್ಪಿಸಿದರು. ಬಳಿಕ ಭಕ್ತರಿಗೆ ತೀರ್ಥ ಪ್ರಸಾದ ವಿತರಿಸಲಾಯಿತು. ಹೋಮದ ಬಳಿಕ ತೊಟ್ಟಿಲೋತ್ಸವ ನಡೆಯಿತು. ದೇವಸ್ಥಾನ ಆವರಣದಲ್ಲಿ ಅಳವಡಿಸಿದ್ದ ತೊಟ್ಟಿಲಿಗೆ ಸುಮಂಗಲೆಯರು ಹೂವು-ಹಣ್ಣು ಅರ್ಪಿಸಿ ಕೃತಾರ್ಥರಾದರು.

- ಶ್ರೀರಾಮ ನವಮಿ ಸಂಭ್ರಮ
- ವಿಶೇಷ ಪೂಜೆ-ಪುನಸ್ಕಾರ
- ಹೋಮ-ಹವನ
- ತೊಟ್ಟಿಲೋತ್ಸವ
- ಭಜನೆ ರಾಮನವಮಿ ಪ್ರಯುಕ್ತ ದೇವಸ್ಥಾನಗಳಲ್ಲಿ ನಡೆದವು



◆ಗದಗ: ನಗರ ಸೇರಿದಂತೆ ಜಿಲ್ಲೆಯ ವಿವಿಧ ಶ್ರೀರಾಮ ಮಂದಿರಗಳಲ್ಲಿ ಶುಕ್ರವಾರ ಶ್ರೀರಾಮ ನವಮಿಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಬೆಟಗೇರಿ ಟರ್ನಲ್ ಪೇಟೆಯಲ್ಲಿರುವ ಶ್ರೀರಾಮ ಮಂದಿರ, ಕುಷ್ಟಗಿ ಚಾಳದಲ್ಲಿರುವ ಶ್ರೀರಾಮದೇವರ ಗುಡಿ, ಹಾತಲಗೇರಿ ನಾಕಾ ಬಳಿ ಇರುವ ಶಿರಡಿ ಸಾಯಿಬಾಬಾ ಮಂದಿರ ಸೇರಿದಂತೆ ಅವಳಿ ನಗರದಲ್ಲಿರುವ ಶ್ರೀರಾಮ ಮಂದಿರಗಳಲ್ಲಿ ಶ್ರೀರಾಮನವಮಿ ನಿಮಿತ್ತ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಶ್ರೀರಾಮನ ಬೆಳ್ಳಿ ತೊಟ್ಟಿಲು ಮೆರವಣಿಗೆ ಶ್ರೀಮಾರ್ಕಂಡೇಶ್ವರ ದೇವಸ್ಥಾನದಿಂದ ಟೆಂಗಿನಕಾಯಿ ಬಜಾರ್, ಪಿ.ಬಿ.ರೋಡ್, ಹೊಸಪೇಟೆ ಚೆಕ್ ಮೂಲಕ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮರಳಿ ಶ್ರೀರಾಮ ಮಂದಿರ ತಲುಪಿತು.

ಶ್ರೀಶಿರಡಿ ಸಾಯಿಬಾಬಾ ಮಂದಿರದಲ್ಲಿ ಬೆಳಗ್ಗೆ ಕಾಕಡಾರತಿ, ಮಂಗಲ ಸ್ನಾನ, ರುದ್ರಾಭಿಷೇಕ, ಪಂಚಾಮೃತ ಅಭಿಷೇಕ ಸಲ್ಲಿಸಿದ ನಂತರ ಸುಮಂಗಲೆಯರು ಶ್ರೀರಾಮ ತೊಟ್ಟಿಲು ಪೂಜೆ ಮಾಡಿ ಶ್ರೀರಾಮನನ್ನು ತೊಟ್ಟಿಲಿಗೆ ಹಾಕಿದರು. ಪಂಚಾರತಿ ನಂತರ ಅನ್ನ ಸಂತರ್ಪಣೆ, ಧೂಪಾರತಿ, ಸಂಜೆ ಭಜನೆ ಹಾಗೂ ಸಂಗೀತ ಸೇವೆ, ರಾತ್ರಿ ಪಾಲಕಿ ಸೇವೆ, ಶೇಜಾರತಿ ನಡೆಯಿತು. ನಗರದ ಕುಷ್ಟಗಿ ಚಾಳ್ ಹಾಗೂ ಬೆಟಗೇರಿಯ ಟರ್ನಲ್ ಪೇಟದಲ್ಲಿರುವ ರಾಮ ಮಂದಿರಗಳಲ್ಲಿ ಬೆಳಗ್ಗೆಯಿಂದಲೇ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ರಾಮ, ಲಕ್ಷ್ಮಣ, ಸೀತೆ, ಹನುಮಂತನ ವಿಗ್ರಹಗಳಿಗೆ ಅಭಿಷೇಕ ನೆರವೇರಿಸಲಾಯಿತು. ಹೂವು-ಹಣ್ಣುಗಳಿಂದ ವಿಶೇಷವಾಗಿ ವಿಗ್ರಹಗಳನ್ನು ಅಲಂಕಾರ ಮಾಡಲಾಗಿತ್ತು.

ಬೆಳಧಡಿಯಲ್ಲಿ ರಾಮಜನ್ಮೋತ್ಸವ

ತಾಲೂಕಿನ ಬೆಳಧಡಿಯ ಸದ್ಗುರು ಬ್ರಹ್ಮಾನಂದ ಮಹಾರಾಜರು ಬೆಳಧಡಿಕರ ಶ್ರೀರಾಮ ಮಂದಿರದಲ್ಲಿ ರಾಮಜನ್ಮೋತ್ಸವ ನಿಮಿತ್ತ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಶ್ರದ್ಧೆ ಭಕ್ತಿಯಿಂದ ಜರುಗಿತು. ರಾಮನವಮಿಯಂದು ಶ್ರೀರಾಮ ಜನ್ಮೋತ್ಸವ ಕಾರ್ಯಕ್ರಮ ಜರುಗುವುದು. ಬೆಳಗ್ಗೆ ವಿಶೇಷ ಪೂಜೆ ಮಾಡಲಾಯಿತು. ರಾಮಜನ್ಮೋತ್ಸವ ಅಂಗವಾಗಿ ಭಕ್ತರಿಗಾಗಿ ಪಾನಕ, ಪ್ರಸಾದ ವ್ಯವಸ್ಥೆ ಮಾಡಲಾಯಿತು. ವಿವಿಧ ಭಾಗಗಳಿಂದ ಭಕ್ತರು ಆಗಮಿಸಿ ದೇವರ ದರ್ಶನ ಪಡೆದರು. ದೇವಸ್ಥಾನದಲ್ಲಿ ರಾಮಜನ್ಮೋತ್ಸವ ನಿಮಿತ್ತ ಪಾರಾಯಣ, ಪುರಾಣ, ಕೀರ್ತನೆ, ವಾಹನ ಸೇವೆ ಮುಂತಾದ ಕಾರ್ಯಕ್ರಮಗಳು ಜರುಗಿದವು. ಭಕ್ತರು ಆಗಮಿಸಿ ಶ್ರೀಸೀತಾರಾಮಚಂದ್ರ ಹಾಗೂ ಸದ್ಗುರು ಬ್ರಹ್ಮಾನಂದರ ಕೃಪೆಗೆ ಪಾತ್ರರಾದರು.

ಶ್ರೀರಾಮನ ತೊಟ್ಟಿಲೋತ್ಸವ

◆ಲಕ್ಷ್ಮೇಶ್ವರ: ಪಟ್ಟಣದ ಶ್ರೀ ಶಂಕರಭಾರತಿಮಠದಲ್ಲಿ ಬ್ರಹ್ಮವೃಂದದ ಪರವಾಗಿ ಶುಕ್ರವಾರ ಶ್ರೀರಾಮ ನವಮಿ ನಿಮಿತ್ತ ಶ್ರೀರಾಮನ ತೊಟ್ಟಿಲೋತ್ಸವ ಕಾರ್ಯಕ್ರಮವನ್ನು ಶ್ರದ್ಧೆ ಭಕ್ತಿಯಿಂದ ಅದ್ದೂರಿಯಾಗಿ ನೆರವೇರಿಸಲಾಯಿತು.

ಶ್ರೀಮಠದಲ್ಲಿ ಸೇರಿದ್ದ ಸುಮಂಗಲೆಯರು ಶ್ರೀರಾಮ ಸ್ವರೂಪಿ ಮೂರ್ತಿಯನ್ನು ತೊಟ್ಟಿಲಲ್ಲಿ ಹಾಕಿ ಭಕ್ತಿಯಿಂದ ತೂಗಿ ರಾಮನಾಮದ ಭಕ್ತಿಗೀತೆ ಹಾಡಿದರು. ಶಂಕರಭಾರತಿಮಠದಲ್ಲಿ ಶ್ರೀರಾಮ ಜಯ ರಾಮ ಜಯ ಜಯ ರಾಮ ಜಪ ರಿಂಗಣಿಸಿತು.

ತಾಲೂಕು ಬ್ರಾಹ್ಮಣ ಸಮಾಜದ ಅಧ್ಯಕ್ಷ ಕೃಷ್ಣ ಕುಲಕರ್ಣಿ ಮತ್ತು ಬ್ರಹ್ಮವೃಂದದ ಅಧ್ಯಕ್ಷ ಗೋಪಾಲ ಪಡ್ನೀಸ್ ಮಾತನಾಡಿ, ಶ್ರೀರಾಮ ಎಲ್ಲರ ಬದುಕಿಗೂ ಆದರ್ಶ ಮತ್ತು ಪೂಜ್ಯನೀಯವಾಗಿದ್ದು , ಶ್ರೀರಾಮ ನಾಮ ಜಪದಿಂದ ಕಷ್ಟಗಳು ಪರಿಹಾರವಾಗಿ ಸುಖ-ನೆಮ್ಮದಿಯ ಬದುಕು ನಮ್ಮದಾಗುತ್ತದೆ ಎಂದರು.

ಬಳಿಕ ಸೇರಿದ್ದವರಿಗೆ ಪಾನಕ, ಕೋಸುಂಬರಿ, ಪ್ರಸಾದ ವಿತರಿಸಲಾಯಿತು. ಬ್ರಾಹ್ಮಣ ಸಮಾಜದ ಮುಖಂಡರಾದ ನಾರಾಯಣಭಟ್ ಪುರಾಣಿಕ, ಗುರುರಾಜ ಪಾಟೀಲಕುಲಕರ್ಣಿ, ಆರ್.ಎಚ್.ಕುಲಕರ್ಣಿ, ಎ.ಪಿ.ಕುಲಕರ್ಣಿ, ಅನಂತಭಟ್ ಪೂಜಾರ, ಚಿಕ್ಕರಸ ಪೂಜಾರ, ಗೋಪಾಲ ಕುಲಕರ್ಣಿ, ಡಿ.ಪಿ.ಹೇಮಾದ್ರಿ, ಅರವಿಂದ ದೇಶಪಾಂಡೆ, ದ್ಯಾವರಾಜ ಬೆಟಗೇರಿ, ವ್ಯಾಪಾರಿ, ನಾಗರಾಜ ಪೂಜಾರ, ಅನಿಲ ಕುಲಕರ್ಣಿ, ನೂರಾರು ಮಹಿಳೆಯರು, ಮಕ್ಕಳು ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

> **ಧರ್ಮ ಸಂಸ್ಥಾಪನೆಗಾಗಿ ಮರ್ಯಾದಾ ಪುರುಷೋತ್ತಮನಾಗಿ ಅವತಾರವೆತ್ತಿದ ಶ್ರೀರಾಮ ಸಾಕ್ಷಾತ್ ದೇವರೇ ಆಗಿದ್ದಾರೆ. ಶ್ರೀರಾಮನು ಕಾಲಾತೀತ, ಗುಣಾತೀತನಾಗಿದ್ದು ಶ್ರೀರಾಮನೇ ಮೂಲವಾಗಿರುವ ರಾಮಾಯಣದ ಪ್ರಸಂಗಗಳು ಬದುಕಿಗೆ ಆದರ್ಶವಾಗಿವೆ.**
>
> ■ ಕೃಷ್ಣಕುಲಕರ್ಣಿ , ತಾಲೂಕು ಬ್ರಾಹ್ಮಣ ಸಮಾಜದ ಅಧ್ಯಕ್ಷ ಮತ್ತು ಗೋಪಾಲ ಪಡ್ನೀಸ್, ಬ್ರಹ್ಮವೃಂದದ ಅಧ್ಯಕ್ಷ



ಕಾನೂನು ಅರಿವು ಹೊಂದಿದರೆ ರಕ್ಷಣೆ ಸಾಧ್ಯ

◆ಗದಗ: ಕಾನೂನು ಅರಿವು ಹೊಂದಿದಾಗಲೇ ವ್ಯಕ್ತಿಯ ಹಕ್ಕುಗಳಿಗೆ ನಿಜವಾದ ರಕ್ಷಣೆ ದೊರೆಯುತ್ತದೆ ಎಂದು ಹಿರಿಯ ದಿವಾಣಿ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಿ.ಎಸ್. ಶಿವನಗೌಡರ ಹೇಳಿದರು.

ಶಹರದ ಗಂಗಾಪೂರ ಪೇಟೆಯಲ್ಲಿ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಎಸ್.ಎ. ಮಾನ್ವಿ ಕಾನೂನು ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗಾಗಿ ಕಾನೂನು ನೆರವು ಸಾಕ್ಷರತೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪಿಟಿಸಿಎಲ್ ಕಾಯ್ದೆಯ ಉದ್ದೇಶ ಭೂಮಿ ಕಳೆದುಕೊಂಡ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿಗೆ ನ್ಯಾಯ ಒದಗಿಸುವುದಾಗಿದೆ. ಅನೇಕ ಸಂದರ್ಭಗಳಲ್ಲಿ ಅರಿವಿನ ಕೊರತೆಯಿಂದ ಜನರು ತಮ್ಮ ಹಕ್ಕುಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಈ ಕಾಯ್ದೆ ಮೂಲಕ ಅಂತಹ ಭೂಮಿಗಳನ್ನು ಮರುಪಡೆಯಲು ಅವಕಾಶವಿದೆ. ಪರಿಶಿಷ್ಟ ಜಾತಿ, ಪಂಗಡದವರಿಗೆ ಲಭ್ಯವಿರುವ ಕಾಯ್ದೆಗಳಿಂದ ಸಾಮಾಜಿಕ ಅನ್ಯಾಯ, ಹಿಂಸೆ ಹಾಗೂ ಭೇದಭಾವವನ್ನು ತಡೆಯಲು ಈ ಕಾಯ್ದೆ ಶಕ್ತಿಯುತ ಸಾಧನವಾಗಿದೆ. ಪರಿಶಿಷ್ಟ ವರ್ಗದ ಜನರ ಮೇಲೆ ನಡೆಯುವ ದೌರ್ಜನ್ಯಗಳಿಗೆ ಕಾನೂನು ಕಠಿಣ ಶಿಕ್ಷೆಯನ್ನು ವಿಧಿಸುತ್ತದೆ. ಆದರೆ ಈ ಕಾಯ್ದೆಗಳ ಬಗ್ಗೆ ಅರಿವು ಇಲ್ಲದಿದ್ದರೆ, ನ್ಯಾಯ ಪಡೆಯಲು ಸಾಧ್ಯವಾಗುವುದಿಲ್ಲ ಎಂದರು.

ವಕೀಲ ಗುರುರಾಜ ಗೌರಿ ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ತಮ್ಮ ಕಾನೂನು ಹಕ್ಕುಗಳನ್ನು ತಿಳಿದುಕೊಳ್ಳುವುದು ಅತ್ಯಂತ ಅಗತ್ಯವಿದೆ. ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಹಕ್ಕುಗಳನ್ನು ನೀಡಿದರೂ, ಅದರ ಪ್ರಯೋಜನವನ್ನು ಪಡೆಯಲು ಅರಿವು ಮುಖ್ಯವಾಗಿದೆ ಎಂದರು. ವಕೀಲ ಹಾಗೂ ಸಿಂಡಿಕೇಟ್ ಸದಸ್ಯ ಮೋಹನ ಭಜಂತ್ರಿ, ಅಂಬೇಡ್ಕರ್ ಅಧ್ಯಯನ ಕೇಂದ್ರದ ಸಂಚಾಲಕ ಎಸ್.ಎನ್. ಬಳ್ಳಾರಿ ಮಾತನಾಡಿದರು. ಎಸ್.ಎ.ಮಾನ್ವಿ ಕಾನೂನು ಕಾಲೇಜಿನ ಪ್ರಾಚಾರ್ಯ ಡಾ.ಸಂಜೀವ ಹುಲ್ಲೂರ ಅಧ್ಯಕ್ಷತೆ ವಹಿಸಿದ್ದರು. ಎಸ್.ಎ.ಮಾನ್ವಿ ಕಾನೂನು ಮಹಾವಿದ್ಯಾಲಯದ ಸ್ಥಾನಿಕ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಎಸ್.ಎ.ಮಾನ್ವಿ, ನಗರಸಭೆ ಸದಸ್ಯ ಕೃಷ್ಣಾ ಪರಾಪೂರ, ಸಹಾಯಕ ಪ್ರಾಧ್ಯಾಪಕ ಡಾ.ವಿಜಯ ಮುರದಂಡೆ, ಸಂಯೋಜಕ ಡಾ.ಜ್ಯೋತಿ ಸಿ.ವಿ. ಇದ್ದರು.



ಖಾಲಿ ಇರುವ ಮುಖ್ಯ ಶಿಕ್ಷಕರ ಹುದ್ದೆಗೆ ಸಹ ಶಿಕ್ಷಕರಿಗೆ ಬಡ್ತಿ ನೀಡಲು ಮನವಿ

◆ಗದಗ: ಜಿಲ್ಲೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಮುಖ್ಯ ಶಿಕ್ಷಕರ ಹುದ್ದೆಗೆ ಅರ್ಹ ಸಹ ಶಿಕ್ಷಕರಿಗೆ ಬಡ್ತಿ ನೀಡಿ ಆದೇಶ ನೀಡಬೇಕೆಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕದಿಂದ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ಮನವಿ ಸಲ್ಲಿಸಿದೆ.

ಜಿಲ್ಲೆಯಲ್ಲಿ ಖಾಲಿ ಇರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸಹ ಶಿಕ್ಷಕರ ಹುದ್ದೆಯಿಂದ ಪ್ರಧಾನ ಗುರುಗಳ ಹುದ್ದೆಗೆ ಬಡ್ತಿ ನೀಡಲು ಈಗಾಗಲೇ ಆಯುಕ್ತರಿಂದ ಆದೇಶವಾಗಿದ್ದು, ನೇಮಕಾತಿ ಪ್ರಾಧಿಕಾರವು ತಾವೇ ಆಗಿರುವುದರಿಂದ ಪ್ರಧಾನ ಗುರುಗಳ ಬಡ್ತಿ ಕೌನ್ಸಲಿಂಗ್‌ನ ವೇಳಾಪಟ್ಟಿಯನ್ನು ಬಿಡುಗಡೆ ಮಾಡುವ ಅಧಿಕಾರ ತಮಗೆ ಇರುವುದರಿಂದ 01-01-2026ಕ್ಕೆ ಇದ್ದಂತೆ ಜೇಷ್ಠತಾ ಪಟ್ಟಿಯನ್ನು ಬಿಡುಗಡೆ ಮಾಡಬೇಕೆಂದು ಸಂಘವು ಮನವಿಯಲ್ಲಿ ವಿನಂತಿಸಿದೆ.

ಮನವಿ ಸ್ವೀಕರಿಸಿದ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್.ಎಸ್.ಬುರಡಿ ಮಾತನಾಡಿ, ಶೀಘ್ರದಲ್ಲಿ ಈ ಕುರಿತು ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಜಿಲ್ಲಾ ಘಟಕದ ಅಧ್ಯಕ್ಷ ಹಿರೇಮಠ, ಪ್ರಧಾನ ಕಾರ್ಯದರ್ಶಿ ಮಹೇಶ ಕುರಿಯವರ,



ಉಪಾಧ್ಯಕ್ಷ ಎಂ.ವೈ. ಜಕ್ಕರಸಾನಿ, ಸಹ ಕಾರ್ಯದರ್ಶಿ ಮೋಹನ ಮೆಣಸಿನಕಾಯಿ, ಕೋಶಾಧ್ಯಕ್ಷ ಎ.ಕೆ.ವಂಟಿ, ಸಹಕಾರ್ಯದರ್ಶಿ ಹರ್ತಿ, ಗ್ರಾಮೀಣ ಅಧ್ಯಕ್ಷ ಎಸ್.ಆರ್.ಬಂಡಿ, ಪ್ರಧಾನ ಕಾರ್ಯದರ್ಶಿ ಎನ್.ಟಿ.ಪಾಟೀಲ, ಐ.ಡಿ.ಗಾಣಿಗೇರ, ಸಿ.ಕೆ.ಕೇಸರಿ, ಎಂ.ವೈ.ಮಲಕಶೆಟ್ಟಿ, ಕೆ.ಬಿ.ಕೊಣ್ಣೂರ, ಉಪಾಧ್ಯಕ್ಷ ಬಿ.ಬಿ.ಹಡಪದ, ಅಣ್ಣಿಗೇರಿ, ಆರ್.ಬಿ.ರಂಗಣ್ಣವರ, ಐ.ಕೆ.ಮೋಟಗಿ, ಬಿ.ಎಸ್.ತಮ್ಮನಗೌಡರ ಇದ್ದರು.

ಅರ್ಥಪೂರ್ಣ ಜಯಂತ್ಯುತ್ಸವ ಆಚರಣೆಗೆ ನಿರ್ಧಾರ: ಶಿಕ್ಷಣ ಸಾಧಕರಿಗೆ ಸನ್ಮಾನ

◆ರೋಣ: ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಹಸಿರು ಕ್ರಾಂತಿ ಹರಿಕಾರ ಡಾ. ಬಾಬು ಜಗಜೀವನರಾಮ್ ಅವರ ಜೀವನ ಚರಿತ್ರೆ ಕುರಿತು ಈ ಬಾರಿ ಏ.8 ರಂದು ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದ್ದು, 10 ಮತ್ತು 12ನೇ ತರಗತಿ ವಿದ್ಯಾರ್ಥಿಗಳು ಭಾಗವಹಿಸಬಹುದು ಎಂದು ತಾಪಂ ಇಒ ಚಂದ್ರಶೇಖರ ಕಂದಕೂರ ಹೇಳಿದರು.

ಅವರು ಶುಕ್ರವಾರ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಜರುಗಿದ ಡಾ. ಬಿ.ಆರ್.ಅಂಬೇಡ್ಕರ್ ಹಾಗೂ ಡಾ. ಬಾಬು ಜಗಜೀವನರಾಮ್ ಅವರ ಜನ್ಮದಿನಾಚರಣೆಯ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿ, ಏ.8ರಂದು ಪಟ್ಟಣದ ವಿ.ಎಫ್.ಪಾಟೀಲ ಶಾಲೆಯಲ್ಲಿ ಜರುಗುವ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ತಲಾ ಮೂವರಿಗೆ ಆಕರ್ಷಕ ಬಹುಮಾನಗಳನ್ನು ವಿತರಿಸಲಾಗುವುದು ಎಂದರು.

ತಹಶೀಲ್ದಾರ್ ನಾಗರಾಜ ಕೆ.ಮಾತನಾಡಿ, ಸಮಾಜದ ಹಿರಿಯರು ತಿಳಿಸಿದಂತೆ ಏ.14ರಂದು



ಮಹನೀಯರುಗಳು ಜನ್ಮ ದಿನಚಾರಣೆ ಆಚರಿಸಲು ಸಿದ್ಧರಿದ್ದು, ಸರ್ಕಾರದ ಆದೇಶದಂತೆ ಏ.5ರಂದು ಡಾ. ಬಾಬು ಜಗಜೀವನರಾಮ್ ಅವರ ಜನ್ಮ ದಿನಚಾರಣೆಯನ್ನು ಕಚೇರಿಯಲ್ಲಿ ಆಚರಿಸಲಾಗುವುದು. 10 ಮತ್ತು 12ನೇ ತರಗತಿಯಲ್ಲಿ ಉತ್ತಮ ಅಂಕಗಳನ್ನು ಪಡೆದಿರುವ ಸಮಾಜದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಗುವುದು. ನುರಿತ ಸಾಹಿತಿಗಳಿಂದ ಉಪನ್ಯಾಸ ಕಾರ್ಯಕ್ರಮ ನಡೆಯಲಿದೆ. ಏ.14ರಂದು ಬೆಳಗ್ಗೆ 9ಕ್ಕೆ ಸಿದ್ಧಾರೂಢ ಮಠದಿಂದ ಮೆರವಣಿಗೆ ಹೊರಡಲಿದ್ದು, ಅಲ್ಲಿ ಸಮಾಜದವರು ಸೇರಿದಂತೆ ಸಾರ್ವಜನಿಕರು ಭಾಗಿಯಾಗಿ ಮಹಾನ್ ಚೇತನಗಳ ಭವ್ಯ ಮೆರವಣಿಗೆಗೆ ವಿಶೇಷ ಮೆರಗು ನೀಡಬೇಕು ಎಂದ ಅವರು, ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಕಡ್ಡಾಯವಾಗಿ ಹಾಜರಿರಬೇಕು ಎಂದು ಸೂಚಿಸಿದರು.

ಸಿಪಿಐ ವಿಜಯಕುಮಾರ, ಸಮಾಜ ಕಲ್ಯಾಣ ಇಲಾಖೆಯ ಗೀತಾ ಆಲೂರ, ಪಿಎಸ್‌ಐ ಪ್ರಕಾಶ ಬಣಕಾರ, ಅಕ್ಷರದಾಸೋಹಾಧಿಕಾರಿ ಆರ್.ಎಲ್.ನಾಯಕ, ಎಂಆರ್‌ಬಿಸಿ ಇಇ ಜಗದೀಶ, ಸಂಜಯ ದೊಡ್ಡಮನಿ, ಸೋಮು ನಾಗರಾಜ, ಬಸವರಾಜ ತಳವಾರ, ದೇವಂದ್ರಪ್ಪ, ನಿಂಗಪ್ಪ ಸೇರಿದಂತೆ ವಿವಿದ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಕೃಷಿ ಜಮೀನಿನ ಪಹಣಿಗಳಲ್ಲಿ ಸರ್ಕಾರಿ ಹೆಸರು ಬದಲಿಸಲು ಆಗ್ರಹ

◆ನರಗುಂದ: ಗ್ರಾಮದಲ್ಲಿನ 156 ರೈತರುಗಳ 538 ಎಕರೆ ಇನಾಮ ಜಮೀನುಗಳನ್ನು ಮೂಲ ಸಾಗುವಳಿದಾರ ರೈತರುಗಳ ಹೆಸರಿಗೆ ನೋಂದಾಯಿಸುವಂತೆ ತಾಲೂಕಿನ ಕುರುಗೋವಿನಕೊಪ್ಪ ಗ್ರಾಮದ ರೈತ ಎಚ್.ಕೆ. ನೀಲರಡ್ಡಿ ಸರ್ಕಾರವನ್ನು ಆಗ್ರಹಿಸಿದರು.



ತಾಲೂಕಿನ ಕುರುಗೋವಿನಕೊಪ್ಪ ಗ್ರಾಮದ ರೈತರು ನರಗುಂದ ತಹಶೀಲ್ದಾರ್ ಹಾಗೂ ದಂಡಾಧಿಕಾರಿಗಳ ಕಾರ್ಯಾಲಯದಲ್ಲಿ ಶುಕ್ರವಾರ ತಹಶೀಲ್ದಾರ್‌ಗೆ ಮನವಿ ಅರ್ಪಿಸಿ ಮಾತನಾಡಿದರು. 2022-23ನೇ ಸಾಲಿನ ವರೆಗೆ 538 ಎಕರೆ ಜಮೀನುಗಳ ಪಹಣಿ ಪತ್ರಿಕೆಗಳಲ್ಲಿ ಹರದಿಕ್ಷೀತ ಬಾಹುದಿಕ್ಷೀತ ಇನಾಮದಾರ ಹಾಗೂ ವಗೈರೆ ಎಂದು ನಮೂದಾಗಿತ್ತು. ನಂತರ ಅದೇ ಸಾಲಿನಲ್ಲಿ ಸರ್ಕಾರದ ಆದೇಶದ ಮೇರೆಗೆ ಇನಾಮದಾರ ಹೆಸರು ಕಡಿಮೆಯಾಗಿ ಸರ್ಕಾರವೆಂದು ನಮೂದಾಗಿದೆ. ಸರ್ಕಾರದ ಹೆಸರನ್ನು ಕಡಿಮೆ ಮಾಡಿ, ಸಾಗುವಳಿದಾರರ ಹೆಸರುಗಳನ್ನು ಪಹಣಿ ಪತ್ರಿಕೆಗಳಲ್ಲಿ ಉಳಿಸಬೇಕೆಂದು ಗ್ರಾಮದ ರೈತರು ಒಂದೂವರೆ ದಶಕದಿಂದ ನಿರಂತರವಾಗಿ ಸರ್ಕಾರವನ್ನು ಒತ್ತಾಯಿಸುತ್ತಾ ಬಂದಿದ್ದರೂ ಇಲ್ಲಿಯವರೆಗೆ ರೈತರ ಬೇಡಿಕೆ ಈಡೇರಿಲ್ಲ ಎಂದು ಆರೋಪಿಸಿದರು. ಈ ಪಹಣಿಗಳಲ್ಲಿ 2022-23ನೇ ಸಾಲಿನಲ್ಲಿ ಸರ್ಕಾರ ಎಂದು ಹೆಸರು ನಮೂದಾಗಿರುವ ಕಾರಣ ಉಳುಮೆದಾರರಿಗೆ ಸರ್ಕಾರದಿಂದ ಬರುವಂತಹ ಬೆಳೆ ಪರಿಹಾರ, ಬೆಳೆ ವಿಮೆ, ಬ್ಯಾಂಕಿನಿಂದ ಕೃಷಿ ಸಾಲಗಳು, ಕೃಷಿ ಇಲಾಖೆಯ ಸೌಲಭ್ಯಗಳು ದೊರೆಯುತ್ತಿಲ್ಲ, ರೈತರಿಗೆ ಎಲ್ಲ ರೀತಿಯಿಂದ ಬಹಳ ತೊಂದರೆಯಾಗಿದೆ. ಕೃಷಿ ಜಮೀನಿನ ಪಹಣಿಗಳಲ್ಲಿ ಸರ್ಕಾರ ಹೆಸರನ್ನು ಬದಲಿಸಿ ನೇರವಾಗಿ ಸಾಗುವಳಿದಾರರಿಗೆ ಜಮೀನಿನ ಮಾಲೀಕತ್ವದ ಹಕ್ಕು ನೀಡಲು ಸರ್ಕಾರದಿಂದ ಆದೇಶ ಮಾಡಿಸಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಟಿ.ಆರ್.ಸತ್ತರಡ್ಡಿ, ವಿಜಯ ಕೋತಿನ, ಗೋವಿಂದಪ್ಪ ನೀಲರಡ್ಡಿ, ಗಿರಡ್ಡಿ ನೀಲರಡ್ಡಿ, ರಾಮಪ್ಪ ಕಮಕೇರಿ, ಯಂಕಪ್ಪ ನೀಲರಡ್ಡಿ, ಫಕೀರಪ್ಪ ರಂಕಲಕೊಪ್ಪ, ರಂಗಪ್ಪ ಬಾಲರಡ್ಡಿ, ಯಶವಂತ ಬಾಲರಡ್ಡಿ, ರಾಮಪ್ಪ ಸತ್ತರಡ್ಡಿ, ನಂದು ಸತ್ತರಡ್ಡಿ, ವೆಂಕರಡ್ಡಿ ನೀಲರಡ್ಡಿ, ಕನಕಪ್ಪ ಬಾಲರಡ್ಡಿ, ಬಸವರಾಜ ಹದ್ಲಿ, ಬಸವರಡ್ಡಿ ನೀಲರಡ್ಡಿ ಇತರರಿದ್ದರು.

ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ಮುಖ್ಯ: ಮ್ಯಾಕಲ್

◆ಗಜೇಂದ್ರಗಡ: ನಗರದ ಮೈಸೂರು ಮಠದಲ್ಲಿ ಬ್ರೈಟ್ ಬಿಗಿನಿಂಗ್ ಆಂಗ್ಲ ಮಾಧ್ಯಮ ಶಾಲೆಯ ಗ್ರ್ಯಾಜುವೇಷನ್ ಡೇ ಕಾರ್ಯಕ್ರಮವನ್ನು ಸಂಭ್ರಮದಿಂದ ಆಚರಿಸಲಾಯಿತು. ಸಿ.ಆರ್.ಪಿ ಆರ್.ಜಿ. ಮ್ಯಾಕಲ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಪ್ರಾಥಮಿಕ ಹಂತದಲ್ಲೇ ಉತ್ತಮ ಶಿಕ್ಷಣ ಮತ್ತು ಸಂಸ್ಕಾರಗಳು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ವಿದ್ಯಾರ್ಥಿಗಳು ಶಿಸ್ತು, ಪರಿಶ್ರಮ ಮತ್ತು ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬೇಕು ಎಂದರು.

ಸಂಸ್ಥೆಯ ಕಾರ್ಯದರ್ಶಿ ನಾಜೀಯಾ ಮುದಗಲ್ ಮಾತನಾಡಿ, ಪೂರ್ವ ಪ್ರಾಥಮಿಕ ಹಂತದಲ್ಲಿ ಮಕ್ಕಳ ಭವಿಷ್ಯದ ಅಡಗಿರುವ ನಿಟ್ಟಿನಲ್ಲಿ ಮಕ್ಕಳಿಗೆ ಪ್ರಾಯೋಗಿಕ ಜ್ಞಾನ ನೀಡುವಲ್ಲಿ ನಮ್ಮ ಸಂಸ್ಥೆಯು ಸದಾಕಾಲವೂ ಸಿದ್ಧವಿದೆ ಎಂದರು.

ಪುಟ್ಟ ಮಕ್ಕಳಿಗೆ ಗ್ರ್ಯಾಜುವೇಷನ್ ಕ್ಯಾಪ್ , ಸಮವಸ್ತ್ರ ಧರಿಸಿ ಹಾಗೂ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು, ಭಾಷಣಗಳು ಮನಸೂರೆಗೊಂಡವು. ಉತ್ತರ ವಲಯದ ಸಿ.ಆರ್.ಪಿ. ಕಾಲೇಶ ವನ್ನಾಲ, ಹಿನ್ನಲೆ ಗಾಯಕ ನಾಗರಾಜ ಹುಣಸಿಕಟ್ಟಿ, ಸಂಸ್ಥೆಯ ಅಧ್ಯಕ್ಷ ಸೀತಲ ಓಲೇಕಾರ, ಶಿಕ್ಷಕಿಯರಾದ ಅನುಷಾ ತಳವಾರ, ಎಚ್.ಎಚ್.ಮಾದರ, ಪರಿಚಾರಕಿಯರಾದ ಅಂಜುಮ ಹಂಪಿಹೊಳ್ಳಿ, ಮಂಜುಳಾ ಸುಂಕದ ಸಂಗಮೇಶ ರೇವಡಿ, ಶ್ರೀನಿವಾಸ ಕಾಮಾರ ಸೇರಿದಂತೆ ಇತರರಿದ್ದರು.



ಮೀನು ಮಾರಾಟಗಾರರಿಗೆ ಅನ್ಯ ಕಡೆ ವ್ಯವಸ್ಥೆ ಕಲ್ಪಿಸಲು ಒತ್ತಾಯ

◆ಲಕ್ಷ್ಮೇಶ್ವರ: ಪಟ್ಟಣದಲ್ಲಿ ದೊಡ್ಡ ಮತ್ತು ಪುರಾತನ ಕೆರೆಯಾಗಿರುವ ಇಟ್ಟಿ ಕೆರೆ ದಂಡೆಯ ಮೇಲೆ ನಿತ್ಯ ಮೀನುಗಳ ಮಾರಾಟ ನಡೆಯುತ್ತಿದ್ದು, ಇದೊಂದು ಮೀನು ಮಾರುಕಟ್ಟೆಯಾಗಿ ಮಾರ್ಪಟಾದಂತಾಗಿದೆ. ನಿತ್ಯ ಇಲ್ಲಿ ನೂರಾರು ಮೀನು ಮಾರಾಟಗಾರರು ಆಗಮಿಸಿ ವ್ಯಾಪಾರ ನಡೆಸುತ್ತಿದ್ದು ಇದನ್ನು ನಿಲ್ಲಿಸಿ ಅವರಿಗೆ ಬೇರೆ ಕಡೆಯಲ್ಲಿ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ ಜಿಲ್ಲಾಧ್ಯಕ್ಷ ಶರಣು ಗೋಡಿ, ತಾಲೂಕು ಅಧ್ಯಕ್ಷ ನಾಗೇಶ ಅಮರಾಪುರ ಆಗ್ರಹಿಸಿದರು.

ಶುಕ್ರವಾರ ಮುಂಜಾನೆಯಿಂದಲೇ ಮೀನು ಮಾರಾಟ ಪ್ರಾರಂಭವಾಗಿದ್ದು, ಸ್ಥಳಕ್ಕೆ ಆಗಮಿಸಿದ ಕರವೇ ಕಾರ್ಯಕರ್ತರು, ಮೀನು ಮಾರಾಟ ಮಾಡುವ ಹತ್ತಿರ ಈಶ್ವರ ಹಾಗೂ ಹುಲಿಗೆಮ್ಮ ದೇವಸ್ಥಾನ, ಇಂದಿರಾ ಕ್ಯಾಂಟೀನ್ ಪೊಲೀಸ್ ಠಾಣೆ, ಶಾಲಾ ಕಾಲೇಜು ಹಾಗೂ ಸಾರ್ವಜನಿಕರು ಅಡ್ಡಾಡುವ



ರಸ್ತೆಯಾಗಿದ್ದು ಇಲ್ಲಿ ನಿತ್ಯ ಮೀನು ಮಾರಾಟಗಾರರು ಮೀನು ಮಾರಾಟವಾದ ನಂತರ ತ್ಯಾಜ್ಯವನ್ನು ಕೆರೆಗೆ ರಸ್ತೆ ಮೇಲೆ ಬಿಸಾಡಿ ಹೋಗುವುದರಿಂದ ತ್ಯಾಜ್ಯವನ್ನು ಬೀದಿ ನಾಯಿಗಳು ತೆಗೆದುಕೊಂಡು ಹತ್ತಿರವಿರುವ ದೇವಸ್ಥಾನದಲ್ಲಿ ಹೋಗುತ್ತವೆ. ಪುರಸಭೆ ಇದನ್ನು ತಡೆದು ಮೀನು ಮಾರಾಟಗಾರರಿಗೆ ಬೇರೆ ವ್ಯವಸ್ಥೆ ಮಾಡಬೇಕು ಎಂದು ಆಗ್ರಹಿಸಿದರು. ಕೆರೆಯ ಸ್ವಚ್ಛತೆ ಕೈಗೊಳ್ಳಬೇಕಾದ ಪುರಸಭೆ ದರ ಬಗ್ಗೆ ಗಮನ ಹರಿಸುತ್ತಿಲ್ಲ, ಮೊದಲೇ ಮಳೆಗಾಲದ ಅವಧಿಯಲ್ಲಿ ತ್ಯಾಜ್ಯ, ಚರಂಡಿ ನೀರು ಇಟ್ಟಿಕೆರೆಗೆ ಸೇರಿ ಕಲುಷಿತಗೊಳ್ಳುತ್ತಿದ್ದು, ಇದೀಗ ಮೀನು ತ್ಯಾಜ್ಯದ ಗಲೀಜು ಸಹ ಕೆರೆಗೆ ಸೇರುವುದರಿಂದ ಕೆರೆ ಸಂಪೂರ್ಣವಾಗಿ ಕಲುಷಿತಗೊಳ್ಳುವಂತಾಗುತ್ತದೆ. ಅದಕ್ಕಾಗಿ ಪುರಸಭೆಯಿಂದ ಮೀನು ವ್ಯಾಪಾರ ಮಾಡಲು ಬೇರೆ ವ್ಯವಸ್ಥೆ ಮಾಡಬೇಕು. ಇಲ್ಲವಾದರೆ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು. ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆಯ ಕೈಸರಮಹಮದ ಅಲಿ, ಅಷ್ಫಾಕ್ ಬಾಗೋಡಿ ಇದ್ದರು.



ರಾಷ್ಟ್ರಜಾಗೃತಿಯನ್ನೇ ಕಾಯಕವನ್ನಾಗಿಸಿಕೊಂಡು ವಸ್ತು ನಿಷ್ಠ, ಪಾರದರ್ಶಕ ಸುದ್ದಿ ಸಮಾಚಾರದ ಮೂಲಕ ಮನೆ ಮಾತಾಗಿರುವ

ಹೊಸ ದಿಗಂತ

ಹುಬ್ಬಳ್ಳಿ ಆವೃತ್ತಿಯು 15ನೇ ವಾರ್ಷಿಕೋತ್ಸವದ ಸಂಭ್ರಮದಲ್ಲಿದ್ದು,

ಪತ್ರಿಕೆಯು ಇನ್ನೂ ಹೆಚ್ಚಿನ ಮಟ್ಟದಲ್ಲಿ ಬೆಳೆಯಲೆಂದು ಹಾರೈಸುತ್ತೇನೆ

ಯುವಕರಿಗೆ ಉದ್ಯಮಶೀಲತೆ ಬಗ್ಗೆ ಮಾರ್ಗದರ್ಶನ | ಹೊಸ ಉದ್ಯಮಗಳಿಗೆ ಪ್ರೋತ್ಸಾಹ

ಯುವಕರಿಗೆ ಮಾದರಿ ನವೋದ್ಯಮಿ

ಪ್ರದೀಪ ಸಾಲಗೇರಿ

▸ ಜಿ.ವಿ.ದೀಪಾವಳಿ

ಇಂದಿನ ಆಧುನಿಕತೆಯ ಜಗತ್ತಿನಲ್ಲಿ ಅದೆಷ್ಟೋ ಯುವಕರು ದಾರಿ ತಪ್ಪುವುದರ ಮೂಲಕ ತಂದೆ ತಾಯಿಗೆ, ಬಂಧು ಬಳಗಕ್ಕೆ ಅಷ್ಟೆಯಲ್ಲದೆ ಸಮಾಜಕ್ಕೆ ಶಾಪವಾಗಿ ಪರಿಣಮಿಸಿರುವ ಅದೆಷ್ಟೋ ಸನ್ನಿವೇಶಗಳನ್ನು ನಾವು ಕಂಡಿದ್ದೇವೆ. ಆದರೆ, ಇಲ್ಲೊಬ್ಬ ಬಡತನದಲ್ಲಿ ಬೆಳೆದು ಇದೀಗ ಸಮಾಜವೇ ಗುರುತಿಸುವಂತ ಸಮಾಜಮುಖಿ ಕೆಲಸದಲ್ಲಿ ತೊಡಗಿ ಯುವ ಉದ್ಯಮಿಯಾಗಿ ಬೆಳೆದಿರುವ ಪ್ರದೀಪ ಸಾಲಗೇರಿ ಅವರ ಪ್ರೇರಣಾದಾಯಕ ಕಥೆ ಇದು.



ಉಪಸಭಾಪತಿ ರುದ್ರಪ್ಪ ಲಮಾಣಿಯವರ ಆಪ್ತ ಶಿಷ್ಯ

ನಾನು ಪಟ್ಟಿರುವ ಕಷ್ಟ ನನಗೆ ಗೊತ್ತು. ನನ್ನ ತಂದೆ ತಾಯಿ ಬಡತನದಲ್ಲಿಯೇ ನನ್ನ ಜೀವನ ರೂಪಿಸಿದ್ದಾರೆ. ಇದೀಗ ನಾನು ಬ್ರಿಕ್ಸ್ ಉದ್ಯಮಿಯಾಗಿ ರಾಜಕೀಯದಲ್ಲಿ ಉಪಸಭಾಪತಿ ರುದ್ರಪ್ಪ ಲಮಾಣಿಯವರ ಆಪ್ತ ಶಿಷ್ಯನಾಗಿ ಸಮಾಜಕ್ಕೆ ನನ್ನ ಕೈಲಾದಷ್ಟು ನಾನು ಕೊಡುಗೆ ನೀಡಿದ್ದೇನೆ. ಎಲ್ಲರ ಪ್ರೀತಿ ವಿಶ್ವಾಸದಿಂದ ಮಾತ್ರ ನಾನು ರಾಜಕೀಯ ರಂಗದಲ್ಲೂ ಗುರುತಿಸಿಕೊಂಡಿದ್ದೇನೆ. ಮುಂದಿನ ದಿನಮಾನಗಳಲ್ಲಿ ಸಮಾಜ ಸೇವೆ ಮಾಡಲು ಸಿಕ್ಕ ಅವಕಾಶವನ್ನು ಸದುಪಯೋಗಪಡೆದುಕೊಂಡು ಮುನ್ನಡೆಯುತ್ತೇನೆ.

ಬ್ರಿಕ್ಸ್ ತಯಾರಿಸುವ ಸಾಹಸ

ಬಾಲ್ಯದಿಂದಲೂ ದುಡಿಬೇಕು, ಹಣ ಮಾಡಬೇಕು ಎಂಬ ಕನಸು ಹೊತ್ತಿದ್ದ ಪ್ರದೀಪ ಒಂದಿಲ್ಲೊಂದು ಕೆಲಸ ಕಾರ್ಯಗಳಿಗೆ ಕೈ ಹಾಕುತ್ತಲೇ ಇದ್ದರು. ಪ್ರಪ್ರಥಮ ಬಾರಿಗೆ ಸಿಮೆಂಟಿನ ಬ್ರಿಕ್ಸ್ ತಯಾರಿಸುವ ಸಾಹಸಕ್ಕೆ ಕೈ ಹಾಕಿ ಅಲ್ಲಿಂದ ಅವರ ಜೀವನದ ಪಯಣ ಯಶಸ್ಸಿನತ್ತ ಸಾಗಿದ್ದು ನಿಜಕ್ಕೂ ಶ್ಲಾಘನೀಯ.



ನಿರುದ್ಯೋಗಿಗಳಿಗೆ ಉದ್ಯೋಗ

ಸಣ್ಣ ಮಟ್ಟದಿಂದ ಆರಂಭಿಸಿ ದೊಡ್ಡ ಮಟ್ಟದ ಸಾಧನೆ ಮಾಡಬಹುದು ಎಂಬುದಕ್ಕೆ ಪ್ರದೀಪ ಸಾಲಗೇರಿಯವರೆ ಉತ್ತಮ ಉದಾಹರಣೆ. ಇದೀಗ ಗುತ್ತಲದಲ್ಲಿ ಅಭಿಷೇಕ ಸಿಮೆಂಟ್ ಬ್ರಿಕ್ಸ್, ನ್ಯೂ ಅಭಿಷೇಕ ಸಿಮೆಂಟ್ ಬ್ರಿಕ್ಸ್ ಮೈಲಾರ ರೋಡ್ ಗುತ್ತಲ, ಅಭಿಷೇಕ ಟ್ರಾನ್ಸ್‌ಪೋರ್ಟ್ ತೆರೆಯುವುದರ ಜೊತೆಗೆ ಟಿಪ್ಪರ್, ಕ್ಯಾಂಟರ್, ಟ್ರ್ಯಾಕ್ಟರ್ ಸೇರಿದಂತೆ ಒಟ್ಟು 8 ವಾಹನಗಳನ್ನು ಸದ್ಯ ಹೊಂದಿದ್ದಾರೆ. ಅಲ್ಲದೆ 30ಕ್ಕೂ ಅಧಿಕ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಿದ್ದಾರೆ.

ಹಲವಾರು ಶಿಕ್ಷಣ ಸಂಸ್ಥೆಗಳಲ್ಲಿ ಭಾಗಿಯಾಗಿದ್ದಾರೆ. ಉದ್ಯಮದ ಜೊತೆಗೆ ಸಮಾಜದ ಅಭಿವೃದ್ಧಿಗೂ ಅವರು ಮಹತ್ವ ನೀಡಿದ್ದಾರೆ. ಯುವಕರಿಗೆ ಉದ್ಯಮಶೀಲತೆ ಬಗ್ಗೆ ಮಾರ್ಗದರ್ಶನ ನೀಡುವುದು ಹೊಸ ಉದ್ಯಮಗಳನ್ನು ಪ್ರೋತ್ಸಾಹಿಸುವುದು ಇವರ ಪ್ರಮುಖ ಗುರಿಯಾಗಿದೆ ಆಸಕ್ತರು ಮೋ: 9742326946 ಸಂಪರ್ಕಿಸಬಹುದು.

ಕಡು ಬಡತನದಲ್ಲಿ ಜೀವನ

1984 ಜೂನ್ 30ರಂದು ಪ್ರದೀಪ ಸಾಲಗೇರಿ ಜನಿಸಿ, ಬಾಲ್ಯದಲ್ಲಿಯೇ ಹೋಟೆಲ್‌ನಲ್ಲಿ ಕೆಲಸ ಮಾಡುತ್ತ, ನಂತರ ದಿನಪತ್ರಿಕೆಗಳನ್ನು ಮನೆ ಬಾಗಿಲಿಗೆ ಹಾಕುತ್ತ ಅಂದು ಪೇಪರ್ ಮಾರುವ ಹುಡುಗನಾಗಿದ್ದ.

ನಂತರ ಬರು ಬರುತ್ತ ಅಂದು ಎಸ್‌ಟಿಡಿ ಬೂತ್ ಇಟ್ಟುಕೊಂಡು ತಂದೆ ತಾಯಿಯರಿಗೆ ಆದರ್ಶ ಮಗನಾಗಿ ಬೆಳೆದ. ನಂತರ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಗುತ್ತಲದ ಎಸ್‌ಆರ್ ಎಸ್ ಸ್ಕೂಲ್‌ನಲ್ಲಿ ಮುಗಿಸಿ ನಿರಂತರ ಕಲಿಕೆಯ ಜೊತೆಗೆ ಪತ್ರಿಕೋದ್ಯಮಿಯಾಗಿ ವರದಿಗಾರನಾಗಿ ಸಮಾಜದಲ್ಲಿ ತಮ್ಮನ್ನು ಗುರುತಿಸಿಕೊಳ್ಳುವಂತಹ ಆದರ್ಶ ವ್ಯಕ್ತಿಯಾಗಿ ಬೆಳೆದ ಕಥೆ ನಿಜಕ್ಕೂ ರೋಚಕ.

ನನಗೆ ಸ್ಫೂರ್ತಿ ತುಂಬಿದವರು

ನನ್ನ ಪ್ರತಿಯೊಂದು ಕೆಲಸ ಕಾರ್ಯಗಳಿಗೆ ನನ್ನ ತಂದೆ ತಾಯಿ ಹಾಗೂ ನನ್ನ ಮಡದಿ ವಿಜಯಾ ಸಾಲಗೇರಿ ಮತ್ತು ಆಪ್ತರು ಬಂಧ ಬಳಗ, ಗುರು ಹಿರಿಯರು, ಸ್ನೇಹಿತರು, ಯುವಕರು ಸಮಸ್ತ ಗುತ್ತಲ ಪಟ್ಟಣದ ನಾಗರಿಕರು ಮತ್ತು ಅಭಿಮಾನಿಗಳೇ ನನಗೆ ಸ್ಫೂರ್ತಿಯಾಗಿದ್ದಾರೆ ಎಂದು ಪ್ರದೀಪ ಸಾಲಗೇರಿ ಮನದಾಳದ ಮಾತನ್ನು ಹೊಸದಿಗಂತದೊಂದಿಗೆ ಹಂಚಿಕೊಂಡರು.



ಯುವಕರ ಕಣ್ಮಣಿ ಪ್ರದೀಪ ಸಾಲಗೇರಿ

ತಂದೆ ವಸಂತಪ್ಪ ತಾಯಿ ಪ್ರೇಮಾ ಸಾಲಗೇರಿ ಇವರಿಗೆ ಮೂರು ಜನ ಮಕ್ಕಳು. ಇಬ್ಬರು ಪುತ್ರಿಯರು ಏಕೈಕ ಪುತ್ರ ಪ್ರದೀಪ. ಕೇವಲ 2 ಎಕರೆ ಜಮೀನಿನಲ್ಲಿ ಜೀವನ ನಡೆಸುವುದೇ ಇವರಿಗೆ ಕಷ್ಟಕರವಾಗಿತ್ತು. ತಂದೆ ತಾಯಿ ಪರಿಶ್ರಮದಿಂದ ಅವರು ಹಾಕಿಕೊಟ್ಟ ಬುನಾದಿಯಿಂದ ಉತ್ತಮ ಸಂಸ್ಕಾರ ಸಂಸ್ಕೃತಿ ಮೈಗೂಡಿಸಿಕೊಂಡು ಪ್ರದೀಪ ಒಬ್ಬ ಪ್ರಜ್ಞಾವಂತ ಯುವಕನಾಗಿ ಸಮಾಜದಲ್ಲಿ ಹೊರ ಹೊಮ್ಮುತ್ತಾನೆ. ಅಷ್ಟೇಯಲ್ಲದೆ ಪ್ರತಿಯೊಂದು ಸಂಘಟನೆಗಳ ಮೂಲಕ ಯುವಕರ ಜೊತೆಗೂಡಿ ಸಮಾಜಮುಖಿ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಗುತ್ತಲ ಪಟ್ಟಣದ ಯುವಕರ ಕಣ್ಮಣಿಯಾಗಿದ್ದಾರೆ.

ಪ್ರದೀಪ ಸಾಲಗೇರಿ ಸಾಧನೆ ಯುವಕರಿಗೆ ಪ್ರೇರಣೆ

ವ್ಯಾಪಾರ ಉದ್ಯಮಶೀಲತೆ ಮತ್ತು ಸಾಮಾಜಿಕ ಸೇವೆಯ ಮೂಲಕ ಗುರುತಿಸಿಕೊಂಡಿದ್ದ ಪ್ರದೀಪ ಈಗ ಬ್ರಿಕ್ಸ್ ವೇದಿಕೆಯಲ್ಲಿ ಗುರುತಿಸಿಕೊಂಡು ಉದ್ಯಮಿಯಾಗಿ ಬೆಳೆಯುತ್ತಿದ್ದಾರೆ. ಪ್ರದೀಪ ಸಾಲಗೇರಿ ಸಾಮಾನ್ಯ ಕಡು ಬಡತನದ ಕುಟುಂಬದಲ್ಲಿ ಜನಿಸಿ ಬೆಳೆದ ಇವರು, ಬಾಲ್ಯದಲ್ಲಿಯೇ ಅವರಿಗೆ ವ್ಯಾಪಾರ ಮತ್ತು ಹೊಸ ಆಲೋಚನೆಗಳ ಬಗ್ಗೆ ಆಸಕ್ತಿ ಇತ್ತು. ಶಿಕ್ಷಣದ ಜೊತೆಗೆ ಸಮಾಜದಲ್ಲಿ ಬದಲಾವಣೆ ತರಬೇಕೆಂಬ ಕನಸು ಅವರನ್ನು ಉದ್ಯಮಶೀಲತೆಯ ದಾರಿಗೆ ಕರೆ ತಂದಿತು. ಉದ್ಯಮ ಜೀವನವನ್ನು ಪ್ರಾರಂಭದಲ್ಲಿ ಸಣ್ಣ ಮಟ್ಟದಲ್ಲಿ ಆರಂಭಿಸಿದರು. ಆದರೆ, ಅವರ ದೃಢ ಸಂಕಲ್ಪ, ಪರಿಶ್ರಮ ಮತ್ತು ಹೊಸ ಆಲೋಚನೆಗಳಿಂದ ಅವರು ಕ್ರಮೇಣ ದೊಡ್ಡಮಟ್ಟದ ಉದ್ಯಮಿಯಾಗಿ ಬೆಳೆದರು. ಪ್ರದೀಪ ಸಾಲಗೇರಿ ಅವರ ಸಾಧನೆ ಯುವಕರಿಗೆ ದೊಡ್ಡ ಪ್ರೇರಣೆಯಾಗಿದೆ.

- ನಿರುದ್ಯೋಗಿಗಳಿಗೆ ಉದ್ಯೋಗ
- ರಾಜಕೀಯ ಕ್ಷೇತ್ರದಲ್ಲೂ ಮುಂಚೂಣಿ
- ಸಮಾಜದ ಅಭಿವೃದ್ಧಿಗೂ ಆದ್ಯತೆ
- ಹೆಮ್ಮರವಾಗಿ ಬೆಳೆದ ಅವರ ಬ್ರಿಕ್ಸ್ ಉದ್ಯಮ
- ಸಮಾಜ ಸೇವೆಗೆ ಕೊಡುಗೆ ಅಪಾರ

ರಾಜಕೀಯದಲ್ಲೂ ಮುಂದು

ಪ್ರದೀಪ ಸಾಲಗೇರಿ ಇಟ್ಟ ಹೆಜ್ಜೆ ಯಾವತ್ತು ಯಶಸ್ಸಿನತ್ತ ಸಾಗುತ್ತಲೇ ಇರುತ್ತೆ. ಗ್ರಾಮ ಪಂಚಾಯ್ತಿಯ ಚುನಾವಣಾ ಸಂದರ್ಭದಲ್ಲಿಯೂ ಸಹ ಅವರ ದೊಡ್ಡಮ್ಮನವರನ್ನು ಸದಸ್ಯರನ್ನಾಗಿ ತನ್ನ ತಾಯಿಯನ್ನೂ ಸಹ ಪಟ್ಟಣ ಪಂಚಾಯ್ತಿಗೆ ಸದಸ್ಯರನ್ನಾಗಿ ಮಾಡುವಲ್ಲಿ ಯಶಸ್ವಿಯಾಗಿರುವ ಪ್ರದೀಪ ಅವರು ಸದ್ಯ ಈಗ ಪಟ್ಟಣ ಪಂಚಾಯ್ತಿಯ ಸ್ಥಾಯಿ ಸಮಿತಿ ಅಧ್ಯಕ್ಷರಾಗಿರುವುದು ನಿಜಕ್ಕೂ ರಾಜಕೀಯ ಕ್ಷೇತ್ರದಲ್ಲಿ ಮುಂದೊಂದು ದಿನ ಶಾಸಕರಾಗುವುದರಲ್ಲಿ ಸಂದೇಹವೇ ಇಲ್ಲ ಎನ್ನುತ್ತಾರೆ ಪ್ರದೀಪ ಸಾಲಗೇರಿಯ ಹಿತೈಷಿಗಳು.

ಒಟ್ಟಿನಲ್ಲಿ ಪ್ರದೀಪ ಸಾಲಗೇರಿ ಅವರ ಜೀವನ ಪಯಣ ಪರಿಶ್ರಮ. ದೃಢ ಸಂಕಲ್ಪ ಮತ್ತು ಕನಸುಗಳ ಸಂಕೇತವಾಗಿದೆ. ಭವಿಷ್ಯದಲ್ಲಿ ಅವರು ಇನ್ನಷ್ಟು ಸಾಧನೆ ಮಾಡಿ ದೇಶದ ಯುವ ಉದ್ಯಮಿಗಳಿಗೆ ಮಾದರಿಯಾಗುವುದರ ಮೂಲಕ ರಾಜಕೀಯ ಭವಿಷ್ಯ ಅತ್ಯುನ್ನತ ಸ್ಥಾನಕ್ಕೆ ಕೊಂಡೊಯ್ಯಲಿ ಎಂಬುವುದು ಅವರ ಅಭಿಮಾನಿಗಳ ಆಶಯವಾಗಿದೆ.







Hosadiganthа Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಏ.5ರಂದು ಸಾಮೂಹಿಕ ವಿವಾಹ

ಅಂಕೋಲಾ: ಶ್ರೀ ಕ್ಷೇತ್ರ, ಶೇಟಗೇರಿಯ ಶ್ರೀ ವರಮಹಾಗಣಪತಿ ದೇವಸ್ಥಾನದ 21ನೇ ವರ್ಧಂತಿ ಉತ್ಸವದ ಅಂಗವಾಗಿ ಸಾಮೂಹಿಕ ವಿವಾಹ ಕಾರ್ಯಕ್ರಮವು ಏ.5ರಂದು ಭಕ್ತಿಭಾವಪೂರ್ಣವಾಗಿ ನಡೆಯಲಿದೆ ಎಂದು ದೇವಸ್ಥಾನದ ಧರ್ಮದರ್ಶಿ ಅನುಪ ನಾರಾಯಣ ನಾಯಕ ತಿಳಿಸಿದ್ದಾರೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರ ಶೇಟಗೇರಿಯ ಶ್ರೀ ವರಮಹಾಗಣಪತಿ ದೇವಸ್ಥಾನದಲ್ಲಿ ಧರ್ಮದರ್ಶಿ ದಿವಂಗತ ನಾರಾಯಣ ನಾಯಕ ಅವರ ಉದಾತ್ತ ಕನಸಿನ ಫಲವಾಗಿ ಆರಂಭವಾದ ಸಾಮೂಹಿಕ ವಿವಾಹ ಕಾರ್ಯಕ್ರಮವು ಕಳೆದ ಹಲವು ವರ್ಷಗಳಿಂದ ಸಮಾಜಮುಖಿ ಕಾರ್ಯವಾಗಿ ನಿರಂತರವಾಗಿ ನಡೆದುಕೊಂಡು ಬಂದಿದೆ. ಈ ವರ್ಷವೂ ಕಾರ್ಯಕ್ರಮವನ್ನು ಇನ್ನಷ್ಟು ವೈಭವೋಪೇತವಾಗಿ ಹಾಗೂ ಸಾರ್ಥಕವಾಗಿ ಆಯೋಜಿಸಲಾಗುತ್ತಿದೆ ಎಂದು ಹೇಳಿದರು. ಆರ್ಥಿಕವಾಗಿ ಹಿಂದುಳಿದ ಹಾಗೂ ಆಸಕ್ತ ದಂಪತಿಗಳು ಈ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಮನವಿ ಮಾಡಿರುವ ಅನುಪ ನಾಯಕ ಅವರು ಈಗಾಗಲೇ ಹಲವು ಜೋಡಿಗಳು ಹೆಸರನ್ನು ನೊಂದಾಯಿಸಿಕೊಂಡಿದ್ದು, ಮತ್ತೆ ಆಸಕ್ತಿ ಉಳ್ಳವುಳ್ಳ ಜೋಡಿಗಳು ಏಪ್ರಿಲ್ 1ರೊಳಗಾಗಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳುವಂತೆ ಕೋರಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ: ಸಂಖ್ಯೆ 9060440440 ಸಂಪರ್ಕಿಸಬಹುದಾಗಿದೆ.

ಅಪಘಾತ: ದಿವ್ಯಾ ರಾಯ್ಕರ್ ಸಾವು

ಅಂಕೋಲಾ: ಪಟ್ಟಣದ ದಿನಕರ ದೇಸಾಯಿ ರಸ್ತೆ ಪಕ್ಕದ ನಿವಾಸಿ ದಿವ್ಯಾ ಸುನೀಲ ರಾಯ್ಕರ್(45) ಅವರು ಉಡುಪಿ ಸಮೀಪ ರಾಷ್ಟ್ರೀಯ ಹೆದ್ದಾರಿಯಲ್ಲಿ ಕ್ರೇನ್ ಬಡಿದು ಮೃತ ಪಟ್ಟ ಘಟನೆ ನಡೆದಿದೆ.



ಪಟ್ಟಣದ ಜೈ ಹಿಂದ್ ವಸತಿ ಗೃಹ ರಸ್ತೆಯಲ್ಲಿ ಗೀತಾಂಜಲಿ ಜ್ಯುವೆಲರಿ ಬಂಗಾರದ ಅಂಗಡಿ, ಮುಖ್ಯ ರಸ್ತೆಯಲ್ಲಿ ಸಂಜೀವಿನಿ ಮೆಡಿಕಲ್ ಔಷದಿ ಅಂಗಡಿ ಮೂಲಕ ಗುರುತಿಸಿಕೊಂಡಿರುವ ಸುನೀಲ ರಾಯ್ಕರ್ ಅವರ ಮಡದಿಯಾಗಿದ್ದ ದಿವ್ಯಾ ರಾಯ್ಕರ್ ಬಂಗಾರದ ಅಂಗಡಿಯ ವ್ಯವಹಾರದಲ್ಲಿ ತಮ್ಮ ಪತಿಗೆ ಜೊತೆ ನೀಡಿದ್ದರು. ಅನಾರೋಗ್ಯದ ಕಾರಣ ಮಂಗಳೂರಿನ ಆಸ್ಪತ್ರೆಯಲ್ಲಿ ದಾಖಲಾಗಿದ್ದ ತಮ್ಮ ಮಗಳನ್ನು ಡಿಸ್ಚಾರ್ಜ್ ಮಾಡಿ ಕರೆದುಕೊಂಡು ಬರುತ್ತಿದ್ದ ಸುನೀಲ ದಂಪತಿ ಉಡುಪಿಯ ಉದ್ಯಾವರ ಸಮೀಪದ ಗುಡೆಯಂಗಡಿಸಮೀಪ ಹೊಟೇಲ್ ಒಂದರ ಬಳಿ ಉಪಹಾರಕ್ಕೆಂದು ತಮ್ಮ ಕಾರು ನಿಲ್ಲಿಸಿ ಕೆಳಗಿಳಿದ ಸಂದರ್ಭದಲ್ಲಿ ಬ್ಯಾಟ್ ಖರೀದಿಸಲು ರಸ್ತೆಯ ಇನ್ನೊಂದು ಬದಿಗೆ ಹೋಗಲು ರಾಷ್ಟ್ರೀಯ ಹೆದ್ದಾರಿ ದಾಟುತ್ತಿದ್ದ ಸಂದರ್ಭದಲ್ಲಿ ವೇಗವಾಗಿ ಬಂದ ಕ್ರೇನ್ ದಿವ್ಯಾ ಅವರಿಗೆ ಬಡಿದಿದ್ದು, ತಕ್ಷಣ ಉಡುಪಿಯ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಅವರು ಮೃತ ಪಟ್ಟಿರುವುದಾಗಿ ತಿಳಿದುಬಂದಿದೆ. ಆಭರಣ ವರ್ತಕರು ತಮ್ಮ ಅಂಗಡಿಗಳನ್ನು ಬಂದ್ ಮಾಡಿ ಸಂತಾಪ ವ್ಯಕ್ತಪಡಿಸಿದರು. ಶುಕ್ರವಾರ ನೂರಾರು ಜನರು ಮೃತರ ಮನೆಗೆ ಭೇಟಿ ನೀಡಿ ಅಂತಿಮ ದರ್ಶನ ಪಡೆದರು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	57879	68200
ಬಿಳಿಗೋಟು	26011	40533
ಕೆಂಪುಗೋಟು	15199	37290
ಬೆಟ್ಟೆ	40099	51600
ರಾಶಿ	49399	54209
ಚಾಲಿ	44205	49099

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	70179	70179
ರಾಶಿ	49899	57380
ಬೆಟ್ಟೆ	36822	51399
ಕೆಂಪುಗೋಟು	22089	36306
ಬಿಳಿಗೋಟು	14089	41611
ಚಾಲಿ	38769	50199
ಕೋಕಾ	14812	34615
ಕಾಳುಮೆಣಸು	45011	71111



ಮುಂಡಗೋಡ: ರಾಮ ನವಮಿ ಅಂಗವಾಗಿ ತಾಲೂಕಾ ಶ್ರೀರಾಮ ಸೇನೆ ವತಿಯಿಂದ ಪಟ್ಟಣದ ಶಿವಾಜಿ ಸರ್ಕಲ್‌ನಲ್ಲಿ ಶುಕ್ರವಾರ ಶ್ರೀರಾಮ ಪ್ರಭು ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ, ಸಿಹಿ ಹಂಚಿದರು. ರಾಮಸೇನೆ ತಾಲೂಕಾ ಸಂಚಾಲಕ ಮಂಜು ಎಚ್ ಪಿ, ಹಿಂದೂ ಮುಖಂಡರಾದ ಪ್ರಕಾಶ ಬಡಿಗೇರ, ಶಂಕರ ಲಮಾಣಿ, ಫಣಿರಾಜ ಹದಳಗಿ, ಮಂಜುನಾಥ ಪಾಟೀಲ, ಸುರೇಶ ಕಲ್ಲೋಳ್ಳಿ, ಮಂಜುನಾಥ ಹಿರೇಮಠ, ಬಸವರಾಜ ಟನಿಖೆದಾರ, ಕುಮಾರ ತಳವಾರ, ಮಲ್ಲಿಕಾರ್ಜುನ ಗೌಳಿ, ರಾಘವೇಂದ್ರ ಶಿರಾಲಿ, ರವಿ ತಳವಾರ, ಶಿವು ಕೊರವರ, ನಾಗರಾಜ ಚವಡಳ್ಳಿ ಇದ್ದರು.

ಸರ್ಕಾರದ ನಿರ್ಲಕ್ಷ್ಯ ಖಂಡಿಸಿ ಏ.15ಕ್ಕೆ ಪ್ರತಿಭಟನೆ

ಶಿರಸಿ: ಮಳೆಮಾಪನಯಂತ್ರಗಳನಿರ್ವಹಣೆಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರತೋರುತ್ತಿರುವ ನಿರ್ಲಕ್ಷ್ಯದಿಂದ ಜಿಲ್ಲೆಯ ರೈತರ ಬೆಳೆ ವಿಮೆ ಮಂಜೂರಾತಿಗೆ ತೊಡಕಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಎಸ್.ಹೆಗಡೆ ಕರ್ಕಿ ಟೀಕಿಸಿದ್ದಾರೆ. ಇದನ್ನು ಖಂಡಿಸಿ ಏ.15 ಮತ್ತು 16ರಂದು ಜಿಲ್ಲೆಯ ಎಲ್ಲಾ ತಾಲೂಕು ತಹಶೀಲ್ದಾರ್ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಅವರು ಹೇಳಿದರು. ನಗರದ ದೀನದಯಾಳ ಸಭಾಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಪ್ರಯತ್ನದಿಂದ ಜಿಲ್ಲೆಗೆ 74 ಕೋಟಿ ರೂ. ಬೆಳೆ ವಿಮೆ ಮಂಜೂರಾಗಿದೆ. ಆದರೆ ಸರ್ಕಾರದ ನಿರ್ಲಕ್ಷ್ಯದಿಂದ ಮಳೆಯ ವಾಸ್ತವ ದಾಖಲೆಗಳು ಸಿಗುತ್ತಿಲ್ಲ, ಇದರಿಂದ ರೈತರಿಗೆ ಅನ್ಯಾಯವಾಗುತ್ತಿದೆ ಎಂದರು. ಸಂಕಷ್ಟದಲ್ಲಿರುವ ರೈತರಿಗೆ ಬೆಳೆ ವಿಮೆ ಪರಿಹಾರ ಮಂಜೂರಾಗಿದ್ದು, ಸೀಬರ್ಡ್ ಭೂಮಿ ನಿರಾಶ್ರಿತರಿಗೆ ಪರಿಹಾರ ಸಿಗುವ ಪ್ರಯತ್ನ ಆಗಿದೆ. ಇಷ್ಟೆಲ್ಲ ಇದ್ದರೂ ಕಾಂಗ್ರೆಸ್ ನಾಯಕರು ವೃಥಾ ಆರೋಪ ಮಾಡುವುದನ್ನು ಬಿಡುವುದು ಒಳಿತು ಎಂದರು. ಜಿಲ್ಲಾ ವಕ್ತಾರ ಸದಾನಂದ ಭಟ್ಟ ನಿಡಗೋಡ ಮಾತನಾಡಿ, ಬಿಪಿಎಲ್ ಕಾರ್ಡ್ ಮಾನದಂಡ ಬದಲಿಸಿ ಬಡವರ ಪಿಂಚಣಿ ಹಣ ಕಸಿಯಲು ಸರ್ಕಾರ ಮುಂದಾಗಿದೆ ಎಂದು ಆರೋಪಿಸಿದರು. ರೈತ ಮೋರ್ಚಾ ಜಿಲ್ಲಾಧ್ಯಕ್ಷ ಅನಂತಮೂರ್ತಿ ಹೆಗಡೆ, ಶಿರಸಿ ಮಂಡಳ ಅಧ್ಯಕ್ಷ ಆನಂದ ಸಾಲೇರ, ನಗರಸಭೆ ಮಾಜಿ ಉಪಾಧ್ಯಕ್ಷ ರಮಾಕಾಂತ ಭಟ್, ನಗರ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ನಂದನ ಸಾಗರ, ಕಚೇರಿ ಕಾರ್ಯದರ್ಶಿ ಶ್ರೀರಾಮ ನಾಯ್ಕ ಇದ್ದರು.



ಶಿರಸಿ:ನಗರದ ದೀನದಯಾಳ ಸಭಾಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಳೆ ಮಾಪನ ಯಂತ್ರಗಳ ನಿರ್ವಹಣೆಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ತೋರುತ್ತಿರುವ ನಿರ್ಲಕ್ಷ್ಯದಿಂದ ಜಿಲ್ಲೆಯ ರೈತರ ಬೆಳೆ ವಿಮೆ ಮಂಜೂರಾತಿಗೆ ತೊಡಕಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಎಸ್.ಹೆಗಡೆ ಕರ್ಕಿ ಟೀಕಿಸಿದ್ದಾರೆ.

ಸಾಮಾನ್ಯ ಸಭೆ | ಸುಷಮಾ ಗೋಡಬೋಲೆ ಸೂಚನೆ
ನೀರಿನ ಸಮಸ್ಯೆಯಾಗದಂತೆ ಕ್ರಮವಹಿಸಿ

ಕಾರವಾರ: ಜಿಲ್ಲೆಯಲ್ಲಿ ಪ್ರಸಕ್ತ ಬೇಸಿಗೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬರದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಜಿಪಂ ಆಡಳಿತಾಧಿಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸುಷಮಾ ಗೋಡಬೋಲೆ ಸೂಚಿಸಿದರು.

ಅವರು ಶುಕ್ರವಾರ ಜಿಪಂ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡು ಬರಬಹುದಾದ ಗ್ರಾಮಗಳ ಪಟ್ಟಿಯನ್ನು ಮುಂಚಿತವಾಗಿ ಸಿದ್ದಪಡಿಸಿಕೊಂಡು ಆ ಗ್ರಾಮಗಳಲ್ಲಿ ಖಾಸಗಿ ಬೋರ್‌ವೆಲ್ ಸೇರಿದಂತೆ ಪರ್ಯಾಯ ನೀರಿನ ವ್ಯವಸ್ಥೆಗೆ ಅಗತ್ಯ ಸಿದ್ದತೆಗಳನ್ನು ಕೈಗೊಳ್ಳುವಂತೆ ತಿಳಿಸಿದ ಅವರು ಜಿಲ್ಲೆಯಲ್ಲಿ ಹೊಸ ಬೋರ್‌ವೆಲ್ ಕೊರೆಯುವ ಸಂದರ್ಭದಲ್ಲಿ ಕಡ್ಡಾಯವಾಗಿ ವೈಜ್ಞಾನಿಕವಾಗಿ ಅಂತರ್ಜಲ ಮರುಪೂರಣ ವ್ಯವಸ್ಥೆ ಅಳವಡಿಸಿಕೊಂಡಲ್ಲಿ ಮಾತ್ರ ಅನುಮತಿಯನ್ನು ನೀಡುವಂತೆ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ದುಸ್ಥಿತಿಯಲ್ಲಿರುವ ಮಳೆಮಾಪನ ಯಂತ್ರಗಳು ದುರಸ್ಥಿ/ ಹೊಸದಾಗಿ ಅಳವಡಿಕೆಯಾಗುವವರೆಗೆ ಬೆಳೆ ವಿಮೆ ಪಾವತಿಗೆ ಈ ಹಿಂದಿನಂತೆ ಗ್ರಾಪಂಗಳಲ್ಲಿ ಅಳವಡಿಸಿರುವ ಮ್ಯಾನ್ಯುಯಲ್ ಗೇಜ್ ಯಂತ್ರಗಳ ಮಾಪನವನ್ನು ವಿಮಾ ಪರಿಹಾರದ ಮೊತ್ತ ಪಾವತಿಗೆ ಪರಿಗಣಿಸುವ ಕುರಿತಂತೆ ಜಿಲ್ಲೆಯ ತೋಟಗಾರಿಕಾ ಇಲಾಖೆ ಮೂಲಕ ಇಲಾಖೆಯ ಕೇಂದ್ರ ಕಚೇರಿಗೆ ಪತ್ರ ಬರೆಯುವಂತೆ ತಿಳಿಸಿದರು.

ಗ್ಯಾಸ್ ಸಿಲೆಂಡರ್ ಸಮಸ್ಯೆಯಿಂದ ಜಿಲ್ಲೆಯಲ್ಲಿ ಬಿಸಿಯೂಟ ಯೋಜನೆಗೆ ಯಾವುದೇ ಸಮಸ್ಯೆಯಾಗಿಲ್ಲವೆಂದು ಹಾಗೂ ಅಕ್ಷರ ದಾಸೋಹ ಸಿಬ್ಬಂದಿಗಳಿಗೆ ಇಡುಗಂಟು ಸೌಲಭ್ಯವನ್ನು ನೀಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.



> **ಜಿಲ್ಲೆಯಲ್ಲಿ ಅಂತರ್ಜಲ ವೃದ್ಧಿಗೆ ಹೆಚ್ಚಿನ ಆದ್ಯತೆ ನೀಡುವಂತೆ ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಸಣ್ಣ ನೀರಾವರಿ ಇಲಾಖೆ ಮತ್ತು ಕೃಷಿ ಇಲಾಖೆವತಿಯಿಂದ ನಿರ್ಮಿಸಿರುವ ನೀರು ಸಂಗ್ರಹ ಕಾಮಗಾರಿಗಳ ಸ್ಥಳಗಳನ್ನು ಮ್ಯಾಪಿಂಗ್ ಮಾಡುವಂತೆ ನಿರ್ದೇಶಿಸಿದರು.**
> ■ **ಸುಷಮಾ ಗೋಡಬೋಲೆ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ**

ಜಿಲ್ಲೆಯಲ್ಲಿ ಆರೋಗ್ಯ ಕೇಂದ್ರಗಳು ಮತ್ತು ಅಂಗನವಾಡಿಗಳ ಕಟ್ಟಡ ನಿರ್ಮಾಣದ ಬಾಕಿ ಇರುವ ಕಾಮಗಾರಿಗಳನ್ನು ನಿಗಧಿತ ಅವಧಿಯೊಳಗೆ ಮುಕ್ತಾಯಗೊಳಿಸುವಂತೆ ಸೂಚಿಸಿದ ಅವರು, ಆರೋಗ್ಯ ಇಲಾಖೆಯಲ್ಲಿ ಉತ್ತಮ ಗುಣಮಟ್ಟದ ವೈದ್ಯಕೀಯ ಪರಿಕರಗಳನ್ನು ಖರೀದಿಸುವಂತೆ ಮತ್ತು ಎಲ್ಲಾ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯ ಮೂಲಸೌಕರ್ಯ ಒದಗಿಸುವಂತೆ ಸೂಚಿಸಿದರು. ಜಲ ಜೀವನ್ ಮಿಷನ್ ಅಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳನ್ನು ಸಂಪೂರ್ಣವಾಗಿ ಮುಕ್ತಾಯಗೊಳಿಸುವಂತೆ ಸೂಚಿಸಿದರು. ಪ್ರಸಕ್ತ ಸಾಲಿನಲ್ಲಿ ಜಿಪಂ ಅಧೀನದ ಎಲ್ಲಾ ಇಲಾಖೆಗಳು ತಮಗೆ ನೀಡಿದ ಅನುದಾನವನ್ನು ಸಮರ್ಪಕವಾಗಿ ಮತ್ತು ಸಂಪೂರ್ಣವಾಗಿ ಬಳಕೆ ಮಾಡಿರುವ ಬಗ್ಗೆ ಮತ್ತು ಕೈಗೊಂಡಿರುವ ಕಾಮಗಾರಿಗಳ ಪ್ರಗತಿಯ ಬಗ್ಗೆ ವಿಸ್ತೃತವಾಗಿ ಚರ್ಚಿಸಿದರು.

ಸಭೆಯಲ್ಲಿ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಷ್ ಶಶಿ, ಜಿಪಂನ ಎಲ್ಲಾ ಶಾಖಾ ಮುಖ್ಯಸ್ಥರು ಮತ್ತು ಜಿಲ್ಲಾ ಮಟ್ಟದ ಇಲಾಖಾಧಿಕಾರಿಗಳು ಹಾಜರಿದ್ದರು.

ಅಧಿಕಾರಿಗಳಿಗೆ ಸೂಚನೆ

ಮುಂಡಗೋಡು ನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ವಂಚಿತ ವಿದ್ಯಾರ್ಥಿಗಳಿಗೆ ಪರೀಕ್ಷೆ-2 ರಲ್ಲಿ ಪರೀಕ್ಷೆ ಬರೆಯಲು ಅಗತ್ಯವಿರುವ ಎಲ್ಲಾ ರೀತಿಯ ನೆರವು ಮತ್ತು ಪ್ರೋತ್ಸಾಹ ನೀಡುವ ಮೂಲಕ ಮತ್ತೊಮ್ಮೆ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲು ಅಗತ್ಯವಿರುವ ಕ್ರಮ ಕೈಗೊಳ್ಳಬೇಕು ಹಾಗೂ ಅವರು ಪರೀಕ್ಷೆಗೆ ಹಾಜರಾಗುವಂತೆ ನೋಡಿಕೊಳ್ಳಿ ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ವಾಣಿಜ್ಯ ಬಂದರು ಯೋಜನೆ ಕೈ ಬಿಡಲು ಮನವಿ



ಅಂಕೋಲಾ: ತಾಲೂಕಿನ ಕೇಣಿಯಲ್ಲಿ ವಾಣಿಜ್ಯ ಬಂದರು ಯೋಜನೆಗೆ ಸ್ಥಳೀಯ ಸಾರ್ವಜನಿಕರ ವಿರೋಧವಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಯೋಜನೆಯನ್ನು ಕೈಬಿಡಲು ಸಂಬಂಧಿಸಿದ ಇಲಾಖೆಗೆ ಶಿಫಾರಸು ಮಾಡುವಂತೆ ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಮಾಜಿ ಸಚಿವ ಆನಂದ ಅಸ್ನೋಟಿಕರ್ ಅವರು ಮನವಿ ಸಲ್ಲಿಸಿದ್ದಾರೆ.

ದೆಹಲಿಯಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಅವರಿಗೆ ಭೇಟಿ ಮಾಡಿದ ಆನಂದ ಅಸ್ನೋಟಿಕರ್ ಕೇಣಿಯಲ್ಲಿ ಖಾಸಗಿಯವರ ಸಹಭಾಗಿತ್ವದ ವಾಣಿಜ್ಯ ಬಂದರು ನಿರ್ಮಾಣ ಯೋಜನೆಗೆ ಗುತ್ತಿಗೆ ನೀಡಿರುವುದಕ್ಕೆ ಸ್ಥಳೀಯ ಕೃಷಿಕರು, ಮೀನುಗಾರರು ಮತ್ತು ಸಾರ್ವಜನಿಕರ ವಿರೋಧವಿದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಕೇಣಿಯಲ್ಲಿ ವಾಣಿಜ್ಯ ಬಂದರು ನಿರ್ಮಾಣವಾದಲ್ಲಿ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಸಾಂಪ್ರದಾಯಿಕ ಮೀನುಗಾರಿಕೆ ಮತ್ತು ಕೃಷಿ ಚಟುವಟಿಕೆಗಳು ಸಂಪೂರ್ಣವಾಗಿ ನಶಿಸಿ ಹೋಗಲಿದ್ದು, ಸಮುದ್ರ ತೀರ ಮತ್ತು ಕೃಷಿ ಭೂಮಿಗಳು ವಾಣಿಜ್ಯ ಬಂದರು ಸಂಬಂಧಿತ ಉದ್ದೇಶಗಳಿಗೆ ಬಳಸಿಕೊಳ್ಳುವುದರಿಂದ ಅದನ್ನೇ ನಂಬಿ ಜೀವನ ನಡೆಸುವವರು ತಮ್ಮ ದೈನಂದಿನ ಉದ್ಯೋಗ ಕಳೆದುಕೊಂಡು ನಿರ್ಗತಿಕರಾಗಲಿದ್ದಾರೆ ಆದಾಯದ ಮೂಲವಿಲ್ಲದೆ ಜೀವನ ನಡೆಸುವುದು ಕಷ್ಟಕರವಾಗಲಿದೆ, ಬೀದಿ ಪಾಲಾಗಲಿದ್ದಾರೆ ಎಂದು ಮನವಿಯಲ್ಲಿ ತಿಳಿಸಲಾಗಿದೆ. ವಾಣಿಜ್ಯ ಬಂದರು ನಿರ್ಮಾಣ ಯೋಜನೆಯಿಂದ ರಾಸಾಯನಿಕ ವಸ್ತುಗಳ ಆಮದು ರಫ್ತು ನಡೆಯಲಿದ್ದು, ಸುತ್ತ ಮುತ್ತಲಿನ ಸಾರ್ವಜನಿಕರ ಜೀವಕ್ಕೆ ಅಪಾಯವಿದೆ ಎಂದು ಆನಂದ ಅಸ್ನೋಟಿಕರ್ ಕೇಂದ್ರ ಕೈಗಾರಿಕಾ ಸಚಿವರಿಗೆ ಸಲ್ಲಿಸಿರುವ ಮನವಿಯಲ್ಲಿ ಉಲ್ಲೇಖಿಸಿದ್ದಾರೆ. ಉಕ ಜಿಲ್ಲೆಯ ಬೃಹತ್ ಯೋಜನೆಗಳಾದ ಕೈಗಾ ಅಣುಸ್ಥಾವರ ಮತ್ತು ನೌಕಾನೆಲೆ ಯೋಜನೆಯಲ್ಲಿ ಸ್ಥಳೀಯ ಜನರಿಗೆ ಹೆಚ್ಚಿನ ಉದ್ಯೋಗ ಸಿಗುವಂತಾಗಬೇಕು ಉದ್ಯೋಗ ಸಂಬಂಧಿಸಿದ ಪರೀಕ್ಷೆಗಳು ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ನಡೆಯುವಂತಾಗಬೇಕು ಎಂದು ಮಾಜಿ ಸಚಿವ ಆನಂದ ಅಸ್ನೋಟಿಕರ್ ಕೇಂದ್ರ ಸಚಿವ ಕುಮಾರ ಸ್ವಾಮಿಯವರಿಗೆ ಪ್ರತ್ಯೇಕ ಮನವಿ ಸಲ್ಲಿಸಿದ್ದು, ಸ್ಥಳೀಯ ಜನರು ಯೋಜನೆಗಳಿಂದ ನಿರಾಶ್ರಿತರಾದರೂ, ಜಮೀನು ಮನೆಗಳನ್ನು ಕಳೆದುಕೊಂಡು ನಿರ್ಗತಿಕರಾದರೂ, ಯೋಜನೆಗಳಲ್ಲಿ ಸ್ಥಳೀಯ ಜನರಿಗೆ ಉದ್ಯೋಗ ಸಿಗುತ್ತಿಲ್ಲ ಹೊರ ರಾಜ್ಯಗಳ ಜನರಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುತ್ತಿದೆ ಎಂದು ಆರೋಪಿಸಿದ್ದುಸ್ಥಳೀಯಯುವಜನರಿಗೆ ಯೋಜನೆಗಳಲ್ಲಿ ಉದ್ಯೋಗ ಸಿಗಬೇಕು ಎಂದು ಆಗ್ರಹಿಸಿದ್ದಾರೆ.

ಅಂಬೇಡ್ಕರ್ ಜಯಂತಿ: ಪೂರ್ವಭಾವಿ ಸಭೆ



ಯಲ್ಲಾಪುರ: ಪಟ್ಟಣದ ತಾಪ ಆವರಣದ ಗಾಂಧಿ ಕುಟೀರದಲ್ಲಿ ಏ.14 ರಂದು ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಆಚರಿಸಲಾಗುತ್ತದೆ. ಈ ಕಾರ್ಯಕ್ರಮದಲ್ಲಿ ಡಾ.ಬಾಬು ಜಗಜೀವನ ರಾಮ್ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಗಳಿಗೆ ಮಾಲಾರ್ಪಣೆ, ಪುಷ್ಪ ನಮನ ಮತ್ತು ಪೂಜೆ ಸಲ್ಲಿಸಿ, ಭಾವಚಿತ್ರಗಳನ್ನು ತೆರೆದ ವಾಹನದಲ್ಲಿ ನಗರದ ಪ್ರಮುಖ ರಸ್ತೆಗಳಲ್ಲಿ ವಿವಿಧ ವಾದ್ಯ ತಂಡದೊಂದಿಗೆ ಮೆರವಣಿಗೆ ಸಾಗಿಬಂದು ಗಾಂಧಿಕುಟೀರದಲ್ಲಿ ಮುಕ್ತಾಯಗೊಳ್ಳಲಿದೆ. ನಂತರ ಸಭಾ ಕಾರ್ಯಕ್ರಮ ನಡೆಯಲಿದೆ ಎಂದು ತಹಶೀಲ್ದಾರ್ ಚಂದ್ರಶೇಖರ ಹೊಸಮನಿ ಹೇಳಿದರು.

ಅವರು ಶುಕ್ರವಾರ ತಾಲೂಕಾಡಳಿತ ಕಚೇರಿ ಸಭಾಂಗಣದಲ್ಲಿ ನಡೆದ ಡಾ.ಬಾಬು ಜಗಜೀವನ ರಾಮ್ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ ಕುರಿತ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಡಾ.ಬಾಬು ಜಗಜೀವನ ರಾಮ್ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಅವರ ಕುರಿತು ವಿಶೇಷ ಉಪನ್ಯಾಸ , ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅಧಿಕ ಅಂಕಗಳಿಸಿದ ಹಾಗೂ ಗಮನಾರ್ಹ ಸಾಧನೆ ಮಾಡಿದ ಪ.ಜಾತಿ ಮತ್ತು ಪ.ಪಂಗಡದ ಪ್ರತಿಭಾನ್ವಿತರಿಗೆ, ಕ್ರೀಡಾಪಟುಗಳಿಗೆ ಸನ್ಮಾನ ಆಯೋಜಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ತಾಪಂ ಕಾರ್ಯ ನಿವರ್ಯಹಣಾಧಿಕಾರಿ ರಾಜೇಶ ಧನವಾಡಕರ್, ಪಪಂ ಮುಖ್ಯಾಧಿಕಾರಿ ಕೇಶವ ಚೌಗಲೆ, ಗ್ರೇಡ-2ತಹಶೀಲ್ದಾರ್ ಸಿ ಜಿ ನಾಯ್ಕ, ಕ್ಷೇತ್ರಶಿಕ್ಷಣಾಧಿಕಾರಿ ರೇಖಾ ನಾಯ್ಕ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ದಾಕ್ಷಾಯಣಿ ನಾಯ್ಕ, ಜ್ಯೋತಿ ನರೊಟ್ಟಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.



ಸಿದ್ದಾಪುರ: ಸ್ಥಳೀಯ ಎಂ.ಜಿ.ಸಿ ಕಲಾ, ವಾಣಿಜ್ಯ ಹಾಗೂ ಗಣೇಶ ಹೆಗಡೆ ದೊಡ್ಮನೆ ವಿಜ್ಞಾನ ಮಹಾವಿದ್ಯಾಲಯದಲ್ಲಿ ಪರಂಪರಾ ದಿನಾಚರಣೆ ಆಚರಿಸಲಾಯಿತು. ಶಿಕ್ಷಣ ಪ್ರಸಾರಕ ಸಮಿತಿಯ ಅಧ್ಯಕ್ಷ ಡಾ. ಶಶಿಭೂಷಣ ಹೆಗಡೆ ಮತ್ತಿತರರಿದ್ದರು.

ರಾಷ್ಟ್ರೀಯ ವಿಜ್ಞಾನ ದಿನ ಆಚರಣೆ

ಹಳಿಯಾಳ : ಕೆಎಲ್‌ಎಸ್ ವಿಡಿಐಟಿ ಹಳಿಯಾಳದಲ್ಲಿ ಭಾರತದ ಖ್ಯಾತ ವಿಜ್ಞಾನಿ ಡಾ.ಸಿ.ವಿ ರಾಮನ್ ಅವರ ಜನ್ಮದಿನದ ಪ್ರಯುಕ್ತ ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನದ ಸಮಾರೋಪ ಸಮಾರಂಭ ಜರುಗಿತು. ಡಾ.ಸಿ.ವಿ ರಾಮನ್ ಅವರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಮಾತನಾಡಿದ ಪ್ರಾ. ಡಾ.ವಿ.ಎ ಕುಲಕರ್ಣಿ ಮಾತನಾಡಿ, ಪರಿಶ್ರಮ ಪಟ್ಟು ಜೀವನದಲ್ಲಿ ಯಶಸ್ಸು ಪಡೆಯಿರಿ ಎಂದು ಹೇಳಿದರು.

ಡಾ. ಸಮೀರ್ ಗಲಗಲಿ ರಾಮನ್ ಪರಿಣಾಮದ ಕುರಿತಾಗಿ ವಿದ್ಯಾರ್ಥಿಗಳಿಗೆ ತಿಳಿಸಿದರು.

ವಿಜ್ಞಾನ ವಿಭಾಗದ ಮುಖ್ಯಸ್ಥೆ ಡಾ.ಸ್ನೇಹಾ ಕುಲಕರ್ಣಿ ಸ್ವಾಗತಿಸಿದರು. ಡಾ.ಎಂ.ಎಸ್ ಸನಾಯಕರ ವಂದಿಸಿದರು. ಎಲ್ಲಾ ವಿಭಾಗ ಡೀನ್ ಗಳು ಮತ್ತು ವಿಭಾಗ ಮುಖ್ಯಸ್ಥರು ಹಾಗೂ 150ಕ್ಕೂ ಅಧಿಕ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಡಾ. ವಿನೋದ್ ನಾಯ್ಕ, ಡಾ.ಜಿಎಸ್ ಕುರ್ಡೇಕರ, ಡಾ.ಮಲ್ಲಿಕಾರ್ಜುನ ಪಿ ಸಂಯೋಜಿಸಿದ್ದರು. ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆ ಗಳನ್ನು ಆಯೋಜಿಸಲಾಗಿತ್ತು.



ರಸಪ್ರಶ್ನೆ ಕಾರ್ಯಕ್ರಮದಲ್ಲಿ 106 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಗೌರಿ ಕುಲಕರ್ಣಿ ಮತ್ತು ಸೂರ್ತಿ ಪಾಠಕ ಪ್ರಥಮ, ಪಲ್ಲವಿ ಶಿಂಧೆ ಹಾಗೂ ಲಹರಿ ದ್ವಿತೀಯ, ಫರಭಾನು ಮತ್ತು ಬಿಬಿ ಜೈನಾಬ್ ತೃತೀಯ ಸ್ಥಾನ ಗಳಿಸಿದರು. ಚರ್ಚಾ ಸ್ಪರ್ಧೆಯಲ್ಲಿ ತೇಜಸ್ ಬಿರಾದಾರ ಪ್ರಥಮ, ಸುಪ್ರಿತ್ ಗೌಡ ದ್ವಿತೀಯ, ಭವಾನಿ ಗೌಡರ ತೃತೀಯ ಸ್ಥಾನ ಗಳಿಸಿದರು. ಭಿತ್ತಿ ಚಿತ್ರ ನಿರ್ಮಾಣ ಸ್ಪರ್ಧೆಯಲ್ಲಿ ಶಿವಾನಿ ಬಾನಿ ಪ್ರಥಮ, ನಮಿತಾ ಗುಡಿ ದ್ವಿತೀಯ, ನಿಲೋಫಾರ್ ತೃತೀಯ ಸ್ಥಾನ ಪಡೆದರು. ಸ್ಪರ್ಧಾ ವಿಜೇತರಿಗೆ ಪುರಸ್ಕಾರಿಸಲಾಯಿತು.

ಬಸವೇಶ್ವರ, ವೀರಭದ್ರೇಶ್ವರ ರಥೋತ್ಸವ

ಮುಂಡಗೋಡ: ಕಳೆದ ವರ್ಷ ನೂತನ ತೇರು ನಿರ್ಮಾಣ ಮಾಡಿ ದೇವಸ್ಥಾನಕ್ಕೆ ಸಮರ್ಪಣೆ ಮಾಡುವ ಮೂಲಕ ನಿರೀಕ್ಷೆಗೂ ಮೀರಿ ಅದ್ದೂರಿಯಿಂದ ಜಾತ್ರಾ ಮಹೋತ್ಸವ ನಡೆಯಿತು ಎಂದು ಶಾಸಕ ಶಿವರಾಮ ಹೆಬ್ಬಾರ ಹೇಳಿದರು.

ಶುಕ್ರವಾರ ಪಟ್ಟಣದ ಬಸವನಬೀದಿಯಲ್ಲಿರುವ ಶ್ರೀ ಬಸವೇಶ್ವರ-ವೀರಭದ್ರೇಶ್ವರ ರಥೋತ್ಸವದ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ತಾಯಂದಿರು ಪೂರ್ಣಕುಂಭ ಮೇಳದೊಂದಿಗೆ ರಥೋತ್ಸವಕ್ಕೆ ಚಾಲನೆ ನೀಡಿದ್ದಾರೆ. ಧರ್ಮವನ್ನು ನಾವು ರಕ್ಷಿಸಿದರೆ ಧರ್ಮ ನಮ್ಮನ್ನು ರಕ್ಷಿಸುತ್ತದೆ. ಧರ್ಮ ಜಾಗೃತಿಯಾಗಿದ್ದರೆ ಸಮಾಜದಲ್ಲಿ ಅಂಕುಡೊಂಕುಗಳು ತಾನಾಗಿಯೇತಿದ್ದುತ್ತವೆ. ಬಸವಣ್ಣ ಸೇರಿದಂತೆ ಅನೇಕ ಕಾಯಕಯೋಗಿಗಳು ಈ ಸಮಾಜಕ್ಕೆ ಆದರ್ಶಪ್ರಿಯರಾಗಿದ್ದಾರೆ ಎಂದರು. ನವಲಗುಂದ ಗವಿಮಠದ ಬಸವಲಿಂಗ ಶ್ರೀಗಳು ಆಶೀರ್ವಚನ ನೀಡಿ, 2ನೇ ಬಾರಿ ನಡೆಯುತ್ತಿರುವ ಜಾತ್ರೆ ಸುವರ್ಣಾಕ್ಷರದಲ್ಲಿ ಬರೆದಿಡುವ ಜಾತ್ರೆಯಾಗಿದೆ. ವಿಶೇಷವಾಗಿ ಮಲೆನಾಡು ಆಗಿರುವ ಮುಂಡಗೋಡದಲ್ಲಿ 42 ಸಾವಿರ ರೊಟ್ಟಿ ಜಾತ್ರೆ ಮಾಡುವ ಮೂಲಕ ಉಕದ ಜಾತ್ರೆಯಂತೆ ಅಪರೂಪದ ಜಾತ್ರೆ ಮಾಡಿ ಇತಿಹಾಸವನ್ನು ಮರುಕಳಿಸುವಂತೆ ಮಾಡಿದ್ದಾರೆ ಎಂದರು.



ಬಂಕಾಪುರದ ಅರಳೆಲೆ ಹಿರೇಮಠದ ರೇವಣಸಿದ್ದೇಶ್ವರ ಶಿವಾಚಾರ್ಯರು ಆಶೀರ್ವಚನ ನೀಡಿ, ಬೇರೆ ಕಡೆಗಳಲ್ಲಿ ಯುದ್ಧ ನಡೆಯುತ್ತಿದ್ದರೆ ನಾವು ಭಕ್ತಿಭಾವಪರವಶರಾಗಿ ಜಾತ್ರೆಯಲ್ಲಿ ಭಾಗಿಯಾಗಿದ್ದೇವೆ. ಅತ್ಯಂತ ಶ್ರದ್ಧಾಭಕ್ತಿಯಿಂದ ಪ್ರಸಾದ ಸೇವೆಯನ್ನು ಮಾಡಿದ್ದಾರೆ. ಸುಮಾರು 6 ಸಾವಿರ ತಾಯಂದಿರು ಉಡಿಸೇವೆ ಮಾಡಿದ್ದಾರೆ. ತಾಯಿಗಿಂತ ಮಿಗಿಲಾದ ದೇವರಿಲ್ಲ, ಅನ್ನಪ್ರಸಾದ ಜೊತೆಜೊತೆಗೆ ಸಂಸ್ಕಾರ ಕೊಡುವ ಕೆಲಸವಾಗಬೇಕು ಆ ಕೆಲಸವನ್ನು ಮುಂದಿನ ಜಾತ್ರೆಯಿಂದ ಮಾಡೋಣ ಎಂದರು. ಈ ಸಂದರ್ಭದಲ್ಲಿ ಗಣ್ಯರನ್ನು ಸನ್ಮಾನಿಸಲಾಯಿತು. ವೇ.ಮೂ. ರುದ್ರಮುನಿ ಶ್ರೀ, ಉಮೇಶ ಬಿಜಾಪುರ, ವಕೀಲ ಸಿ.ಎಸ್.ಗಾಣಿಗೇರ ಇದ್ದರು. ಮಂಜುನಾಥ ಹಿರೇಮಠ ನಿರೂಪಿಸಿದರು.

ಮಾದಕ ವಸ್ತುಗಳ ವಿರುದ್ಧ ಸಮರ ಸಾರಿರುವ ಉಕ ಜಿಲ್ಲಾಡಳಿತ

ಕಾರವಾರ: ಉಕಜಿಲ್ಲೆಯಲ್ಲಿ ಮಾದಕ ವಸ್ತುಗಳ ಸಾಗಾಟ, ಸೇವನೆ, ಸರಬರಾಜು ವಿರುದ್ಧ ತೀವ್ರ ಸಮರ ಸಾರಿರುವ ಉಕ ಜಿಲ್ಲಾಡಳಿತವು ಜಿಲ್ಲೆಯನ್ನು ಮಾದಕವಸ್ತು ಮುಕ್ತವನ್ನಾಗಿಸುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದು, ಜಿಲ್ಲೆಯಾದ್ಯಂತ ವ್ಯಾಪಕ ತಪಾಸಣೆಗಳನ್ನು ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತಂತೆ ಜಾಗೃತಿ ಮತ್ತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ.



ಜಿಲ್ಲೆಯಲ್ಲಿ 2023ರಿಂದ ಇದುವರೆಗೆ ಮಾದಕ ವಸ್ತು ಸಾಗಾಟಕ್ಕೆ ಸಂಬಂಧಿಸಿದಂತೆ 106 ಪ್ರಕರಣಗಳಲ್ಲಿ 169 ಆರೋಪಿತರನ್ನು ಬಂಧಿಸಿದ್ದು, 75.534 ಕೆ.ಜಿ ಗಾಂಜಾ, 3.429 ಕೆ.ಜಿ. ಚರಸ್, 1.8 ಗ್ರಾಂ ಎಂಡಿಎಂಎ ನ್ನು ವಶಪಡಿಸಿಕೊಂಡಿದ್ದು, ಇವುಗಳ ಒಟ್ಟು ಮೌಲ್ಯ ರೂ. 48,89,400 ಆಗಿದ್ದು, ಮಾದಕ ವಸ್ತು ಸೇವನೆಯ 456 ಪ್ರಕರಣಗಳಲ್ಲಿ 577 ಜನರನ್ನು ಬಂಧಿಸಲಾಗಿದೆ. ಇದರಲ್ಲಿಯೂ 2025ರ ಜನವರಿಯಿಂದ 2026 ರ ಫೆಬ್ರವರಿ ವರೆಗೆ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಆರೋಪಿತರನ್ನು ಬಂಧಿಸುವ ಮೂಲಕ, ಮಾದಕ ವಸ್ತು ಸೇವನೆ ಮತ್ತು ಸರಬರಾಜುದಾರರಿಗೆ ಕಠಿಣ ಸಂದೇಶ ರವಾನಿಸಲಾಗಿದೆ.

ಮಾದಕ ವಸ್ತು ಸೇವನೆ ಮತ್ತು ಸರಬರಾಜುನಲ್ಲಿ ಕಂಡುಬಂದಿರುವ ಒಟ್ಟು 746 ಅಪರಾಧಿಗಳಲ್ಲಿ 18-30 ರ ವಯೋಮಾನದವರ ಸಂಖ್ಯೆ 593 ಆಗಿದ್ದು, 31-40 ವಯೋಮಾನದವರ ಸಂಖ್ಯೆ 107 ಆಗಿದೆ. ಈ ಅಂಕಿ ಅಂಶಗಳ ಮೂಲಕ ಜಿಲ್ಲೆಯ ಹೆಚ್ಚಿನ ಸಂಖ್ಯೆಯ ಯುವ ಸಮುದಾಯ ಈ ಮಾದಕ ವಸ್ತುಗಳ ಜಾಲದಲ್ಲಿ ಸಿಲುಕಿರುವುದು ಕಂಡುಬರುತ್ತಿದ್ದು, ಇದು ತೀರಾ ಕಳವಳಕಾರಿಯಾಗಿದೆ. ಜಿಲ್ಲೆಯ ಯುವ ಸಮುದಾಯಕ್ಕೆ ಮತ್ತು ಸಾರ್ವಜನಿಕರಿಗೆ ಮಾದಕ ವಸ್ತುಗಳ ಸೇವನೆ ಮತ್ತು ಅದರ ದುಷ್ಪರಿಣಾಮಗಳ ಕುರಿತಂತೆ ಜಾಗೃತಿ ಮತ್ತು ಅರಿವು ಮೂಡಿಸಲು ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ 2025 ಜನವರಿಯಿಂದ ಇದುವರೆಗೆ 1,515 ಕಾರ್ಯಕ್ರಮ ಆಯೋಜಿಸಿದ್ದು, 1,005 ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ, 49,653 ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲಾಗಿದೆ. 527 ಸಾರ್ವಜನಿಕ ಕಾರ್ಯಕ್ರಮ ಆಯೋಜಿಸಿ, 20,548 ಸಾರ್ವಜನಿಕರೊಂದಿಗೆ ಸಂವಾದ ನಡೆಸಲಾಗಿದೆ. ಅಲ್ಲದೇ ಮಾದಕ ವಸ್ತು ಮುಕ್ತ ಕರ್ನಾಟಕ ಹೆಸರಿನಲ್ಲಿ ಆಯೋಜಿಸಿದ್ದ 5 ಕಿ.ಮೀ ಮತ್ತು 10 ಕಿ.ಮೀ ನ ಮ್ಯಾರಾಥಾನ್‌ನಲ್ಲಿ 1500 ಕ್ಕೂ ಅಧಿಕ ಮಂದಿ ಭಾಗವಹಿಸಿ ಮಾದಕ ವಸ್ತುಗಳ ವಿರುದ್ಧ ಸಾಮಾಜಿಕ ಸಂದೇಶ ಸಾರಿದ್ದಾರೆ.

ಜಿಲ್ಲೆಯ ಎಲ್ಲಾ ಪ್ರಮುಖ ಇಲಾಖೆಗಳು ತಮ್ಮ ದೈನಂದಿನ ಚಟುವಟಿಕೆಗಳ ಜೊತೆಗೆ ತಮ್ಮ ವ್ಯಾಪ್ತಿಯಲ್ಲಿ ಮಾದಕ ವಸ್ತುಗಳ ತಡೆ ಕುರಿತಂತೆ ಹೆಚ್ಚಿನ ನಿಗಾವಹಿಸಿವೆ.

ಮಾದಕ ವಸ್ತುಗಳ ನಿಯಂತ್ರಣಕ್ಕೆ ಸರ್ಕಾರ ಸೂಚಿಸಿರುವ ಮಾರ್ಗಸೂಚಿಗಳಾದ ತಡೆಗಟ್ಟುವಿಕೆ, ಕಣ್ಗಾವಲು, ಜಾಗೃತಿ, ವ್ಯಸನಮುಕ್ತತೆ ಮತ್ತು ಜಾರಿ ಸೂಚನೆಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ 108 ಪ್ರಕರಣಗಳಲ್ಲಿ ವಶಪಡಿಸಿಕೊಂಡಿದ್ದ ರೂ.39,24,700 ಮೌಲ್ಯದ 93.96 ಕೆಜಿ ಗಾಂಜಾವನ್ನು ನಿಯಮಾನುಸಾರ ನಾಶಪಡಿಸಲಾಗಿದೆ.

ಕಾರ್ಯಾಗಾರ ಆಯೋಜನೆ

ಪೊಲೀಸ್ ಇಲಾಖೆ ವತಿಯಿಂದ ಜಿಲ್ಲೆಯ ಎಲ್ಲಾ ಚೆಕ್ ಪೋಸ್ಟ್‌ಗಳಲ್ಲಿ ಬಿಗು ತಪಾಸಣೆ ನಡೆಸಲಾಗುತ್ತಿದ್ದು, ಇಲಾಖೆಯ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ಎನ್‌ಡಿಪಿಎಸ್ ಕಾಯ್ದೆಯ ಬಗ್ಗೆ ತರಬೇತಿ ಕಾರ್ಯಗಾರಗಳನ್ನು ಆಯೋಜಿಸಲಾಗಿದೆ.

ಬನವಾಸಿ ದೇವಸ್ಥಾನ ಸೋರಿಕೆ ತಡೆಗಟ್ಟುವಲ್ಲಿ ಇಲಾಖೆ ನಿರ್ಲಕ್ಷ್ಯ
ಜಾತ್ರಾ ದಿನವೇ ಹೋರಾಟಕ್ಕೆ ಸಜ್ಜಾದ ಹೋರಾಟ ಸಮಿತಿ

ಬನವಾಸಿ: ಐತಿಹಾಸಿಕ ಪುರಾಣ ಪ್ರಸಿದ್ಧ ಕ್ಷೇತ್ರ ಬನವಾಸಿಯ ಮಧುಕೇಶ್ವರ ದೇವಸ್ಥಾನ ಮಳೆಗಾಲದಲ್ಲಿ ಸೋರಲು ಪ್ರಾರಂಭವಾಗಿ ದಶಕಗಳೇ ಕಳೆಯಿತು. ಈ ರೀತಿಯ ಸೋರಿಕೆ ದೇವಸ್ಥಾನಕ್ಕೆ ಆಪತ್ತು ತರುತ್ತದೆ ಎಂದು ಅದನ್ನು ರಕ್ಷಿಸುವ ಹೊಣೆ ಹೊತ್ತ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಅಧಿಕಾರಿಗಳಿಗೆ ಹೇಳಿ ಹೇಳಿ ಸಾಕಾಗಿದೆ ಎಂದು ಬನವಾಸಿ ನೂತನ ತಾಲೂಕು ಹೋರಾಟ ಸಮಿತಿ ಆಕ್ರೋಶ ಹೊರಹಾಕಿದೆ.

ಮಧುಕೇಶ್ವರ ದೇವರ ಜಾತ್ರಾ ಮಹೋತ್ಸವದ ಶುಭ ದಿನ ಮಾ.30ರಂದು ಸಾವಿರಾರು ಭಕ್ತರು ಸೇರಿ ಇಲಾಖೆ ಅಧಿಕಾರಿಗಳ ವಿರುದ್ಧ ಹೋರಾಟಕ್ಕೆ ಸಜ್ಜಾಗಿದೆ ಎಂದು ಹೋರಾಟ ಸಮಿತಿ ಅಧ್ಯಕ್ಷ ಉದಯಕುಮಾರ್ ಕಾನಳ್ಳಿ, ಗೌರವಾಧ್ಯಕ್ಷ ಸಿ.ಎಫ್. ನಾಯಕ ಮಾಳಂಜಿ ಹಾಗೂ ಕಾರ್ಯದರ್ಶಿ ವಿಶ್ವನಾಥ್ ವಡೆಯರ್ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಬಗ್ಗೆ ದಿಢೀರ್ ಸಭೆ ಕರೆದು ತೀರ್ಮಾನ ಕೈಕೊಂಡ ತಾಲೂಕು ಹೋರಾಟ ಸಮಿತಿ ಅಂದು ರಾತ್ರಿ 9ಗಂಟೆ ವೇಳೆಗೆ ಸಹಸ್ರ ಸಂಖ್ಯೆಯಲ್ಲಿ ಸೇರುವ ಭಕ್ತರನ್ನೂ ಸೇರಿಸಿ ದೇವಸ್ಥಾನ ಉಳಿವಿಗಾಗಿ ಹೋರಾಟ ಮಾಡುವುದಾಗಿ ಹೇಳಿದ್ದಾರೆ. ಭಗವಂತನ ಸೇವೆಗಾಗಿ ಸೇರುವ ಭಕ್ತರೇ ದೇವಸ್ಥಾನ ಉಳಿಸುವ ಮಹಾನ್ ಕಾರ್ಯಕ್ಕೆ ಕೈ ಜೋಡಿಸಿ ಎಂದು ಕೂಡ ಪತ್ರಿಕೆ ಮುಖಾಂತರ ವಿನಂತಿ ಮಾಡಿಕೊಂಡಿದ್ದಾರೆ.

ಪೊಲೀಸ್ ಇಲಾಖೆ ಕೂಡ ದೇವರ ಭಕ್ತರು, ಅವರು ಕೂಡ ಈ ಪುಣ್ಯದ ಕೆಲಸಕ್ಕೆ ಸಹಕಾರ ನೀಡಬೇಕು ಎಂದು ಸಮಿತಿ ವಿನಂತಿ ಮಾಡಿದೆ. ದೇವಸ್ಥಾನದ ಆಡಳಿತ ಮಂಡಳಿ, ಬಾಬುದಾರರು, ವೈದಿಕರೂ, ಸೀಮಾ ಭಕ್ತರು ಅಂದಿನ ದಿನ ದೊಡ್ಡ ಪ್ರಮಾಣದಲ್ಲಿ ಸೇರಿ ಇಲಾಖೆಯ ಮನವರಿಕೆಗೆ ಮುಂದಾಗಬೇಕು ಎನ್ನುವ ವಿನಂತಿ ಮಾಡಿದ್ದಾರೆ. ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿ, ಈ ಭಾಗದ ಸನ್ಮಾನ್ಯ ಶಾಸಕರು ಶಿವರಾಮ ಹೆಬ್ಬಾರ್ ಅವರು, ಬನವಾಸಿ ಅಭಿವೃದ್ಧಿ ಸಮಿತಿ, ಬನವಾಸಿ ಗ್ರಾಪಂ ದವರು ಎಲ್ಲಾ ಮುಖಂಡರು ಪಾಲ್ಗೊಳ್ಳುವಂತೆ ಕರೆ ನೀಡಿದ್ದಾರೆ.

ದಿಢೀರ್ ಆಗಿ ಹೋರಾಟ ವಾದರು ಭಗವಂತನ ಸೇವೆ ಎಂದು ಸೇರಿಕೊಂಡು ಇಲಾಖೆಯ ತಪ್ಪು ಜನರಿಗೆ ತಿಳಿಸುವ ಕಾರ್ಯವಾಗಲಿ ಎನ್ನುವ ಹೋರಾಟ ಸಮಿತಿ ಎಲ್ಲ ಸಂಘಟನೆಗಳು ಕೂಡ ಪಾಲ್ಗೊಳ್ಳಿ ಎಂದು ಕರೆ ನೀಡಿದೆ.

ಹೋರಾಟಗಳು ಆದಾಗ ಒಮ್ಮೆ ಮಳೆಗಾಲ ಮುಗಿದ ಮೇಲೆ ಎಲ್ಲಿ ಸೋರುತ್ತದೆ ತೋರಿಸಿ ಎನ್ನುವ ಅಧಿಕಾರಿಗಳ ಮಂಕು ಬುದ್ದಿಗೆ ತಿಳಿಸುವ ಕೆಲಸ ಆಗಲಿ ಎನ್ನುವ ಬಯಕೆ ಬನವಾಸಿ ನೂತನ ತಾಲೂಕು ಹೋರಾಟ ಸಮಿತಿ ಅವರದ್ದಾಗಿದೆ.

ಕಿರುಸುದ್ದಿ

62 ಮರಗಳ ತೆರವು : ಆಕ್ಷೇಪಣೆಗೆ ಅವಕಾಶ

ಹಾವೇರಿ: ರಟ್ಟೀಹಳ್ಳಿ ಆಡಳಿತ ಕೇಂದ್ರ ಪ್ರಜಾಸೌಧ ಕಟ್ಟಡ ನಿರ್ಮಾಣ ಕಾಮಗಾರಿಗೆ ಅಡೆ ತಡೆಯಾಗಿರುವ ಒಟ್ಟು 62 ಮರಗಳನ್ನು ತೆರವುಗೊಳಿಸ ಬೇಕಾಗಿದೆ. ಈ ಬಗ್ಗೆ ತಕರಾರು ಸಲ್ಲಿಸಲು ಬಯಸುವವರು ತಮ್ಮ ತಕರಾರು ಅರ್ಜಿಯನ್ನು ವೃಕ್ಷ ಅಧಿಕಾರಿ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಹಾನಗಲ್ ಉಪ-ವಿಭಾಗ, ಹಾನಗಲ್ ಮತ್ತು ವಲಯ ಅರಣ್ಯಾಧಿಕಾರಿ, ಹಿರೇಕೆರೂರು ವಲಯ, ಹಿರೇಕೆರೂರು ಕಚೇರಿಗೆ ಲಿಖಿತ ರೂಪದಲ್ಲಿ ಏ.8ರೊಳಗಾಗಿ ಆಕ್ಷೇಪಣೆಯನ್ನು ಸಲ್ಲಿಸಬಹುದು.

ಹೆಚ್ಚಿನ ವಿವರಗಳಿಗಾಗಿ acfhanagalsubdivision@gmail.com ಮತ್ತು ದೂರವಾಣಿ ಸಂಖ್ಯೆ 08379-262905 ಸಂಪರ್ಕಿಸಲು ಕೋರಲಾಗಿದೆ. ಒಂದು ವೇಳೆ ನಿಗದಿತ ದಿನಾಂಕ ಅಥವಾ ಅವಧಿಯೊಳಗೆ ತಕರಾರು ಸಲ್ಲಿಸದಿದ್ದರೆ ನಂತರ ಬಂದ ತಕರಾರು ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಹಾನಗಲ್ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಡ ಬಾಂಬ್ ಸೇವನೆ: ಎಮ್ಮೆಗೆ ಗಂಭೀರ ಗಾಯ

ಹಾನಗಲ್ಲ: ಹನುಮಂಕೊಪ್ಪ ಕೆರೆಯ ಸಮೀಪ ಮೇಯಲು ಹೋಗಿದ್ದ ಎಮ್ಮೆಯೊಂದು ನಾಡ ಬಾಂಬ್ ಸೇವನೆ ಮಾಡಿದ್ದರಿಂದ ಎಮ್ಮೆ ಗಂಭೀರವಾಗಿ ಗಾಯಗೊಂಡ ಘಟನೆ ತಾಲೂಕಿನ ಹಿರೂರ ಗ್ರಾಮದಲ್ಲಿ ಶುಕ್ರವಾರ ಮದ್ಯಾಹ್ನ ನಡೆದಿದೆ. ಗ್ರಾಮದ ಷಣ್ಮುಖಗೌಡ ಹನುಮನಗೌಡ ಪಾಟೀಲ್ ಎಂಬ ರೈತನಿಗೆ ಸೇರಿದ್ದ ಎಮ್ಮೆ ಇದಾಗಿದ್ದು, ಸ್ಥಳಕ್ಕೆ ಹಾನಗಲ್ಲ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.



ಕಳೆದ ಒಂದು ತಿಂಗಳು ಹಿಂದೆಯಷ್ಟೇ ಹಿರೂರ ಗ್ರಾಮದ ಹೊರವಲಯದ ಅರಣ್ಯ ಪ್ರದೇಶದಲ್ಲಿ ನಾಡ ಬಾಂಬ್ ಸೇವಿಸಿ ಲಕ್ಷಾಂತರ ರೂ.ಗಳ ಎರೆಡು ಎತ್ತುಗಳು ಸಾವನ್ನಪ್ಪಿದ್ದ ಬೆನ್ನಲ್ಲೇ ಶುಕ್ರವಾರ ಇಈ ಘಟನೆ ನಡೆದಿದ್ದು ಜನರಲ್ಲಿ ಆತಂಕ ಮೂಡಿದೆ. ಈ ಕುರಿತು ಹಾನಗಲ್ಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಮಾ.30ಕ್ಕೆ ಮಹಾವೀರ ಜಯಂತಿ ಆಚರಣೆ

ಹಾವೇರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನೇಮಿನಾಥ ದಿಗಂಬರ ಜೈನ ಮಂದಿರ ಕಮೀಟಿ ಸಹಯೋಗದಲ್ಲಿ ಭಗವಾನ್ ಶ್ರೀ ಮಹಾವೀರ ಜಯಂತಿ ಕಾರ್ಯಕ್ರಮ ಮಾ.30ರಂದು ಬೆಳಿಗ್ಗೆ 9ಕ್ಕೆ ನಗರದ ನೇಮಿನಾಥ ದಿಗಂಬರ ಜೈನ ಮಂದಿರದಲ್ಲಿ ಜರುಗಲಿದೆ.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹಾಗೂ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಗೌರವಾನ್ವಿತ ಉಪಸ್ಥಿತಿಯಲ್ಲಿ, ಜವಳಿ, ಕಬ್ಬು ಅಭಿವೃದ್ಧಿ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಉದ್ಘಾಟಿಸಲಿದ್ದಾರೆ.

ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಗೌರವ ಉಪಸ್ಥಿತಿಯಲ್ಲಿ, ಶಾಸಕ, ವಿಧಾನಸಭೆ ಉಪ ಸಭಾಧ್ಯಕ್ಷ ರುದ್ರಪ್ಪ ಮಾನಪ್ಪ ಲಮಾಣಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಬ್ಯಾಡಗಿ ಶಾಸಕರು, ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಅಧ್ಯಕ್ಷ ಸೈಯದ್ ಅಜೀಮಪೀರ್ ಎಸ್ ಖಾದ್ರಿ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ ಎಸ್.ಆರ್.ಪಾಟೀಲ, ಕರ್ನಾಟಕ ಗಡಿ ಪ್ರದೇಶದ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ವಿಧಾನ ಪರಿಷತ್ ಶಾಸಕರಾದ ಪ್ರೊ. ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ಶಾಸಕರಾದ ಶ್ರೀನಿವಾಸ ಮಾನೆ, ಯು.ಬಿ. ಬಣಕಾರ, ಪ್ರಕಾಶ ಕೋಳಿವಾಡ, ಯಾಸೀರ ಅಹ್ಮದಖಾನ್ ಪಠಾಣ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್. ಗಾಜಿಗೌಡ್ರ ಹಾಗೂ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಎಂ.ಎಂ. ಹಿರೇಮಠ, ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಂ.ಎಂ.ಮೈದೂರ ಅವರು ಭಾಗವಹಿಸಲಿದ್ದಾರೆ.

ದಿವ್ಯಾ ಹಳ್ಳಿಯವರ ಉಪನ್ಯಾಸ ನೀಡಲಿದ್ದು, ವಿಶೇಷ ಆಹ್ವಾನಿತರಾಗಿ ಜಿಲ್ಲಾ ದಿಗಂಬರ ಜೈನ ಸಂಘದ ಅಧ್ಯಕ್ಷ ಮಂಜಪ್ಪ ತಡಸದ, ಶ್ರೀ ನೇಮಿನಾಥ ದಿಗಂಬರ ಜೈನ ಮಂದಿರ ಕಮೀಟಿ ಅಧ್ಯಕ್ಷ ಚಂದ್ರನಾಥ ಕಳಸೂರ ಅವರು ಪಾಲ್ಗೊಳ್ಳಲಿದ್ದಾರೆ.



ಹಾವೇರಿ : ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಶ್ರೀ ಅಗ್ನಿಬನ್ನಿರಾಯ ಜಯಂತಿ ಕಾರ್ಯಕ್ರಮ ಜರುಗಿತು. ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ್ ಎಲ್. ಅಗ್ನಿಬನ್ನಿರಾಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಜಯಾನಂದ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಪಿ.ಆರ್. ಹಾವನೂರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ವಿವಿಧ ಇಲಾಖೆ ಅಧಿಕಾರಿಗಳು, ಸಿಬ್ಬಂದಿ, ಸಮಾಜದ ಮುಖಂಡರು ಇದ್ದರು.

ವಾಣಿಜ್ಯ ಸಿಲಿಂಡರ್ ಪೂರೈಸುವಂತೆ ಮನವಿ

ಹಾವೇರಿ: ಹೋಟೆಲ್‌ಗಳಿಗೆ ಪ್ರತಿದಿನ ಎರಡು ವಾಣಿಜ್ಯ ಸಿಲಿಂಡರ್ ಪೂರೈಸುವಂತೆ ಒತ್ತಾಯಿಸಿ ಹಾವೇರಿ ಹೋಟೆಲ್ ಮಾಲಕರ ಸಂಘದವರು ಜಿಲ್ಲಾಧಿಕಾರಿಗಳಿಗೆ ಶುಕ್ರವಾರ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಹೋಟೆಲ್ ಮಾಲಕರ ಸಂಘದ ಜಿಲ್ಲಾಧ್ಯಕ್ಷ ಪ್ರಕಾಶ ಶೆಟ್ಟಿ, ಹಾವೇರಿ ನಗರದಲ್ಲಿ ಸಣ್ಣ ಮತ್ತು ಮಧ್ಯಮ ಗಾತ್ರದ ರೆಸ್ಟೋರೆಂಟ್‌ಗಳು, ಡಾಬಾ ಹೋಟೆಲ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಇಲ್ಲಿ ಆಹಾರ ಪದಾರ್ಥ ಹಾಗೂ ಖಾದ್ಯಗಳನ್ನು ತಯಾರಿಸಲು ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್‌ಗಳನ್ನು ಅಧಿಕೃತ ಗ್ರಾಹಕ ಸಂಪರ್ಕ ಪಡೆದುಕೊಂಡಿದ್ದೇವೆ. ನಮ್ಮ ಹೋಟೆಲ್‌ಗಳಿಗೆ ದಿನವೊಂದಕ್ಕೆ ವಾಣಿಜ್ಯ ಬಳಕೆ ಎರಡು ಸಿಲಿಂಡರ್ ಪೂರೈಸಲು ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಹೋಟೆಲ್‌ಗಳ ವ್ಯವಹಾರ ಸ್ಥಗಿತವಾದಲ್ಲಿ ಆಸ್ಪತ್ರೆಯಲ್ಲಿ ನೋಂದಣಿ ಮಾಡಿಕೊಂಡ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿರುವ ಬಡ ಕುಟುಂಬಗಳಿಗೆ, ಕಾರ್ಮಿಕ ಕುಟುಂಬಗಳಿಗೆ, ಹಣ್ಣು, ತರಕಾರಿ, ಬೀದಿ ಬದಿ ವ್ಯಾಪಾರ ಮಾಡುವವರಿಗೆ, ಕಿರಾಣಿ ಅಂಗಡಿಗಳಲ್ಲಿ ಕೆಲಸ ಮಾಡುವವರಿಗೆ, ಹಳ್ಳಿಗಳಿಂದ ನಗರಕ್ಕೆ ವಿವಿಧ ಕೆಲಸಗಳ ನಿಮಿತ್ತ ಆಗಮಿಸುವ ಸಾರ್ವಜನಿಕರಿಗೆ ಅನಾನುಕೂಲ ಆಗಲಿದೆ. ಹೀಗಾಗಿ ಸರ್ಕಾರದ ಸಂಬಂಧಪಟ್ಟ ಇಲಾಖೆಗಳಿಗೆ ಒತ್ತಡ ಹಾಕಿ ದಿನವೊಂದಕ್ಕೆ ಎರಡು ವಾಣಿಜ್ಯ ಬಳಕೆಯ ಸಿಲಿಂಡರ್‌ಗಳನ್ನು ಸಮರ್ಪಕವಾಗಿ ಪೂರೈಸಬೇಕು ಎಂದು ಮನವಿ ಮಾಡಿದರು. ಈ ವೇಳೆ ಉದಯಕುಮಾರ ಶೆಟ್ಟಿ, ಅಶೋಕ ಶೆಟ್ಟಿ, ಸುಖೇಶ ಶೆಟ್ಟಿ, ಅಶೋಕ ಶೆಟ್ಟಿ, ಸತೀಶಚಂದ್ರ, ಪ್ರಕಾಶ ಎಸ್. ಶೆಟ್ಟಿ, ಮಹೇಶ ಶೆಟ್ಟಿ ಇತರರಿದ್ದರು.



ಹಾವೇರಿ : ಹೋಟೆಲ್‌ಗಳಿಗೆ ಪ್ರತಿದಿನ ಎರಡು ವಾಣಿಜ್ಯ ಸಿಲಿಂಡರ್ ಪೂರೈಸುವಂತೆ ಒತ್ತಾಯಿಸಿ ಹಾವೇರಿ ಹೋಟೆಲ್ ಮಾಲಕರ ಸಂಘದವರು ಜಿಲ್ಲಾಧಿಕಾರಿಗಳಿಗೆ ಶುಕ್ರವಾರ ಮನವಿ ಸಲ್ಲಿಸಿದರು. ಈ ವೇಳೆ ಹೋಟೆಲ್ ಮಾಲಕರ ಸಂಘದ ಜಿಲ್ಲಾಧ್ಯಕ್ಷ ಪ್ರಕಾಶ ಶೆಟ್ಟಿ, ಉದಯಕುಮಾರ ಶೆಟ್ಟಿ, ಅಶೋಕ ಶೆಟ್ಟಿ, ಸುಖೇಶ ಶೆಟ್ಟಿ, ಅಶೋಕ ಶೆಟ್ಟಿ, ಸತೀಶಚಂದ್ರ, ಪ್ರಕಾಶ ಎಸ್. ಶೆಟ್ಟಿ, ಮಹೇಶ ಶೆಟ್ಟಿ ಇತರರಿದ್ದರು.

ಅಯೋಧ್ಯಾಪತಿ ಶ್ರೀರಾಮನ ಸ್ಮರಣೆ

ಹಾವೇರಿ: ನಗರ ಸೇರಿದಂತೆ ಜಿಲ್ಲೆಯಾದ್ಯಂತ ಶ್ರೀ ರಾಮನವಮಿ ಅಂಗವಾಗಿ ಶುಕ್ರವಾರ ಅಯೋಧ್ಯಾಪತಿ, ಮರ್ಯಾದಾ ಪುರುಷೋತ್ತಮ ಶ್ರೀ ರಾಮ ದೇವರ ಮಂದಿರಗಳಲ್ಲಿ ಶ್ರೀ ರಾಮನ ಮೂರ್ತಿಗೆ ವಿಶೇಷ ಪೂಜೆ, ಅಭಿಷೇಕ ಸೇರಿದಂತೆ ವಿವಿಧ ಸೇವಾ ಕೈಂಕರ್ಯಗಳು ಅತ್ಯಂತ ಸಡಗರ ಸಂಭ್ರಮದಿಂದ ಶ್ರದ್ಧಾ ಭಕ್ತಿಯಿಂದ ಜರುಗಿದವು.

ನೂರಾರುವರ್ಷಗಳಇತಿಹಾಸಹೊಂದಿರುವನಗರದ ದೇಸಾಯಿಗಲ್ಲಿಯ ಶ್ರೀ ರಾಮದೇವರ ದೇವಸ್ಥಾನದಲ್ಲಿ ಶುಕ್ರವಾರ ಪ್ರತಿವರ್ಷದ ಪದ್ಧತಿಯಂತೆ ಈ ಬಾರಿಯೂ ಕೂಡ ರಾಮನವಮಿ ಆಚರಿಸಲಾಯಿತು. ಬೆಳಗ್ಗೆ ಕಾಕಡಾರತಿ ಪೂಜೆ ಜರುಗಿತು. 7.30ಕ್ಕೆ ಪುಷ್ಪಾಭಿಷೇಕ, ಪಂಚಾಮೃತ ಅಭಿಷೇಕ, ರುದ್ರಾಭಿಷೇಕ ಮತ್ತು ಪೂಜಾ ಕಾರ್ಯಕ್ರಮಗಳು ನೆರವೇರಿದವು. ಬಳಿಕ ಮಧ್ಯಾಹ್ನ ಮಲ್ಲಿಗೆ, ಸೇವಂತಿಗೆ, ಸುಗಂಧ, ದಾಸವಾಳ, ಚಂಪಕ, ಗುಲಾಬಿ ಸೇರಿದಂತೆ ತರಹೇವಾರಿ ಹೂವುಗಳಿಂದ ಹಾಗೂ ಮಾವಿನ ತಳಿರು ತೋರಣಗಳಿಂದ ಅಲಂಕಾರ, ವಸ್ತ್ರಾಲಂಕಾರ ಸೇವೆಯನ್ನು ಮಾಡಲಾಯಿತು. ಮಧ್ಯಾಹ್ನ 12.40ಕ್ಕೆ ಶ್ರೀ ರಾಮನ ಜನ್ಮೋತ್ಸವ ನಿಮಿತ್ತ ತೊಟ್ಟಿಲೋತ್ಸವ ಕಾರ್ಯಕ್ರಮ ಜರುಗಿತು. ಬಳಿಕ ರಾಮದೇವ ದೇವಸ್ಥಾನದ ಆವರಣದಲ್ಲಿ ನೂರಾರು ಭಕ್ತರ ಸಮ್ಮುಖದಲ್ಲಿ ಐದು ಸುತ್ತು ಪ್ರದಕ್ಷಿಣೆ ಹಾಕುವ ಮೂಲಕ ಸಡಗರ ಸಂಭ್ರಮದಿಂದ ಪಲ್ಲಕ್ಕಿ ಉತ್ಸವ ಜರುಗಿಸಲಾಯಿತು.

ಶ್ರೀರಾಮ ಸ್ತುತಿ ಪಠಣ: ತೊಟ್ಟಿಲೋತ್ಸವ ಸಂದರ್ಭದಲ್ಲಿ ರಾಮ ಜನ್ಮವಾಯಿತು ಸಖಿ ರಾಮ ಜನ್ಮವು ಎಂಬ ಸ್ತುತಿಯನ್ನು ಪಠಣ ಮಾಡಿದರು. ರಾಮ ಜನ್ಮ ಕುರಿತ ಸ್ತುತಿಗಳನ್ನು ಭಕ್ತರು ಪ್ರಸ್ತುತಪಡಿಸಿದರು. ಪಲ್ಲಕ್ಕಿ ಸೇವೆ ಸಮಯದಲ್ಲಿ ರಾಮ ಜಯ ರಾಮ, ಜಯ ಜಯ ರಾಮ ಎಂಬ ಘೋಷಣೆಗಳು ಮೊಳಗಿದವು. ಅಯೋಧ್ಯಾಪತಿ ಶ್ರೀ ಗುರು ರಾಮ ಚಂದ್ರ ಕೀ ಜೈ ಎಂಬ ಮಂತ್ರಘೋಷಣೆಗಳು ಎಲ್ಲೆಡೆ ಕೇಳಿಬಂದವು.

ಪಾನಕ ವಿತರಣೆ: ಶ್ರೀ ರಾಮನವಮಿ ಅಂಗವಾಗಿ ದೇವಸ್ಥಾನಕ್ಕೆ ಆಗಮಿಸುತ್ತಿದ್ದ ಶ್ರೀರಾಮನ ಭಕ್ತಾದಿಗಳಿಗೆ ಕೋಸಂಬರಿ, ಪಾನಕವನ್ನು ವಿತರಿಸಲಾಗುತ್ತಿತ್ತು. ದಿನವಿಡೀ ಉಪವಾಸ ವ್ರತ ಆಚರಣೆ ಮಾಡುವ ಭಕ್ತಾದಿಗಳಿಗೆ ಮಧ್ಯಾಹ್ನ 1.30ಕ್ಕೆ ಅವಲಕ್ಕಿ ಮೊಸರು, ಗೊಜ್ಜು ಅವಲಕ್ಕಿ ಉಪಾಹಾರ ವಿತರಿಸಲಾಯಿತು. ಬೆಳಗ್ಗೆಯಿಂದ ಸಂಜೆಯವರೆಗೂ ಭಕ್ತರು ಶ್ರೀರಾಮನ ದರ್ಶನ ಪಡೆದುಕೊಂಡು ಪುನೀತರಾದರು.



ಪೇಜಾವರ ಶ್ರೀಗಳು ಭೇಟಿ

ಕರ್ಜಗಿಯಲ್ಲಿ ನೂತನವಾಗಿ ನಿರ್ಮಿಸಿದ ವಿಶ್ವೇಶ ತೀರ್ಥರ ಗುರುಕುಲದ ಉದ್ಘಾಟನೆಗೆ ಆಗಮಿಸಿದ್ದ ಉಡುಪಿಯ ಪೇಜಾವರಮಠದ ಯತಿಗಳಾದ ವಿಶ್ವಪ್ರಸನ್ನ ತೀರ್ಥ ಸ್ವಾಮಿಗಳು ರಾಮ ದೇವರ ದೇವಸ್ಥಾನಕ್ಕೆ ಆಗಮಿಸಿ ರಾಮನಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ದೇವಸ್ಥಾನದ ಧರ್ಮದರ್ಶಿ ಹನುಮಂತನಾಯ್ಕ ಬದಾಮಿ ಸೇರಿದಂತೆ ಕೆಲವು ಭಕ್ತರಿಗೆ ಆಶೀರ್ವದಿಸಿ, ಮಂತ್ರಾಕ್ಷತೆ ವಿತರಿಸಿದರು.

ಶ್ರೀ ರಾಮನವಮಿ ಅಂಗವಾಗಿ ಶನಿವಾರ ಬೆಳಗ್ಗೆ 10.30ಕ್ಕೆ ನಗರದ ದೇಸಾಯಿಗಲ್ಲಿ ರಾಮಮಂದಿರದಲ್ಲಿ ನಿತ್ಯದ ಪೂಜೆ ನೆರವೇರಿಸಿ, ಮಧ್ಯಾಹ್ನ 1.30 ಗಂಟೆಗೆ ಅನ್ನಸಂತರ್ಪಣೆ ಕಾರ್ಯಕ್ರಮ ಆಯೋಜಿಸಲಾಗುವುದು. ಸಂಜೆ ವೇಳೆ ಮಹಾಮಂಗಳಾರತಿಯನ್ನು ನೆರವೇರಿಸಲಾಗುವುದು.

■ **ಹನುಮಂತನಾಯಕ್ ಬದಾಮಿ, ರಾಮಮಂದಿರ ದೇವಸ್ಥಾನ ವ್ಯವಸ್ಥಾಪಕರು**

ಈ ವೇಳೆ ಫಂಡರಾಪುರದ ಪ್ರಸಾದ ಮಹಾರಾಜ ಬಡವೆ ಶ್ರೀಗಳು, ದೇವಸ್ಥಾನದ ಧರ್ಮದರ್ಶಿ ಹನುಮಂತನಾಯಕ್ ಬದಾಮಿ, ಬ್ರಾಹ್ಮಣ ಸಮಾಜದ ಜಿಲ್ಲಾಧ್ಯಕ್ಷ ವಸಂತ ಮೊಕ್ತಾಲಿ, ರಮೇಶ ಕಡಕೋಳ, ದತ್ತಾತ್ರೇಯ ಕಳ್ಳಿಹಾಳ, ಚಂದ್ರಕಾಂತ ಕುಲಕರ್ಣಿ, ಹೆಚ್.ಎಸ್ ಕುಲಕರ್ಣಿ, ಅಶೋಕ ಕಳ್ಳಿಹಾಳ, ಉಮೇಶ ಕುಲಕರ್ಣಿ, ರಮೇಶ ಕುಲಕರ್ಣಿ, ಮಹಿಳಾ ಮಂಡಳದ ಮುಖ್ಯಸ್ಥೆ ಮೈಥಿಲಿ ಬದಾಮಿ, ಬ್ರಾಹ್ಮಣ ಸಮಾಜದ ಮುಖಂಡರು, ಸರ್ವಜನಾಂಗದ ಭಕ್ತರು ಇದ್ದರು.

ನಂಬಿಕೆಯಿಂದ ಮನುಷ್ಯನಲ್ಲಿ ಶಕ್ತಿ

ರಾಣೇಬೆನ್ನೂರ: ಸುಖ ಮತ್ತು ಕಷ್ಟಗಳು ಯಾರನ್ನೂ ಬಿಟ್ಟಿಲ್ಲ. ಅದ್ಭುತವಾದ ಬದುಕು ಕಟ್ಟಿಕೊಳ್ಳಲು ಒಂದು ಕಡೆ ಕಷ್ಟಗಳು ಇರಬೇಕು. ಇನ್ನೊಂದು ಕಡೆ ನಂಬಿಕೆಗಳು ಇರಬೇಕು. ಕಷ್ಟಗಳು ಜೀವನದಲ್ಲಿ ಪಾಠ ಕಲಿಸಿದರೆ ನಂಬಿಕೆಗಳು ಮನುಷ್ಯನಲ್ಲಿ ಶಕ್ತಿ ತುಂಬುತ್ತವೆ ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ಡಾ. ವೀರಸೋಮೇಶ್ವರ ಜಗದ್ಗುರುಗಳು ಹೇಳಿದರು.

ತಾಲೂಕಿನ ಲಿಂಗದಹಳ್ಳಿ ಕ್ಷೇತ್ರದ ಡಾ.ವೀರಭದ್ರ ಶ್ರೀಗಳವರ ಷಷ್ಠ್ಯಬ್ಧಿ ಅಂಗವಾಗಿ ಏರ್ಪಡಿಸಿದ್ದ ಜಗದ್ಗುರು ಪಂಚ ಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಧರ್ಮ ಜಾಗೃತಿ ಸಮಾರಂಭದಲ್ಲಿ ಆಶೀರ್ವಚನ ನೀಡಿದರು.

ಮನುಷ್ಯ ಜೀವನದಲ್ಲಿ ಸ್ನೇಹಿತರನ್ನು ಕೂಡಬೇಕು. ಶತ್ರುಗಳನ್ನು ಕಳೆಯಬೇಕು. ಸಂತೋಷವನ್ನು ಗುಣಿಸಬೇಕು. ದು:ಖವನ್ನು ಭಾಗಿಸಬೇಕು. ಇವು ಬಾಳಿನ ಭಾಗ್ಯೋದಯಕ್ಕೆ ಬೇಕಾದ ಅಮೂಲ್ಯ ಚಿಂತನಗಳು ಎಂದರು.

ವೀರಶೈವ ಧರ್ಮ ವೃಕ್ಷದ ಬೇರು ಜಗದ್ಗುರು ರೇಣುಕಾದಿ ಪಂಚಾಚಾರ್ಯರಾದರೆ ಆ ಧರ್ಮ ವೃಕ್ಷದ ಹೂ ಹಣ್ಣು ಬಸವಾದಿ ಶರಣರು. ಜಗದ್ಗುರು ರೇಣುಕಾ ಚಾರ್ಯರ ಉಸಿರಿಲ್ಲದೇ ಬಸವಣ್ಣನವರ ಬೆವರಿಲದೇ ವೀರಶೈವ ಧರ್ಮ ಪೂರ್ಣವಾಗದು. ಇವೆರಡರ ಸಮನ್ವಯ ಸದ್ಭಾವನೆಯಿಂದ ಬಾಳುವುದೇ ಎಲ್ಲರ ಗುರಿಯಾಗಬೇಕು.

ಲಿಂಗದಹಳ್ಳಿ ಹಿರೇಮಠದ ಡಾ. ವೀರಭದ್ರಶಿವಾಚಾರ್ಯ ಸ್ವಾಮಿಗಳವರ ಕ್ರಿಯಾಶೀಲ ಬದುಕು ಮಠದ ಸರ್ವಾಂಗೀಣ ಪ್ರಗತಿಗೆ ಕಾರಣವಾಗಿದೆ. ಅವರ ಬಹುದಿನಗಳ ಕನಸು ಇಂದು ನನಸಾಗಿದೆ ಎಂದರು.

ಉಜ್ಜಯಿನಿ ಸಿದ್ಧಲಿಂಗ ಜಗದ್ಗುರುಗಳು ಮಾತನಾಡಿ, ಮುಳ್ಳಿನ ಗಿಡಕ್ಕೆ ಬಟ್ಟೆ ಒಣ ಹಾಕಲು ಸಾಧ್ಯವಿಲ. ಹಾಗೆಯೇ ಕೆಲವರಿಗೆ ಎಷ್ಟೇ ಒಳ್ಳೆಯದನ್ನು ಮಾಡಿದರೂ ಅವರಿಂದ ಕೆಟ್ಟವರು ಅನಿಸಿಕೊಳ್ಳುವುದು ತಪ್ಪುವುದಿಲ್ಲ. ಪ್ರಯತ್ನ ಹಣೆ ಬರಹಕ್ಕಿಂತ ದೊಡ್ಡದು. ಪ್ರಯತ್ನ ಎಂಬ ಪದ ಚಿಕ್ಕದಾದರೂ ಅದರ ಫಲಿತಾಂಶ ಅಮೋಘ ಅಪಾರ ಎಂದರು.

ಶ್ರೀಶೈಲ ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಜಗದ್ಗುರುಗಳು, ಕಾಶಿ ಪೀಠದ ಡಾ. ಚಂದ್ರಶೇಖರ ಜಗದ್ಗುರುಗಳು, ಕಾಶಿ ನೂತನ ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಜಗದ್ಗುರುಗಳು, ಲಿಂಗದಹಳ್ಳಿ ಹಿರೇಮಠದ ಡಾ.ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿದರು.

ಕೊಡಿಯಾಲ ಹೊಸಪೇಟೆ ಜುಂಜಪ್ಪ ಹೆಗ್ಗಪ್ಪನವರ, ಎಸ್.ಎಸ್. ರಾಮಲಿಂಗಣ್ಣನವರ, ಪ್ರಶಾಂತ ರಿಪ್ಪನ್ ಪೇಟೆ ಸೇರಿದಂತೆ ಹಲವಾರು ಗಣ್ಯರು ಪಾಲ್ಗೊಂಡಿದ್ದರು. ಸಮಾರಂಭಕ್ಕೂ ಮುನ್ನ ಗ್ರಾಮದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ ಸಂಭ್ರಮದಿಂದ ಜರುಗಿತು.



ಪುಸ್ತಕ ಓದಿನಿಂದ ಮನಸ್ಸು ಶುದ್ಧೀಕರಣ: ಹಿರೇಮಠ

ಸವಣೂರ: ಮನೆಯಲ್ಲಿ ಒಂದು ಗ್ರಂಥಾಲಯವಿದ್ದರೆ ಸುಸಂಸ್ಕೃತ ವಾತಾವರಣ ನಿರ್ಮಾಣವಾಗುತ್ತದೆ. ಇಂದಿನ ಮೊಬೈಲ್ ಗೀಳಿಗೆಗೆ ಪುಸ್ತಕಗಳ ಓದೇ ಒಂದು ಮದ್ದು. ಇದರಿಂದ ಸಮಾಜದಲ್ಲಿರುವ ಜನರ ಮಾನಸಿಕ ಶುದ್ಧೀಕರಣವಾಗುತ್ತದೆ ಎಂದು ಹಾವೇರಿ ಜಿಲ್ಲಾ ಮನೆಗೊಂದು ಗ್ರಂಥಾಲಯ ಜಾಗೃತಿ ಸಮಿತಿಯ ಗ್ರಂಥಾಲಯಗಳನ್ನು ಸಮಿತಿಯ ಹಿರಿಯ ಸದಸ್ಯ ಎಸ್.ಆರ್. ಹಿರೇಮಠ ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಮನೆಗೊಂದಯ ಗ್ರಂಥಾಲಯ ಯೋಜನೆಯಡಿ ನಾಲ್ಕು ಗ್ರಂಥಾಲಯಗಳು ಸವಣೂರು ತಾಲೂಕಿನಲ್ಲಿ ಉದ್ಘಾಟಿಸಿ ಮಾತನಾಡಿದರು.

ಹಾವೇರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು, ಜಾಗೃತ ಸಮಿತಿಯ ಸದಸ್ಯ ಲಿಂಗಯ್ಯ ಬಿ. ಹಿರೇಮಠ, ಪುಸ್ತಕಗಳ ಓದು ಕುಂದುತ್ತಿರುವ ಈ ದಿನಗಳಲ್ಲಿ ಮನೆಮನೆಗೆ ಗ್ರಂಥಾಲಯ ಸ್ಥಾಪಿಸುವ ಮೂಲಕ ಹೊಸದಾದ ವಾತಾವರಣವನ್ನು ನಿರ್ಮಾಣ ಪ್ರಾಧಿಕಾರ ಮಾಡುತ್ತಿದೆ. ಪ್ರಕಾಶಕರು ಮತ್ತು ಲೇಖಕರ ಬಳಿ ಪುಸ್ತಕಗಳು ಕೊಳೆಯಬಾರದು ಮನೆಮನೆಗೆ ಮುಟ್ಟಬೇಕು ಎಂದರು.

ಹತ್ತಿಮತ್ತೂರಿನಲ್ಲಿ ಲೇಖಕ ಚಂದ್ರಶೇಖರ ಕುಳೇನೂರರ ಮನೆಯಲ್ಲಿ ಮೊದಲ ಗ್ರಂಥಾಲಯ, ಕಡಕೋಳ ಗ್ರಾಮದಲ್ಲಿ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚಂದ್ರಗೌಡ ಪಾಟೀಲರ ಮನೆಯಲ್ಲಿ, ಸವಣೂರಿನಲ್ಲಿ ಲೇಖಕಿ ಲತಾ ರಮೇಶ ವಾಲಿ ಹಾಗೂ ಕೊನೆಯಲ್ಲಿ ಯುವ ಲೇಖಕ ಚಿನ್ನು ಎಸ್. ರಾಗಿ ಅವರ ಮನೆಗಳಲ್ಲಿ ಗ್ರಂಥಾಲಯಗಳು ಉದ್ಘಾಟನೆಗೊಂಡವು.

ಹತ್ತಿಮತ್ತೂರಿನಲ್ಲಿ ಎಸ್.ಸಿ ಹಾಲಪ್ಪನವರ, ಎಸ್.ಬಿ. ಕಟಗಿ, ಎಸ್.ಎಂ. ಗುಡ್ಡಣ್ಣನವರ, ಕವಿತಾಕುಳೇನೂರಭಾಗವಹಿಸಿದ್ದು, ಕಡಕೋಳದ ಸಮಾರಂಭದಲ್ಲಿ ಬಸವನಗೌಡ ಪಾಟೀಲ, ಟಾಕಪ್ಪ ಗುಂಜಾಳ, ರೇಣುಕಾ ಪಾಟೀಲ, ಪ್ರಭು ಅರಗೋಳ, ಸವಣೂರಿನ ಲತಾ ವಾಲಿ ಅವರ ಮನೆ ಗ್ರಂಥಾಲಯ ಉದ್ಘಾಟನೆಯಲ್ಲಿ ಮಲ್ಲಿಕಾರ್ಜುನಗೌಡ ಪಾಟೀಲ, ರಮೇಶ ವಾಲಿ, ಪ್ರತಿಭಾ ಬೀರಲದಿನ್ನಿ, ಪೂರ್ಣಿಮಾ ಬೆಣ್ಣಿ ಇದ್ದರು. ಚಿನ್ನು ರಾಗಿ ಮನೆಯಲ್ಲಿ ಡಾ. ಮಹಾಂತೇಶ ಕುತನಿ, ಕೀರ್ತನಾ ಹಿರಣ್ಣನವರ, ನಾಗರಾಜ ರಾಗಿ ಮುಂತಾದವರಿದ್ದರು.

ಜಿಲ್ಲಾ ಜಾಗೃತಿ ಸಮಿತಿಯ ಸದಸ್ಯರಾದ ಸರ್ವಶ್ರೀ ಸತೀಶ ಕುಲಕರ್ಣಿ, ಸೋಮಣ್ಣ ಡಂರಮತ್ತೂರ, ರಾಜೇಂದ್ರ ಹೆಗಡೆ, ಶಂಕರ ಮಡಿವಾಳರ ಕಾರ್ಯಕ್ರಮ ನಡೆಸಿಕೊಟ್ಟರು.



ಇ-ಸ್ವತ್ತು ತಂತ್ರಾಂಶದಲ್ಲಿನ ನ್ಯೂನ್ಯತೆ ಸರಿಪಡಿಸಿ: ಶ್ರೀನಿವಾಸ ಮಾನೆ

ಹಾನಗಲ್: ಇ-ಸ್ವತ್ತು ತಂತ್ರಾಂಶದಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ನಿಗದಿತ ಕಾಲಮಿತಿಯಲ್ಲಿ ಇ-ಸ್ವತ್ತು ವಿತರಣೆಗೆ ಕ್ರಮ ಕೈಗೊಳ್ಳುವಂತೆ ಸ್ಥಳೀಯ ಪುರಸಭೆ ಮುಖ್ಯಾಧಿಕಾರಿ ವೈ.ಕೆ.ಜಗದೀಶ ಅವರಿಗೆ ಶಾಸಕ ಶ್ರೀನಿವಾಸ ಮಾನೆ ಸೂಚಿಸಿದರು.

ಇಲ್ಲಿನ ತಮ್ಮ ಜನಸಂಪರ್ಕ ಕಚೇರಿಯಲ್ಲಿ ಪುರಸಭೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು ಕೆಲ ಆಶ್ರಯ ವಸತಿ ನಿವೇಶನಗಳನ್ನು ಅನರ್ಹರಿಗೆ ಹಂಚಿಕೆ ಮಾಡಿರುವ ಬಗ್ಗೆ ದೂರುಗಳಿದ್ದು, ಕೂಡಲೇ ಮರುಪರಿಶೀಲನೆ ನಡೆಸಿ ಅರ್ಹರಿಗೆ ನಿವೇಶನ ದೊರಕಿಸಲು ಕ್ರಮ ಕೈಗೊಳ್ಳಿ. ಅಮೃತ 2.0 ಯೋಜನೆಯಡಿ ಹಾನಗಲ್ ನಗರಕ್ಕೆ 20★7 ಕುಡಿಯುವ ನೀರು ಪೂರೈಸುವ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವಂತೆ ಗಮನ ಹರಿಸಿ ಎಂದರು.

ಕಂಬಳಗೇರಿ ಕೆರೆ ಪಕ್ಕದ ರಸ್ತೆ ಅತಿಕ್ರಮಣಗೊಂಡಿರುವ ಬಗ್ಗೆ ದೂರುಗಳಿದ್ದು, ಈಗಾಗಲೇ ಸರ್ವೆ ಸಹ ಕೈಗೊಳ್ಳಲಾಗಿದೆ. ಆದಷ್ಟು ಬೇಗ ಅತಿಕ್ರಮಣ ತೆರವುಗೊಳಿಸಿ ಆ ಭಾಗದ ಹೊಲ, ಗದ್ದೆಗಳಿಗೆ ರೈತರು ಓಡಾಡಲು ರಸ್ತೆ ಅಭಿವೃದ್ಧಿ ಪಡಿಸಿ ಅನುಕೂಲ ಕಲ್ಪಿಸುವಂತೆ ಸೂಚಿಸಿ, ಇತ್ತೀಚಿಗೆ ನಡೆದ ಸಿ ಕಾರ್ನರ್ ನಿವೇಶನಗಳ ಹರಾಜು ಪ್ರಕ್ರಿಯೆ ಬಗ್ಗೆ ಮಾಹಿತಿ ಪಡೆದರು. 2025-26ನೇ ಸಾಲಿನ ಮುಖ್ಯಮಂತ್ರಿಗಳ ಮೂಲಸೌಕರ್ಯ ನಿಧಿಯಡಿ ಪುರಸಭೆ ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿ ನಾನಾ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು 7.60 ಕೋಟಿ ರೂ. ಒದಗಿಸಲಾಗಿದ್ದು, ಅನುದಾನ ಸದ್ಬಳಕೆ ಮಾಡಿಕೊಂಡು ಗುಣಮಟ್ಟದ ಕಾಮಗಾರಿ ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸುವಂತೆ ಸೂಚಿಸಿದರು. ಅಭಿಯಂತರ ನಾಗರಾಜ ಮಿರ್ಜಿ ಇದ್ದರು.



ರೈತರ ಜಮೀನುಗಳಿಗೆ ಸೋಲಾರ್ ತಂತಿಬೇಲಿ ಅಳವಡಿಸಲು ಆಗ್ರಹ

ಬ್ಯಾಡಗಿ: ಸತತವಾಗಿ ರೈತರು ಅತಿವೃಷ್ಟಿ ಹಾಗೂ ಅನಾವೃಷ್ಟಿ ಬರಗಾಲದಿಂದ ಆರ್ಥಿಕ ನಷ್ಟ ಅನುಭವಿಸುತ್ತಿದ್ದಾರೆ ಇದರ ಮಧ್ಯ ರೈತನು ಕಷ್ಟಪಟ್ಟು ಬೆಳೆದ ಅಲ್ಪಸ್ವಲ್ಪ ಬೆಳೆಯನ್ನು ಕಾಡುಪ್ರಾಣಿಗಳಾದ ಹಂದಿ, ಜಿಂಕೆ ಮಂಗಗಳು ಹಾಳು ಮಾಡುತ್ತಿದ್ದು ಫಸಲಿಗೆ ಬಂದ ಬೆಳೆಗಳು ನಾಶವಾಗುತ್ತಿವೆ ಆದ್ದರಿಂದ ಕಾಡುಪ್ರಾಣಿಗಳಿಂದ ರಕ್ಷಣೆ ಮಾಡಲು ಅರಣ್ಯ ಪ್ರದೇಶದ ಸುತ್ತಮುತ್ತಲೂ ಇರುವ ರೈತರ ಜಮುನಗಳಿಗೆ ಉಚಿತವಾಗಿ ಸೋಲಾರ್ ತಂತಿಬೇದಿಗಳನ್ನು ಅಳವಡಿಕೆ ಮಾಡಿಕೊಡಬೇಕೆಂದು ರೈತ ಮುಖಂಡ ಕಿರಣ್ ಕುಮಾರ್ ಗಡಿಗೋಳ ಆಗ್ರಹಿಸಿದ್ದಾರೆ.

ಪಟ್ಟಣದ ಅರಣ್ಯ ವಲಯ ಅಧಿಕಾರಿಗಳಿಗೆ ರೈತರೊಂದಿಗೆ ಮನವಿ ಪತ್ರ ನೀಡುವ ಮೂಲಕ ಮಾತನಾಡಿ, ರೈತರು ಕಷ್ಟ ಪಟ್ಟ ಬೆಳೆದ ಬೆಳೆಗಳು ನಾಶವಾದರೆ ಸಂಪೂರ್ಣ ನಷ್ಟವನ್ನು ಅರಣ್ಯ ಇಲಾಖೆಯ ಭರಿಸಬೇಕು. ತಮ್ಮ ಅರಣ್ಯ ಪ್ರದೇಶದ ಸುತ್ತಮುತ್ತಲು ಆಳವಾದ ಗುಂಡಿ ಮತ್ತು ತಂತಿ ಬೇಲಿ ಅಳವಡಿಸಿ ಕಾಡು ಪ್ರಾಣಿಗಳಿಂದ ರಕ್ಷಣೆ ಮಾಡಬೇಕು ಎಂದು ಆಗ್ರಹಿಸಿ, ಇಲ್ಲವಾದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದರು.

ಈ ವೇಳೆ ರೈತರುಗಳಾದ ಕಲವೀರಪ್ಪ ಬ್ಯಾಡಗಿ, ಬಸಪ್ಪ ಅಂಗರಗಟ್ಟಿ, ಚಂದ್ರಪ್ಪ ನಲ್ಲಿಕೊಪ್ಪ, ನಾಗರಾಜ ಕರೂರ, ನಾಗಪ್ಪ ಕರೂರ, ತೀರಕಪ್ಪ ಕರೂರ, ಎಲ್ಲಪ್ಪ ಕರೂರ, ರಾಜಪ್ಪ ಅಂಗರಗಟ್ಟಿ, ಪರಮೇಶ ಮಣ್ಣವಡ್ಡರ, ನವೀನ ಅಂಗರಗಟ್ಟಿ, ಪರಮೇಶ ದೊಡ್ಮನಿ, ಅನೇಕ ರೈತರು ಉಪಸ್ಥಿತರಿದ್ದರು.



ಅಂಬೇಡ್ಕರ್ ಜಯಂತಿಗೆ ಸಿದ್ಧತೆ: ಚಂದ್ರಶೇಖರ್

ಬ್ಯಾಡಗಿ: ಬಿ.ಆರ್.ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಜನರಿಗೆ ತಿಳಿಸುವ ಮೂಲಕ ಅವರ ಜಯಂತಿ ಕಾರ್ಯಕ್ರಮವನ್ನು ಹಬ್ಬದಂತೆ ತಾಲೂಕಿನಲ್ಲಿ ಅರ್ಥಪೂರ್ಣವಾಗಿ ಆಚರಣೆ ಮಾಡಲಾಗುವುದು ಎಂದು ತಹಶೀಲ್ದಾರ್ ಚಂದ್ರಶೇಖರ್ ನಾಯ್ಕ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ಶುಕ್ರುವಾರ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಏ.14 ರಂದು ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದೆ. ತಹಶೀಲ್ದಾರ ಕಚೇರಿಯಿಂದ ಡಾ.ಬಿ ಆರ್ ಅಂಬೇಡ್ಕರ್ ಅವರ ಭಾವಚಿತ್ರ ಮೆರವಣಿಗೆಗೆ ಶಾಸಕರು ಚಾಲನೆ ನೀಡುವರು ವಿವಿಧ ವಾದ್ಯ ವೈಭವಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾಗಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ತಲುಪಿ ವೇದಿಕೆ ಕಾರ್ಯಕ್ರಮ ಜರುಗಲಿದೆ. ಪ್ರಸಕ್ತ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ಜರುಗಲಿದೆ ಎಂದರು.

ತಾಲೂಕು ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಮಲ್ಲಿಕಾರ್ಜುನ ಮಾತನಾಡಿ, ಡಾ. ಅಂಬೇಡ್ಕರ್ ಅವರ ನಮ್ಮ ದೇಶದಲ್ಲಿ ಜನಿಸದೆ ಇದ್ದಿದ್ದರೆ ಸಂವಿಧಾನ ಎಂಬುದು ಇರುತ್ತಿರಲಿಲ್ಲ, ಮೀಸಲಾತಿ ಎಂಬುದು ನಮಗೆ ಗಗನ ಕುಸುಮ ಆಗುತ್ತಿತ್ತು. ಅಂಬೇಡ್ಕರ್ ಅವರ ನಮ್ಮ ದೇಶದಲ್ಲಿ ಜನಿಸಿದ್ದು ಭಾರತೀಯರ ಪುಣ್ಯ. ಅಂಬೇಡ್ಕರ್ ಜಯಂತಿ ಕಾರ್ಯಕ್ರಮ ಮಾಡುವುದೇ ಅದೃಷ್ಟ. ಈ ಅದೃಷ್ಟ ಮತ್ತೊಮ್ಮೆ ಒದಗಿ ಬಂದಿದೆ. ಅಂಬೇಡ್ಕರ್ ಅವರ ಚಿಂತನೆಗಳನ್ನು ಅರ್ಥ ಮಾಡಿಕೊಳ್ಳುವ ಉದ್ದೇಶದಿಂದ ಅವರ ಜಯಂತಿಯನ್ನು ಆಚರಣೆ ಮಾಡಬೇಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಮಟ್ಟದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ಕಡ್ಡಾಯ ಹಾಜರಾಗಬೇಕು. ಅಂಗನವಾಡಿ ಕೇಂದ್ರ, ಗ್ರಾಪಂಗಳಲ್ಲಿ ಅಂಬೇಡ್ಕರ್ ಜಯಂತಿ ಆಚರಣೆ ಕಡ್ಡಾಯ ಮಾಡಬೇಕು. ಕೆಲವು ಹಾಸ್ಟೆಲ್, ಶಾಲೆಗಳಲ್ಲಿ ಸರ್ಕಾರಿ ಇಲಾಖೆಗಳಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರ ಇರದೆ ಇರುವುದು ಕಂಡು ಬಂದಲ್ಲಿ ಅಂತಹವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು. ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ನಧಾಪ, ಮ್ಯಾನೇಜರ ಕುಲಕರ್ಣಿ, ಸಮಾಜದ ಮುಖಂಡರಾದ ಸುರೇಶ ಆಸಾಧಿ, ಮಾಜಿ ಸೈನಿಕ ಮಲ್ಲೇಶಪ್ಪ ಚಿಕ್ಕಣ್ಣನವರ, ಸೋಮಣ್ಣ ಮಾಳಗಿ, ದುರ್ಗೇಶ ಗೋಣೆಮ್ಮನವರ, ಮಂಜುನಾಥ ಹಂಜಗಿ, ರವಿ ಹುಣಸಿಮರದ, ಎಲ್ಲಾ ಇಲಾಖೆಗಳ ಅಧಿಕಾರಿಗಳು, ಸಮಾಜದ ಮುಖಂಡರು ಇದ್ದರು.



ವಿವಿಧ ಕಾಮಗಾರಿಗೆ ಶಾಸಕ ಮಾನೆ ಭೂಮಿಪೂಜೆ

ಹಾನಗಲ್: ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಜನತೆಯ ನೆಮ್ಮದಿಯ ಬದುಕಿಗೆ ಅವಶ್ಯ ಮೂಲಸೌಕರ್ಯ ಕಲ್ಪಿಸಲು ಗಮನ ಹರಿಸಲಾಗಿದ್ದು, ಪ್ರತಿಯೊಂದು ಗ್ರಾಮಗಳಲ್ಲಿ ಕನಿಷ್ಠ 20 ಲಕ್ಷ ರೂ.ದಿಂದ ಒಂದು ಕೋಟಿ ರೂ.ವರೆಗೆ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಶಾಸಕ ಶ್ರೀನಿವಾಸ ಮಾನೆ ತಿಳಿಸಿದರು.

ತಾಲೂಕಿನ ಕಾಲ್ವೆಯಲ್ಲಾಪುರ ಗ್ರಾಮದಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದ ಅವರು ಬಾಳಂಬೀಡ - ಚನ್ನಾಪುರ ನಡುವಿನ ರಸ್ತೆಯನ್ನು 65 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗಿದ್ದು, ಸುತ್ತಲಿನ ಹಲವು ಗ್ರಾಮಸ್ಥರಿಗೆ ಅನುಕೂಲವಾಗಿದೆ. ಅನುದಾನ ಲಭ್ಯತೆ ಆಧರಿಸಿ ಈ ಭಾಗದ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುವುದು. ಸಮರ್ಪಕ ಕುಡಿಯುವ ನೀರು ಪೂರೈಕೆಗಾಗಿ ಬಹುಗ್ರಾಮ ನದಿ ನೀರು ಸರಬರಾಜು ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ವಿವರಿಸಿದರು.

ಮುಖಂಡರಾದ ಚಂದ್ರು ಮರೆಕ್ಕನವರ, ಭರತೇಶ ಶೇತಸನದಿ, ಚಂದ್ರಕಾಂತ ಮರೆಕ್ಕನವರ, ಗುಡ್ಡಪ್ಪ ಮಾಸನಕಟ್ಟಿ, ಉಮೇಶ ಕೋಳಿನಿಂಗಣ್ಣನವರ, ಈರಣ್ಣ ಹಿರೂರ, ನಾಗರಾಜ ಹರಿಜನ, ಜಗದೀಶ ಜಾಡರ, ಭೀರಣ್ಣ ಶೇತಸನದಿ ಸೇರಿದಂತೆ ಇನ್ನೂ ಹಲವರು ಇದ್ದರು.



ವಿವಿ ಕ್ಯಾಂಪಸ್‌ನಲ್ಲಿಯೇ ಘಟಿಕೋತ್ಸವ ನಡೆಯಲಿ



ಹಾವೇರಿ: ಹಾವೇರಿ ವಿಶ್ವವಿದ್ಯಾಲಯದ ಮೊದಲ ಘಟಿಕೋತ್ಸವವನ್ನು ಖಾಸಗಿ ಕಾಲೇಜ್‌ನಲ್ಲಿ ನಡೆಸುತ್ತಿರುವುದನ್ನು ವಿರೋಧಿಸಿ ಹಾಗೂ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿಯೇ ನಡೆಸಲು ಒತ್ತಾಯಿಸಿ ಎಸ್‌ಎಫ್‌ಐ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಕೆರಿಮತ್ತಿಹಳ್ಳಿ ಹಾವೇರಿ ವಿಶ್ವವಿದ್ಯಾಲಯದ ಎದುರು ಕ್ಯಾಂಪಸ್ ವಿದ್ಯಾರ್ಥಿಗಳು ವಿವಿ ಕುಲಪತಿ ಪ್ರೊ. ಸುರೇಶ್ ಜಂಗಮಶೆಟ್ಟಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಬಸವರಾಜ ಎಸ್. ಮಾತನಾಡಿ, ಹಾವೇರಿ ಜಿಲ್ಲೆಯು ಅಖಂಡ ಧಾರವಾಡ ಜಿಲ್ಲೆಯಿಂದ ಬೇರ್ಪಟ್ಟು ಸ್ವತಂತ್ರ ಜಿಲ್ಲೆಯಾಗಿ 27 ವರ್ಷಗಳನ್ನು ಪೂರೈಸಿದೆ. ಶಿಕ್ಷಣದ ಶೈಕ್ಷಣಿಕ ಅಭಿವೃದ್ಧಿಗಾಗಿ ಪ್ರತ್ಯೇಕ ಸರ್ಕಾರಿ ವಿಶ್ವವಿದ್ಯಾಲಯ ಆರಂಭಿಸಲಾಗಿದೆ. ಜಿಲ್ಲೆಯ ಹೆಮ್ಮೆಯ ಕ್ಷಣವಾದ ಮೊದಲ ಘಟಿಕೋತ್ಸವವು ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ನಡೆಸಬೇಕೆಂದು ವಿದ್ಯಾರ್ಥಿ ಸಮುದಾಯದ ಪರವಾಗಿ, ವಿವಿಧ ಸಂಘ ಸಂಸ್ಥೆಗಳ, ಶಿಕ್ಷಣ ಪ್ರೇಮಿಗಳು, ಉಪನ್ಯಾಸಕರು, ಹಾವೇರಿ ಜಿಲ್ಲೆಯ ಜನತೆಯ ಪರವಾಗಿ ವಿನಂತಿಸಿಕೊಳ್ಳುತ್ತೇವೆ ಎಂದರು. ವಿವಿ ಕ್ಯಾಂಪಸ್‌ನಲ್ಲಿ ಘಟಿಕೋತ್ಸವವನ್ನು ನಡೆಸಿದರೆ ರಾಜ್ಯಪಾಲರಿಗೆ, ಜನಪ್ರತಿನಿಗಳಿಗೆ ಗೊತ್ತಾಗುತ್ತದೆ. ವಿವಿ ಅನುದಾನ ಒದಗಿಸಿ ಅಭಿವೃದ್ಧಿ ಮಾಡಬೇಕೆಂದು ಎಚ್ಚರಿಕೆ ಪಾಠವಾಗುತ್ತದೆ. ರಸ್ತೆ, ಬಸ್ ನಿಲ್ದಾಣ, ಬಸ್ಸಿನ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ ಎಂದರು.

ಎಸ್‌ಎಫ್‌ಐ ಜಿಲ್ಲಾ ಮುಖಂಡ ಅರುಣಕುಮಾರ್ ನಾಗವತ್ ಮಾತನಾಡಿದರು. ಎಸ್‌ಎಫ್‌ಐ ಕಾಲೇಜ್ ಘಟಕದ ಅಧ್ಯಕ್ಷೆ ಚೈತ್ರ ಕೊರವರ, ಮುಖಂಡರಾದ ಪ್ರಿಯಾ ದೇವಗಿರಿ, ಸಿಂಧೂ ಸಿ., ಈಶ್ವರಿ ಓಲೇಕಾರ, ನಿವೇದಿತಾ ಜಿ, ಸಿಮನಾನ್ ಐ.ಜಿ, ಯಶೋಧಾ ಎಲ್., ಚೆನ್ನಮ್ಮ ಸಿ.ಎಂ, ಗಿರಿಜಾ ಡಿ., ದ್ಯಾಮವ್ವ ಜಿ.ಎಸ್, ಪವಿತ್ರಾ ಕೆ., ಶಿವರಾಜ ಲಮಾಣಿ, ಶಂಭು, ನಾಗರಾಜ ಕೆ.ಆರ್, ನವೀನ ಡಿ.ಆರ್, ಕಿರಣ, ಪ್ರವೀಣ್ ಎಂ., ಶರಣು, ವಿದ್ಯಾರ್ಥಿಗಳು ಇದ್ದರು.

ಕಿರುಸುದ್ದಿ

ಡೀಸೆಲ್ ಮೇಲೆ ಜೀರೋ ಟ್ಯಾಕ್ಸ್ : ಪಾಟೀಲ



ಬೆಳಗಾವಿ: ಪೆಟ್ರೋಲ್ ಮೇಲಿನ ಅಬಕಾರಿ ಸುಂಕವನ್ನು 13 ರೂ.ಗಳಿಂದ 3 ರೂ ಪ್ರತಿ ಲೀಟರ್‌ಗೆ ಇಳಿಸಲಾಗಿದೆ. ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಪ್ರತಿ ಲೀಟರ್ ಗೆ 10 ರೂ ನಿಂದ ಶೂನ್ಯಕ್ಕೆ ಇಳಿಸಲಾಗಿದೆ. ತೈಲ ಕಂಪನಿಗಳು ಈಗಾಗಲೇ ಪೆಟ್ರೋಲ್ ಮೇಲೆ 24 ರೂ ಪ್ರತಿ ಲೀಟರ್ ಮತ್ತು ಡೀಸೆಲ್ ಮೇಲೆ 30 ರೂ ಪ್ರತಿ ಲೀಟರ್ ಗೆ ನಷ್ಟವನ್ನು ಭರಿಸುತ್ತಿವೆ. ಭಾರತ ಸರ್ಕಾರ ಆ ಹೊರೆಯನ್ನು ತನ್ನದೇ ಆದ ತೆರಿಗೆ ಆದಾಯದ ವೆಚ್ಚಗಳ ಮೂಲಕ ಕಡಿಮೆ ಮಾಡುತ್ತಿದೆ. ಭಾರತದ ಗ್ರಾಹಕರು ಸಂಕಷ್ಟ ಎದುರಿಸುತ್ತಿರುವಾಗ ಸಂಸ್ಕರಣಾಗಾರಗಳು ವಿದೇಶದಲ್ಲಿ ಮಾರಾಟ ಮಾಡಿ ಲಾಭ ಗಳಿಸಲು ಸಾಧ್ಯವಾಗದಂತೆ, ರಫ್ತು ತೆರಿಗೆಯನ್ನು ಕೂಡ ವಿಧಿಸಲಾಗಿದೆ. ಈ ದಿಟ್ಟ, ಸಕಾಲಿಕ ಮತ್ತು ಜನಪರ ನಿರ್ಧಾರಕ್ಕಾಗಿ ಆದರಣೀಯ ಪ್ರಧಾನಿ ನರೇಂದ್ರ ಮೋದಿ , ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ , ಹಾಗೂ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ, ಅವರಿಗೆ ಸಮಸ್ತ ನಾಗರಿಕರ ಪರವಾಗಿ ಆದರಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಿದ ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ್ ಪಾಟೀಲ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಳಗಾವಿ: 2026–27ನೇ ಸಾಲಿಗೆ ಪ್ರತಿಭಾವಂತ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳನ್ನು 6ನೇ ತರಗತಿಯ ಪ್ರವೇಶಕ್ಕಾಗಿ ಜಿಲ್ಲೆಯಲ್ಲಿ ಗುರುತಿಸಲ್ಪಟ್ಟ ಪ್ರತಿಷ್ಠಿತ ಶಾಲೆಗಳಾದ ಹುಕ್ಕೇರಿ ತಾಲೂಕಿನ ಡಾ. ಗಂಗಾಧರ ಆಂಗ್ಲ ಮಾಧ್ಯಮ ವಸತಿ ಶಾಲೆ ಶಿರಢಾಣ, ಚಿಕ್ಕೋಡಿ ತಾಲೂಕಿನ ಶ್ರೀ ಮುರಘೇಂದ್ರ ಆಂಗ್ಲ ಮಾಧ್ಯಮ ವಸತಿ ಶಾಲೆ ಕುಪ್ಪಣವಾಡಿ, ಗೋಕಾಕ ತಾಲೂಕಿನ ನಾಯಕ ಸ್ಟುಡೆಂಟ್ ಫೆಡರೇಶನ್ ಗೋಕಾಕ ಈ ಶಾಲೆಗಳಿಗೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಆನ್ಲೈನ್ ಮೂಲಕ ಏ.15. ರಿಂದ ಮೇ.4ರ ಒಳಗಾಗಿ ಸಲ್ಲಿಸಬಹುದಾಗಿದ್ದು, ಜಿಲ್ಲೆಗೆ ನಿಗದಿಪಡಿಸಿದ 15 ವಿದ್ಯಾರ್ಥಿಗಳ ಗುರಿಯನುಸಾರವಾಗಿ ಅರ್ಹತಾ ಪರೀಕ್ಷೆಯ ಮೂಲಕ ಆಯ್ಕೆ ಮಾಡಲು ಷರತ್ತಿಗೊಳಪಟ್ಟು ಅರ್ಜಿ ಸಲ್ಲಿಸುವ ವಿದ್ಯಾರ್ಥಿಯು ಬೆಳಗಾವಿ ಜಿಲ್ಲೆಯವರಾಗಿದ್ದು, ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು. ಅರ್ಜಿ ಸಲ್ಲಿಸುವ ವಿದ್ಯಾರ್ಥಿಯು 5ನೇ ತರಗತಿಯಲ್ಲಿ ತೇರ್ಗಡೆಯಾಗಿ ಶೇ.60 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರಬೇಕು. ಅರ್ಜಿ ಸಲ್ಲಿಸುವಾಗ ಕಡ್ಡಾಯವಾಗಿ 5ನೇ ತರಗತಿ ಅಂಕಪಟ್ಟಿ ಹಾಗೂ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಲಗತ್ತಿಸುವುದು. ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು, ಸಂಬಂಧಿಸಿದ ತಾಲೂಕುಗಳ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ವ್ಯಕ್ತಿ ಕಾಣೆ



ಬೆಳಗಾವಿ: ಜಿಲ್ಲೆಯ ಹುಕ್ಕೇರಿ ತಾಲೂಕಿನ ಜಿನರಾಳ ಗ್ರಾಮದ 33 ವರ್ಷದ ಪ್ರಭು ನಾಗಪ್ಪ ಹುಗ್ಗಾಯಿ ಎಂಬ ವ್ಯಕ್ತಿ ಮಾ.10ರಂದು ಮನೆಯಿಂದ ಹೋದವರು ಮರಳಿ ಬಾರದೆ ಕಾಣೆಯಾಗಿದ್ದು, ಈ ಕುರಿತು ಯಮಕನಮರಡಿ ಪೊಲೀಸ್ ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ. ಕಾಣೆಯಾದ ವ್ಯಕ್ತಿಯ ಚಹರೆ: 5 ಅಡಿ 6 ಇಂಚ್ ಎತ್ತರ, ತೆಳ್ಳನೆಯ ಮೈಕಟ್ಟು, ಕಪ್ಪು ಬಣ್ಣ, ಉದ್ದ ಮುಖ, ಸಣ್ಣ ಮೂಗು, ಮೂಗಿನ ಮೇಲೆ ಮಚ್ಚೆ ಇರುತ್ತದೆ. ಹಾಗೂ ಬಿಳಿ ಬಣ್ಣದ ಶರ್ಟ್ ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ ಮತ್ತು ಕನ್ನಡ ಮರಾಠಿ ಭಾಷೆ ಮಾತನಾಡುತ್ತಾರೆ. ಕಾಣೆಯಾದ ವ್ಯಕ್ತಿಯ ಬಗ್ಗೆ ಮಾಹಿತಿ ದೊರತಲ್ಲಿ ಯಮಕನಮರಡಿ ಪೊಲೀಸ್ ಠಾಣೆ ಸಂಪರ್ಕಿಸಬಹುದು ಎಂದು ಯಮಕನಮರಡಿ ಪೊಲೀಸ್ ಠಾಣೆಯ ತನಿಖಾಧಿಕರಿಗಳು ಪ್ರಕಟಣೆಯಲ್ಲಿ ತಳಿಸಿದ್ದಾರೆ.

ನಿಧನ ಸುದ್ದಿ

ವೀರಭದ್ರಪ್ಪ ಮಾದಮ್ಮನವರ



ಬೆಳಗಾವಿ: ತಾಲೂಕಿನ ಮಾರಿಹಾಳ ಗ್ರಾಮದ ನಿವಾಸಿ, ಸಹಕಾರಿ ಧುರೀಣರಾಗಿದ್ದ ವೀರಭದ್ರಪ್ಪಾ ಗಂಗಪ್ಪಾ ಮಾದಮ್ಮನವರ (80) ನಿಧನರಾಗಿದ್ದಾರೆ. ಮೃತರು ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗ್ರಾಮದ ಪ್ರಮುಖ ಧಾರ್ಮಿಕ ಸ್ಥಾನಗಳಾದ ನವಗ್ರಹ ದೇವಸ್ಥಾನ, ಹನುಮಾನ ಮಂದಿರ ನಿರ್ಮಾಣ ಮಾಡಿ ಗ್ರಾಮದ ಜನತೆಗೆ ಸಮರ್ಪಿಸಿದ್ದರು.



ತೆಲಸಂಗ: ಗ್ರಾಮದಲ್ಲಿ ಶ್ರೀರಾಮ ನವಮಿ ನಿಮಿತ್ತ ಶ್ರೀರಾಮನ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಶಿಕ್ಷಕ ವಿಜಯಕುಮಾರ ಕುಮಠಳ್ಳಿ, ಯುವಕರಾದ ಆಕಾಶ ಬಡಿಗೇರ, ಅಮಿತ ಹಡಪದ, ಸಚಿನ ಕುಂಬಾರ, ಸಾತ್ವಿಕ ಕಂಬಾರ, ಪ್ರಜ್ವಲ್ ಕುಮಠಳ್ಳಿ, ವಿನಾಯಕ ಹಿರೇಮಠ, ಮಂಜು, ಸಚಿನ ಕುಮಠಳ್ಳಿ, ಸುನಿಲ ರೋಡಗಿ, ಈರನಗೌಡ ಪಾಟೀಲ ಸೇರಿದಂತೆ ನೇಕರು ಉಪಸ್ಥಿತರಿದ್ದರು.

ಮದ್ಯದ ಅಂಗಡಿ ಬಂದ್‌ಗೆ ಆಗ್ರಹ

ಬೆಳಗಾವಿ: ಜಿಲ್ಲೆಯ ಸೌದತ್ತಿ ತಾಲೂಕಿನ ಹಾರೂಗೊಪ್ಪದಲ್ಲಿರುವ ಮದ್ಯದ ಅಂಗಡಿ ಹಾವಳಿಯಿಂದ ಸುತ್ತಮುತ್ತಲಿನ, ಗ್ರಾಮಗಳಲ್ಲಿನ ಯುವಕರಿಂದ ಹಿಡಿದು ವೃದ್ಧರವರೆಗೂ, ಮದ್ಯದ ವ್ಯಸನದಿಂದ ಕುಟುಂಬಗಳು ಬೀದಿಗೆ ಬರುವಂತಾಗುತ್ತಿದೆ ಎಂದು ಆಕ್ರೋಶ ಹೊರ ಹಾಕಿ ಚಚಡಿ ಗ್ರಾಮದ ಮಹಿಳೆಯರು ಜಿಲ್ಲಾಧಿಕಾರಿಗಳ ಕಚೇರಿ ಎದುರು ಮದ್ಯದ ಅಂಗಡಿ ಬಂದ್ ಮಾಡುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು.

ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿ ಎದುರು ಮದ್ಯದ ಅಂಗಡಿ ಬಂದ್ ಮಾಡುವಂತೆ ಆಗ್ರಹಿಸಿ ಪ್ರತಿಭಟಿಸುತ್ತಿದ್ದ ಮಹಿಳೆಯ ಸಂಕಷ್ಟವನ್ನು ಸ್ಪಂದಿಸಿದ ಮದ್ಯದ ಅಂಗಡಿ ಮಾಲೀಕರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಇದೇ ವೇಳೆ ಚಚಡಿ ಗ್ರಾಮದ ಮಹಿಳೆ ಒಬ್ಬರು ಮಾತನಾಡಿ, ಹಾರೂಗೊಪ್ಪದಲ್ಲಿ ಮದ್ಯದ ಅಂಗಡಿಯಿಂದ ಪ್ರತಿನಿತ್ಯ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಸಾಕಷ್ಟು ತೊಂದರೆಯಾಗುತ್ತಿದ್ದು, ಹಾರೂಗೊಪ್ಪ–ಚಚಡಿ ವೃತ್ತದಲ್ಲಿ ಮದ್ಯದ ಅಂಗಡಿ ಇದ್ದು, ಮದ್ಯಮವನ್ನು ಸೇವನೆ ಮಾಡಿ ರಸ್ತೆ ದಾಟುವ ವೇಳೆ ಸಾಕಷ್ಟು ಅಪಘಾತಗಳು ಸಂಭವಿಸಿ ಕೆಲ ಜನ ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಜನತೆಯ ಸಾವು ನೋವುಗಳಿಗೆ ಹೊಣೆ ಯಾರು ಎಂದು ಪ್ರಶ್ನಿಸಿದರು. ಕೂಡಲೇ ಮದ್ಯದ ಅಂಗಡಿಗಳನ್ನು ಬಂದ ಮಾಡುವಂತೆ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದರು. ಈ ವೇಳೆ ಹಾರೂಗೊಪ್ಪ–ಚಚಡಿ ಗ್ರಾಮದ ಅನೇಕ ಮಹಿಳೆಯರು ಹಾಗೂ ಪುರುಷರು ಇದ್ದರು.



ಬೆಳಗಾವಿ : ಜಿಲ್ಲೆಯ ಸೌದತ್ತಿ ತಾಲೂಕಿನ ಹಾರೂಗೊಪ್ಪದಲ್ಲಿರುವ ಮದ್ಯದ ಅಂಗಡಿ ಬಂದ್ ಮಾಡುವಂತೆ ಆಗ್ರಹಿಸಿ ಚಚಡಿ ಗ್ರಾಮದ ಮಹಿಳೆಯರು ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ಮಾಡಿದರು.

ಹದಗೆಟ್ಟ ರಸ್ತೆಯಿಂದ ಹೈರಾಣಾದ ಬಸ್ ಚಾಲಕರು | ಜೀವ ಕೈಯಲ್ಲೇ ಹಿಡಿದು ಸಂಚಾರ

ಬಸ್ ನಿಲ್ದಾಣ ಪ್ರವೇಶಕ್ಕೆ ಹರಸಾಹಸ!

ಉಳವಯ್ಯ ಹಿರೇಮಠ

ದಿಗಂತ ವಿಶೇಷ

ಚನ್ನಮ್ಮನ ಕಿತ್ತೂರು: ಕಿತ್ತೂರಿನ ಕೇಂದ್ರ ಬಸ್ ನಿಲ್ದಾಣ ಪ್ರವೇಶಿಸುವ ತಿರುವಿನ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಚಾಲಕರು ಒಳ ಪ್ರವೇಶಿಸಲು ಹರಸಾಹಸಪಡಬೇಕಿದೆ. ರಸ್ತೆ ದುಸ್ಥಿತಿ ಕಂಡು ಕಾಣದಂತೆ ಇರುವ ಅಧಿಕಾರಿಗಳ ನಡೆಯಿಂದ ಚಾಲಕರು ಸಂಕಷ್ಟ ಅನುಭವಿಸುವಂತಾಗಿದೆ.

ಬಸ್‌ಚಾಲಕರುಹಾಗೂಪ್ರಯಾಣಿಕರು ಜೀವ ಕೈಯಲ್ಲೇ ಹಿಡಿದುಕೊಂಡು ಬಸ್ ನಿಲ್ದಾಣ ಪ್ರವೇಶಿಸುವ ಅನಿವಾರ್ಯತೆಯಿದೆ.

ಐತಿಹಾಸಿಕ ಪಟ್ಟಣಕ್ಕೆ ದಿನದಿಂದ ದಿನಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯೂ ಏರಿಕೆಯಾಗುತ್ತಿದೆ. ಚನ್ನಮ್ಮನ ಕಿತ್ತೂರಿನ ಬಸ್ ನಿಲ್ದಾಣದ ಪಕ್ಕದಲ್ಲಿ ರಾಷ್ಟ್ರೀಯ ಹೆದ್ದಾರಿಯ ಸರ್ವಿಸ್ ರಸ್ತೆಯ ಮೂಲಕ ಪ್ರತಿ ದಿನ ಬೆಳಗಾವಿ ಹಾಗೂ ಧಾರವಾಡ ಕಡೆಯಿಂದ ನೂರಾರು ಸಂಖ್ಯೆಗಳ ಬಸ್‌ಗಳು ನಿಲ್ದಾಣದೊಳಗಡೆ ಪ್ರವೇಶ ಮಾಡುತ್ತಿವೆ.

ಸರ್ವಿಸ್ ರಸ್ತೆಗಿಂತ ಎತ್ತರದಲ್ಲಿರುವ ನಿಲ್ದಾಣ ಕಾರ್ನರ್ ಮೂಲಕ ಬಸ್‌ಗಳು ಒಳಗಡೆ ಪ್ರವೇಶ ಮಾಡಬೇಕು. ಅಲ್ಲಿಯೇ ಸಾಕಷ್ಟು ತಗ್ಗು ಗುಂಡಿಗಳು ಬಿದ್ದಿವೆ. ಹೀಗಿರುವಾಗ ಅಲ್ಲಿರುವ ತಗ್ಗು ಗುಂಡಿಗಳನ್ನು ತಪ್ಪಿಸಿ ಬಸ್ ಚಾಲಕರು ವಾಹನ ಚಲಾಯಿಸಿದರೆ ಕಂಪೌಂಡ ಗೋಡೆಗೆ ಡಿಕ್ಕಿ ಹೊಡೆಯುವ ಸಾಧ್ಯತೆಯಿದೆ.

ಹದಗೆಟ್ಟ ರಸ್ತೆಯಿಂದಾಗಿ ನಿತ್ಯ ಬಸ್‌ಗಳು ಒಂದಿಷ್ಟು ರಸ್ತೆಯಲ್ಲೇ ನಿಂತು ನಿಲ್ದಾಣ ಪ್ರವೇಶಿಸಬೇಕಿದೆ. ಇದೇ ರಸ್ತೆಯಿಂದಾಗಿ ದ್ವಿಚಕ್ರ ವಾಹನ ಸವಾರರಂತೂ ಬಿದ್ದು ಗಾಯಗೊಂಡಿರುವ ಉದಾಹರಣೆ ಸಾಕ್ಷಿವೆ.

ಇಲ್ಲಿ ಹೆಚ್ಚಿನ ಅನಾಹುತ ಸಂಭವಿಸುವ ಮುನ್ನ ಅಧಿಕಾರಿಗಳು ಎಚ್ಚೆತ್ತು ಪ್ರಯಾಣಿಕರ ಹಿತದೃಷ್ಟಿಯಿಂದ ಈ ಸ್ಥಳವನ್ನು ಶಾಶ್ವತವಾಗಿ ಉಳಿಯುವಂತೆ ದುರಸ್ತಿ ಕಾಮಗಾರಿಯ ಆವಶ್ಯಕತೆ ಇದೆ.



ಪ್ರಾಣಸಂಕಟ

ಬಸ್ ನಿಲ್ದಾಣ ಒಳಪ್ರವೇಶಿಸುವ ಸಂದರ್ಭದಲ್ಲಿ ಜೀವ ಕೈಗೆ ಬಂದಿರುತ್ತದೆ. ಸಾಕಷ್ಟು ದೂರ ಸಂಚಾರ ಮಾಡಿ ಬಂದಿರುವ ನಮಗೆ ನಿಲ್ದಾಣ ಬಂತೆಂದರೆ ಎದೆಯಲ್ಲಿ ಢವ ಢವ ಶುರುವಾಗಿರುತ್ತದೆ. ತಗ್ಗಿಗೆ ಬಸ್ ಬಿದ್ದಾಕ್ಷಣ ಮೇಲೇಳಲು ಒದ್ದಾಡುತ್ತದೆ. ತೆಗ್ಗು ತಪ್ಪಿಸಲು ಹೋದರೆ ಎದರುಗಿನ ತಡೆಗೋಡೆಗೆ ಡಿಕ್ಕಿ ಹೊಡೆಯುವ ಸಾಧ್ಯತೆಯಿದೆ. ಮೇಲಾಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಹೆಸರು ಹೇಳಲು ಇಚ್ಚಿಸದ ಚಾಲಕರು ಅಳಲು ತೋಡಿಕೊಂಡರು.

> ಈ ಬಸ್ ನಿಲ್ದಾಣದ ಸಮಸ್ಯೆಗಳನ್ನು ನಮ್ಮ ಇಲಾಖೆಯಲ್ಲಿರುವ ಕಾಮಗಾರಿ ಇಲಾಖೆಯ ಅಧಿಕಾರಿಗಳ ಮೂಲಕ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ.
> ■ ಕೆ.ಎಲ್.ಗುಡೆನ್ನವರ, ವಿಭಾಗೀಯ ಸಾರಿಗೆ ನಿಯಂತ್ರಣಾಧಿಕಾರಿ ಬೆಳಗಾವಿ

> ಬಸ್ ನಿಲ್ದಾಣದಲ್ಲಿನ ಸಮಸ್ಯೆಗಳ ಕುರಿತು ನನ್ನ ಗಮನಕ್ಕೆ ಬಂದಿದ್ದು, ಸಬಂಧಪಟ್ಟ ಅಧಿಕಾರಿಗಳ ಮೂಲಕ ಅವುಗಳ ಪರಿಹಾರಕ್ಕೆ ಸೂಕ್ತ ಕ್ರಮ ಜರುಗಿಸಲಾಗುವದು.
> ■ ಮಹೇಶ ತಿರಕನ್ನವರ, ಘಟಕ ವ್ಯವಸ್ಥಾಪಕರು ಬೈಲಹೊಂಗಲ

ಸಮಸ್ಯೆಗಳ ಆಗರ: ಬಸ್ ನಿಲ್ದಾಣದೊಳಗಡೆ ಇನ್ನೂ ಹಲವಾರು ಸಮಸ್ಯೆಗಳಿದ್ದು, ಬಸ್ ನಿಲುಗಡೆಗೆ ಸ್ಥಳದಲ್ಲಿನ ಮತ್ತು ಬಸ್‌ಗಳ ಆಗಮನ ನಿರ್ಗಮನ ಸ್ಥಳಗಳಲ್ಲಿನ ಕಾಂಕ್ರಿಟ್ ಕಿತ್ತು ಹೋಗಿ ಕೆಳಗಡೆ ಹಾಕಲಾಗಿದ್ದ ಕಬ್ಬಿನ ರಾಡ್‌ಗಳು ಮೇಲೆದ್ದು ವಾಹನಗಳಿಗೆ ತಾಗುವಂತಾಗಿವೆ. ಶೌಚಾಯಲ ಹಾಗೂ ಪ್ಲಾಟ್ ಫಾರ್ಮಗೆ ನಾಮಫಲಕವಿಲ್ಲ, ಇವೆಲ್ಲ ಡಿಜಟಲೀಕರಣವಾಗಬೇಕು, ಶುದ್ಧ ಕುಡಿಯುವ ನೀರಿನ ಘಟಕ ಟ್ಯಾಂಕ್ ಒಡೆದು ನೀರು ಪೋಲಾಗುತ್ತಿದೆ ಮುಂತಾದ ಸಮಸ್ಯೆಗಳಿದ್ದು, ಅಧಿಕಾರಿಗಳು ಕಂಡು ಮೂಕ ಪ್ರೇಕ್ಷಕರಾಗಿದ್ದಾರೆ. ಎಲ್ಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕೆಂದು ಸಾರ್ವಜನಿಕರ ಆಗ್ರಹವಾಗಿದೆ.

ಶ್ರೀರಾಮ ಆದರ್ಶ ಪುರುಷ

ಗೋಕಾಕ: ಭಾರತದ ಪ್ರತಿಯೊಬ್ಬ ನಾಗರಿಕರು ನಮ್ಮ ಸನಾತನ ಧರ್ಮದ ಮೌಲ್ಯ ಉಳಿಸಬೇಕು. ಒಬ್ಬ ಆದರ್ಶ ವ್ಯಕ್ತಿ ಹೀಗೆ ಇರಬೇಕೆಂದು ಶ್ರೀರಾಮನು ವಿಶ್ವಕ್ಕೆ ತೋರಿಸಿಕೊಟ್ಟ ಮಹಾನ್ ಪುರುಷನಾಗಿದ್ದಾನೆ ಎಂದು ಗೋಕಾಕ ತಾಲೂಕಿನ ಬೆಟಗೇರಿ ಗ್ರಾಮದ ಶ್ರೀರಾಮು ಅಭಿಮಾನಿ ಬಳಗದ ಸಂಚಾಲಕ ವೀರನಾಯ್ಕ ನಾಯ್ಕರ ಹೇಳಿದರು.

ತಾಲೂಕಿನ ಬೆಟಗೇರಿ ಗ್ರಾಮದ ಶ್ರೀರಾಮು ಅಭಿಮಾನಿ ಬಳಗದ ಸಹಯೋಗದಲ್ಲಿ ಬೆಟಗೇರಿ ಗ್ರಾಮದಲ್ಲಿ ನಡೆದ ಶ್ರೀರಾಮು ನವಮಿ ದಿನಾಚರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸ್ಥಳೀಯ ವೇದಮೂರ್ತಿ ಈರಯ್ಯ ಹಿರೇಮಠ, ಸಂಗಯ್ಯ ಹಿರೇಮಠ, ವಿಜಯ ಮಠದ ಕಾರ್ಯಕ್ರಮದ ಸಾನಿಧ್ಯ ವಹಿಸಿ ಶ್ರೀರಾಮನ ಭಾವಚಿತ್ರಕ್ಕೆ ಮಹಾಪೂಜೆ, ಪುಷ್ಪಾರ್ಪನೆ ಸಮರ್ಪಿಸಿದ ಬಳಿಕ ಸ್ಥಳೀಯ ಬೆಟಗೇರಿ ಗ್ರಾಮ ಪಂಚಾಯತ ಗ್ರಂಥಾಲಯ ಮತ್ತು ಅರಿವು ಕೇಂದ್ರದ ಮೇಲ್ವಿಚಾರಕ ಬಸವರಾಜ ಪಣದಿ ಪ್ರಾಸ್ತಾವಿಕವಾಗಿ ಶ್ರೀರಾಮನ ಬದುಕಿನ ತತ್ವದಾರ್ಶಗಳ ಕುರಿತು ಮಾತನಾಡಿದರು. ಸಿಹಿ ವಿತರಣೆ ನಂತರ ಮಹಾಪ್ರಸಾದ ಜರುಗಿತು.

ತಾಪಂ ಮಾಜಿ ಸದಸ್ಯ ಬಸವಂತ ಕೋಣಿ, ಲಕ್ಷ್ಮಣ ಚಂದರಗಿ, ಈರಣ್ಣ ಬಳಿಗಾರ, ಲಕ್ಕಪ್ಪ ಚಂದರಗಿ, ಕೆಂಪಣ್ಣ ಪೇದನ್ನವರ, ಭೀಮಪ್ಪ ಪೇದನ್ನವರ, ಹನಮಂತ ವಗ್ಗರ, ಮಲ್ಲಿಕಾರ್ಜುನ ಪೇದನ್ನವರ, ಮಲ್ಲಪ್ಪ ಪೇದನ್ನವರ, ಭರಮಣ್ಣ ಪೂಜೇರಿ, ಲಕ್ಷ್ಮಣ ಚಿನ್ನನ್ನವರ, ನಾಗಪ್ಪ ವಗ್ಗರ, ತಮ್ಮಣ್ಣ ಮೆಟ್ಟಿನ್ನವರ, ಫಕೀರಪ್ಪ ಪೇದನ್ನವರ, ಸಂಜು ಪೂಜೇರಿ, ಭೀಮನಾಯ್ಕ ನಾಯ್ಕರ, ಇಡಪ್ಪ ರಾಮಗೇರಿ, ನಾಗಪ್ಪ ವಗ್ಗರ, ಶಿವಾನಂದ ಚಿನ್ನವರ, ಮಂಜು ಹಳಬರ, ಬಾಳಪ್ಪ ಮೆಟ್ಟಿನ್ನವರ, ಮಲ್ಲಪ್ಪ ಕಳಸಪ್ಪಗೋಳ ಸ್ಥಳೀಯ ಶ್ರೀರಾಮು ಅಭಿಮಾನಿ ಬಳಗದ ಪದಾಽಕಾರಿಗಳು, ಸದಸ್ಯರು, ಗ್ರಾಮಸ್ಥರು ಇದ್ದರು.



ಆಂಜನೇಯಸ್ವಾಮಿ ದೇಗುಲ ಕಳಸಾರೋಹಣ

ಯರಗಟ್ಟಿ: ತಾಲೂಕಿನ ಸೊಪ್ಪಡ್ಲ ಗ್ರಾಮದಲ್ಲಿ ನೆಲೆಸಿರುವ ಶಕ್ತಿ ದೈವ ಆಂಜನೇಯ ಸ್ವಾಮಿ ದೇಗುಲಕ್ಕೆ ನೂತನ ಶುಕ್ರವಾರ ಕಳಸಾರೋಹಣ ಕಾರ್ಯಕ್ರಮ ಹರಗುರು ತ್ರಿಮೂರ್ತಿಗಳ ಸಮ್ಮುಖದಲ್ಲಿ ಜರುಗಿತು.

10 ಅಡಿ ಆಂಜನೇಯ ದೇವಸ್ಥಾನಕ್ಕೆ ಗೋಪುರ ನಿರ್ಮಿಸಲಾಗಿದ್ದು , ನೂತನ ಗೋಪುರಕ್ಕೆ ಕಳಸಾರೋಹನ ಮತ್ತು ರಾಮನವಮಿ ನಿಮಿತ್ತ ಗ್ರಾಮದ ಪ್ರಮುಖ ಬೀದಿಗಳಲ್ಲಿ ಆಕರ್ಷಕ ವಿದ್ಯುತ್ ದೀಪಾಲಂಕಾರ, ಅಲ್ಲಲ್ಲಿ ಸ್ವಾಗತ ಕೋರುವ ಫ್ಲೆಕ್ಸ್‌ಗಳು, ಕೇಸರಿ ವಸ್ತ್ರಾಲಂಕಾರ ಹಾಗೂ ತಳಿರು ತೋರಣಗಳಿಂದ ದೇವಾಲಯವನ್ನು ಸಿಂಗರಿಸಲಾಗಿತ್ತು. ಗ್ರಾಮಸ್ಥರ ಸಹಕಾರದೊಂದಿಗೆ ನಿರ್ಮಿಸಲಾದ ಗೋಪುರಕ್ಕೆ ಕಳಸಾರೋಹಣಕ ಕಾರ್ಯಕ್ರಮ ಕಳೆತದ್ದಿದೆ ಎಂದು ಭಾಗೋಜಿಕೊಪ್ಪ ಶಿವಲಿಂಗ ಮುರುಘೇಂದ್ರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಈ ವೇಳೆ ಸತ್ತಿಗೇರಿಯ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಕೊರಕೊಪ್ಪ ರೇವಣಸಿದ್ದೇಶ್ವರ ಸ್ವಾಮೀಜಿ, ಎಂ. ಬಿ. ಚಿಲಕಂಡಿ, ಶೇಖಪ್ಪ ಹರಳಿ, ಸುನೀಲ ಬೆಲ್ಲದ, ಕುಮಾರ ಮಾಲಮನಿ, ಹನಮಂತ ಹೊಂಗಲ, ಬಾಲಪ್ಪ ತಳವಾರ, ಶಂಕರ ದಂಡೈನ್ನವರ, ಸುರೇಶ ಗುಡದ, ವಿಠ್ಠಲ ಯಡ್ರಾಂವಿ, ಸಿದ್ದಪ್ಪ ಕೊಡ್ಲಿವಾಡ, ಪ್ರವೀಣ ಬಿ.ಗೌಡರ, ಮಿಥುನ್ ಗೌಡರ, ಕರೆಪ್ಪ ಪೂಜೇರಿ, ಗೌಡಪ್ಪ ಸವದತ್ತಿ, ಮಹಾದೇವ ಯಡ್ರಾಂವಿ, ಈರಣ್ಣಾ ಕುಂಬಾರ, ಮಹಾಲಿಂಗಪ್ಪ ಕಟ್ಟಿ ಸೇರಿದಂತೆ ಇತರರು ಇದ್ದರು.





ಬೈಲಹೊಂಗಲ ನಗರದಲ್ಲಿ ಶ್ರೀರಾಮನವಮಿ ಅಂಗವಾಗಿ ಕಲ್ಮಠ ಗಲ್ಲಿಯ 8 ತಿಂಗಳಿನ ಮಗು ಸುದರ್ಶನ ಶಿವಾನಂದ ಅಲ್ಲಪ್ಪನವರ ಶ್ರೀರಾಮನ ವೇಷದಲ್ಲಿ ಕಂಗೊಳಿಸಿ, ಎಲ್ಲರ ಗಮನ ಸೆಳದನು.

ಕ್ಯಾನ್ಸರ್ ವಿರುದ್ಧ ಜಾಗೃತಿ ಅಗತ್ಯ: ಡಾ.ಉದಯ ಕುಡಚಿ

ಯಮಕನಮರಡಿ: ಗ್ರಾಮೀಣ ಮಟ್ಟದಲ್ಲಿ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸುವಲ್ಲಿ ಆಶಾ ಕಾರ್ಯಕರ್ತೆಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ, ಡಾ. ಉದಯ ಕುಡಚಿ ಹೇಳಿದರು.

ಹಿಂಡಾಲ್ಕೋ, ಇಂಡಿಯನ್ ಕ್ಯಾನ್ಸರ್ ಸೊಸೈಟಿ ಹಾಗೂ ಮಹಿಳಾ ಕಲ್ಯಾಣ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಹುಕ್ಕೇರಿ ತಾಲೂಕಿನ ಯಮಕನಮರಡಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಶಾ ಕಾರ್ಯಕರ್ತೆಯರಿಗೆ ಕ್ಯಾನ್ಸರ್ ಕುರಿತು ವಿಶೇಷ ತರಬೇತಿ ಹಾಗೂ ಕೈಪಿಡಿ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು,

ಕ್ಯಾನ್ಸರ್‌ನ ವಿವಿಧ ಹಂತಗಳು ಹಾಗೂ ಅದರ ಲಕ್ಷಣಗಳ ಕುರಿತು ಮೊದಲಿಗೆ ಆಶಾಕಾರ್ಯಕರ್ತೆಯರಿಗೆ ಸಂಪೂರ್ಣ ತಿಳುವಳಿಕೆ ಇರಬೇಕು. ನಂತರ ಅವರು ಗ್ರಾಮಗಳಿಗೆ ತೆರಳಿ ಕೈಪಿಡಿಯ ನೆರವಿನಿಂದ ಜನರಿಗೆ ಜಾಗೃತಿ ಮೂಡಿಸಿ, ಲಕ್ಷಣಗಳು ಕಂಡುಬಂದಲ್ಲಿ ರೋಗಿಗಳನ್ನು ಆಸ್ಪತ್ರೆಗೆ ದಾಖಲಿಸಲು ನೆರವಾಗಬೇಕು ಎಂದು ತಿಳಿಸಿದರು.

ಬೆಂಗಳೂರಿನ ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ. ಗುರು ಸುಹಾಸ್ ಮಾತನಾಡಿ, ಭಾರತದಲ್ಲಿಒಂಬತ್ತುಜನರಲ್ಲಿಒಬ್ಬರಿಗೆ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದರು.

ವೈ. ಜಯಂತಿ ಎಂ. ಚೌಗುಲ ಮಾತನಾಡಿದರು. ಯಮಕನಮರಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಉದಯಕುಮಾರ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಸಂತಾನಿ ದಂಡಿನ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಶಂಕರ್ ಕತ್ತಿ ನಿರೂಪಿಸಿ, ಸ್ವಾಗತಿಸಿದರು.



ಉದ್ಯಮಗಳ ಬಗ್ಗೆ ಜಾಗೃತಿ ಕಾರ್ಯಕ್ರಮ

ಬೆಳಗಾವಿ: ಇಲ್ಲಿನ ಕೆಎಲ್ಇ ಕಾಲೇಜ್ ಆಫ್ ಫಾರ್ಮಸಿ, ಬೆಳಗಾವಿಯು ಕರ್ನಾಟಕ ಸರ್ಕಾರದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಮತ್ತು ನವಯುಗದ ನಾವೀನ್ಯತೆ ಜಾಲ ಕುರಿತು ಜಾಗೃತಿ ಕಾರ್ಯಕ್ರಮವನ್ನು ಬೆಳಗಾವಿಯ ಆಶ್ರಯದಲ್ಲಿ ಆಯೋಜಿಸಲಾಗಿತ್ತು. ವಿಜಯಕುಮಾರ ಶಿವಪೂಜೆ, ಬೆಳಗಾವಿಯ ಕೆಎಲ್ಇ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಸುನೀಲ. ಎಸ್. ಜಲಾಲಪುರೆ, ಡೀನ್ ಡಾ. ವಿ.ಎಂ. ಮಾಸ್ತಿಹೋಳಿಮಠ ಮತ್ತು ಅಧ್ಯಾಪಕರು ಉಪಸ್ಥಿತರಿದ್ದರು. ಸಂಯೋಜಕರಾದ ಡಾ. ನಿತ್ಯಾನಂದ ಶಾಸ್ತ್ರಿ ಸ್ವಾಗತಿಸಿದರು. ಡಾ. ಭಾಸ್ಕರ ಕುರಂಗಿ, ಸಿಬ್ಬಂದಿ ಸೇರಿದಂತೆ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಹಳ್ಳೂರಲ್ಲಿ ಮಹಿಳಾ ದಿನಾಚರಣೆ



ಹಳ್ಳೂರ: ಸ್ಥಳೀಯ ಶ್ರೀ ದಾನೇಶ್ವರಿ ಮಹಿಳಾ ಅರ್ಬನ್ ಕೋ. ಸೊ. ಸಂಘದಲ್ಲಿ ಮಹಿಳಾ ದಿನಾಚರಣೆ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷೆ ನೀಲವ್ವ ಮ. ಹೋಸಟ್ಟಿ ಉದ್ಘಾಟಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷೆ ಅನ್ನಪೂರ್ಣಾ ಹ. ಅಟಮಟ್ಟಿ, ಕಾರ್ಯದರ್ಶಿ ಸುಪ್ರೀಯಾ ಸಂ.ಉಪಾಧ್ಯೆ, ಸಂಘದ ನಿರ್ದೇಶಕರಾದ ಸುಮಂಗಲಾ ನಾ.ಮೋರೆ, ಶಾಂತವ್ವಾ ಪ.ಗಣಾಚಾರಿ, ಸತ್ತೆವ್ವಾ ಸು.ಮಗದುಮ್, ಕಲ್ಪನಾ ಯ.ಬಾಗಡಿ, ಕ್ಲರ್ಕ್ ಶೈಲಾ ಮ.ಕುಂದರಗಿ ಸೇರಿದಂತೆ ಸಂಘದ ಸದಸ್ಯರು ಇದ್ದರು.

ವೈವಾಹಿಕ ಜೀವನಕ್ಕೆ ಕಾಲಿಟ್ಟ 14 ಜೋಡಿಗಳು

ಬೈಲಹೊಂಗಲ: ಸಮಾಜದಲ್ಲಿ ಹೆಚ್ಚುತ್ತಿರುವ ಮದುವೆಯ ದುಂದು ವೆಚ್ಚವನ್ನು ಕಡಿಮೆ ಮಾಡುವಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮಗಳು ಮಹತ್ತರ ಪಾತ್ರವಹಿಸುತ್ತವೆ ಎಂದು ಶಾಸಕ ಮಹಾಂತೇಶ ಕೌಜಲಗಿ ಹೇಳಿದರು.

ತಾಲೂಕಿನ ಮರಕುಂಬಿ ಗ್ರಾಮದ ಶ್ರೀಕ್ಷೇತ್ರ ಅಂಕಲಗಿಯ ಶ್ರೀ ಅಡವಿಸಿದ್ಧೇಶ್ವರ ಮಠದ ಜಾತ್ರಾ ಮಹೋತ್ಸವಹಾಗೂಭವ್ಯಜಾನುವಾರು ಜಾತ್ರೆ ಅಂಗವಾಗಿ ಕಾರ್ತಿಕ್ ಪಾಟೀಲ ಜನಸೇವಾ ಫೌಂಡೇಶನ್ ವತಿಯಿಂದ ಆಯೋಜಿಸಲಾಗಿದ್ದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಣಕವಾಡದ ಅಭಿನವ ಮೃತ್ಯುಂಜಯ ಸ್ವಾಮೀಜಿ , ಚಾಮುಂಡೇಶ್ವರಿ ದೇವಸ್ಥಾನದ ಧರ್ಮದರ್ಶಿ ಡಾ. ಜಿ.ಬಿ. ಮಲ್ಲೇಶಿ ಗುರೂಜಿ, ಅಡವಿಸಿದ್ದೇಶ್ವರ ಮಠದ ಪೀಠಾಧಿಪತಿ ಅಮರ ಸಿದ್ದೇಶ್ವರ ಸ್ವಾಮೀಜಿ ಆಶೀರ್ವಚನ ನೀಡಿದರು.

ಮಾಜಿ ಶಾಸಕ ಅಮೃತ ದೇಸಾಯಿ, ಚೆನ್ನಪ್ಪ ನರಸನ್ನವರ ಹಾಗೂ ರಾಜ್ಯ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರಾಹುಲ ಜಾರಕಿಹೊಳಿ ಮಾತನಾಡಿದರು.

ಮುರಗೋಡ ನೀಲಕಂಠ ಸ್ವಾಮೀಜಿ ಅರಳಿಕಟ್ಟಿ ಸ್ವಾಮೀಜಿ, ಗುಳೇದಗುಡ್ಡ ಸ್ವಾಮೀಜಿ, ಕಳ್ಳಿಗುದ್ದಿ ಬಸವರಾಜ ಸ್ವಾಮೀಜಿ, ದುಂಡಯ್ಯ ಶಾಸ್ತ್ರಿಗಳು ಆರಾದ್ರಿಮಠ ಸೇರಿದಂತೆ ಹಲವು ಧಾರ್ಮಿಕ ಮುಖಂಡರು ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಇದೇ ವೇಳೆ ಕಾರ್ತಿಕ ಪಾಟೀಲ ಅವರಿಗೆ ಕನ್ನಡಜ್ಯೋತಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಉದ್ಯಮಿ ವಿಜಯ ಮೆಟಗುಡ್ಡ, ಕಾಶೀನಾಥ ಬಿರಾದಾರ, ನವೀನ್ ಪಾಟೀಲ, ಕಾರ್ತಿಕ್ ಪಾಟೀಲ, ಡಾ. ಮಹಾಂತೇಶ ಕಳ್ಳಿಬಡ್ಡಿ, ಉಪವಿಭಾಗಾಧಿಕಾರಿ ಪ್ರವೀಣ ಜೈನ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಮಲ್ಲಿಕಾರ್ಜುನ ಕುರಿ ಸ್ವಾಗತಿಸಿದರು. ಸಾಮೂಹಿಕ ವಿವಾಹದಲ್ಲಿ 14 ಜೋಡಿಗಳು ವೈವಾಹಿಕ ಜೀವನಕ್ಕೆ ಕಾಲಿಟ್ಟರು.



ನಿಗದಿಗಿಂತ ಹೆಚ್ಚು ಸಂತೆಕರ ವಸೂಲಿ ಆರೋಪ

ಚಿಕ್ಕೋಡಿ: ಪಟ್ಟಣದ ಗಾಂಧಿ ಮಾರುಕಟ್ಟೆ ಸೇರಿದಂತೆವಿವಿಧೆಡೆಸಂತೆಕರವನ್ನುಪುರಸಭೆಯಿಂದ ನೇಮಿಸಲ್ಪಟ್ಟಿರುವ ಗುತ್ತಿಗೆದಾರರು ಪುರಸಭೆ ನಿಗದಿ ಮಾಡಿದ್ದಕ್ಕಿಂತ ಹೆಚ್ಚಿನ ಮೊತ್ತದ ಸಂತೆಕರ ವಸೂಲಿ ಮಾಡುವ ಮೂಲಕ ರೈತರನ್ನು ವಂಚಿಸುತ್ತಿದ್ದಾರೆ ಎಂದು ಆರೋಪಿಸಿ ಚಿಕ್ಕೋಡಿ ತಾಲೂಕಿನ ವಿವಿಧ ರೈತಸಂಘಟನೆ ಹಾಗೂ ಹಸಿರುಸೇನೆಯ ಪದಾಧಿಕಾರಿಗಳು ಶುಕ್ರವಾರ ಮನವಿ ಸಲ್ಲಿಸಿದರು.

ಚಿಕ್ಕೋಡಿ ಪುರಸಭೆ ಮುಖ್ಯಾಧಿಕಾರಿ ಜಗದೀಶ ಈಟಿ ಅವರಿಗೆ ಮನವಿ ಸಲ್ಲಿಸಿ, ವ್ಯಾಪಾರ ಮಾಡಲು ಆಗಮಿಸಿದ ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ಕರ ಸಂಗ್ರಹ ಮಾಡುತ್ತಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು. ರೈತರ ಕಷ್ಟಕ್ಕೆ ಪುರಸಭೆ ಅಧಿಕಾರಿಗಳು ನೆರವಾಗಬೇಕು ಎಂದು ಒತ್ತಾಯಿಸಿದರು.

ರೈತರ ಮನವಿ ಸ್ವೀಕರಿಸಿದ ಪುರಸಭೆ ಮುಖ್ಯಾಧಿಕಾರಿ ಜಗದೀಶ ಈಟಿ ಅವರು ಮಾತನಾಡಿ, ದರಪಟ್ಟಿಯನ್ನು ಸಂತೆ ನಡೆಯುವ ಸ್ಥಳಗಳಲ್ಲಿ ಪ್ರದರ್ಶಿಸಲಾಗಿದೆ. ದರಪಟ್ಟಿಗಿಂತ ಹೆಚ್ಚಿನ ಹಣವನ್ನು ಯಾರೂ ಕೂಡ ಪಾವತಿ ಮಾಡುವ ಹಾಗಿಲ್ಲ, ಒಂದು ವೇಳೆ ಹೆಚ್ಚಿನ ಹಣ ಸಂಗ್ರಹ ಮಾಡುವದು ಗಮನಕ್ಕೆ ಬಂದಲ್ಲಿ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ರೈತ ಮುಖಂಡ ಲಕ್ಷ್ಮಣ ಶಿರಡೋಣೆ, ಪಿಂಟು ದಿನ್ನಿಮನಿ, ಬಸವಂತ ಮಾಂಜರೆ, ಕುಮಾರ ಮಾಂಜರೆ, ರಫೀಕ ಪಠಾಣ, ಭೀಮಸೇನ ಅರಬಾಂವಿ, ಸಚಿನ ಕುಲಕರ್ಣಿ, ಮೋಹನ ಪಾಟೀಲ ಇತರರು ಇದ್ದರು.



ಪ್ರಾಮಾಣಿಕತೆ ಮೆರೆದ ಸಾರಿಗೆ ಸಿಬ್ಬಂದಿ

ತೆಲಸಂಗ: ರೈತನೊಬ್ಬ ಬಿಟ್ಟು ಹೋಗಿದ್ದ ನಗದು ಹಾಗೂ ಬೆಲೆಬಾಳುವ ದಾಖಲೆಗಳಿದ್ದ ಚೀಲವನ್ನು ಸಾರಿಗೆ ಸಂಸ್ಥೆಯ ಸಿಬ್ಬಂದಿ ವಾರಸುದಾರರಿಗೆ ಮರಳಿಸುವ ಮೂಲಕ ಪ್ರಾಮಾಣಿಕತೆ ಹಾಗೂ ಮಾನವೀಯತೆ ಮೆರೆದ ಘಟನೆ ಅಥಣಿ ತಾಲೂಕಿನ ತೆಲಸಂಗದಲ್ಲಿ ನಡೆದಿದೆ.

ತೆಲಸಂಗದ ಸಂಭಾಜಿ ಪಾಂಡುರಂಗ ತೋರತ್ ಎಂಬ ರೈತ ಸಾರಿಗೆ ಬಸ್ಸಿನಲ್ಲಿ ಪ್ರಯಾಣಿಸುವಾಗ ಆಕಸ್ಮಿಕವಾಗಿ ತಮ್ಮ ಕೈಚೀಲವನ್ನು ಬಸ್ಸಿನಲ್ಲೇ ಬಿಟ್ಟು ಇಳಿದಿದ್ದರು. ಆ ಚೀಲದಲ್ಲಿ 2,000 ರೂಪಾಯಿ ನಗದು ಸೇರಿದಂತೆ ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್ ಹಾಗೂ ಹೊಲದ ಪಹಣಿ ಪತ್ರ ಸೇರಿದಂತೆ ಮಹತ್ವದ ದಾಖಲೆಗಳಿದ್ದವು. ಈ ದಾಖಲೆಗಳು ಅತ್ಯಂತ ಅವಶ್ಯಕವಾಗಿದ್ದವು.

ಅಥಣಿ ಘಟಕದ ನಿರ್ವಾಹಕಿ ಶೀಲಾ ಶಾಪುರ್ ಅವರಿಗೆ ಬಸ್ಸಿನಲ್ಲಿ ಈ ಚೀಲ ಪತ್ತೆಯಾಗಿದೆ. ಅವರು ತಕ್ಷಣವೇ ಆ ಚೀಲವನ್ನು ಸುರಕ್ಷಿತವಾಗಿ ತೆಗೆದಿರಿಸಿ, ತೆಲಸಂಗ ಸಾರಿಗೆ ಸಂಸ್ಥೆಯ ನಿಯಂತ್ರಣಾಽಕಾರಿ ಪ್ರಕಾಶ ಬೋಸ್ಲೆ ಅವರಿಗೆ ತಲುಪಿಸಿದರು. ನಂತರ ಅಽಕಾರಿ ಪ್ರಕಾಶ ಬೋಸ್ಲೆ ಅವರು ಸಂಬಂಧಪಟ್ಟ ರೈತನನ್ನು ಪತ್ತೆಹಚ್ಚಿ ಕಚೇರಿಗೆ ಕರೆಸಿಕೊಂಡರು. ರೈತ ಸಂಭಾಜಿ ಅವರ ಸಮ್ಮುಖದಲ್ಲೇ ಚೀಲವನ್ನು ಪರಿಶೀಲಿಸಿ, ಅದರಲ್ಲಿದ್ದ ಹಣ ಹಾಗೂ ದಾಖಲೆಗಳನ್ನು ಅವರಿಗೆ ಹಸ್ತಾಂತರಿಸಿದರು.

ಸಾರಿಗೆ ಸಂಸ್ಥೆಯ ಈ ಇಬ್ಬರು ಸಿಬ್ಬಂದಿಗಳ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಶ್ಲಾಘನೆ ವ್ಯಕ್ತವಾಗಿದೆ.



» ರೈತನಿಗೆ ಮರಳಿದ 2,000 ನಗದು ಹಾಗೂ ಮಹತ್ವದ ದಾಖಲೆಗಳು

ಕಿರುಸುದ್ದಿ

ಶ್ರೀ ರಾಮನವಮಿ ಆಚರಣೆ



ಯಮಕನಮರಡಿ: ಸ್ಥಳೀಯ ಸದ್ಗುರು ಹರಿ ಕಾಕಾ ಗೋಸಾವಿ ಋಗ್ವೇದಿ ಭಾಗವತ ಮಠ ಹರಿ ಮಂದಿರದಲ್ಲಿ ಪ್ರತಿವರ್ಷದ ಪದ್ಧತಿಯಂತೆ ಶ್ರೀ ರಾಮ ನವಮಿಯನ್ನು ಭಕ್ತಿ ಪೂರ್ವಕವಾಗಿ ಆಚರಿಸಲಾಯಿತು. ಶ್ರೀಮಠದ ಸದ್ಗುರು ಡಾ. ಆನಂದ ಮಹಾರಾಜ್ ಗೋಸ್ವಾಮಿ ಅವರು ಭಕ್ತಿ ಪೂರ್ವಕ ಪೂಜೆ ನೆರವೇರಿಸಿ ತೊಟ್ಟಿಲ ಪೂಜೆ ಮಾಡಿ ಜೋಗುಳ ಹಾಡಿ ಶ್ರೀರಾಮನ ನಾಮಕರಣ ಸಮಾರಂಭ ನೆರವೇರಿಸಿದರು.ಪೂಜಾ ಸಮಾರಂಭದಲ್ಲಿ ಅಪಾರ ಭಕ್ತರು ಆಗಮಿಸಿ ಶ್ರೀರಾಮನ ಕೃಪೆಗೆ ಪಾತ್ರರಾದರು. ಪೂಜಾ ಸಮಾರಂಭದಲ್ಲಿ ಪೂಜ್ಯರಾದ ಆನಂದ ಮಹಾರಾಜ್ ಅವರ ಮಾತೃಶ್ರೀ ಅವರು ಪಾಲ್ಗೊಂಡು ಭಕ್ತಿ ನಮನ ಸಲ್ಲಿಸಿದರು.

ಇಂದು ವಿದ್ಯುತ್ ನಿಲುಗಡೆ

ಬೆಳಗಾವಿ: ಹುವಿಸಕಂನಿ ವತಿಯಿಂದ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ 110 ಕೆ.ವ್ಹಿ ಎಮ್. ಕೆ. ಹುಬ್ಬಳ್ಳಿ ಉಪಕೇಂದ್ರದಿಂದ ಸರಬರಾಜು ಆಗುವ ಹಿರೇಮುನವಳ್ಳಿ, ಚಿಕ್ಕಮುನವಳ್ಳಿ, ಗಾಡಿಕೊಪ್ಪ, ಜಿಕನೂರ, ಪಾರಿಶ್ವಾಡ, ಇಟಗಿ, ಬೋಗೂರ, ಬೇಡರಹಟ್ಟಿ, ಹಿರೇಹಟ್ಟಿಹೊಳಿ, ಚಿಕ್ಕಹಟ್ಟಿಹೊಳಿ, ಜಿಕನೂರ, ದೇವರಶೀಗಿಹಳ್ಳಿ, ಮಾರ್ಗನಕೊಪ್ಪ, ಕ್ಯಾರಕೊಪ್ಪ ಹಾಗೂ ಕರವಿನಕೊಪ್ಪ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್ ಸೆಟ್‌ಗಳ ಏರಿಯಾಗಳಿಗೆ ಮಾ.28ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಕಾ ಮತ್ತು ಪಾ ಗ್ರಾಮೀಣ ವಿಭಾಗ, ಹುವಿಸಕಂನಿ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

11ಜಿಲ್ಲೆಗಳ 14 ತಂಡಗಳ ನಡುವೆ ಜಿದ್ದಾಜಿದ್ದಿ

ಬೆಳಗಾವಿ: ಜಿಮುಖಾನ್ ಮೈದಾನದಲ್ಲಿ ಮಾರ್ಚ್ 28 ಹಾಗೂ 29ರವೆಗೆ ಹೊಂಬಾಳ್ ಕಪ್ 2025-26ರ ಕ್ರಿಕೆಟ್ ಪಂದ್ಯಾವಳಿ ಆಯೋಜನೆ ಮಾಡಲಾಗಿದೆ ಎಂದು ಕರ್ನಾಟಕ ರಾಜ್ಯ ತೆರಿಗೆ ಸಲಹೆಗಾರರ ಸಂಘದ ಬೆಳಗಾವಿ ವಲಯದ ಉಪಾಧ್ಯಕ್ಷ ಮಹಾಂತೇಶ್ ಗಾಡಿಗುಂಡಿ ತಿಳಿಸಿದರು.ಶುಕ್ರವಾರ ಬೆಳಗಾವಿ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕ್ರಿಕೆಟ್ ಪಂದ್ಯಾವಳಿಗೆ 11 ಜಿಲ್ಲೆಗಳಿಂದ 14 ತಂಡಗಳು ಆಗಮಿಸಲಿವೆ. ಮನುಷ್ಯನ ಆರೋಗ್ಯಕ್ಕೆ ಕ್ರಿಕೆಟ್ ಕ್ರೀಡೆ ಸಹಕಾರಿಯಾಗಿದ್ದು ಪ್ರತಿ ಎರಡು ವರ್ಷಕ್ಕೊಮ್ಮೆ ಕ್ರಿಕೆಟ್ ಪಂದ್ಯಾವಳಿ ಆಯೋಜಿಸುತ್ತಿದ್ದೇವೆ ಎಂದು ಹೇಳಿದರು.

ಇದೇ ವೇಳೆ ತೋರಪ್ಪ ಮಾಳಗೆ ಮಾತನಾಡಿ, ಹೊಂಬಾಳ್ ಕಪ್ ಕ್ರಿಕೆಟ್ ಪಂದ್ಯಾವಳಿಯ ಉದ್ಘಾಟನೆಯನ್ನು ಡಿಸಿಪಿ ನಾರಾಯಣ ಬರಮನಿ ಹಾಗೂ ಮುರುಘೇಂದ್ರಗೌಡ ಪಾಟೀಲ್ ಆಗಮಿಸಲಿದ್ದಾರೆ. ಕ್ರಿಕೆಟ್ ಪಂದ್ಯಾವಳಿಯಲ್ಲಿ ಕ್ರೀಡಾಪಟುಗಳಿಗೆ ಊಟೋಪಹಾರದ ವ್ಯವಸ್ಥೆ ಮಾಡಲಾಗಿದೆ ಎಂದರು.

ವಿದ್ಯುತ್ ನಿಲುಗಡೆ ನಾಳೆ

ಬೆಳಗಾವಿ: ಕ.ವಿ.ಪ್ರ.ನಿ.ನಿ. ವತಿಯಿಂದ ನಾಲ್ಕನೇಯ ತ್ರೈಮಾಸಿಕ ಹಾಗೂ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ ಮಾ.29ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ 33ಕೆ.ವ್ಹಿ. ಲೋಂಡಾ ಹಾಗೂ ಖಾನಾಪೂರ ಉಪಕೇಂದ್ರದಿಂದ ಸರಬರಾಜು ಆಗುವ ನಾಗರಗಾಳಿ, ನಾಗರಗಾಳಿ ರೇಲ್ವೆ ಸ್ಟೇಶನ್, ಮುಂಡವಾಡ, ಕುಂಬರ್ಡಾ, ತಾರವಾಡ, ಲೋಂಡಾ, ಲೋಂಡಾ ರೇಲ್ವೆ ಸ್ಟೇಶನ್, ಗುಂಜಿ, ಮೋಹಿಶೇಟ, ವಾಟ್ರೆ, ಭಾಲ್ಕೆ ಬಿ.ಕೆ, ಭಾಲ್ಕೆ ಕೆ.ಎಚ್, ಶಿಂದೋಳ್ಳಿ, ಹೊನ್ಕಲ, ಸಾವರಗಾಳಿ, ಅಂಬೇವಾಡಿ, ತಿವೊಳ್ಳಿ, ಡೋಕೆಗಾಳಿ, ಖಾನಾಪೂರ ಪಟ್ಟಣ, ಶಿವಾಜಿ ನಗರ, ರುಮೇವಾಡಿ, ಓತೋಳ್ಳಿ, ಮೊದೇಕೊಪ್ಪ, ನಾಗುರ್ಡಾ, ರಾಮಗುರವಾಡಿ, ಅಂಬೋಳಿ, ಹರಸನವಾಡಿ, ಅಸೋಗಾ, ನೇರಸಾ, ಅಶೋಕ ನಗರ, ಮಂತುರ್ಗಾ, ಶೇಡೇಗಾಳಿ ಹಾಗೂ ಹೆಮ್ಮಡಗಾ ಪ್ರದೇಶಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್ಸೆಟ್ಗಳ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಕಾ ಮತ್ತು ಪಾ ಗ್ರಾಮೀಣ ವಿಭಾಗ, ಹುವಿಸಕಂನಿ, ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಮಟ್ಕಾ: ಬಂಧನ

ಹಿರೇಬಾಗೇವಾಡಿ: ಸಮೀಪದ ಕುಕಡೊಳ್ಳಿ ಗ್ರಾಮದ ಸಾರ್ವಜನಿಕ ಸ್ಥಳದಲ್ಲಿ ಮಟ್ಕಾ ಬರೆದುಕೊಳ್ಳುತ್ತಿದ್ದ ಪಾರೀಶ್ವಾಡ ಗ್ರಾಮದ ಹೊನ್ನಪ್ಪ ಬಸಪ್ಪ ಕೋಲ್ಕಾರ (45) ಎಂಬಾತನನ್ನು ಗುರುವಾರ ಹಿರೇಬಾಗೇವಾಡಿ ಪಿಎಸ್‌ಐ ಅವಿನಾಶ್ ಎ. ವೈ. ಹಾಗೂ ಸಿಬ್ಬಂದಿ ದಾಳಿ ನಡೆಸಿ ಬಂಧಿಸಿದ್ದಾರೆ.



ಬೈಲಹೊಂಗಲ: ನಗರದ ಮಾತಾ ದುರ್ಗಾಪರಮೇಶ್ವರಿ ದೇವಸ್ಥಾನದ 17 ನೇ ವರ್ಷದ ಜಾತ್ರಾ ಮಹೋತ್ಸವ ಅಂಗವಾಗಿ ಗುರುವಾರ ಹುಬ್ಬಳ್ಳಿ ಮೂರುಸಾವಿರಮಠದ ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳ ಬೆಳ್ಳಿ ಸಾರೋಟ ಮೆರವಣಿಗೆ, ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಮೂರ್ತಿ ಮೆರವಣಿಗೆ ಸಕಲ ವಾದ್ಯಮೇಳ, ಸುಮಂಗಲೆಯರ ಕುಂಭಮೇಳ, ವಿವಿಧ ಕಲಾತಂಡಗಳೊಂದಿಗೆ ಅದ್ದೂರಿಯಾಗಿ ಜರುಗಿತು.

ರಾಮನವಮಿ: ಭವ್ಯ ಸಂಗೀತೋತ್ಸವ

ತೆಲಸಂಗ: ಗ್ರಾಮದವೆಂಕಟರಮಣ ದೇವಸ್ಥಾನದಲ್ಲಿ ರಾಮನವಮಿ ನಿಮಿತ್ತ ಗುರುವಾರ ರಾತ್ರಿ ವಿಶೇಷ ಸಂಗೀತ ಕಾರ್ಯಕ್ರಮವು ಅತ್ಯಂತ ವೈಭವದಿಂದ ಜರುಗಿತು. ಕಾರ್ಯಕ್ರಮವನ್ನುಜಮಖಂಡಿಯ ಹೆಸರಾಂತ ಕಲಾವಿದರಾದ ಚಿದಂಬರ ಸವಾಯಿ ಅವರು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಚಿದಂಬರ ಸವಾಯಿ ಅವರು, ಶ್ರೀರಾಮನ ಆದರ್ಶಗಳು ಇಂದಿನ ಸಮಾಜಕ್ಕೆ ದಾರಿದೀಪವಾಗಿವೆ. ಸಂಗೀತವು ಕೇವಲ ಮನರಂಜನೆಯಲ್ಲ, ಅದು ಭಗವಂತನನ್ನುತಲುಪುವ ಮಾರ್ಗ. ರಾಮನವಮಿಯಂತಹ ಪವಿತ್ರ ಸಂದರ್ಭಗಳಲ್ಲಿ ಇಂತಹ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಆಯೋಜನೆಗೊಳ್ಳುತ್ತಿರುವುದು ಹೆಮ್ಮೆಯ ವಿಷಯ ಎಂದರು.

ಬೆಳಗಾವಿಯ ವಾಣಿಶ್ರೀ ಸತೀಶ ಮೋಕಾಶಿ ಮಾತನಾಡಿ, ಯುಗ ಯುಗಗಳು ಕಳೆದರೂ ಇಂದಿಗೂ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿರುವ ಹೆಸರುರಾಮ. ರಾಮಎಂದರೆ ಕೇವಲ ಒಬ್ಬರಾಜನಲ್ಲ, ಅವನು ನಡತೆಯ ಸಾಕಾರರೂಪ. ಇಂದು ನಾವು ಹಮ್ಮಿಕೊಂಡಿರುವ ಈ ಭಜನಾಕಾರ್ಯಕ್ರಮಕ್ಕೆ ವಿಶೇಷ ಅರ್ಥವಿದೆ. ರಾಮ ನಾಮ ಪಾಯಸಕ್ಕೆ ಕೃಷ್ಣ ನಾಮ ಸಕ್ಕರೆ..ಎಂದುದಾಸರು ಹೇಳಿದಂತೆ, ಭಜನೆಯು ಮನಸ್ಸಿನ ಕಲ್ಮಶಗಳನ್ನು ತೊಳೆದು ಶಾಂತಿಯನ್ನು ನೀಡುತ್ತದೆ. ಸಂಕೀರ್ತನೆಯಲ್ಲಿ ಪಾಲ್ಗೊಳ್ಳುವುದರಿಂದ ಭಕ್ತಿ ವೃದ್ಧಿಸುವುದಲ್ಲದೆ, ಸಾಮೂಹಿಕವಾಗಿ ನಾವೆಲ್ಲರೂ ಒಂದೇ ಎಂಬ ಭಾವನೆ ಮೂಡುತ್ತದೆ ಎಂದರು. ಶಂಕರ ಜೋಶಿ, ವಿಠ್ಠಲ ಬೆಣಾರೆ, ಪ್ರಕಾಶಕುಲಕರ್ಣಿ, ಚಿದಂಬರಕುಲಕರ್ಣಿ, ವಿಠ್ಠಲ ಕುಲಕರ್ಣಿ, ಹಣಮಂತ ಜೋಶಿ, ರಾಜೇಂದ್ರದೇಶಪಾಂಡೆ, ಸಂತೋಷಕುಲಕರ್ಣಿ ಸೇರಿದಂತೆಊರಿನ ಹಲವಾರುಗಣ್ಯರು ಮತ್ತು ಹಿರಿಯರು ಉಪಸ್ಥಿತರಿದ್ದರು.



ತೆಲಸಂಗ: ಗ್ರಾಮದ ವೆಂಕಟರಮಣದೇವಸ್ಥಾನದಲ್ಲಿ ರಾಮನವಮಿ ನಿಮಿತ್ತ ಗುರುವಾರ ರಾತ್ರಿ, ವಿಶೇಷ ಸಂಗೀತ ಕಾರ್ಯಕ್ರಮವು ಅತ್ಯಂತ ವೈಭವದಿಂದ ಜರುಗಿತು. ಕಾರ್ಯಕ್ರಮವನ್ನುಜಮಖಂಡಿಯ ಹೆಸರಾಂತ ಕಲಾವಿದರಾದ ಚಿದಂಬರ ಸವಾಯಿ ಅವರು ಉದ್ಘಾಟಿಸಿದರು. ಬೆಳಗಾವಿಯ ವಾಣಿಶ್ರೀ ಸತೀಶ ಮೋಕಾಶಿ, ಶಂಕರ ಜೋಶಿ, ವಿಠ್ಠಲ ಬೆಣಾರೆ, ಪ್ರಕಾಶಕುಲಕರ್ಣಿ, ಚಿದಂಬರಕುಲಕರ್ಣಿ, ವಿಠ್ಠಲ ಕುಲಕರ್ಣಿ, ಹಣಮಂತ ಜೋಶಿ, ಉಪಸ್ಥಿತರಿದ್ದರು.

ಕುಂದು ಕೊರತೆ ಸಭೆ | ದಲಿತ ಮುಖಂಡರ ಆಗ್ರಹ

ನಕಲಿ ಜಾತಿ ಪ್ರಮಾಣಪತ್ರಕ್ಕೆ ಕಡಿವಾಣ ಹಾಕಿ

ಕಾಗವಾಡ: ತಾಲೂಕು ಆಡಳಿತದಿಂದತಾಲೂಕಿನಲ್ಲಿ ಪರಿಶಿಷ್ಟ ಪಂಗಡಗಳ ನಕಲಿ ಜಾತಿ ಪ್ರಮಾಣ ಪತ್ರದ ವಿತರಣೆ ಹಾವಳಿ ಹೆಚ್ಚಾಗಿದ್ದು, ತಾಲೂಕಿನಲ್ಲಿ ಸುಮಾರು 1,200 ಅಧಿಕ ಜನರಿಗೆ ನಕಲಿ ಜಾತಿ ಪ್ರಮಾಣ ಪತ್ರ ವಿತರಿಸಲಾಗಿದೆ. ಇದರಿಂದ ಪರಿಶಿಷ್ಟ ಪಂಗಡದವರಿಗೆ ದೊರೆಯಬೇಕಾಗಿದ್ದ ಸೌಲಭ್ಯಗಳು, ಬೇರೆಯವರ ಪಾಲಾಗುತ್ತಿವೆ. ತಕ್ಷಣವೇ ಇದನ್ನು ಸ್ಥಗಿತಗೊಳಿಸಿ, ಇಲ್ಲವಾದಲ್ಲಿ ಉಗ್ರವಾದ ಹೋರಾಟ ಮಾಡಲಾಗುವುದು ಎಂದು ವಾಲ್ಮೀಕಿ ಸಮಾಜದ ಮುಖಂಡ ರಮೇಶ ನಾಯಿಕ ಆಕ್ರೋಶಗೊಂಡು ನಕಲಿ ಜಾತಿ ಪ್ರಮಾಣ ಪತ್ರಗಳನು ತಾಲೂಕು ಅಧಿಕಾರಿಗಳ ಎದುರೇ ಬಿಸಾಡಿದರು.



ಶುಕ್ರವಾರ ಪಟ್ಟಣದ ಅಂಬೇಡ್ಕರ್ ಸಭಾ ಭವನದಲ್ಲಿ ನಡೆದ ಕುಂದು ಕೊರತೆ ಸಭೆಯಲ್ಲಿ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ಈ ಘಟನೆಯಿಂದ ಸಭೆಯಲ್ಲಿ ಕೆಲಹೊತ್ತು ಉದ್ವಿಗ್ನ ವಾತಾವರಣ ನಿರ್ಮಾಣವಾಗಿ ಅಧಿಕಾರಿಗಳು ಹಾಗೂ ಮುಖಂಡರ ನಡುವೆ ಮಾತಿನ ಚಕಮಕಿ ನಡೆಯಿತು. ಪೊಲೀಸರು ಮಧ್ಯ ಪ್ರವೇಶ ಮಾಡಿ ಪರಿಸ್ಥಿತಿ ತಿಳಿಗೊಳಿಸಿದರು.

ಸಮಾಜ ಕಲ್ಯಾಣಾಧಿಕಾರಿ ಪರುಶುರಾಮ ಪತ್ತಾರ ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಯ್ದೆಗಳ ಸಮರ್ಪಕ ಜಾರಿಯ ನಿಟ್ಟಿನಲ್ಲಿ ಇಲಾಖೆ ಅಗತ್ಯ ಕ್ರಮವನ್ನು ಕೈಗೊಳ್ಳುತ್ತಿದ್ದು, ಸರ್ಕಾರದ ಎಲ್ಲ ಸವಲತ್ತುಗಳನ್ನು ಪ್ರಾಮಾಣಿಕವಾಗಿ ಜನರಿಗೆ ಮುಟ್ಟಿಸುವ ಕಾರ್ಯ ಮಾಡಲಾಗುತ್ತಿದೆ. ಈ ಸಭೆಯಲ್ಲಿ ಚರ್ಚೆಗೆ ಬಂದ ಎಲ್ಲ ಸಮಸ್ಯೆಗಳನ್ನು ಶೀಘ್ರವಾಗಿ ಇತ್ಯರ್ಥ ಪಡಿಸಲಾಗುವದು ಎಂದರು.

ದಲಿತಮುಖಂಡಪ್ರಕಾಶ ದೊಂಡಾರೆಮಾತನಾಡಿ, ಕಳೆದ 30 ವರ್ಷಗಳಿಂದ ಬಸವ ನಗರದಲ್ಲಿ ಮೂರು ಸಾವಿರಕ್ಕಿಂತ ಹೆಚ್ಚಿನ ಜನ ವಾಸಿಸುತ್ತಿದ್ದು, ಅಲ್ಲಿಯ ಜನರಿಗೆ ಹಕ್ಕುಪತ್ರ ದೊರುತ್ತಿರುವದಿಲ್ಲಾ. ಅಲ್ಲಿಯ ಜನರಿಗೆ ಕೂಡಲೇ ಹಕ್ಕು ಪತ್ರ ನೀಡಬೇಕೆಂದು ಅಧಿಕಾರಿಗಳಿಗೆ ಅಗ್ರಹಿಸಿದರು.

ನಂತರ ಮುಖಂಡ ಸಂಜಯ ತಳವಲ್ಕರ ಮಾತನಾಡಿ, ವಿವಿಧ ಗ್ರಾಮಗಳಲ್ಲಿ ಸ್ಮಶಾನ, ನಿರಾಶ್ರಿತರಿಗೆ ಶಾಶ್ವತ ಪುನರ್ವಸತಿ, ಬಸ್ ವ್ಯವಸ್ಥೆ, ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ, ಮೂಲ ಸೌಲಭ್ಯಗಳನ್ನು ಕಲ್ಪಿಸುವಂತೆ ಒತ್ತಾಯಿಸಿದರು.

ಈ ವೇಳೆ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ವೀರಣ್ಣ ವಾಲಿ, ಗ್ರೇಡ 2 ತಹಶೀಲ್ದಾರ್ ರಶ್ಮಿ ಜಕಾತಿ,ಬಿಇಓ ಪಾಂಡುರಂಗ ಮದಭಾವಿ, ಸಿಡಿಪಿಓ ರವೀಂದ್ರ ಗುದಗೆನ್ನವರ, ಕಾಗವಾಡ ಪ.ಪಂ. ಮುಖ್ಯಾಧಿಕಾರಿ ಪ್ರಸನ್ನ ಕಲ್ಯಾಣಶೆಟ್ಟಿ, ಸಿಪಿಐ ಸಂತೋಷ ಹಳ್ಳೂರ, ವೈದ್ಯಾಧಿಕಾರಿ ಡಾ. ಬಸನಗೌಡ ಕಾಗೆ, ಲೋಕೋಪಯೋಗಿ ಅಧಿಕಾರಿ ಮಲ್ಲಿಕಾರ್ಜುನ ಮಗದುಮ್ಮ, ಬಿಸಿಯೂಟ ಯೋಜನಾಧಿಕಾರಿ ಮಲ್ಲಿಕಾರ್ಜುನ ನಾಮದಾರ ಸದಾಶಿವ ಮಾಂಗ, ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ದಲಿತ ಮುಖಂಡರಾದ ಸಂಜಯ ತಳವಲ್ಕರ, ಸಚೀನ ಪೂಜಾರಿ,ಉಮೇಶ ಮನೋಜ, ದೀಪಕ ಕಾಂಬಳೆ, ಜಯಪಲಾ ಬಡಿಗೇರ, ವಿದ್ಯಾಧರ ದೋಂಡರೆ, ಅಶೋಕ ಕಾಂಬಳೆ, ದಯಾನಂದ ಕೆರೂರೆ, ವಿವೇಕ ಕರ್ಪೆ, ವೆಂಕಟೇಶ್ ಕಾಂಬಳೆ, ವಿಜಯ ಅಸೂದೆ, ಹನುಮಂತ ಮದಾಳೆ ಮತ್ತು ತಾಲೂಕಿನ ದಲಿತ ಸಂಘಟನೆಗಳ ಮುಖಂಡರುಗಳು, ದಲಿತ ಬಾಂಧವರು ಇದ್ದರು.

ತಿಳಿವಳಿಕೆ ಸಭೆಯ ಉದ್ದೇಶ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಮಸ್ಯೆಗಳನ್ನು ಆಲಿಸಿ, ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ತಾಲೂಕಾಡಳಿತದಿಂದ ಈ ಸಭೆಯನ್ನು ಆಯೋಜಿಸಲಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಜನತೆಯ ಸಮಸ್ಯೆಗಳು, ಪರಿಹರಿಸುವಿಕೆ, ಕಾನೂನಿನ ತಿಳುವಳಿಕೆಯನ್ನು ಮೂಡಿಸುವುದು ಸರ್ಕಾರದಿಂದ ದೊರೆಯುವ ಸೌಲಭ್ಯವನ್ನು ತಿಳಿಸುವದು ಈ ಸಭೆಯ ಉದ್ದೇಶವಾಗಿದೆ ಎಂದು ತಹಶೀಲ್ದಾರ್ ರವೀಂದ್ರ ಹಾದಿಮನಿ ಹೇಳಿದರು.

ಕಲಾವಿದರಿಗೆ ಪ್ರತಿಯೊಬ್ಬರೂ ಉತ್ತೇಜನ ನೀಡಿ

ಬೆಳಗಾವಿ: ರಂಗಕಲೆ ನೈಜ ಜೀವಂತ ಕಲೆಯಾಗಿದ್ದು, ಬಹಳ ಹಿಂದಿನಿಂದಲೂ ಬಂದಿರುವ ರಂಗನಾಟಕ ಕಲೆ ಮುಂದಿನ ಜನಮಾನಸಕ್ಕೆ ನಾಟಕ ಪರಂಪರೆ ಉಳಿಸಲು ಕಲಾವಿದರಿಗೆ ಪ್ರತಿಯೊಬ್ಬರೂ ಉತ್ತೇಜನ ನೀಡಿ ಬೆಳೆಸಬೇಕು ಎಂದು ರಂಗಕರ್ಮಿಗಳು, ವಿಶ್ರಾಂತ ಧಾರ್ಮಿಕ ದತ್ತಿ ಇಲಾಖೆ ಉಪಾಯುಕ್ತರಾದ ರವಿ ಕೊಟಾರಗಸ್ತಿ ಹೇಳಿದರು.

ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, ರಂಗದರ್ಶನ ಗ್ರಾಮೀಣ ವಿಕಾಸ ಸಂಘ, ಧುಳಗನವಾಡಿ , ಮಹಾಂತೇಶ ನಗರ ರಹವಾಸಿ ಸಂಘದ ಶಿಕ್ಷಣ ಮಹಾವಿದ್ಯಾಲಯ ಬೆಳಗಾವಿ ಇವರ ಸಹಯೋಗದಲ್ಲಿ ಬೆಳಗಾವಿಯ ಮಹಾಂತ ಭವನದಲ್ಲಿ ನಡೆದ ವಿಶ್ವ ರಂಗಭೂಮಿ ದಿನಾಚರಣೆ ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಯ. ರು. ಪಾಟೀಲ ಮಾತನಾಡಿದರು.

ರಂಗಸಾಧಕರಾದಜಿ.ಕೆ.ಕಾಡೇಶಕುಮಾರ- ಗೋಕಾಕ, ಶಂಕರ ಅ. ಅರಕೇರಿ- ಬೆಳಗಾವಿ, ಸುಜಾತಾ ಮಗದುಮ್ಮ- ಚಿಕ್ಕೋಡಿ, ಅನೀಲ ಮೇತ್ರಿ- ಬೆಳಗಾವಿ ಕಲಾವಿದರಿಗೆ ಶಾಲು ಹೊದಿಸಿ ಸ್ಮರಣಿಕೆ ನೀಡಿ ರಂಗ ಗೌರವ ಸಲ್ಲಿಸಲಾಯಿತು. ಬೆಳಗಾವಿ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಕೆ. ಆರ್. ಅಂಜನೇಯ, ಪ್ರಾಚಾರ್ಯರಾದ ನಿರ್ಮಲಾ ಬಟ್ಟಲ, ಸಾಹಿತಿಗಳಾದ ಡಾ. ಎಚ್.ಐ. ತಿಮ್ಮಾಪೂರ, ಬಸವರಾಜ ಕುಪ್ಪಸಗೌಡರ ಉಪಸ್ಥಿತರಿದ್ದರು.

ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾದ ಬಾಬಾಸಾಹೇಬ ಕಾಂಬಳೆ ಪ್ರಾಸ್ತಾವಿಕವಾಗಿ ಮಾತನಾಡಿ ರಂಗ ಸಂದೇಶ ಓದಿ ಸ್ವಾಗತಿಸಿದರು. ಬಸವರಾಜ ತಳವಾರ ಕಾರ್ಯಕ್ರಮ ನಿರೂಪಿಸಿದರು. ಭರತ ಕಲಾಚಂದ್ರ ವಂದಿಸಿದರು. ಸಂಸ್ಕೃತಿಕ ಕಾರ್ಯಕ್ರಮಲ್ಲಿ ಶಶಿಕಾಂತ ಜಂಗಿ ರಂಗಗೀತೆ ಪ್ರಸ್ತುತಪಡಿಸಿದರು. ಆಶಾದೀಪಸಮುದಾಯ ಕಲಾಕೇಂದ್ರ ಚಿಕ್ಕೋಡಿ ತಂಡದವರು ಬೀದಿನಾಟಕ ಪ್ರಸ್ತುತಪಡಿಸಿದರು.

> ಬೆಳಗಾವಿ ಪರಿಸರದಲ್ಲಿ ಪೌರಾಣಿಕ, ಸಾಮಾಜಿಕ, ಭಕ್ತಿಪ್ರಧಾನ, ನಾಟಕ ನೀಡಿದ ಜಿಲ್ಲೆಯ ಕೊಡುಗೆಯಾಗಿದ್ದು, ರಾಷ್ಟ್ರೀಯ ಯುದ್ಧ ನಿಲ್ಲಿಸುವಲ್ಲಿ ಸಮಾನ ಭಾತೃತ್ವವನ್ನು ಬೆಳೆಸಲು ರಂಗಭೂಮಿಯ ಪಾತ್ರ ಅನನ್ಯವಾದದ್ದು, ಇಂದಿನ ಆಧುನಿಕತೆಯಲ್ಲಿ ಕುಟುಂಬ ಸಮೇತ ನೋಡುವ ಸೃಜನಶೀಲ ನಾಟಕಗಳು ಮೂಡಿಬರಬೇಕು.
> ■ ಡಾ. ಎಚ್. ಬಿ. ಕೋಲ್ಕಾರ, ಹಿರಿಯ ಸಾಹಿತಿ



ಗಮನ ಸೆಳೆದ ಜಂಗಿ ನಿಕಾಲಿ ಕುಸ್ತಿಗಳು

ಮುಗಳಖೋಡ: ಪಟ್ಟಣದ ಆರಾಧ್ಯ ದೇವರು,ಬಾಲ್ಯದಿಂದಲೇಆಧ್ಯಾತ್ಮದತ್ತಒಲವಿತ್ತ ಸದ್ಗುರು ಯಲ್ಲಾಲಿಂಗ ಮಹಾಪ್ರಭುಗಳು ಉತ್ತಮ ಕುಸ್ತಿ ಪಟು ಆಗಿದ್ದರು ಆದರಂತೆ ಅವರ ಪರಂಪರೆಯಂತೆ ನಡೆದುಕೊಂಡು ಬಂದಿರುವ ಈ ಕುಸ್ತಿ ಪಂದ್ಯಾವಳಿಗಳು ಪ್ರತಿವರ್ಷ ಶ್ರೀಮಠದ ಅಂಗಳದಲ್ಲಿ ಬಹಳ ವಿಜೃಂಭಣೆಯಿಂದ ನಡೆಯುತ್ತಿವೆ. ಕುಸ್ತಿಪಟುಗಳು ಮತ್ತು ಆಯೋಜಕರ ಮೇಲೆ ಶ್ರೀ ಸಿದ್ದಲಿಂಗ, ಯಲ್ಲಾಲಿಂಗರ ಆಶೀರ್ವಾದ ಯಾವತ್ತಿಗೂ ಇರಲಿ, ಇನ್ನಷ್ಟು ಹೆಚ್ಚಿನ ಉತ್ಸಾಹ ತಮ್ಮದಾಗಲಿ ಎಂದು ಡಾ. ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

ಅವರು ಮುಗಳಖೋಡ ಶ್ರೀಮಠದಲ್ಲಿ ನಡೆದ ಸಿದ್ಧಲಿಂಗೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ಶುಕ್ರವಾರ ಸಾಯಂಕಾಲ 4 ಗಂಟೆಗೆ ಸುಪ್ರಸಿದ್ಧ ಜಂಗಿ ನಿಕಾಲಿ ಕುಸ್ತಿ ಪಂದ್ಯಾವಳಿಗೆ ಚಾಲನೆ ನೀಡಿ, ಸುತ್ತಮುತ್ತಲಿನ ರಾಜ್ಯಗಳಿಂದ ಹೆಸರಾಂತ ಕುಸ್ತಿಪಟುಗಳನ್ನು ಆಹ್ವಾನಿಸಿ, ಪ್ರದರ್ಶನ ನೀಡುವುದು ಮೊದಲಿನಿಂದ ಇಂದಿನವರೆಗೂ ಶ್ರೀಮಠದಲ್ಲಿ ಬೆಳೆದು ಬಂದ ಪದ್ಧತಿಯಾಗಿದೆ ಎಂದರು.

ಈ ಪಂದ್ಯಾವಳಿಯಲ್ಲಿ ನೇಪಾಳ ದೇಶದ ಪ್ರಸಿದ್ಧ ಕುಸ್ತಿಪಟು ದೇವಾ ತಾಪಾ ಒಳಗೊಂಡು ಮಹಾರಾಷ್ಟ್ರ, ಆಂಧ್ರ, ತೆಲಂಗಾಣ ಸೇರಿದಂತೆ ವಿವಿಧ ರಾಜ್ಯ, ಜಿಲ್ಲೆಗಳ ಹೆಸರಾಂತ ಕುಸ್ತಿ ಪಟುಗಳು ಭಾಗಿಯಾಗಿದ್ದರು.

ಈ ಸಂದರ್ಭದಲ್ಲಿ ಅಣ್ಣಪ್ಪಗೌಡ ಪಾಟೀಲ, ಮಾರುತಿ ಗೋಕಾಕ, ಬಸವರಾಜ ಜೋಪಾಟಿ, ಗುರು ಹಿರೇಮಠ, ಪರಪ್ಪ ಖೇತಗೌಡರ, ಶಿವಾನಂದ ಮೆಕ್ಕಳಕಿ, ಹಾಲಪ್ಪ ಶೇಗುಣಸಿ, ರಾಜು ನಾಯಿಕ, ಮುತ್ತಪ್ಪ ಬಾಳೋಜಿ, ನ್ಯಾಯವಾದಿ ಸೋಮು ಹೊರಟ್ಟಿ, ಚೇತನ ಯಡವಣ್ಣವರ, ಮಾಂತೇಶ ಯರಡತ್ತಿ ಸೇರಿದಂತೆ ಅಪಾರ ಭಕ್ತ ಸಮೂಹದವರು ಉಪಸ್ಥಿತರಿದ್ದರು.

ಸಿದ್ಧಲಿಂಗೇಶ್ವರ ಜಾತ್ರಾ ಮಹೋತ್ಸವ



ರಸ್ತೆ ಸುಧಾರಣೆ ಕಾಮಗಾರಿಗೆ ಶಾಸಕ ಐಹೊಳೆ ಚಾಲನೆ

ಚಿಕ್ಕೋಡಿ / ಕಬ್ಬೂರ: ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅಧಿಕಾರಿಗಳಿಗೆ ಈಗಾಗಲೇ ಸೂಚಿಸಲಾಗಿದ್ದು, ತನ್ನ ಕ್ಷೇತ್ರ ವ್ಯಾಪ್ತಿಯಲ್ಲಿ ಸಮಸ್ಯೆ ಇರುವ ಗ್ರಾಮಗಳಲ್ಲಿ ಕೊಳವೆಬಾವಿ ಕೊರೆಯಿಸಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆ ಮಾಡಲು ಪ್ರಯತ್ನ ಮಾಡುವೆ ಎಂದು ರಾಯಬಾಗ ಶಾಸಕ ದುರ್ಯೋಧನ ಐಹೊಳೆ ಹೇಳಿದರು.

ತಾಲೂಕಿನ ಜಾಗನೂರ ಗ್ರಾಮದಲ್ಲಿ 65 ಲಕ್ಷ ರೂ. ಮೊತ್ತದ ರಸ್ತೆ ಸುಧಾರಣೆ ಕಾಮಗಾರಿಗೆ ಶುಕ್ರವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಜಲಜೀವನ ಮಿಷನ್ ಹಾಗೂ ಬಹುಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆಗಳಿಂದ ನೀರು ಪೂರೈಕೆ ಮಾಡಲಾಗುತ್ತಿದೆ. ಆದಾಗ್ಯೂ ಕುಡಿಯುವ ನೀರಿನ ಸಮಸ್ಯೆಯ ಭೀಕರತೆಯನ್ನು ಗಮನಿಸಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುವುದು ಎಂದರು.

ಜಾಗನೂರು ಗ್ರಾಮದ ಹೊರವಲಯದಲ್ಲಿ ಜಿಲ್ಲಾ ಪಂಚಾಯತಿಯ ವಿಶೇಷ ಯೋಜನೆ ಅಡಿಯಲ್ಲಿ 40 ಲಕ್ಷ ರೂ. ಮೊತ್ತದಲ್ಲಿ ರಸ್ತೆ ಸುಧಾರಣಾ ಕಾಮಗಾರಿ, ಎಸ್ಸಿ ಎಸ್ಟಿ ಕಾಲೋನಿಯಲ್ಲಿ 25 ಲಕ್ಷ ರೂ. ಮೊತ್ತದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ದುರ್ಯೋಧನ ಐಹೊಳೆ ಚಾಲನೆ ನೀಡಿದರು.



ಈ ಸಂದರ್ಭದಲ್ಲಿ ಮುಖಂಡರಾದ ಸದಾಶಿವ ಘೋರ್ಪಡೆ, ಸೀತಾರಾಮ ಕುಲಕರ್ಣಿ, ಸುರೇಶ ಬೆಲ್ಲದ, ಹನುಮಂತ ರಬಕವಿ, ಲಕ್ಷ್ಮಣ ಹನುಮನ್ನವರ, ಸಿದ್ಧು ಖಿಂಡಿ, ಮಲ್ಲೇಶ ಹನುಮಂತಗೋಳ, ಮಹಾಂತೇಶ ಶಿರಗೂರ, ಮಾಳಪ್ಪ ಗೊರಗುದ್ದಿ, ದುಂಡಪ್ಪ ಮುಶಾಪ, ಕಿರಣಗೌಡ ಪಾಟೀಲ, ರಾಮಚಂದ್ರ ಮರಾಠ, ರಾಮಕೃಷ್ಣ ಗಡಗಡಿ, ಎಸ್ ಎಸ್ ಹೊಸಮನಿ, ರವಿ ಜಿವಣಿ ಇತರರು ಇದ್ದರು.

ಏ.1ರಿಂದ ಮದನಬಾವಿ ಗ್ರಾಮದೇವಿಯ ಜಾತ್ರಾ ಮಹೋತ್ಸವ

ನೇಸರಗಿ: ಸಮೀಪದ ಮದನಬಾವಿ ಗ್ರಾಮದ ಪ್ರತಿಷ್ಠಿತ ಶ್ರೀ ಗ್ರಾಮದೇವಿಯ ಜಾತ್ರೆಯು 11 ವರ್ಷಗಳ ನಂತರ ಏ.1ರಿಂದ 9ರವರೆಗೆ ಅದ್ದೂರಿಯಾಗಿ ನೆರವೇರಲಿದೆ. ಸಾನ್ನಿಧ್ಯವನ್ನು ಸುಕ್ಷೇತ್ರ ಇಂಚಲ ಸಾಧು ಸಂಸ್ಥಾನ ಮಠದ ಡಾ. ಶಿವಾನಂದ ಭಾರತಿ ಸ್ವಾಮೀಜಿ ವಹಿಸುವರು. ಏ. 1 ರಂದು ಹಣಬರಹಟ್ಟಿ ಕೆಳದಿ ಹಿರೇಮಠದ ಬಸವಲಿಂಗ ಶಿವಾಚಾರ್ಯರು ಹಾಗೂ ಮಲ್ಲಾಪೂರ ಗಾಳೇಶ್ವರ ಮಠದ ಚಿದಾನಂದ ಸ್ವಾಮಿಗಳ ಸಮ್ಮುಖದಲ್ಲಿ ಹೋಮ, ಹವನ, ಪೂಜೆ, ದೈವದ ಉಡಿ ತುಂಬುವುದು ಮತ್ತು ಬಾಬದ ಮನೆ ವಸತಿ, ರಾತ್ರಿ 8 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುತ್ತವೆ.

ಏ.2 ರಂದು ಗ್ರಾಮದೇವಿಗೆ ಉಡಿ ತುಂಬುವದು, ಗ್ರಾಮದೇವಿಯ ಹೊನ್ನಾಟ ಸಂಜೆ 7 ಗಂಟೆಗೆ ಶ್ರೀ ಬಸವೇಶ್ವರ ರಥದ ಕಳಸಾರೋಹಣ, ರಾತ್ರಿ 8 ಘಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಏ.3ರಂದು ರಾತ್ರಿ 8 ಗಂಟೆಗೆ ಸಂಗೀತ ರಸಮಂಜರಿ ಕಾರ್ಯಕ್ರಮ ಹಾಗೂ ಏ. 4 ರಂದು ಸಂಜೆ 8 ಗಂಟೆಗೆ ನಗೆಹಬ್ಬ ಕಾರ್ಯಕ್ರಮ ನಡೆಯಲಿದೆ. ಏ.5ರಂದು ರಾತ್ರಿ 8 ಗಂಟೆಗೆ ಶ್ರೀ ದೇವಿಯ ನವ ಅವತಾರದ ನೃತ್ಯ ಸಂಯೋಜನೆ, ಏ 6 ರಂದು ರಾತ್ರಿ 8 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ರಾತ್ರಿ 9 ಗಂಟೆಗೆ ಶ್ರೀ ಚನ್ನವೃಷಬೇಂದ್ರ ನಾಟ್ಯ ಸಂಘ ಮದನಬಾವಿ ಇವರಿಂದ ಸಮಾಜ ರೂಪಿಸಿದ ರೌಡಿ ಸುಂದರ ಸಾಮಾಜಿಕ ನಾಟಕ ಪ್ರದರ್ಶನ ನೆರವೇರಲಿದೆ.

ಏ 7 ರಂದು ಸಂಜೆ 5 ಗಂಟೆಗೆ ಶ್ರೀ ಬಸವೇಶ್ವರ ಮಹಾರಥೋತ್ಸವ ಜರುಗುವದು. ರಾತ್ರಿ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ. ಏ.8ರಂದು ಉಡಿ ತುಂಬುವುದು, ಸಂಜೆ 6 ಗಂಟೆಗೆ ಮದನಬಾವಿಯ ಮಹಾಂತೇಶ ದೊಡ್ಡಗೌಡರ ಅಭಿಮಾನಿಗಳ ಬಳಗದ ವತಿಯಿಂದ ಗ್ರಾಮೀಣ ಮಟ್ಟದ ಹೊನಲು - ಬೆಳಕಿನ ವ್ಹಾಲಿಬಾಲ್ ಪಂದ್ಯಾವಳಿ, ಏ.9ರಂದು ಉಡಿ ತುಂಬುವುದು, ಸಂಜೆ ಶ್ರೀ ಗ್ರಾಮದೇವಿಯರು ಸೀಮೆಗೆಹೋಗುವದು ನಂತರ ಶ್ರೀ ಬಸವೇಶ್ವರ ರಥದ ಕಳಸ ಇಳಿಸುವ ಕಾರ್ಯಕ್ರಮ ಜರುಗಲಿವೆ ಎಂದು ಮಾಜಿ ಶಾಸಕರು, ಬಿಡಿಸಿಸಿ ಬ್ಯಾಂಕ ನಿರ್ದೇಶಕರಾದ ಮಹಾಂತೇಶ ದೊಡ್ಡಗೌಡರ ಹಾಗೂ ಜಾತ್ರಾ ಉತ್ಸವ ಕಮಿಟಿ ಸದಸ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಳ್ಳತನವಾಗಿದ್ದ 110 ಮೊಬೈಲ್ ಪತ್ತೆ

ಅಥಣಿ: ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರ ದೈನಂದಿನ ಬದುಕಿನ ಅವಿಭಾಜ್ಯ ಅಂಗವಾಗಿರುವ ಮೊಬೈಲ್ ಫೋನ್‌ಗಳನ್ನು ಕಳಕೊಂಡ ಪ್ರಕರಣಗಳು ಹೆಚ್ಚಾಗುತ್ತಿವೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು, ಅತ್ಯಾಧುನಿಕ ಸಿಇಐಆರ್ ಪೋರ್ಟಲ್ ತಂತ್ರಜ್ಞಾನವನ್ನು ಬಳಸಿಕೊಂಡು ಕಳೆದುಹೋದ ಮೊಬೈಲ್‌ಗಳನ್ನು ಪತ್ತೆಹಚ್ಚುವಲ್ಲಿ ಯಶಸ್ವಿಯಾಗಿದೆ.



ಬೆಳಗಾವಿ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಕೆ. ರಾಮರಾಜನ್, ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಆರ್. ಬಿ. ಬಸರಗಿ ಹಾಗೂ ಅಥಣಿ ಉಪವಿಭಾಗದ ಡಿವೈಎಸ್ಪಿ ಪ್ರಶಾಂತ್ ಜಿ. ಮುನ್ನೊಳ್ಳಿ ಅವರ ಮಾರ್ಗದರ್ಶನದಲ್ಲಿ ವಿಶೇಷ ತಂಡಗಳನ್ನು ರಚಿಸಲಾಗಿತ್ತು. ಈ ತಂಡಗಳು ಕಳೆದ ಎರಡು ವರ್ಷಗಳಲ್ಲಿ ಕಾಣೆಯಾಗಿದ್ದ ಮೊಬೈಲ್‌ಗಳನ್ನು ಪತ್ತೆಹಚ್ಚಿದ್ದಾರೆ. ಅಥಣಿ ಪೊಲೀಸ್ ಸಮುದಾಯ ಭವನದ ಆವರಣದಲ್ಲಿ ಆಯಾ ವಾರಸುದಾರರಿಗೆ ಹಿಂದಿರುಗಿಸಲಾಗಿದೆ.

ಪ್ರತಿ ಪೊಲೀಸ್ ಠಾಣಾ ಮಟ್ಟದಲ್ಲಿ ಕಳ್ಳತನವಾದ ಮೊಬೈಲ್‌ಗಳನ್ನು ಪತ್ತೆಹಚ್ಚಲು ಒಬ್ಬ ನುರಿತ ಸಿಬ್ಬಂದಿಯನ್ನು ಪ್ರತ್ಯೇಕವಾಗಿ ನಿಯೋಜಿಸಲಾಗಿದೆ. ಉಳಿದ ಮೊಬೈಲ್‌ಗಳನ್ನು ಪತ್ತೆ ಹಚ್ಚುವ ಪ್ರಕ್ರಿಯೆಯು ತೀವ್ರಗತಿಯಲ್ಲಿ ಮುಂದುವರಿದಿದೆ ಎಂದು ಡಿವೈಎಸ್ಪಿ ಪ್ರಶಾಂತ್ ಮುನ್ನೊಳ್ಳಿ ತಿಳಿಸಿದ್ದಾರೆ.

ಸಾರ್ವಜನಿಕರು ತಮ್ಮ ಫೋನ್‌ಗಳನ್ನು ಮರಳಿ ಪಡೆದು ಪೊಲೀಸರ ಕಾರ್ಯಕ್ಷಮತೆಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಿಪಿಐ ಸಂತೋಷ ಹಳ್ಳೂರ, ಸಿಪಿಐ.ಮಲ್ಲಿಕಾರ್ಜುನ ಡಪ್ಪಿನ, ಪಿಎಸ್‌ಐ ಗಿರಮಲಪ್ಪ ಉಪ್ಪಾರ, ಐಗಳಿ ಪಿಎಸ್‌ಐ ಚಂದ್ರಶೇಖರ ಸಾಗನ್ರೂ, ಪಿಎಸ್‌ಐ ಮಲ್ಲಿಕಾರ್ಜುನ ತಳವಾರ, ರಾಘವೇಂದ್ರ ಖೋತ, ರಮೇಶ ತೆಲಸಂಗ, ಎಂ. ಎ ಆಳಂದ, ಸಿಬ್ಬಂದಿಗಳಾದ ಜಮೀರ್ ಡಾಂಗೆ, ಎಸ್. ಶೇಕ್, ಅಣ್ಣಪ್ಪ ಹಡಪದ, ಧರ್ಮೇಂದ್ರ ಶ್ಯಾನವಾಡ, ಸುಧಾಕರ ಸನದಿ, ಧರೆಪ್ಪ ಧರಿಗೌಡರ ಸೇರಿದಂತೆ ಹಲವರು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಠಾಣಾವಾರು ಪತ್ತೆಯಾದ ಮೊಬೈಲ್‌ಗಳು

- ಅಥಣಿ: 37
- ಐಗಳಿ : 20
- ಕಾಗವಾಡ : 20
- ರಾಯಬಾಗ: 13
- ಹಾರೂಗೇರಿ: 10
- ಕುಡಚಿ: 10

ಮಾ. 30ರಿಂದ ಜಾತ್ರಾ ಮಹೋತ್ಸವ

ಚನ್ನಮ್ಮನ ಕಿತ್ತೂರ: ಸಮೀಪದ ಘಷ್ಟೋಳ್ಳಿ ದಡ್ಡಿ ಗ್ರಾಮದಲ್ಲಿ ಹನುಮಂತ ದೇವರ ಜಾತ್ರಾ ಮಹೋತ್ಸವ ಮಾ. 30 ರಿಂದ ಏ. 3ರವರೆಗೆ ನಡೆಯಲಿದ್ದು ಈ ನಿಮಿತ್ಯ ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಮಾ. 30 ರಂದು ಬೆಳಗ್ಗೆ 10 ಗಂಟೆಗೆ ಜಾತ್ರಾ ಮಹೋತ್ಸವ ಉದ್ಘಾಟನೆ, ರಾತ್ರಿ 9 ಕ್ಕೆ "ಸಂಗ್ಯಾ ಬಾಳ್ಯಾ" ನಾಟಕ ನಡೆಯಲಿದ್ದು ನ್ಯಾಯವಾದಿ ಸೂರ್ಯಕಾಂತ ತಾರಿಹಾಳ ಉದ್ಘಾಟಿಸುವರು, ಡಾ.ಪ್ರಸನ್ನ ದೊಡ್ಡೇಬೈಲಕರ, ಕಾರ್ತಿಕ ಅಂಬೋಜಿ ಹಾಗೂ ಇತರರು ಭಾಗವಹಿಸುವರು, 31 ರಂದು ಬೆಳಗ್ಗೆ ಉಡಿ ತುಂಬುವ ಕಾರ್ಯಕ್ರಮ ಹಾಗೂ ಸಂಜೆ 7 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ, ಏಪ್ರಿಲ್ 1 ರಂದು ಸಂಜೆ 6 ಗಂಟೆಗೆ ಧರ್ಮಸಭೆನಡೆಯಲಿದ್ದು ಚನ್ನಬಸವ ದೇವರು, ಪ್ರಭು ಅಡವಿ ಸಿದ್ದೇಶ್ವರ ಸ್ವಾಮೀಜಿ, ಚನ್ನವೀರದೇವರು, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕ ವಿಠ್ಠಲ ಹಲಗೇಕರ, ವಿ ಪ ಸದಸ್ಯರಾದ ಲಖನ ಜಾರಕಿಹೊಳಿ, ಚನ್ನರಾಜ ಹಟ್ಟಿಹೊಳಿ, ಮಾಜಿ ಶಾಸಕಿ ಅಂಜಲಿ ನಿಂಬಾಳಕರ, ಜೆಡಿಎಸ್ ಮುಖಂಡ ನಾಸೀರ ಭಾಗವಾನ, ಮಹಾದೇವ ಸಾಗರೆಕರ ಹಾಗೂ ಇತರರು ಭಾಗವಹಿಸುವರು.

ಏಪ್ರಿಲ್ 2 ರಂದು ಬೆಳಿಗ್ಗೆ ಹನುಮಾನ ಪಲ್ಲಕ್ಕಿ ಉತ್ಸವ ನಡೆಯಲಿದ್ದು ಹಂಡಿ ಬಡಗನಾಥ ಸ್ವಾಮೀಜಿ, ಮಾದವಾನಂದ ಸ್ವಾಮೀಜಿ, ಮಾಜಿ ಶಾಸಕ ಅರವಿಂದ ಪಾಟೀಲ, ಪ್ರಮೋದ ಕೊಚೇರಿ ಭಾಗವಹಿಸುವರು ಸಂಜೆ 7 ಗಂಟೆಗೆ ವಾಯುಪುತ್ರ ಮೆಲೋಡಿಸ್ ಇವರಿಂದ ರಸಮಂಜರಿ ಕಾರ್ಯಕ್ರಮ ನಡೆಯಲಿದ್ದು ರಾಜು ಪಿಜೋಳಿ, ಬಸವರಾಜ ಸಾಣಿಕೊಪ್ಪ, ವಿಠ್ಠಲ ಹಿಂಡಲಕರ, ಸುನೀಲ ಮಡ್ಡಿಮನಿ ಹಾಗೂ ಇತರರು ಭಾಗವಹಿಸುವರು, ಏಪ್ರಿಲ್ 3 ರಂದು ರಾತ್ರಿ 9 ಗಂಟೆಗೆ ಮರಾಠಿ ಭಜನಾ ಕಾರ್ಯಕ್ರಮ ನಡೆಯಲಿದ್ದು ಲೈಲಾ ಶುಗರ್ಸ್ ಎಂ ಡಿ ಸದಾನಂದ ಪಾಟೀಲ ಉದ್ಘಾಟಿಸುವರು ಎಂದು ಜಾತ್ರಾ ಕಮಿಟಿ ಪ್ರಕಟಣೆಯಲ್ಲಿ ತಿಳಿಸಿದೆ.

ಮಾ.29ರಿಂದ ಶ್ರೀಗಳ ಪುಣ್ಯಾರಾಧನೆ ಕಾರ್ಯಕ್ರಮ

ರಾಮದುರ್ಗ: ತಾಲೂಕಿನ ಸುಕ್ಷೇತ್ರ ಕುಳ್ಳೂರಿನ ಗುರುಶಿವಯೋಗೀಶ್ವರ ಸಂಸ್ಥಾನ ಕಲ್ಮಠದಲ್ಲಿ ಮಾ. 29 ರಿಂದ ಏ.2ರ ವರೆಗೆ ಶ್ರೀಗುರು ಶಿವಯೋಗೀಶ್ವರರ 118 ನೇ ಪುಣ್ಯಾರಾಧನೆ, ಶ್ರೀ ಗುರು ರೇವಯ್ಯ ಶಿವಯೋಗಿಗಳ 150 ನೇ ಜಯಂತ್ಯುತ್ಸವ, ಶ್ರೀ ಸಿದ್ದರಾಮ ಶಿವಯೋಗಿಗಳ 50 ನೇ ಪುಣ್ಯಾರಾಧನೆ, ಶ್ರೀ ಶಿವಯ್ಯ ಮಹಾಸ್ವಾಮಿಗಳ 6ನೇ ಪುಣ್ಯಾರಾಧನೆ ಕಾರ್ಯಕ್ರಮಗಳು ಇಂಚಲದ ಡಾ. ಶಿವಾನಂದ ಭಾರತಿಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆಯಲಿವೆ ಎಂದು ಶ್ರೀ ಮಠದ ಬಸವಾನಂದಸ್ವಾಮಿಗಳು ತಿಳಿಸಿದರು.



ಶುಕ್ರವಾರ ಪ್ರೆಸ್‌ಕ್ಲಬ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಾ.29 ರಂದು ಸಂಜೆ 6 ಗಂಟೆಗೆ

ಶ್ರೀ ಶಿವಯೋಗೀಶ್ವರ ವೇದಾಂತ ವೇದಿಕೆ ಉದ್ಘಾಟನೆ, ಮಾ.30 ರಂದು ರೈತಗೋಷ್ಠಿ, ಮಾ.31 ರಂದು ಬಸವಾನಂದ ಮಹಾಸ್ವಾಮಿಗಳ 60ನೇ ವರ್ಷದ ಅಂಗವಾಗಿ 60 ತುಲಾಭಾರ ಸೇವೆ ನಡೆಯಲಿವರ. ಡಾ. ಶಿವಾನಂದ ಭಾರತಿ ಸ್ವಾಮಿಗಳ ಸಾನಿಧ್ಯದಲ್ಲಿ ಗಿರಿಯಪ್ಪ ಮಲ್ಲಪ್ಪನವರ ಅಮೃತ ಶೀಲಾಮೂರ್ತಿಗಳ ಲೋಕಾರ್ಪಣೆ ಹಾಗೂ ವೇದಾಂತ ಕಾರ್ಯಕ್ರಮ ನಡೆಯಲಿವೆ. ಏ. 1 ರಂದು ಮಹಿಳಾ ಗೋಷ್ಠಿ ನಡೆಯಲಿದೆ.

ಏ. 2 ರಂದು ಪಲ್ಲಕ್ಕಿ ಉತ್ಸವ, ಮಹಾ ಪ್ರಸಾದ, ಸಂಜೆ ರಥೋತ್ಸವ ನಡೆಯಲಿದೆ. ಕಾರ್ಯಕ್ರಮಕ್ಕೆ ನಾಡಿನ ವಿವಿಧ ಪೂಜ್ಯರು ಭಾಗವಹಿಸಲಿದ್ದಾರೆ ಎಂದು ಶ್ರೀಗಳು ತಿಳಿಸಿದರು.

ಕಾರ್ಯಕ್ರಮದಲ್ಲಿ ಸರ್ಕಾರದ ಮುಖ್ಯಸಚೇತಕ ಅಶೋಕ ಪಟ್ಟಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಆರ್. ಹೆಬ್ಬಾಳಕರ, ಸಾಂಸದ ಜಗದೀಶ ಶೆಟ್ಟರ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಮಾಜಿ ಶಾಸಕ ಮಹಾದೇವಪ್ಪ ಶಿ ಯಾದವಾಡ, ಶಾಸಕರಾದ ಬಾಲಚಂದ್ರ ಜಾರಕಿಹೋಳಿ, ಮಹಾಂತೇಶ ಕೌಜಲಗಿ, ವಿಶ್ವಾಸ ವೈದ್ಯ, ಚನ್ನರಾಜ ಹಟ್ಟಿಹೋಳಿ, ಹನಮಂತ ನಿರಾಣಿ, ಮಾಜಿ ಸಚಿವ ಮುರುಗೇಶ ನಿರಾಣಿ, ಡಿಸಿಸಿ ಬ್ಯಾಂಕ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ, ನಿರ್ದೇಶಕ ಮಲ್ಲಣ್ಣ ಯಾದವಾಡ, ಕೆಎಂಎಫ್ ನಿರ್ದೇಶಕ ರಮೇಶ ಅಣ್ಣಿಗೇರಿ ಸೇರಿದಂತೆ ಹಲವರು ಆಗಮಿಸುವ ಕಾರ್ಯಕ್ರಮಕ್ಕೆ ಭಕ್ತಾಧಿಗಳು ಆಗಮಿಸಲು ವಿನಂತಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಗ್ರಾಮಸ್ಥರಾದ ರಾಜು ಮರಲಿಂಗನವರ, ರವಿ ಚಿಪ್ಪಲಕಟ್ಟಿ ಮತ್ತು ನಿಂಗಪ್ಪ ಹೊರನಾಡು ಇದ್ದರು.

ಕಿರುಸುದ್ದಿ

ವಿದ್ಯುತ್ ವ್ಯತ್ಯಯ ನಾಳೆ

•**ಜಮಖಂಡಿ:** ತಾಲೂಕಿನ ಆಲಬಾಳ ಗ್ರಾಮದ 110 ಕೆವಿ ವಿದ್ಯುತ್ ವಿತರಣಾ ಕೇಂದ್ರದ ತ್ರೈಮಾಸಿಕ ನಿರ್ವಹಣೆ ಕಾರ್ಯ ಮಾ.29ರಂದು ಹಮ್ಮಿಕೊಂಡಿದ್ದು, ಅಂದು 110ಕೆವಿ ಸಾಯಿಪ್ರಿಯಾ ಶುಗರ್ಸ್ ಆಲಬಾಳ ಲೈನ್, 110ಕೆವಿ ರೇಜ್ ಸೋಲಾರ್ ಲೈನ್ಸ್, 110ಕೆವಿ ಆಲಗೂರ 11ಕೆವಿ ಕಡಕೋಳ ಬ್ರಿಡ್ಜ್, ಕಡಕೋಳ ಐಪಿ, ಮುತ್ತೂರ ಐಪಿ, ಆಲಬಾಳ ಐಪಿ, ಕಡಕೋಳ+ಕಂಕಣವಾಡಿ ಎನ್‌ಜೆವೈ, ಕಂಕಣವಾಡಿ ವೃತ್ತ, ಕಂಕಣವಾಡಿಗಡ್ಡಿ, ಮುತ್ತೂರ+ಆಳಬಾಳ ಎನ್‌ಜೆವೈ, ಮೈಗೂರ ಐಪಿ, ಆಲಗೂರ ಎನ್‌ಜೆವಾವೈ, ಹಳೆಪೂರಮಠ ಐಪಿ, ಮೈಗೂರ+ಶಿರಗುಪ್ಪಿ, ಎನ್‌ಜೆವೈ, ಶಿರಗುಪ್ಪಿ ಐಪಿ, ಕುಂಬಾರಹಳ್ಳ ಎನ್‌ಜೆವೈ, ಆಲಗೂರ ನಡಗಡ್ಡಿ, ಆಲಗೂರ ಬ್ರಿಡ್ಜ್, ಕರಕಲ ಗಡ್ಡಿ, ಕುಂಚನೂರ ಐಪಿ, ಮಾದನ ಐಪಿ, ಮಾಮಡ್ಡಿ ತೋಟ, ಕುಂಬಾರಹಳ್ಳ ಐಪಿ, ಸನಾಳ ಐಪಿ, ಮಾರ್ಗಗಳಲ್ಲಿ ಬೆಳಗ್ಗೆ 10 ಗಂಟೆಯಿಂದ ಸಂಜೆ 6ರ ವರೆಗೆ ವಿದ್ಯುತ್ ವ್ಯತ್ಯಯ ಉಂಟಾಗುತ್ತದೆ ಎಂದು ಹೆಸ್ಕಾ ಅಧಿಕಾರಿಗಳು ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ ನಾಳೆ

•**ಜಮಖಂಡಿ:** ಬೀಳಗಿ ತಾಲೂಕಿನ ಹೆಸ್ಕಾಂ ಉಪವಿಭಾಗದ ಮುಂಡಗನೂರ ಗ್ರಾಮದ 110 ಕೆವಿ ವಿದ್ಯುತ್ ವಿತರಣಾ ಕೇಂದ್ರದ ತ್ರೈಮಾಸಿಕ ನಿರ್ವಹಣೆ ಕಾರ್ಯ ಮಾ.29ರಂದು ಹಮ್ಮಿಕೊಂಡಿದ್ದು, ಅಂದು ಹೊರ ಹೋಗುವ ಮುಂಡಗನೂರ ಐಪಿ, ಚಿನಗುಂಡಿ ಐಪಿ, ಜಕನೂರ ಐಪಿ, ಕುಮಾರೇಶ್ವರ ಐಪಿ, ಕೋಲುರ ಐಪಿ, ಕೋಲೂರ ವಿಲ್ಲೇಜ್ ಹಂಚಿನಾಳ ಐಪಿ, ಕೋಲುರ ಎನ್‌ಜೆವೈ ಚೌಡಾಪೂರ ಐಪಿ, ಬಳಮಟ್ಟಿ ಐಪಿ, ಲಿಂಗನೂರ ಎನ್‌ಜೆವೈ, ಲಿಂಗನೂರ ಐಪಿ, ಶಿವಮುತ್ರ ಐಪಿ ಮಾರ್ಗಗಳಲ್ಲಿ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ ವಿದ್ಯುತ್ ವ್ಯತ್ಯಯ ಉಂಟಾಗುತ್ತದೆ ಎಂದು ಹೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ಇಂದಿನಿಂದ ಜಾತ್ರಾ ಮಹೋತ್ಸವ

•**ಬೀಳಗಿ:** ತಾಲೂಕಿನ ನಾಗರಾಳ ಗ್ರಾಮದ ಕಪ್ಪರಪಡಿಯಮ್ಮ ದೇವಿ ಜಾತ್ರಾ ಮಹೋತ್ಸವ ಮಾ.28ರಿಂದ ಏ.1ರ ವರೆಗೆ ವಿವಿಧ ಧಾರ್ಮಿಕ, ಕ್ರೀಡೆ, ಕಲೆ, ಸಾಂಸ್ಕೃತಿಕ ಕಾರ್ಯಕ್ರಮಗಳು ದಿಗಂಬರೇಶ್ವರ ಮಠದ ಪೀಠಾಧ್ಯಕ್ಷ ಶೇಷಪ್ಪಯ್ಯ ಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆಯಲಿವೆ. ಮಾ.28ರಂದು ಸಂಜೆ 5.30ಕ್ಕೆ ಸುಮಂಗಲೆಯರ ಆರತಿ, ಸಕಲ ವಾದ್ಯ ವೈಭವದೊಂದಿಗೆ ರಥೋತ್ಸವ ಜರುಗಲಿದೆ. ರಾತ್ರಿ 10.30ಕ್ಕೆ ಯುವರತ್ನ ವೇದಿಕೆ ಸಹಯೋಗದಲ್ಲಿ ಚಿಕ್ಕಾಲಗುಂಡಿಯ ಅಂಜನಿಪುತ್ರ ನಾಟ್ಯ ಸಂಘದ ಕಲಾವಿದರಿಂದ ತಾಯಿಯ ಋಣ, ಮಣ್ಣಿನ ಗುಣ ನಾಟಕ ಪ್ರದರ್ಶನಗೊಳ್ಳಲಿದೆ. ಮಾ.29ರಂದು ಸಂಜೆ 5ಕ್ಕೆ ಹಾಲೋಕಳಿ ನಡೆಯಲಿದೆ. ರಾತ್ರಿ 8 ಗಂಟೆಗೆ ಮದಭಾವಿಯ ಆರ್.ಕೆ. ಮೆಲೋಡಿಸ್ ಅವರಿಂದ ಆರ್ಕೆಸ್ಟ್ರಾ(ರಸಮಂಜರಿ) ಕಾರ್ಯಕ್ರಮ ನಡೆಯಲಿದೆ. ಮಾ.30ರಂದು ಸಂಜೆ 5ಕ್ಕೆ ಜಂಗಿ ಕುಸ್ತಿಗಳು ಜರುಗಲಿವೆ. ಸಂಜೆ 6 ಗಂಟೆಗೆ ಶರಣ ಸಾಂಸ್ಕೃತಿಕ ವೈಭವ ಹಾಗೂ ಜಾನಪದ ಕಲಾ ಮಹೋತ್ಸವ ನಡೆಯಲಿದೆ. ಮಾ.31ರಂದು ಸಂಜೆ 5 ಗಂಟೆಗೆ ಜಾನುವಾರು ಪ್ರದರ್ಶನ ನಡೆಯಲಿದೆ. ರಾತ್ರಿ 8 ಗಂಟೆಗೆ ಯುವರತ್ನ ವೇದಿಕೆ ವತಿಯಿಂದ ಪಗಡಿ ಪಂದ್ಯಾವಳಿಗಳು ಜರುಗಲಿವೆ. ಏ.1ರಂದು ಕಳಸೋತ್ಸವದೊಂದಿಗೆ ಜಾತ್ರಾ ಮಹೋತ್ಸವ ಸಂಪನ್ನಗೊಳ್ಳಲಿದೆ ಎಂದು ಪ್ರಕಟಣೆ ತಿಳಿಸಿದೆ.

ಗೋವಿನದಿನ್ನಿಯನಿಗೆ ವಿಶೇಷ ಪೂಜೆ

•**ಬೀಳಗಿ:** ತಾಲೂಕಿನ ಗೋವಿನದಿನ್ನಿ ಗ್ರಾಮದ ಗೋವಿನದಿನ್ನೇಶ ಗೋವಿನದಿನ್ನಿಯ ಮುಖ್ಯ ಪ್ರಾಣ ದೇವರಿಗೆ ಶ್ರೀರಾಮ ನವಮಿ ಅಂಗವಾಗಿ ಅರ್ಚಕ ಶಶಿಕಾಂತ ಆಚಾರ ಇವರ ನೇತೃತ್ವದಲ್ಲಿ ಅಭಿಷೇಕ, ವಿಶೇಷ ಅಲಂಕಾರ, ವಿಶೇಷ ಪೂಜೆ ಜರುಗಿತು. ಬಳಿಕ ಭಕ್ತಾದಿಗಳಿಗೆ



ಪಾನಕ, ಕೋಸಂಬರಿ ಪ್ರಸಾದ ವಿತರಿಸಲಾಯಿತು. ಮೇಲುಸ್ತುವಾರಿ ಸಮಿತಿ ಅಧ್ಯಕ್ಷ ಡಾ.ಆರ್.ಎಸ್. ಅವಧಾನಿ, ಉಪಾಧ್ಯಕ್ಷ ಅನೀಲ ಹಲ್ಯಾಳ, ಸದಸ್ಯರಾದ ಆರ್.ಎಚ್.ಕುಲಕರ್ಣಿ, ಎಸ್.ಎಚ್.ಸೊನ್ನ, ವಿನೋದ ದಿಕ್ಷೀತ ಮತ್ತಿತರಿದ್ದರು.

ಕೋರ್ಸ್ ಆರಂಭ

•**ಬೀಳಗಿ:** ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯ ಅಡಿಯಲ್ಲಿ ನಡೆಯುವ ಸ್ವಾಮಿ ವಿವೇಕಾನಂದ ಪ್ರಥಮ ದರ್ಜೆ ಮಹಾವಿದ್ಯಾಲಯ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ 2026–27ನೇ ಸಾಲಿನಿಂದ ಎಂಎಸ್‌ಸಿ ಭೌತವಿಜ್ಞಾನ, ರಸಾಯನ ಶಾಸ್ತ್ರ, ಗಣಿತ ಶಾಸ್ತ್ರ ಹಾಗೂ ಬಿಸಿಎ ಕೋರ್ಸ್‌ಗಳು ಪ್ರಾರಂಭವಾಗಿರುತ್ತವೆ ಎಂದು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಎಂ.ಎನ್.ಪಾಟೀಲ ತಿಳಿಸಿದ್ದಾರೆ.



ಲೋಕಾಪುರ: ಪಟ್ಟಣದ ಸಿ.ಎಂ.ಪಂಚಕಟ್ಟಿಮಠ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಮಹಿಳಾ ಸಬಲೀಕರಣ ಸಂಸ್ಥೆಯ ಸಹಯೋಗದಲ್ಲಿ ಮಹಿಳಾ ದಿನಾಚರಣೆಯ ಪ್ರಯುಕ್ತ ಪ್ರಬಂಧ ಮತ್ತು ರಸಪ್ರಶ್ನೆ ಜರುಗಿತು. ಪ್ರಬಂಧ ಸ್ಪರ್ಧೆಯ ವಿಜೇತರಾದ ಪ್ರಥಮ ರಾಧಿಕಾ ಹೊಸಮನಿ, ದ್ವಿತೀಯ ರೇಣುಕಾ ಕಾಳಣ್ಣನವರ, ತೃತೀಯ ಭವಾನಿ ಪಾವಟೆ ವಿಜೇತರಾಗಿದ್ದಾರೆ. ವಿಜೇತರಾದ ಪ್ರಥಮ ಸ್ಪಂದನ ದೊಡ್ಮನಿ ಮತ್ತು ಜೈನಬಿ ನಧಾಪ, ದ್ವಿತೀಯ ಸಂಗೀತಾ ಬುದ್ನಿ ಮತ್ತು ಪಲ್ಲವಿ ನ್ಯಾಮಗೌಡ, ತೃತೀಯ ಸಹನಾ ಭೋ ಮತ್ತು ಲಕ್ಷ್ಮೀ ಯರಗನವಿ ಬಹುಮಾನ ಪಡೆದಿದ್ದಾರೆ. ಪ್ರಾಂಶುಪಾಲ ಮಲ್ಲಯ್ಯ ಸೊನ್ನದ, ಗಾದಿಲಿಂಗಪ್ಪ ಮೂತಿ ಆರ್.ಎಂ., ಹಾಗೂ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

ತಂದೆ-ತಾಯಿಯನ್ನು ಪ್ರೇರಣೆಯಾಗಿ ಸ್ವೀಕರಿಸಿ

•**ಬಾದಾಮಿ:** ವಿದ್ಯಾರ್ಥಿಗಳು ತಂದೆ ತಾಯಿಗಳ ಜೊತೆಗೆ ಹಠಮಾಡಿ ಕೆಟ್ಟದಾರಿ ಹಿಡಿಯದೆ ತಂದೆ ತಾಯಿಗಳ ಶ್ರಮ ಸಂಸ್ಕೃತಿ ಸಂಸ್ಕಾರದಲ್ಲಿ ಅವರನ್ನು ಪ್ರೇರಣೆಯಾಗಿ ಸ್ವೀಕರಿಸಿದರೆ ನಿಮ್ಮ ಸಾಧನೆಯ ಹಾದಿ ರಾಜ ಮಾರ್ಗವಾಗುವುದೆಂದು ಪಿಎಸ್‌ಐ ಹನಮಂತ ನೆರಳೆ ಹೇಳಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾದಾಮಿಯ ಹಳೆಯ ವಿದ್ಯಾರ್ಥಿಗಳ ಸಂಘದ ವತಿಯಿಂದ ತೃತೀಯ ಬಿ.ಎ, ಬಿ.ಕಾಂ ಹಾಗೂ ಹಿರಿಯ ವಿದ್ಯಾರ್ಥಿಗಳಿಗೆ ಮೂರು ದಿನಗಳ ಸ್ಪರ್ಧಾತ್ಮಕ ಪರೀಕ್ಷೆಗಳ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ಪ್ರಾಚಾರ್ಯ ಪ್ರೊ.ಎಸ್.ಬಿ.ರಾಯನಗೌಡರ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಪುರಸಭೆ ಅಧ್ಯಕ್ಷ ಮಂಜುನಾಥ ಹೊಸಮನಿ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಶಿವುಕುಮಾರ ಹಿರೇಮಠ, ಚಿಕ್ಕಮಕ್ಕಳ ವೈದ್ಯ ಡಾ.ಕಿರಣಕುಮಾರ ಕುಳಗೇರಿ, ವೈದ್ಯ ಡಾ.ಶಂಕರ ಉಡಚಂಚಿ, ತಾ.ಪಂ.ಇಓ ಸತೀಶ ಮಾಕೊಂಡ, ತಾಲೂಕಾ ಅಕ್ಷರ ದಾಸೋಹ ಯೋಜನೆಯ ಸಹಾಯಕ ನಿರ್ದೇಶಕ ಮಹಾಂತೇಶ ನಾರಗಲ್ಲ, ಶೇಖರಯ್ಯ ಬಿಕ್ಷಾವತಿಮಠ ಹಾಗೂ ಹಳೆಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಹನಮಂತ ಅಪ್ಪಣ್ಣನವರ, ಸರಕಾರಿ ನೌಕರರ ಸಂಘದ ಕಾರ್ಯದರ್ಶಿ ರಾಚಣ್ಣ ಪಟ್ಟಣಶೆಟ್ಟಿ, ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಅವಿನಾಶ ಮೇಟಿ, ಸಂಘಟನಾ ಕಾರ್ಯದರ್ಶಿ ಪ್ರೊ.ಗೋವರ್ಧನ ಪಿ.ಬಿ., ಡಾ.ಎಂ.ಎನ್.ಸಿದ್ದಲಿಂಗಪ್ಪನವರ, ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಬಾದಾಮಿ: ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾದಾಮಿಯ ಹಳೆಯ ವಿದ್ಯಾರ್ಥಿಗಳ ಸಂಘದ ವತಿಯಿಂದ ತೃತೀಯ ಬಿ.ಎ, ಬಿ.ಕಾಂ ಹಾಗೂ ಹಿರಿಯ ವಿದ್ಯಾರ್ಥಿಗಳಿಗೆ ಮೂರು ದಿನಗಳ ಸ್ಪರ್ಧಾತ್ಮಕ ಪರೀಕ್ಷೆಗಳ ಕಾರ್ಯಾಗಾರದ ಸಮಾರೋಪ ಸಮಾರಂಭ ನಡೆಯಿತು. ಪಿಎಸ್‌ಐ ಹನಮಂತ ನೆರಳೆ, ಪ್ರಾಚಾರ್ಯ ಪ್ರೊ.ಎಸ್.ಬಿ.ರಾಯನಗೌಡರ, ಮಾಜಿ ಪುರಸಭೆ ಅಧ್ಯಕ್ಷ ಮಂಜುನಾಥ ಹೊಸಮನಿ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಶಿವುಕುಮಾರ ಹಿರೇಮಠ ಇದ್ದರು.

ಬಾಗಲಕೋಟೆ ಉಪಚುನಾವಣೆ | ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಮನವಿ

ದೇಶ ಉಳಿವಿಗೆ ಬಿಜೆಪಿಗೆ ಮತ ನೀಡಿ

•**ಬಾಗಲಕೋಟೆ:** ಜಾತಿ, ಮತ, ಪಂಥವನ್ನು ನೋಡದೇ ದೇಶವನ್ನು ಉಳಿಸಲು ಬಿಜೆಪಿಗೆ ಮತವನ್ನು ನೀಡಬೇಕು ಎಂದು ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ತಿಳಿಸಿದರು.

ಬಾಗಲಕೋಟೆ ಮತಕ್ಷೇತ್ರದ ಬೆಣ್ಣೂರ ಗ್ರಾಮದಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ಬಿಜೆಪಿಗೆ ಸೇರ್ಪಡೆ ಮಾಡಿಕೊಂಡು ಮಾತನಾಡಿದ ಅವರು, ದೇಶ ಉಳಿದರೆ ನಾವೆಲ್ಲ ಉಳಿಯುತ್ತೇವೆ. ನಾವೆಲ್ಲ ಭಾರತೀಯರಾಗಿದ್ದೇವೆ. ದೇಶದ ಸುರಕ್ಷತೆಗೆ ಪ್ರಧಾನಿ ಮೋದಿಯವರ ಕೈ ಬಲಪಡಿಸಲು ಬಿಜೆಪಿ ಗೆಲ್ಲಿಸಬೇಕು ಎಂದರು. ಈ ಭಾಗದಲ್ಲಿ ಕೈಗಾರಿಕೆ ಸ್ಥಾಪಿಸಿ ಸಾವಿರಾರು ಜನರಿಗೆ ಉದ್ಯೋಗ ನೀಡಬೇಕು ಎಂಬ ಮಹಾದಾಸೆಯಿಂದ 30 ಸಾವಿರ ಕೋಟಿ ರೂ.ಮೊತ್ತದ ಸೂರ್ಯ ಇಂಡಸ್ಟ್ರೀಜ್ ತರಲು ಪ್ರಯತ್ನ ಮಾಡಲಾಗಿತ್ತು ರೈತರಿಗೆ ತಪ್ಪು ಮಾಹಿತಿ ನೀಡಿ ಅದು ಬರದಂತೆ ಹಿಂದಿನ ಜನಪ್ರತಿನಿಧಿಗಳು ನೋಡಿಕೊಂಡರು. ಯಾವ ರೈತರಿಂದ ಒತ್ತಾಯದಿಂದ ಭೂಮಿಯನ್ನು ಪಡೆದುಕೊಳ್ಳದೇ ಕಾರ್ಖಾನೆ ಮಾಡಲು ಎಲ್ಲರೂ ಒಪ್ಪಿಗೆ ಸೂಚಿಸಿದ್ದರು. ರೈತರಲ್ಲಿ ತಪ್ಪು ಸಂದೇಶ ನೀಡಿ ಅವರನ್ನು ದಾರಿ ತಪ್ಪಿಸುವ ಕೆಲಸವನ್ನು ಮಾಡಲಾಯಿತು. ಅಭಿವೃದ್ಧಿಗೆ ಬಿಜೆಪಿಯನ್ನು ಬೆಂಬಲಿಸಿ ಎಂದು ಹೇಳಿದರು.

ಬಿಟಿಡಿಎ ಮಾಜಿ ಅಧ್ಯಕ್ಷ ಜಿ.ಎನ್.ಪಾಟೀಲ ಮಾತನಾಡಿ, ಈ ಉಪಚುನಾವಣೆಯಲ್ಲಿ ವೀರಣ್ಣ ಚರಂತಿಮಠವರನ್ನು ಹೆಚ್ಚಿನ ಮತಗಳಿಂದ ಗೆಲ್ಲಿಸುವ ಮೂಲಕ ಮತ್ತೊಮ್ಮೆ ಕ್ಷೇತ್ರದ ಅಭಿವೃದ್ಧಿಗೆ ಮತದಾರರು ಆಶೀರ್ವದಿಸಬೇಕು ಎಂದರು.

ವಿಜಯಪುರ ಬಿಜೆಪಿ ಜಿಲ್ಲಾಧ್ಯಕ್ಷ ಅಂಗಡಿ ಮಾತನಾಡಿ, ಬಿಜೆಪಿಯಿಂದ ಸ್ಪರ್ಧೆ ಮಾಡಿರುವ ವೀರಣ್ಣ ಚರಂತಿಮಠ ಹೃದಯವಂತ, ನೇರ ಮಾತುಗಾರರಾಗಿದ್ದು ಅಭಿವೃದ್ಧಿಯಲ್ಲಿ ಯಾರೂ ಮಾಡದಷ್ಟು ಬಾಗಲಕೋಟೆ ಮತಕ್ಷೇತ್ರದಲ್ಲಿ ಅಭಿವೃದ್ಧಿ ಮಾಡಿದ್ದಾರೆ. ಇಂತಹ ವ್ಯಕ್ತಿಯನ್ನು ಕ್ಷೇತ್ರದ ಜನ ಮಾತ್ರ ವೀರಣ್ಣ ಚರಂತಿಮಠವರ ಬಿಜೆಪಿಯ ಕಮಲದ ಗುರುತಿಗೆ ಮತ ನೀಡಿ ಗೆಲ್ಲಿಸಬೇಕು ಎಂದು ಹೇಳಿದರು.

ಬಾಗಲಕೋಟೆ ಮತಕ್ಷೇತ್ರದಲ್ಲಿ ಮೂರುವರ್ಷ ಯಾವುದೇ ಅಭಿವೃದ್ಧಿ ಕೆಲಸಗಳು ನಡೆದಿಲ್ಲ, ಎಲ್ಲವೂ ಶೂನ್ಯವಾಗಿದೆ. ಅಭಿವೃದ್ಧಿಯ ಹರಿಕಾರ, ನಿಷ್ಠಾವಂತ ಮನುಷ್ಯ ವೀರಣ್ಣ ಚರಂತಿಮಠವರನ್ನು ಮತದಾರರು ಕಳೆದುಕೊಳ್ಳದೇ ಆಯ್ಕೆ ಮಾಡಬೇಕು ಎಂದರು.



ಕೈ ಕಾರ್ಯಕರ್ತರು ಬಿಜೆಪಿ ಸೇರ್ಪಡೆ

•**ಬಾಗಲಕೋಟೆ:** ನಗರದ ಶಿವಾನಂದ ಜೀನದಲ್ಲಿರುವ ಬಿಜೆಪಿ ಕಾರ್ಯಾಲಯದಲ್ಲಿ ಶುಕ್ರವಾರ ಅಮೀನಗಡ ಹಾಗೂ ಶಿರಗುಪ್ಪಿ ಭಾಗಗಳ ಕಾಂಗ್ರೆಸ್ ಮುಖಂಡರು ಮತ್ತು ನೂರಾರು ಕಾರ್ಯಕರ್ತರು ಬಿಜೆಪಿಗೆ ಸೇರ್ಪಡೆಯಾದರು. ಸಂಸದ ಜಗದೀಶ ಶೆಟ್ಟರ ಮಾತನಾಡಿ, ಬಾಗಲಕೋಟೆ ಮತಕ್ಷೇತ್ರದ ಅಭಿವೃದ್ಧಿಗೆ ಬಿಜೆಪಿ ಅಭ್ಯರ್ಥಿ ಡಾ.ವೀರಣ್ಣ ಚರಂತಿಮಠ ಅವರು ಅಪಾರ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು. ರಸ್ತೆ ನಿರ್ಮಾಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವುದರ ಜೊತೆಗೆ ಮುಳುಗಡೆ ಸಂತ್ರಸ್ತರಿಗೆ ಸಹಾಯ ಮಾಡಿರುವುದು ಗಮನಾರ್ಹವಾಗಿದೆ ಎಂದು ವಿವರಿಸಿದರು. ಜನಸಾಮಾನ್ಯರ ದನಿಯಾಗಿ ಜನಪರ ಆಡಳಿತ ನಡೆಸುತ್ತಿರುವ ಚರಂತಿಮಠ ಅವರ ಕಾರ್ಯಶೈಲಿಯನ್ನು ಮೆಚ್ಚಿ ಅನೇಕ ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿ ಸೇರುತ್ತಿದ್ದಾರೆ. ಇದರಿಂದ ಬಿಜೆಪಿ ಪಕ್ಷ ಇನ್ನಷ್ಟು ಬಲಿಷ್ಠವಾಗುತ್ತಿದೆ. ಕ್ಷೇತ್ರದಲ್ಲಿ ಚರಂತಿಮಠ ಅವರ ಗೆಲುವಿಗೆ ಪೂರಕವಾದ ವಾತಾವರಣ ನಿರ್ಮಾಣವಾಗಿದ್ದು, ಎಲ್ಲರೂ ಅವರ ಗೆಲುವಿಗಾಗಿ ಶ್ರಮಿಸೋಣ ಎಂದು ಕರೆ ನೀಡಿದರು.

ಗ್ರಾಮೀಣ ಅಭಿವೃದ್ಧಿಗೆ ಕಾಂಗ್ರೆಸ್ ಬದ್ಧ

•**ಬಾಗಲಕೋಟೆ:** ಕ್ಷೇತ್ರದಾದ್ಯಂತ ಮೂರು ವರ್ಷಗಳಲ್ಲಿ ಗ್ರಾಮಗಳ ಅಭಿವೃದ್ಧಿಗೆ ದಿ.ಎಚ್.ವೈ.ಮೇಟಿ ಅವರು 11 ಕೋಟಿ 93 ಲಕ್ಷ ರೂ.ಅನುದಾನ ಒದಗಿಸಿ ಹಲವು ಅಭಿವೃದ್ಧಿ ಕಾರ್ಯ ಕೈಗೊಂಡಿದ್ದಾರೆ ಎಂದು ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಹೇಳಿದರು.

ತಾಲೂಕಿನ ಬಿಲ್‌ಕೆರೂರ ಗ್ರಾಮದಲ್ಲಿ ಶುಕ್ರವಾರ ಬೆಳಗ್ಗೆ ಪಕ್ಷದ ಮುಖಂಡರೊಂದಿಗೆ ಪ್ರಚಾರ ಕೈಗೊಂಡು ಮಾತನಾಡಿ, ಗ್ರಾಮದ 'ದ್ಯಾಮವ್ವ ಹಾಗೂ ಮಲ್ಲಮ್ಮದೇವಸ್ಥಾನಕ್ಕೆತಲಾ 20 ಲಕ್ಷ ರೂ. ಅನುದಾನ ನೀಡಿದ್ದಾರೆ. ಬಿಲ್‌ಕೆರೂರ ಗ್ರಾಮಕ್ಕೆ ಪಶು ಚಿಕಿತ್ಸಾಲಯ ಮಂಜೂರು ಮಾಡಿಸಿದ್ದಾರೆ. ಬೆಣ್ಣೂರ ಗ್ರಾಮದಲ್ಲಿ ಅಂಬೇಡ್ಕರ್ ಭವನ, ಗೊಂದಿಮಾರುತೇಶ್ವರ, ಬಸವೇಶ್ವರ ಸೇರಿದಂತೆ ವಿವಿಧ ದೇವಸ್ಥಾನಗಳಿಗೆ ಅನುದಾನ ಮಂಜೂರು ಮಾಡಿದ್ದಾರೆ. ಪ್ರತಿ ಗ್ರಾಮದಲ್ಲೂ ಜನರ ಬೇಡಿಕೆಗೆ ಅನುಗುಣವಾಗಿಸೇವೆ ಸಲ್ಲಿಸಿದ್ದಾರೆ. ಈ ಎಲ್ಲ ಅಭಿವೃದ್ಧಿ ಕಾರ್ಯ ಗಮನಿಸಿ ಮತ್ತೊಮ್ಮೆ ಕಾಂಗ್ರೆಸ್ ಬೆಂಬಲಿಸಬೇಕು ಎಂದು ಕೋರಿದರು. ಬಸವಂತಪ್ಪ ಮೇಟಿ, ಎಸ್.ಎನ್.ರಾಂಪೂರ, ಮುತ್ತಪ್ಪ ಉಗ್ಗಿ, ಶಶಿಕಾಂತ ಪೂಜಾರ, ಮಲ್ಲು ದ್ಯಾವನ್ನವರ, ನಿಂಗಣ್ಣಕೋಟಿ, ವಿನಾಯಕಕರಿಲಿಂಗಣ್ಣವರ, ಬಸು ಕಟಗೇರಿ, ಶಿವಪ್ಪ ಕರಿಲಿಂಗಣ್ಣವರ, ಅನ್ವರ್ ಹಳ್ಳೂರ, ಶಿವಪ್ಪ ಕುರಿ, ಜಟ್ಟೆಪ್ಪ ಮಾದಾಪೂರ, ಶಿವಪ್ಪ ನುಗ್ಲಿಇತರರಿದ್ದರು.

ನಗರದ ಅಂಬೇಡ್ಕರ್ ನಗರ, ಜಾಡಗೇರಗಲ್ಲಿ, ಹಳಪೇಟೆ, ವಿದ್ಯಾಗಿರಿ ಹಾಗೂ ನವನಗರದ 2,3, 12ನೇ ಸೆಕ್ಟರ್ ಗಳಲ್ಲಿ ಪ್ರಚಾರ ಕೈಗೊಳ್ಳಲಾಯಿತು. ಮಾಜಿ ಸಚಿವ ಅಜಯಕುಮಾರ್ ಸರನಾಯಕ ಮಾತನಾಡಿ, ಬಡವರ ಸಂಕಷ್ಟಕ್ಕೆ ಸ್ಪಂದಿಸುವ ಉದ್ದೇಶದಿಂದ ಕಾಂಗ್ರೆಸ್ ಸರಕಾರ ಜಾರಿಗೊಳಿಸಿದ ಗ್ಯಾರಂಟಿ ಯೋಜನೆಗಳು ದೇಶದಲ್ಲೇ ಮಾದರಿಯಾಗಿವೆ. ದಿ.ಎಚ್.ವೈ. ಮೇಟಿ ಅವರ ಜನಪರ ಕಾರ್ಯ ಮತ್ತೊಮ್ಮೆ ಕೈ ಬಲಪಡಿಸಬೇಕು ಎಂದರು. ಸಚಿವ ಆರ್.ಬಿ.ತಿಮ್ಮಾಪುರ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ, ಮುಖಂಡರಾದ ಮಲ್ಲಿಕಾರ್ಜುನ ಚರಂತಿಮಠ, ನಾಗರಾಜ ಹದ್ಲಿ ಮಾತನಾಡಿದರು. ಸಂತೋಷ ಹೊಕ್ರಾಣಿ, ಶಿವಕುಮಾರನಂದಿಕೋಲಮಠ, ಅಬ್ದುಲರಜಾಕ್ ಬೇನೂರ, ಅಕ್ಬರ್ ಮುಲ್ಲಾ, ಜಾಫರ್ ಬೇಪಾರಿ, ಪ್ರೇಮಾಗರಸಂಗಿ, ಇಬ್ರಾಹಿಂಕಲಾದಗಿ, ಅಯೂಬಖಾನ್ ಪುಣೇಕರ್, ಶ್ರೀನಿವಾಸ ಬಳ್ಳಾರಿ, ಗೋವಿಂದ ಬಳ್ಳಾರಿ, ಹಣಮಂತ ರಾಕುಂಪಿ, ರೇಣುಕಾ ನ್ಯಾಮಗೌಡ, ಮಂಜುಳಾ ಭುಸಾರೆ, ಮಮತಾ ಸುತಾರ, ಸುಧಾ ಪಾಟೀಲ, ಭರಮು ಪೂಜಾರಿ, ಭರತ ಈಟಿ ಇದ್ದರು



ಆರೋಗ್ಯವಂತರಿಂದ ಸದೃಢ ರಾಷ್ಟ್ರ ನಿರ್ಮಾಣ


•**ಮಹಾಲಿಂಗಪುರ:** ಆರೋಗ್ಯಕ್ಕಿಂತ ಮಿಗಿಲಾದ ಭಾಗ್ಯ ಮತ್ತೊಂದಿಲ್ಲ, ಆರೋಗ್ಯವಂತರಿಂದ ಸದೃಢ ಸಮಾಜ ನಿರ್ಮಾಣ ಸಾಧ್ಯ. ದೈಹಿಕ ಅನಾರೋಗ್ಯಕ್ಕೆ ನಮ್ಮ ಮಾನಸಿಕ ಆರೋಗ್ಯ ಅಥವಾ ಮನಸ್ಥಿತಿಯೇ ಕಾರಣ ಎಂದು ಅರುಣ ಕುಮಾರ ಗುರೂಜಿ ಹೇಳಿದರು.

ಸ್ಥಳೀಯ ಟೋಣಪಿನಾಥ ಸಮುದಾಯ ಭವನದಲ್ಲಿ ಬೆಂಗಳೂರಿನ ಋಷಿ ಸಂಸ್ಕೃತಿ ವಿದ್ಯಾ ಕೇಂದ್ರದ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಯೋಗ ಬ್ರಮ್ ಋಷಿ ಪ್ರಭಾಕರ ಗುರೂಜಿಯವರಿಂದ ಸೃಷ್ಟಿಮಾಡಿದ ಸಿದ್ಧ ಸಮಾಧಿ ಯೋಗ ಶಿಬಿರದಲ್ಲಿ ಮಾತನಾಡಿದ ಅವರು, ಯೋಗವೇ ಶ್ರೀರಕ್ಷೆ, ಯೋಗದಿಂದ ಪ್ರತಿಯೊಬ್ಬ ಮನುಷ್ಯನು ಸಾಧಾರಣತೆಯಿಂದ ಅಸಾಧಾರಣತೆಯ ಕಡೆಗೆ ಸುಲಭವಾಗಿ ಚಲಿಸಬಹುದು. ಒಂದು ರಾಷ್ಟ್ರದ ಅಭಿವೃದ್ಧಿ ಆ ದೇಶದ ನಾಗರಿಕರ ತಲಾ ಆರೋಗ್ಯ ಅವಲಂಬಿಸಿರುತ್ತದೆ. ಹಾಗಾಗಿ ಆರೋಗ್ಯವಂತ ಜನರು ಸಮಾಜದ ಮತ್ತು ರಾಷ್ಟ್ರದ ಆಸ್ತಿಯಾಗುತ್ತಾರೆ ಎಂದರು.

ನಾವು ಸೇವಿಸುವ ಆಹಾರವು ನಮ್ಮ ಮನಸ್ಥಿತಿ ಮತ್ತು ಆಲೋಚನೆಗಳ ಮೇಲೆ ನೇರ ಪರಿಣಾಮ ಬೀರುತ್ತದೆ, ತಾಮಸಿ ಆಹಾರಗಳು ಮನುಷ್ಯನಲ್ಲಿ ದ್ವೇಷ, ಕೋಪ, ಅಸೂಯೆ ಮುಂತಾದ ಗುಣಗಳನ್ನು ಹಾಗೂ ಸಾತ್ವಿಕ ಆಹಾರಗಳು ಮನುಷ್ಯನಲ್ಲಿ ಸಹನೆ, ಸಹಬಾಳ್ವೆ, ಪ್ರೀತಿ ವಿಶ್ವಾಸ ಮುಂತಾದ ಗುಣಗಳನ್ನು ಬೆಳೆಸುತ್ತವೆ ಹಾಗಾಗಿ ತಾವೆಲ್ಲರೂ ಸಾತ್ವಿಕ ಆಹಾರ ಸೇವಿಸುವುದರಿಂದ ಸಜ್ಜನರಾಗಿ ಭಗವಂತನಿಗೆ ಪ್ರಿಯರಾಗುತ್ತೇವೆ ಎಂದರು.

ಶಿಬಿರಾರ್ಥಿಗಳಾದ ರವಿ ಜವಳಗಿ, ನಿಂಗಪ್ಪ ಬಾಳಿಕಾಯಿ, ಬಸವರಾಜ ಕರೆಹೊನ್ನ ಮಾತನಾಡಿ, ಆಧುನಿಕತೆಯ ಹೆಸರಿನಲ್ಲಿ ಪಾಶ್ಚಾತ್ಯ ಸಂಸ್ಕೃತಿ ಮತ್ತು ಆಹಾರಕ್ಕೆ ಮಾರುಹೋಗುತ್ತಿರುವ ನಮ್ಮ ಜನರಿಗೆ ಇಂತಹ ಶಿಬಿರಗಳು ಅತ್ಯವಶ್ಯಕ. ಮಾನಸಿಕ ಮತ್ತು ದೈಹಿಕ ಸದೃಢತೆಯಿಂದ ಶಿಬಿರಾರ್ಥಿಯ ಕುಟುಂಬ ಸದೃಢಗೊಂಡು ವ್ಯಕ್ತಿ ಶಕ್ತಿಯಾಗಿ ರಾಷ್ಟ್ರದ ಆಸ್ತಿಯಾಗಬಲ್ಲ ಎಂದರು.

ತರಬೇತಿಯಲ್ಲಿ 15ಕ್ಕಿಂತ ಹೆಚ್ಚು ಮಹಿಳೆಯರು ಸೇರಿದಂತೆ 40ಕ್ಕೂ ಅಧಿಕ ಶಿಬಿರಾರ್ಥಿಗಳು ಇದರ ಲಾಭ ಪಡೆದರು ಮಾರ್ಚ್ ಬುಧವಾರ ಬೆಳಗ್ಗೆ ಕೊನೆಯ ತರಬೇತಿಯೊಂದಿಗೆ ಶಿಬಿರ ಕೊನೆಗೊಂಡಿತ್ತು. ನಂತರ ನಾಲ್ಕು ದಿನಗಳ (ಎಎಂಸಿ) ನಿತ್ಯ ಸಮಾಧಿ ಯೋಗ ತರಬೇತಿಗೆ ಸಮೀಪದ ಕಲಹಳ್ಳಿ ಗ್ರಾಮದ ಸತ್ಯಕಾಮ ಪ್ರತಿಷ್ಠಾನದ ಸುಮ್ಮನೆಯ ಆವರಣಕ್ಕೆ ಶಿಬಿರಾರ್ಥಿಗಳಿಗೆ ನಿತ್ಯ ಸಮಾಧಿ ಯೋಗ ಆಯೋಜಿಸಲಾಗಿದೆ ಎಂದು ಅರುಣಕುಮಾರ ಗುರೂಜಿ ಹೇಳಿದರು.



ಚುನಾವಣಾ ನಿಯಮ ಕಟ್ಟುನಿಟ್ಟಾಗಿ ಪಾಲಿಸಲು ಪಾರುಲ್ ಸೂಚನೆ

•**ಬಾಗಲಕೋಟೆ:** ಬಾಗಲಕೋಟೆ ವಿಧಾನಸಭಾ ಉಪಚುನಾವಣೆಗೆಸಂಬಂಧಿಸಿದಂತೆಕಣದಲ್ಲಿರುವ ಅಭ್ಯರ್ಥಿಗಳು ಚುನಾವಣಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸಾಮಾನ್ಯ ವೀಕ್ಷಕ ಪಾರುಲ್ ಪಟವಾರಿ ಸೂಚನೆ ನೀಡಿದರು.

ಉಪವಿಭಾಗಾಧಿಕಾರಿಗಳ ಸಭಾಂಗಣದಲ್ಲಿ ಉಪಚುನಾವಣಾ ಕಣದಲ್ಲಿರುವ ಅಭ್ಯರ್ಥಿ ಅಥವಾ ಪ್ರತಿನಿಧಿಗಳೊಂದಿಗೆ ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಉಪ ಚುನಾವಣಾ ಪ್ರಕ್ರಿಯೆ ಪಾರದರ್ಶಕವಾಗಿ ಹಾಗೂ ನ್ಯಾಯಸಮ್ಮತವಾಗಿ ನಡೆಸಲು ಅಭ್ಯರ್ಥಿಗಳು ನಿಯಮಗಳನ್ನು ಪಾಲಿಸಬೇಕು. ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಗೆ ಅವಕಾಶ ನೀಡಬಾರದು ಎಂದರು. ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ, ಬಾಗಲಕೋಟೆ



ವಿಧಾನಸಭಾ ಉಪಚುನಾವಣೆಗೆ 322 ಮತಗಟ್ಟೆಗಳಿದ್ದು, ಪ್ರತಿಯೊಂದು ಮತಗಟ್ಟೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. 85 ವರ್ಷ ಮೇಲ್ಪಟ್ಟ ಮತದಾರರಿಗೆ ಮನೆಯಿಂದಲೇ ಮತದಾನ ಮಾಡಲು ಚುನಾವಣಾ ಆಯೋಗವು ಅವಕಾಶ ಕಲ್ಪಿಸಲಾಗಿದೆ ಎಂದರು.

ಎಂಸಿಸಿ ಜಿಲ್ಲಾ ನೋಡಲ್ ಅಧಿಕಾರಿ ಹಾಗೂ ಜಿಪಂ ಸಿಇಓ ಶಶಿಧರ ಕುರೇರ ಮಾತನಾಡಿ, ಚುನಾವಣೆಯಲ್ಲಿ ಯಾವುದೇ ರೀತಿಯಲ್ಲಿ ಉಲ್ಲಂಘನೆಯಾಗದಂತೆ ನೋಡಿಕೊಳ್ಳಬೇಕು. ಸಭೆ, ಸಮಾವೇಶಗಳಿದ್ದಾಗ ವೇದಿಕೆಯನ್ನು ಪ್ರಾರಂಭವಾಗುವ 2 ಗಂಟೆ ಮುಂಚಿತವಾಗಿ ವೇದಿಕೆ ಹಾಕಿ ನಂತರ ಮುಗಿದ ಒಂದು ಗಂಟೆಯಲ್ಲಿ ಅದನ್ನು ತೆರವುಗೊಳಿಸುವ ಕೆಲಸವಾಗಬೇಕು. ದಾಖಲೆ ಇಲ್ಲದೇ 50 ಸಾವಿರ ರೂ. ತೆಗೆದುಕೊಂಡು ಹೋಗಲು ಅವಕಾಶವಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಚುನಾವಣಾಧಿಕಾರಿ ಹಾಗೂ ಉಪ ವಿಭಾಗಾಧಿಕಾರಿ ಸಂತೋಷ ಜಗಲಾಸರ, ಸಹಾಯಕ ಚುನಾವಣಾಧಿಕಾರಿಗಳು ಹಾಗೂ ತಹಶೀಲ್ದಾರರಾದ ವಾಸುದೇವ ಸ್ವಾಮಿ, ಡಾ.ಪ್ರದೀಪಕುಮಾರ, ಜಿಪಂ ಮುಖ್ಯ ಲೆಕ್ಕಾಧಿಕಾರಿ ಸಿದ್ದರಾಮೇಶ್ವರ ಉಕ್ಕಲಿ ಸೇರಿದಂತೆ ಚುನಾವಣಾ ಅಭ್ಯರ್ಥಿಗಳು ಅಥವಾ ಪ್ರತಿನಿಧಿಗಳು ಉಪಸ್ಥಿತರಿದ್ದರು.

ರೈತರ ಮೇಲೆ ದಾಖಲಾದ ಕೇಸ್ ವಾಪಸ್ ಪಡೆಯಲು 3 ದಿನ ಗಡುವು

•**ಮುಧೋಳ:** ಕಬ್ಬು ಬೆಳೆಗಾರರ ಬಾಕಿ ಹಣ ಪಾವತಿಗೆ ಆಗ್ರಹಿಸಿ ಶಾಂತಿಯುತವಾಗಿ ಹೋರಾಟ ಮಾಡುತ್ತಿರುವ ರೈತರ ಮೇಲೆ ಸರ್ಕಾರ ಮತ್ತು ಪೊಲೀಸ್ ಇಲಾಖೆ ವಿನಾಕಾರಣ 307ರಂತಹ ಗಂಭೀರ ಕಲಂಗಳಡಿ ಕೇಸ್ ದಾಖಲಿಸಿ ಜೈಲಿಗಟ್ಟುತ್ತಿರುವುದು ಖಂಡನೀಯ ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಬಸವಂತ ಕಾಂಬಳೆ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಕಾನಿಪ ಕಾರ್ಯಾಲಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಯ ದ್ವಂದ್ವ ನೀತಿಯ ವಿರುದ್ಧ ತೀವ್ರವಾಗಿ ವಾಗ್ದಾಳಿ ನಡೆಸಿದರು. ರೈತ ಮುಖಂಡ ಮಹೇಶ ಪಾಟೀಲ ಮತನಾಡಿ, ರೈತರ ಮೇಲೆ 307 ಸೇರಿದಂತೆ ವಿವಿಧ



ಕಠಿಣ ಕಲಂಗಳನ್ನು ಹಾಕಿ ಜೈಲಿಗಟ್ಟಲಾಗುತ್ತಿದೆ. ಈಗಾಗಲೇ 17 ಜನರ ಮೇಲೆ ಕೇಸ್ ದಾಖಲಾಗಿದ್ದು, ಈಗ ಮತ್ತೆ 13 ಜನರನ್ನು ಬಂಧಿಸಲಾಗಿದೆ. ಒಟ್ಟು 81 ರೈತರನ್ನು ಗುರಿಯಾಗಿಸಿಕೊಂಡು ಸರ್ಕಾರ ದೌರ್ಜನ್ಯ ಎಸಗುತ್ತಿದೆ. ಆದರೆ, ಮಹಾಲಿಂಗಪುರ ಮತ್ತು ಮುಧೋಳ ಠಾಣೆಗಳಲ್ಲಿ ರೈತರು ಕಾರ್ಖಾನೆ ಮಾಲೀಕರ ವಿರುದ್ಧ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ, ಜಿಲ್ಲಾಡಳಿತ ಕಾರ್ಖಾನೆ ಮಾಲೀಕರೊಂದಿಗೆ ಶಾಮೀಲಾಗಿದೆ ಎಂದು ಆರೋಪಿಸಿದರು.

ರೈತರ ಮೇಲಿನ ಸುಳ್ಳು ಮೊಕದ್ದಮೆಗಳನ್ನು ಕೂಡಲೇ ವಾಪಸ್ ಪಡೆಯಬೇಕು ಮತ್ತು ಬಾಕಿ ಹಣ ಬಿಡುಗಡೆಗೆ ಕ್ರಮ ಕೈಗೊಳ್ಳಬೇಕು. ಈ ಬೇಡಿಕೆ ಈಡೇರಿಸಲು ಸರ್ಕಾರಕ್ಕೆ 3 ದಿನಗಳ ಗಡುವು ನೀಡಲಾಗುವುದು. ಒಂದು ವೇಳೆ ಸರ್ಕಾರ ಸ್ಪಂದಿಸದಿದ್ದರೆ ಜಿಲ್ಲೆಯಾದ್ಯಂತ ರೈತರು ಬೀದಿಗಿಳಿದು ಜೈಲು ಭರೋ ಚಳುವಳಿ ಹಮ್ಮಿಕೊಳ್ಳಲಿದ್ದಾರೆ ಎಂದು ಸಂಘಟನೆ ಎಚ್ಚರಿಸಿದೆ.

ಮುಖಂಡರಾದ ಸುಭಾಸ ಶಿರಬೂರ, ದುಂಡಪ್ಪ ಯರಗಟ್ಟಿ, ಹಣಮಂತ ನಬಾಬ, ಮಹೇಶ ಪಾಟೀಲ, ಸುರೇಶ ಚಿಂಚಲಿ, ನಿಂಗಪ್ಪ ಹೊಸಕೋಟಿ, ಕರೆಪ್ಪ ರಾಗ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಂಭ್ರಮದ ಶ್ರೀರಾಮನವಮಿ ಆಚರಣೆ



•**ಲೋಕಾಪುರ:** ಭಕ್ತರ ಹೃದಯಗಳಲ್ಲಿ ಭಕ್ತಿ, ಶಾಂತಿ ಮತ್ತು ಧರ್ಮದ ಬೆಳಕನ್ನು ಹಚ್ಚುವ ಪವಿತ್ರ ಹಬ್ಬವೇ ಶ್ರೀರಾಮನವಮಿ ಎಂದು ಮರಾಠಾ ಸಮಾಜದ ಅಧ್ಯಕ್ಷ ವಿನೋದ ಘೋರ್ಪಡೆ ಹೇಳಿದರು.

ಪಟ್ಟಣದ ಯಾದವಾಡ ರಸ್ತೆಯ ಶಿವಾಜಿ ವೃತ್ತದಲ್ಲಿ ಶಿವಶಕ್ತಿ ಯುವಕ ಮಂಡಳಿ ಸಂಯುಕ್ತಾಶ್ರಯದಲ್ಲಿ ಮರ್ಯಾದ ಪುರುಷೋತ್ತಮ ರಾಮನವಮಿಗೆ ಚಾಲನೆ ನೀಡಿ ಮಾತನಾಡಿದ ಅವರು ಈ ದಿನ ಕೇವಲ ಶ್ರೀರಾಮನ ಜನ್ಮದಿನವಷ್ಟೇ ಅಲ್ಲ, ಅದು ಮಾನವ ಜೀವನಕ್ಕೆ ದಾರಿದೀಪವಾಗಿರುವ ಸತ್ಯ, ಧರ್ಮ ಮತ್ತು ನೀತಿಯ ಆಚರಣೆಗೂ ಸಂಕೇತವಾಗಿದೆ. ಚೈತ್ರ ಮಾಸದ ಶುಕ್ಲಪಕ್ಷದ ನವಮಿಯಂದು ಈ ಹಬ್ಬ ಆಚರಿಸಲಾಗುತ್ತ, ಇದರಿಂದಲೇ ಪ್ರಕೃತಿ ಹೊಸ ಚೈತನ್ಯವನ್ನು ಪಡೆದುಕೊಳ್ಳುವ ಕಾಲದೊಂದಿಗೆ ರಾಮನ ಜನ್ಮವು ಕೂಡ ಹೊಂದಿಕೆಯಾಗುತ್ತದೆ ಎಂದರು. ಯುವ ಮುಖಂಡ ಗುರುರಾಜ ಉದಪುಡಿ ಮಾತನಾಡಿ ಶ್ರೀರಾಮನ ಆದರ್ಶಗಳೇ ಪರಮ ಪವಿತ್ರ, ರಾಮ ನಡೆದಂತೆ ನಡೆಯಬಹುದು, ಕೃಷ್ಣ ಹೇಳಿದಂತೆ ನಡೆದುಕೊಳ್ಳಬಹುದು, ಇದನ್ನು ಪಾಲಿಸುವುದುರಿಂದ ನಮಗೆ ನೆಮ್ಮದಿ ಲಭಿಸುತ್ತದೆ ಎಂದರು. ಶಿವಶಕ್ತಿ ಯುವಕ ಮಂಡಳದ ಅಧ್ಯಕ್ಷ ಲೋಕಣ್ಣ ಗಸ್ತಿ, ಬಾಬು ಶಿಂಧೆ, ಶಿವಶಕ್ತಿ ಯುವಕ ಮಂಡಳಿ ಹಾಗೂ ಪಟ್ಟಣದ ಯುವಕ ಮಂಡಳದ ಸದಸ್ಯರು ಇದ್ದರು.

ಮಹಿಳಾ ಸಂಘದಿಂದ ರಾಮನವಮಿ ಉತ್ಸವ

•**ಗುಳೇದಗುಡ್ಡ:** ಶ್ರೀರಾಮ ನವಮಿ ಅಂಗವಾಗಿ ಪಟ್ಟಣದಲ್ಲಿ ಪಟ್ಟಸಾಲಿನೇಕಾರಮಹಿಳಾಸಂಘದ ಮಹಿಳೆಯರು ಕೃಷ್ಣ ರಾಮನ ಕುರಿತಾಗಿ ಭಕ್ತಿ ಗೀತೆಗಳನ್ನು ಹಾಡಿ, ರಾಮ ಜಪ ಮಾಡಿ ರಾಮನವಮಿ ಉತ್ಸವ ಆಚರಿಸಿದರು.

ಮಹಿಳಾ ಸಂಘದ ಸಲಹಾ ಸಮಿತಿಯ ಭಾಗ್ಯಾ ಉದ್ನೂರ ಮಾತನಾಡಿ, ರಾಮ ನಾಮ ಜಪದಿಂದ ಮನಸ್ಸಿನಲ್ಲಿನ ಕಲ್ಮಶಗಳು ದೂರವಾಗುತ್ತವೆ. ಮತ್ತು ಮನಸ್ಸು ಶಾಂತ,ಶುದ್ಧವಾಗುತ್ತದೆ.ಮಕ್ಕಳಿಗೂ ಕೂಡಾ ರಾಮನಮ ಜಪದ ಮಹತ್ವ ತಿಳಿಸಬೇಕು. ದೇವರಲ್ಲಿ ನಂಬಿಕೆ, ಪ್ರೀತಿ ಬೆಳೆಸಬೇಕು. ದೇವರ ಬಗ್ಗೆ ವಿಶೇ?ವಾದ ಆಸಕ್ತಿ, ನಂಬಿಕೆ ಮೂಡಿಸಬೇಕು ಎಂದು ಹೇಳಿದರು.

ಪಟ್ಟಸಾಲಿ ನೇಕಾರ ಮಹಿಳಾ ಸಂಘದ ಅಧ್ಯಕ್ಷೆ ಗೌರಮ್ಮ ಕಲ್ಬುರ್ಗಿ, ಗಿರಿಜಾ ಕಲ್ಯಾಣಿ, ದೀಪಾ ಉಂಕಿ, ವೇದಾ ಶಿಪ್ರಿ, ದ್ರಾಕ್ಷಾಯಣಿ ಗೊಬ್ಬಿ, ಮಾಲಾ ರಾಜನಾಳ, ತಾರಾಮತಿ ರೋಜಿ, ಶಶಿಕಲಾ ಭಾವಿ, ಅನಿತಾ ಶಿರೋಳ, ಮುರಿಗೆವ್ವ ಸಾರಂಗಿ, ಸರಿತಾ ಕಲ್ಯಾಣಿ, ಚಿಂದಿ ಇತರರು ಇದ್ದರು.



ಮುಂಬೈ ಹ್ಯಾಕಥಾನ್‌ನಲ್ಲಿ ಸಾಧನೆ



•**ಮಹಾಲಿಂಗಪುರ:** ಸ್ಥಳೀಯ ಕೆಎಲ್‌ಇ ಸಂಸ್ಥೆಯ ಬಿಸಿಎ ಕಾಲೇಜಿನ ವಿದ್ಯಾರ್ಥಿಗಳು ಮುಂಬೈನ ಹ್ಯಾಕಥಾನ್ ಸ್ಪರ್ಧೆಯಲ್ಲಿ ಭಾಗವಹಿಸಿ ಗಮನಾರ್ಹ ಸಾಧನೆ ಮಾಡಿದ್ದಾರೆ. ಮುಂಬೈ ಕಂಡಿವಲಿ ಎಜ್ಯುಕೇಶನ್‌ಸೊಸೈಟಿಯ ಕೆಇಎಸ್ ಶ್ರಾಫ್ ಕಾಲೇಜಿನಲ್ಲಿ ರಾಷ್ಟ್ರಮಟ್ಟದ ಎಐ ಹ್ಯಾಕಥಾನ್ ಸ್ಪರ್ಧೆ ಏರ್ಪಡಿಸಲಾಗಿತ್ತು. ಅದರಲ್ಲಿ ನಾನಾ ರಾಜ್ಯಗಳ ಐಐಟಿ ತಂಡಗಳು, ಇಂಜನಿಯರಿಂಗ್ ವಿದ್ಯಾರ್ಥಿ ತಂಡಗಳು ಭಾಗವಹಿಸಿದ್ದವು. ಒಟ್ಟು 230 ನವೀನ ಐಡಿಯಾಗಳಲ್ಲಿ 100 ಐಡಿಯಾಗಳು ಆಯ್ಕೆಯಾದವು. ಮಲ್ಲಿಕಾರ್ಜುನ ಬಡಿಗೇರ, ವಿಕಾಸ ಗಲಗಲಿ, ಪ್ರಜ್ವಲ ಉಮರಾಣಿ, ಆಕಾಶ ಗರಗದ 26 ಗಂಟೆಗಳ ನಿರಂತರ ಕೋಡಿಂಗ್ ಸವಾಲನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಸಂಪೂರ್ಣ ಎಂಡ್–ಟು–ಎಂಡ್ ವೆಬ್‌ಸೈಟ್ ಮತ್ತು ಪ್ರಾಜೆಕ್ಟ್ ಪ್ರಸ್ತುತೀಕರಣ(ಪಿಪಿಟಿ) ಸಲ್ಲಿಸಿ ಸಾಧನೆ ಮಾಡಿದ್ದಾರೆ ಎಂದು ಬಿಸಿಎ ವಿಭಾಗದ ಸಂಯೋಜಕ ಎಸ್.ಐ.ಪಾಟೀಲ ತಿಳಿಸಿದ್ದಾರೆ.

ಎನ್‌ಎಸ್‌ಎಸ್ ಶಿಬಿರ ಅಭಿವೃದ್ಧಿಗೆ ಸಹಕಾರಿ

•**ಜಮಖಂಡಿ:** ತಾಲೂಕಿನ ಮುತ್ತೂರ ಗ್ರಾಮದಲ್ಲಿ ಸ್ಥಳೀಯ ಬಿಎಲ್‌ಡಿಇಸಂಸ್ಥೆಯ ಆಶ್ರಯದಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಸೇವಾ ಶಿಬಿರಕ್ಕೆ ಸ್ಥಳೀಯ ರಾಚೋಟೇಶ್ವರ ವಿರಕ್ತಮಠದ ಗುರುಸಿದ್ಧೇಶ್ವರ ಶ್ರೀಗಳು ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರವು ಮುತ್ತೂರ ಗ್ರಾಮದ ಅಭಿವೃದ್ಧಿಗೆ ಸಹಕಾರಿಯಾಗುವುದರ ಜೊತೆಗೆ ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದರು.

ಸಂಸ್ಥೆಯ ಆಡಳಿತಾಧಿಕಾರಿ ಪ್ರೊ. ಎಸ್.ಎಚ್.ಲಗಳಿ ಮಾತನಾಡಿ, ವೈಯಕ್ತಿಕ ಹಿತಾಸಕ್ತಿಗಿಂತ ಸಮಾಜದ ಹಿತವೇ ಮುಖ್ಯ ಎಂಬುದು ಈ ಶಿಬಿರದ ಧ್ಯೇಯವಾಗಿದೆ. ವಿದ್ಯಾರ್ಥಿಗಳಲ್ಲಿ ಸಮಾಜ ಸೇವಾ



ಮನೋಭಾವ ಬೆಳೆಸುವ ಉದ್ದೇಶ ಈ ಶಿಬಿರವು ಹೊಂದಿದೆ ಎಂದರು.

ಎಪಿಎಂಸಿ ಕಾರ್ಯದರ್ಶಿ ಗ್ರಾಪಂ ಆಡಳಿತಾಧಿಕಾರಿ ಆನಂದ ರತ್ನಾಕರ ಅಧ್ಯಕ್ಷತೆ ವಹಿಸಿದ್ದರು. ಮಹಾಲಕ್ಷ್ಮೀ ದೇವಸ್ಥಾನ ಸಮಿತಿ ಅಧ್ಯಕ್ಷ ಮುತ್ತಣ್ಣ ಹಿಪ್ಪರಗಿ, ಕಾಲೇಜಿನ ಪ್ರಾಚಾರ್ಯ ಡಾ.ಪಿ.ಡಿ.ಪೋಳ, ಉಪ ಪ್ರಾಚಾರ್ಯ ಡಾ.ಡಿ.ಎಸ್.ನಿಟ್ಟೂರ, ಪ್ರೊ.ಮಲ್ಲಿಕಾರ್ಜುನ ಬೀರಣ್ಣ, ಡಾ.ರವಿಶಂಕರ, ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜಕ ಡಾ.ತಿಪ್ಪೇಸ್ವಾಮಿ, ಡಾ.ವಿ.ಎಸ್. ಕುಲಕರ್ಣಿ ಇನ್ನಿತರರಿದ್ದರು.



ಬಸವನಬಾಗೇವಾಡಿ: ಪಟ್ಟಣದ ವಿವೇಕಾನಂದ ಗಲ್ಲಿಯಲ್ಲಿ ಶ್ರೀರಾಮನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸಿ ಸಂಭ್ರಮದಿಂದ ರಾಮ ನವಮಿ ಆಚರಿಸಿದರು. ಚಂದ್ರಶೇಖರ ಗುರಪ್ಪ ಮುರಾಳ, ಚಂದು ಹಂಚಾಟಿ, ಬಸವರಾಜ ಸಂಗಮ, ಸಂಗಮೇಶ ಚಂದ್ರಶೇಖರ ಮುರಾಳ, ಅಕ್ಷಯ ಭಾಸ್ಕುತರ, ಪ್ರಕಾಶ ಸಂಗಮ, ಜಗದೀಶ ಬಡಿಗೇರ, ಗುರುಬಾಳಪ್ಪ ಬೇವನೂರ, ಮಲ್ಲು ಬೇವನೂರ, ಅಜೀತ ಕೋಳುರಗಿ, ಸಂಗು ಮುರಾಳ, ವಿರೇಶ ಮಣ್ಣೂರ ಇದ್ದರು.

ನಾಳೆಯಿಂದ ಕಾರ್ಯಕರ್ತರಿಗೆ ಪ್ರಶಿಕ್ಷಣ ವರ್ಗ

ಕೊಲ್ಹಾರ: ಪಂಡಿತ ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ ಅಂಗವಾಗಿ ಬಿಜೆಪಿ ಕಾರ್ಯಕರ್ತರಿಗಾಗಿ ಮಾ.29ರಿಂದ ಮೂರು ದಿನ ಬಸವನಬಾಗೇವಾಡಿ ಮತಕ್ಷೇತ್ರದ ವ್ಯಾಪ್ತಿಯ ಕಾರ್ಯಕರ್ತರಿಗಾಗಿ ಎರಡು ತಂಡಗಳಲ್ಲಿ ಪ್ರಶಿಕ್ಷಣ ವರ್ಗವೂ ಸ್ಥಳೀಯ ವಿಶ್ವಭಾರತಿ ವಿದ್ಯಾವರ್ಧಕ ಸಂಘದ ಯಲ್ಲಮ್ಮದೇವಿ ಶಾಲೆಯಲ್ಲಿ ನಡೆಯುವುದು ಎಂದು ಬಿಜೆಪಿ ಮಂಡಳ ಅಧ್ಯಕ್ಷ ಸಿದ್ದರಾಮ ಕಾಖಂಡಕಿ ತಿಳಿಸಿದ್ದಾರೆ. ಮಾ.29ರಂದು ಬೆಳಗ್ಗೆ 11 ಗಂಟೆಗೆ ಆರಂಭವಾಗುವ ವರ್ಗದಲ್ಲಿ ಬಸವನ ಬಾಗೇವಾಡಿ ಪುರಸಭೆ, ಮುತ್ತ ಜಿಪಂ, ಗೊಳಸಂಗಿ ಜಿಪಂ, ನಿಡಗುಂದಿ ಪಪಂ ಹಾಗೂ ಆಲಮಟ್ಟಿ ಜಿಪಂ ವ್ಯಾಪ್ತಿಯ ಬಿಜೆಪಿ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ. ಮಾ.30ರಂದು ಮಧ್ಯಾಹ್ನ 12.30 ಗಂಟೆಗೆ ಸಮಾರೂಪ ಸಮಾರಂಭ ನಡೆಯಲಿದ್ದು, ಸಂಜೆ 5 ಗಂಟೆಗೆ ಎರಡನೇ ತಂಡದ ವರ್ಗವೂ ಆರಂಭವಾಗಲಿದೆ. ಕೊಲ್ಹಾರ ಪಪಂ, ಮನಗೂಳಿ ಪಪಂ, ಉಕ್ಕಲಿ ಜಿಪಂ, ಮುಳವಾಡ ಜಿಪಂ, ಕೂಡಗಿ ಜಿಪಂ ವ್ಯಾಪ್ತಿಯ ಬಿಜೆಪಿ ಕಾರ್ಯಕರ್ತರಿಗೆ ವರ್ಗ ನಡೆಯಲಿದೆ. ಮಾ.31ರಂದು ಸಂಜೆ 6.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ವರ್ಗದ ಯಶಸ್ಸಿಗೆ ವಿವಿಧ ಸಮಿತಿಗಳನ್ನು ರಚಿಸಿದ್ದು ಈಗಾಗಲೇ ಕಾರ್ಯನಿರತವಾಗಿದ್ದು ವರ್ಗಕ್ಕೆ ಸಂಬಂಧಪಟ್ಟ ಕಾರ್ಯಕರ್ತರಿಗೆ ಸಂಪರ್ಕಿಸಿದ್ದು ಸಂಬಂಧಪಟ್ಟ ಮತ್ತು ಬಿಜೆಪಿ ಕಾರ್ಯಕರ್ತರು ತಪ್ಪದೆ ವರ್ಗದಲ್ಲಿ ಪಾಲ್ಗೊಳ್ಳಬೇಕೆಂದು ತಿಳಿಸಿದ್ದಾರೆ.



ವಿಜಯಪುರ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಪತ್ತಿನ ಸಹಕಾರ ಸಂಘ ನಿಯಮಿತ ವಿಜಯಪುರದ ಚುನಾವಣೆಯಲ್ಲಿ ಸತತ ನಾಲ್ಕನೇ ಬಾರಿಗೆ ಅತಿಹೆಚ್ಚು ಮತಗಳಿಂದ ಚುನಾಯಿತರಾದ ರಾಚಪ್ಪ ಗೋಪಾಲ ಲಿಂಗದಳ್ಳಿ ಇವರಿಗೆ ಜಿಲ್ಲಾ ಸರ್ಕಾರಿ ವಾಹನ ಚಾಲಕರ ಸಂಘದ ಅಧ್ಯಕ್ಷ ಎಸ್.ಎಲ್.ಖಜಾಪೂರ, ಜಿಲ್ಲಾ ಶುಶ್ರೂಷಾ ಅಧಿಕಾರಿಗಳ ಸಂಘದ ಅಧ್ಯಕ್ಷ ಸುರೇಂದ್ರ ಮಾನಕರ, ಸತೀಶ ಓಿವದಿ, ಬಿಮಪ್ಪ ಚಲವಾದಿ, ಪ್ರಕಾಶ ಕೌಲಗಿ, ಮನೋಜ ಖನಸೆ, ಆರೀಫ್ ಹವಾಲ್ದಾರ ಅವರಿಂದ ಸನ್ಮಾನಿಸಲಾಯಿತು. ಹನುಮಂತ ಗಂಜ್ಯಣ್ಣವರ, ಯುವರಾಜ ಸಾಗರ ಉಪಸ್ಥಿತರಿದ್ದರು.

ಕಿರು ಸುದ್ದಿ

ಇಂದು ಉಪನ್ಯಾಸ

ವಿಜಯಪುರ: ನಗರ ದರ್ಗಾ ರಸ್ತೆಯ ಚೇತನಾ ಕಾಲೇಜು ಸಭಾ ಭವನದಲ್ಲಿ ಮಾ.28ರಂದು ಸಂಜೆ 5.30 ಗಂಟೆಗೆ ಭಾರತದಲ್ಲಿನ ಅಶೋಕನ ಶಾಸನಗಳು ವಿಷಯ ಕುರಿತು ಉಪನ್ಯಾಸ ಕಾರ್ಯಕ್ರಮ ಜರುಗಲಿದೆ. ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಜಿಲ್ಲಾ ಸಮಿತಿ ಹಮ್ಮಿಕೊಂಡ ಈ ಕಾರ್ಯಕ್ರಮದಲ್ಲಿ ಖ್ಯಾತ ಶಾಸನ ತಜ್ಞ ಡಾ.ದೇವರಕೊಂಡ ರೆಡ್ಡಿ ಅವರು ಅಶೋಕನ ಶಾಸನಗಳು ಕುರಿತು ತಿಳಿಸಿಕೊಡಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ವಿವೇಕ ಕುಲಕರ್ಣಿ (ಮೊ 9880050818), ಸುಕಾಂತ (ಮೊ 8105473275) ಅವರನ್ನು ಸಂಪರ್ಕಿಸಲು ಕೋರಲಾಗಿದೆ ಎಂದು ಅಭಾಸಾಪ ಜಿಲ್ಲಾ ಅಧ್ಯಕ್ಷ ವಿವೇಕ ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಮೇಶ್ವರ ಮಂದಿರದಲ್ಲಿ ರಾಮನವಮಿ



ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಪಟ್ಟಣದಲ್ಲಿ ಪ್ರಾಚಿನ ಐತಿಹಾಸಿಕ ದೇವಸ್ಥಾನ ರಾಮೇಶ್ವರ ದೇವಾಲಯದಲ್ಲಿ ಪಟ್ಟಣದ ಶ್ರೀಮನ ಭಕ್ತರು ಶ್ರದ್ಧಾಭಕ್ತಿಯಿಂದ ರಾಮ ನವಮಿ ಆಚರಿಸಿದರು. ಪಟ್ಟಣದ ಗಣ್ಯರಾದ ಅಪ್ಪುಗೌಡ ಪಾಟೀಲ, ವಿಶ್ವನಾಥಗೌಡ ಪಾಟೀಲ, ಮಂದಿರದ ಸೇವಾ ಸಮಿತಿ ಅಧ್ಯಕ್ಷ ಅಪ್ಪಾಸಾಹೇಬ ಗುಂಡ, ರಮೇಶ ಹಾವಣ್ಣನವರ, ರಮೇಶ ಗೂಜಗೊಂಡ, ಮಹೇಶ ಮೇಟಿ, ಗುರು ಮಿಂಚನಾಳ, ಶಿವಾಜಿ ಮೊಚಿರೆ, ಶ್ರೀಶೈಲ ಗೆಣ್ಣೂರ, ಸಂಗಮೇಶ ಪೂಜಾರಿ, ಮಂಜುನಾಥ ಹಚ್ಚಡದ, ಆದಿತ್ಯ ಗುಜಗೊಂಡ ಸೇರಿ ಇತರರು ಇದ್ದರು.

ಗುರುದೇವಿ ಹಳ್ಳೂರಗೆ ಪಿಎಚ್‌ಡಿ ಪ್ರದಾನ

ವಿಜಯಪುರ: ನಗರದ ಬಸವೇಶ್ವರ ಪದವಿ ಪೂರ್ವ ಮಹಾವಿದ್ಯಾಲಯದ ಇಂಗ್ಲಿಷ್ ವಿಭಾಗದ ಉಪನ್ಯಾಸಕಿ ಗುರುದೇವಿ ಹಳ್ಳೂರಗೆ (ನಂದಿನಿ ಬಿರಾದಾರ) ಅವರಿಗೆ ಪಿಎಚ್‌ಡಿ ಲಭಿಸಿದೆ. ಗುರುದೇವಿ ಹಳ್ಳೂರ ಅವರು ಶಿಕ್ಷಣ ಶಾಸ್ತ್ರ ವಿಭಾಗದಲ್ಲಿ ಮಂಡಿಸಿದ ಎ ಸ್ಟಡಿ ಆಫ್ ಲರ್ನಿಂಗ್ ಟೀಚಿಂಗ್ ಅಂಡ್ ಥಿಂಕಿಂಗ್ ಸ್ಕೈಲ್ ಆಫ್ ಪ್ರಾಸ್ಪೆಕ್ಟಿವ್ ಟೀಚರ್ಸ್ ಇನ್ನ ರಿಲೇಶನ್ ಟು ದೇಆರ್ ಟೀಚಿಂಗ್ ಕಾಂಪಿಟನ್ಸ ಎಂಬ ಪ್ರಬಂಧಕ್ಕೆ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಪಿಎಚ್‌ಡಿ ಪದವಿ ಪ್ರದಾನ ಮಾಡಿದೆ. ಇವರಿಗೆ ಮೌಲ್ಯಮಾಪನ ಕುಲ ಸಚಿವ ಹಾಗೂ ಶಿಕ್ಷಣ ಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಬಿ.ಎಲ್.ಲಕ್ಕಣ್ಣನವರ ಮಾರ್ಗದರ್ಶನ ಮಾಡಿದ್ದರು.



ನವೋದಯ ಶಾಲೆಗೆ ಆಯ್ಕೆ

ದೇವರಹಿಪ್ಪರಗಿ: ತಾಲೂಕಿನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಆಲಗೂರ ಶಾಲೆಯ ನಿಂಗರಾಜ, ರಾಜಪ್ಪ, ಬೆನಕೊಟಗಿ ಈ ವಿದ್ಯಾರ್ಥಿಯು ಇತ್ತೀಚೆಗೆ ಪ್ರಕಟವಾದ ಆರನೇ ಜವಹರ ನವೋದಯ ವಿದ್ಯಾಲಯ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಆಲಮಟ್ಟಿಯ ಜವಹರ ನವೋದಯ ವಿದ್ಯಾಲಯಕ್ಕೆ ಆಯ್ಕೆಯಾಗಿರುತ್ತಾನೆ.



ವಿದ್ಯಾರ್ಥಿಯ ಈ ಶೈಕ್ಷಣಿಕ ಸಾಧನೆಗೆ ಶಾಲಾ ಮುಖ್ಯಗುರು ಜಿ.ಎಂ.ತಳವಾರ ಸೇರಿದಂತೆ ಶಿಕ್ಷಕರು, ಪಾಲಕರು ಹಾಗೂ ಗ್ರಾಮಸ್ಥರು ಸಂತಸ ವ್ಯಕ್ತಪಡಿಸಿದ್ದಾರೆ.

ನಿಧನ ಸುದ್ದಿ

ಗಂಗಪ್ಪಗೌಡ ಬಿರಾದಾರ

ವಿಜಯಪುರ: ಕೊಲ್ಹಾರ ತಾಲೂಕಿನ ಮಲಘಾಣ ಗ್ರಾಮದ ಗಂಗಪ್ಪಗೌಡ ರಂಗನಗೌಡ ಬಿರಾದಾರ (55) ಅನಾರೋಗ್ಯದಿಂದ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗ ಇದ್ದಾರೆ.



ಪ್ರಜಾಸೌಧ ಸ್ಥಳಕ್ಕೆ ವಿವಾದ ತೀವ್ರ। 32ನೇ ದಿನಕ್ಕೆ ಮುಂದುವರಿದ ಧರಣಿ

ಧರಣಿಗೆ ಶಾಸಕ ರಾಜುಗೌಡ ಬೆಂಬಲ

ತಾಳಿಕೋಟಿ: ತಾಲೂಕಿನ ಮೇಲೇಶ್ವರ ಗ್ರಾಮದ ಸಮೀಪ ಪ್ರಜಾಸೌಧ ನಿರ್ಮಾಣಕ್ಕೆ ಗುರುತಿಸಲಾದ ಸ್ಥಳದ ವಿರುದ್ಧ ಜನರ ಆಕ್ರೋಶ ತಾರಕ್ಕೇರಿದ್ದು, ಪ್ರಜಾಸೌಧವನ್ನು ತಾಳಿಕೋಟಿ ಪಟ್ಟಣದಲ್ಲಿಯೇ ನಿರ್ಮಿಸಬೇಕೆಂದು ಆಗ್ರಹಿಸಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸ್ಥಳಕ್ಕೆ ದೇವರ ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ ಭೇಟಿ ನೀಡಿ ಧರಣಿಗೆ ಬೆಂಬಲ ಸೂಚಿಸಿದರು.



ಬಳಿಕ ಮಾತನಾಡಿದ ಅವರು, ನನ್ನ ಮತಕ್ಷೇತ್ರದ ಎಂಟು ಪಂಚಾಯತಿಗಳು ತಾಳಿಕೋಟೆ ತಾಲೂಕಿಗೆ ವ್ಯಾಪ್ತಿಗೆ ಬರುತ್ತವೆ. ನೀವು ಅಧಿವೇಶನದಲ್ಲಿ ಈ ಪ್ರಶ್ನೆಯನ್ನು ಕೇಳಿ ಅಂತಾ ಹೇಳಿದ್ದಿರಿ ಆದರೆ ನಾನು ಸಿ.ಎಸ್.ನಾಡಗೌಡ ಅವರಿಗೆ ನಾನು ಭೇಟಿಯಾಗಿ ಈ ವಿಷಯವನ್ನು ಪ್ರಶ್ನೆ ಮಾಡಿದಾಗ ಸ್ಥಳದ ವಿಷಯವಾಗಿ ಪುನರ್ ಪರಿಶೀಲನೆ ಮಾಡುವುದಾಗಿ ತಿಳಿಸಿರುವುದಕ್ಕೆ ನಾನು ಅಧಿವೇಶನದಲ್ಲಿ ಈ ಪ್ರಶ್ನೆ ಮಾಡಲಿಲ್ಲ ಎಂದರು.

ಈ ಕ್ಷೇತ್ರದ ಶಾಸಕರು, ಹಿರಿಯರು ಆದಾರ, ಆರು ಬಾರಿ ಶಾಸಕರು, ಮಂತ್ರಿ ಇದ್ದವರು, ಅವರಿಗೆ ನಾ ಮನವಿ ಮಾಡಿದ್ದೇನೆ. ಈ ರೀತಿ ಅನ್ಯಾಯ ಆಗಾಕತ್ತದ, ಅದು ಬಹಳ ದೂರ ಆಗಾಕತ್ತದ, ಆದರಿಂದ ನಮ್ಮ ಜನರಿಗೂನು ಸಹಿತ ತೊಂದರೆ ಆಗತೈತಿ ಅಂದೆ ಅದಕ್ಕ ನೀವು ಪುನರ್ ಪರಿಶೀಲನೆ ಮಾಡಬೇಕು ಎಂದು ವಿನಂತಿಸಿದೆ. ಇನ್ನೊಮ್ಮೆ ಪುನರ್ ಪರಿಶೀಲನೆ ಮಾಡೋಣ. ಎಲ್ಲರೇ ಸರ್ಕಾರಿ ಜಾಗ ಇದ್ರೂ ಮಾಡೋಣಾ. ಅದಕ್ಕೆ ನಾನು ಅಸೆಂಬ್ಲಿಯಲ್ಲಿ ಪ್ರಶ್ನೆ ಮಾಡಲಿಲ್ಲ ಮಾತನಾಡಲಿಲ್ಲ ಎಂದರು.

ಪಟ್ಟಣದ ಬಸವೇಶ್ವರ ವೃತ್ತದ ಬಳಿ ನಡೆಯುತ್ತಿರುವ ಈ ಹೋರಾಟ ದಿನದಿಂದ ದಿನಕ್ಕೆ ಗಂಭೀರ ಸ್ವರೂಪ ಪಡೆಯುತ್ತಿದ್ದು, ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಪ್ರತಿಭಟನಾಕಾರರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈಗಾಗಲೇ 32 ದಿನಗಳಿಂದಲೂ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡದಿರುವುದು ಜನರ ಅಸಮಾಧಾನಕ್ಕೆ ಕಾರಣವಾಗಿದೆ.

ಶುಕ್ರವಾರ ನಡೆದ ಸತ್ಯಾಗ್ರಹದಲ್ಲಿ ಪತ್ತೇಪುರ ಗ್ರಾಮದ ಹಿರಿಯರು ಮತ್ತು ಯುವಕರು ಭಾರಿ ಸಂಖ್ಯೆಯಲ್ಲಿ ಭಾಗವಹಿಸಿ ಧರಣಿ ನಡೆಸುವ ಮೂಲಕ ತಮ್ಮ ಆಕ್ರೋಶ ಹೊರಹಾಕಿದರು. ಹೋರಾಟಕ್ಕೆ ಗ್ರಾಮ ಮಟ್ಟದಲ್ಲಿ ಸಂಪೂರ್ಣ ಬೆಂಬಲ ವ್ಯಕ್ತವಾಗಿದೆ. ಪ್ರಜಾಸೌಧಕ್ಕೆ ನಿಗದಿಪಡಿಸಿರುವ ಸ್ಥಳವು ಪಟ್ಟಣದಿಂದ ದೂರದ ನಿರ್ಜನ ಪ್ರದೇಶದಲ್ಲಿದ್ದು, ಮಹಿಳೆಯರು ಮತ್ತು ವಿದ್ಯಾರ್ಥಿನಿಯರ ಸುರಕ್ಷತೆಗೆ ಅಪಾಯಕಾರಿಯಾಗಿದೆ. ಜನಸಾಮಾನ್ಯರಿಗೆ ಸುಲಭವಾಗುವಂತೆ ಪಟ್ಟಣದಲ್ಲಿಯೇ ಸರ್ಕಾರಿ ಜಾಗದಲ್ಲಿ ಕಟ್ಟಡ ನಿರ್ಮಿಸಬೇಕು'' ಎಂದು ಧರಣಿ ನಿರತರು ಒತ್ತಾಯಿಸಿದರು.

ಪತ್ತೆಪುರ ಗ್ರಾಮದ ಚಂದ್ರಶೇಖರ ಚೌದ್ರಿ, ತಿಪ್ಪನಗೌಡ ಸೋಮನಾಳ, ವಿರುಪಾಕ್ಷಿ ಗೌಡ ಸೋಮನಾಳ ಮೈಬುಷಾ ಮಕಂದರ್, ವಿಜಯಕುಮಾರ ಅಸ್ಕಿ, ಸುಭಾಷ್ ಸಿಗ್ನಳ್ಳಿ, ಜಟ್ಟೆಪ್ಪ ಪೂಜಾರಿ, ಹಳ್ಳೆಪ್ಪ ತಾಳಿಕೋಟಿ, ನಿಂಗಪ್ಪ ಹೊನ್ನಾಳಿ, ಚೆನ್ನಪ್ಪ ಕಿರದಳ್ಳಿ ಸಿದ್ದಪ್ಪ ಹೊಸಮನಿ, ಮಡಿವಾಳಪ್ಪ ಹೊಸಮನೆ, ಸತೀಶ ತಾಳಿಕೋಟೆ, ನಾಗರಾಜು ತಾಳಿಕೋಟೆ, ಮಲ್ಲಪ್ಪ ಕಿರದಳ್ಳಿ, ಲಾಳೆಸಾಬ್ ನದಾಫ್, ಭೀಮರಾಯ ಮಡಿವಾಳರ, ಶರಣಗೌಡ ಹೆಬ್ಬಾಳ ದೇವೇಂದ್ರಪ್ಪ ಬಿರಾದಾರ್, ಮಲ್ಲಪ್ಪ ವಾಲಿಕಾರ, ಶರಣು ದೊಡ್ಡಮನಿ, ರವೀಂದ್ರ ಹೊನ್ನಳ್ಳಿ ಸೇರಿದಂತೆ ಅನೇಕರು ಭಾಗವಹಿಸಿದ್ದರು ಹೋರಾಟ ಸಮಿತಿಯ ಅಧ್ಯಕ್ಷ ದಶರತಸಿಂಗ ಮನಗೂಳಿ, ಎಸ್.ಬಿ.ಕಟ್ಟಿಮನಿ, ಮುತ್ತಪ್ಪ ಚಮಲಾಪುರ, ಕಾಶೀನಾಥ ಮುರಾಳ, ಮುರಿಗೆಪ್ಪ ಸರಶೆಟ್ಟಿ, ದತ್ತು ಹೆಬಸೂರ, ಪರಶುರಾಮ ತಂಗಡಗಿ, ವಿಜಯಸಿಂಗ್ ಹಜೇರಿ, ಮಹೇಶ ಛಲವಾದಿ, ಪ್ರಕಾಶ ಹಜೇರಿ, ಮುದಕಪ್ಪ ಬಡಿಗೇರ ಸೇರಿದಂತೆ ಹಲವರು ಹಾಜರಿದ್ದರು.

ಮಳೆಗಾಲ ಪೂರ್ವ ಹೆಚ್ಚಿದ ಒಳಚರಂಡಿ ಸಮಸ್ಯೆ

▶ ರವೀಂದ್ರ, ನಂದಪ್ಪನವರ

ದಿಗಂತ ವಿಶೇಷ

ಮುದ್ದೇಬಿಹಾಳ: ಕರ್ನಾಟಕ ಒಳಚರಂಡಿ ಮಂಡಳಿ ನಿರ್ಮಿಸಿರುವ ಸದ್ಯಕ್ಕೆ ಪುರಸಭೆ ನಿರ್ವಹಿಸುತ್ತಿರುವ ಕೋಟ್ಯಂತರ ರೂ. ಖರ್ಚು ಮಾಡಿ, ಕಾಗದದಲ್ಲಿ ಪೂರ್ಣಗೊಂಡಿರುವ ಮೊದಲ ಹಂತದ ಒಳಚರಂಡಿ ವ್ಯವಸ್ಥೆ ಸಂಪರ್ಕ ಕೊಂಡಿ ಹಲವಾರು ಸ್ಥಳಗಳಲ್ಲಿ ಕಡಿತವಾಗಿ ರಸ್ತೆಗಳ ಮೇಲೆ ತುಂಬಿ ಹರಿಯುವ ಪರಿಸ್ಥಿತಿ ನಗರದಲ್ಲಿ ನಿರ್ಮಾಣವಾಗಿದೆ.

ಬೆಳೆಯುತ್ತಿರುವ ನಗರದಲ್ಲಿ ಹುಡುಕೋ ಬಡಾವಣೆ, ಪ್ರತ್ಯೇಕವಾದ ಒಳಚರಂಡಿ ವ್ಯವಸ್ಥೆಯನ್ನು ಹೊಂದಿದೆ. ಮೊದಲಿನಿಂದಲೂ ಅದಕ್ಕೆ ಸಂಪರ್ಕ ಕೊಂಡಿ ನಿರ್ಮಾಣವಾಗಿಲ್ಲ, ಮುದ್ನಾಳ ಗ್ರಾಮದಲ್ಲಿ ನಾಲ್ಕೈದು ವರ್ಷದ ಹಿಂದೆ ನಿರ್ಮಾಣಗೊಂಡು ಸಂಸ್ಕರಣ ಘಟಕಕ್ಕೆ ಕೊಳಚೆ ನೀರು, ಹರಿದು ಹೋಗಬೇಕಾಗುತ್ತದೆ. ಆದರೆ ಚಿಕ್ಕ ಚಿಕ್ಕ ಪೈಪ್‌ಗಳನ್ನು ಬಳಸಿ, ಗುಂಡಿಗಳಿಗೆ ಸಂಪರ್ಕ ಕೊಡದೆ ಕಳಪೆ ಕಾಮಗಾರಿ ಜೊತೆಗೆ ಕಾಮಗಾರಿ ಅಪೂರ್ಣ ಮಾಡಿರುವುದರಿಂದ ಮ್ಯಾನ್‌ಹೋಲ್‌ಗಳಿಂದ ತುಂಬಿರುವ ಚರಂಡಿ ನೀರು ರಸ್ತೆಗಳ ಮೇಲೆ ತುಳುಕುವ ಪರಿಸ್ಥಿತಿ ಸದ್ಯಕ್ಕೆ ಉಂಟಾಗಿದೆ.ಎರಡನೇಹಂತದಒಳಚರಂಡಿ ಯೋಜನೆಗಾಗಿ ಹಣ ಮಂಜೂರಾಗಿದ್ದು ನಿರ್ಮಾಣ ಕಾರ್ಯ ವೈಜ್ಞಾನಿಕವಾಗಿ ಮಾಡಿ, ಹೊಸ ಬಡಾವಣೆಗಳ ಒಳಚರಂಡಿ ಸಂಪರ್ಕವನ್ನು ಸರಿಯಾಗಿ ಮಾಡಿದಲ್ಲಿ ಸರ್ಕಾರದ ಹಣದ ಅಪವ್ಯಯ ತಡೆಯಬಹುದು. ಮಳೆಗಾಲದಲ್ಲಿ ಈ ಪರಿಸ್ಥಿತಿ ಗಂಭೀರವಾಗುವ ಸೂಚನೆಗಳಿದ್ದು ಈ ಕುರಿತು ಅಧಿಕಾರಿಗಳು ಸೂಕ್ತ ಕಾಮಗಾರಿ ಮಾಡುವರೆ ಎಂಬುದು ಕಾದು ನೋಡಬೇಕಿದೆ. ಒಳಚರಂಡಿ ಸಂಪರ್ಕ ಮಾಡದೆ ಅಧಿಕಾರಿಗಳು ಯೋಜನೆಯನ್ನು ಅಪೂರ್ಣ ಮಾಡಿದ್ದಾರೆ. ಊರಿನ ತುಂಬೆಲ್ಲ ಮ್ಯಾನ್‌ಹೋಲ್ ಒಡೆದು ಸರಕಾರದ ಹಣ ವ್ಯರ್ಥ ಆಗುವ ಮೊದಲು ಸಂಪರ್ಕ ವ್ಯವಸ್ಥೆ ಮಾಡಬೇಕು ಇಲ್ಲಿನ ನಿವಾಸಿ ಮುತ್ತಣ್ಣ ಹಡಪದ ಆಗ್ರಹಿಸಿದರು.



> ವಿವಿಧ ಬಡಾವಣೆಗಳ ಒಳಚರಂಡಿ ಸಂಪರ್ಕವನ್ನು ಮಾಡಬೇಕಾದ ಅವಶ್ಯಕತೆ ಇದೆ. ಎರಡನೇ ಹಂತದ ಯೋಜನೆಯಲ್ಲಿ ಸಂಪರ್ಕ ವ್ಯವಸ್ಥೆಯನ್ನು ಮಾಡಲು ಸೂಚಿಸಲಾಗಿದೆ. ತಾತ್ಕಾಲಿಕವಾಗಿ ಪುರಸಭೆ ಪೌರ ಕಾರ್ಮಿಕರು ಸ್ವಚ್ಛತಾ ವ್ಯವಸ್ಥೆ ಮಾಡುತ್ತಿದ್ದಾರೆ.
> ■ ಮಲ್ಲನಗೌಡ ಬಿರಾದಾರ್, ಮುಖ್ಯ ಅಧಿಕಾರಿ, ಪುರಸಭೆ

ಯಲಗೂರೇಶ್ವರ ದೇವಸ್ಥಾನದಲ್ಲಿ ರಾಮನವಮಿ

ಆಲಮಟ್ಟಿ: ಸಮೀಪದ ಸುಕ್ಷೇತ್ರ ಯಲಗೂರದ ಯಲಗೂರೇಶ್ವರ ದೇವಸ್ಥಾನದಲ್ಲಿ ಸಂಭ್ರಮ ಸಡಗರದಿಂದ ಶುಕ್ರವಾರ ಶ್ರೀರಾಮನವಮಿ ಆಚರಿಸಲಾಯಿತು. ಶ್ರೀರಾಮನ ಮೂರ್ತಿಯನ್ನು ದೇವಸ್ಥಾನದಪ್ರಾಂಗಣದಲ್ಲಿ ತೊಟ್ಟಿಲಿನಲ್ಲಿ ಮಧ್ಯಾಹ್ನ 12ಕ್ಕೆ ಹಾಕಿ ತೂಗಿ ನಾಮಕರಣಮಾಡಲಾಯಿತು.ನಂತರವಿವಿಧ ಮಹಿಳೆಯರು ರಾಮನ ಭಕ್ತಿಗೀತೆಗಳನ್ನು ಹಾಡಿದರು. ನಂತರ ಯಲಗೂರೇಶನಿಗೆ ಸಾಮೂಹಿಕ ಪಂಚಾಮೃತ ಅಭಿಷೇಕ ಹಾಗೂ ಅನ್ನಸಂತರ್ಪಣೆ ಜರುಗಿದವು. ಬೆಳಗ್ಗೆ ಕೃಷ್ಣಾ ನದಿಯಿಂದ ಯಲಗೂರೇಶನ ದೇವಸ್ಥಾನದವರೆಗೆ ನಾನಾ ವಾದ್ಯ ವೈಭವಗಳೊಂದಿಗೆ ಶ್ರೀರಾಮ ದೇವರ ಮೂರ್ತಿ ಮೆರವಣಿಗೆ ಜರುಗಿತು. ನಾನಾ ವಾದ್ಯಗಳೊಂದಿಗೆ ಶ್ರೀರಾಮನ ಭಾವಚಿತ್ರವನ್ನು ದೇವಸ್ಥಾನದವರೆಗೆ ಮೆರವಣಿಗೆ ನಡೆಸಲಾಯಿತು.

ಡಾ.ವಾದೀಂದ್ರ ಯಲಬುರ್ಗಿ ದಂಪತಿಗಳು ಪೂಜಾ ಕಾರ್ಯಕ್ರಮ ನೆರವೇರಿಸಿದರು. ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಅನಂತ ಓಂಕಾರ, ಯಲಗೂರದಪ್ಪ ಪೂಜಾರ, ಗುರುರಾಜ ಗದ್ದನಕೇರಿ, ಸಂಜೀವ ಪೂಜಾರ, ವಿಠ್ಠಲಾಚಾರ್ಯ ಗದ್ದನಕೇರಿ, ಪಾಂಡುರಂಗಾಚಾರ್ಯ ಹೊಸೂರ, ಸಂತೋಷ ಪೂಜಾರ, ಬದರಿನಾರಾಯಣ ಚಿಮ್ಮಲಗಿ, ರುಕ್ಮಿಣಿ ಗದ್ದನಕೇರಿ, ಪವನ ಪಟವಾರಿ, ಚೇತನ, ವಾರುಣಿ ಹಿಪ್ಪರಗಿ, ಅನಘಾ ಓಂಕಾರ, ಪಂಕಜಾ ಹಿಪ್ಪರಗಿ, ವಾಣಿ ಒಡೆಯರ, ದೇವಸ್ಥಾನ ಇನ್ನಿತರರು ಇದ್ದರು. ಪಂಡಿತ ರಘುತ್ತೋಮಾಚಾರ್ಯ ನಾಗಸಂಪಿಗೆ ಮತ್ತು ಧ್ವಜಯನಾಚಾರ ಜೋಷಿ ಅವರು ಭಾಗವತ್ ಪ್ರವಚನ ಆರಂಭಿಸಿದರು. ಕಳೆದ 6 ದಶಕಗಳಿಂದ ಡಾ.ವಾದೀಂದ್ರ ಯಲಬುರ್ಗಿ ಅವರ ವಂಶಪಾರ್ಯಂಪರವಾಗಿ ಶ್ರೀರಾಮನವಮಿ ಪೂಜೆಯ ಉಸ್ತುವಾರಿ ವಹಿಸುತ್ತಿದ್ದಾರೆ. ಉತ್ತರಾಧಿ ಮಠದ ಸತ್ಯಾತ್ಮತೀರ್ಥ ಶ್ರೀಗಳು ಯಲಗೂರೇಶ್ವರನಿಗೆ ವಿಶೇಷ ಪೂಜೆ ನೆರವೇರಿಸಿದರು. ಯಲಗೂರೇಶನಿಗೆ ಶ್ರೀರಾಮನವಮಿ ನಿಮಿತ್ತ ದ್ರಾಕ್ಷಿ ಗೊಂಚಲುಗಳಿಂದ ವಿಶೇಷವಾಗಿ ಅಲಂಕರಿಸಲಾಗಿತ್ತು.



ದೇವರಹಿಪ್ಪರಗಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ನೂತನ ವೈದ್ಯರ ನೇಮಕ

ದೇವರಹಿಪ್ಪರಗಿ: ಪಟ್ಟಣದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯರನ್ನು ನೇಮಿಸಬೇಕೆಂದು ಕರ್ನಾಟಕ ಸೇನೆಯು ಅನೇಕ ದಿನಗಳಿಂದ ನಿರಂತರವಾಗಿ ಹೋರಾಟ ಎಪ್ರಿಲ್ ಒಂದರಿಂದ ಅನಿರ್ದಿಷ್ಟಾವಧಿ ಹೋರಾಟದ ಫಲವಾಗಿ ದೇವರಹಿಪ್ಪರಗಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ನುರಿತ ವೈದ್ಯಾಧಿಕಾರಿಯಾಗಿ ಡಾ.ಬಸವರಾಜ ಮಗದಮ ಅವರನ್ನು ನೇಮಿಸಲಾಗಿದೆ.

ಶುಕ್ರವಾರ ಅವರು ಕರ್ತವ್ಯಕ್ಕೆ ಹಾಜರಾಗಿದ್ದು, ಜಿಲ್ಲಾಧಿಕಾರಿ ಕೆ.ಆನಂದ, ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಸಂಪತ್ ಗುಣಾರಿ, ತಹಶೀಲ್ದಾರ್ ನಿಂಗಣ್ಣ ಬಿರಾದಾರ, ಸಿಂದಗಿ ತಾಲೂಕು ಆರೋಗ್ಯ ಅಧಿಕಾರಿಗ ಶಶಿಕಾಂತ ಬಾಗೇವಾಡಿ ಕರ್ನಾಟಕ ಸೇನೆಯ ತಾಲೂಕು ಅಧ್ಯಕ್ಷ ಹಸನಸಾಬ ನದಾಫ್, ಪದಾಧಿಕಾರಿಗಳಾದ ಚಿದಾನಂದ ಭಜಂತ್ರಿ, ಅಬ್ಬಾಸಲಿ ಆವೇರಿ, ಸಂಗನಗೌಡ ಬಿರಾದಾರ, ಇಮಾಮು ಮುಲ್ಲಾ, ಅಬೂಬಕರ ಯಲಗಾರ, ದಾದಾ ಬೇಪಾರಿ, ರಿಯಾಜ ಚಾತಗಾರ, ರಾಜು ಗೊಲ್ಲರ, ಹಮೀದ ಮುಲ್ಲಾ, ನಬಿಲಾಲ ಚಿಕ್ಕಸಿಂದಗಿ, ಇಬ್ರಾಹಿಂ ಮಸಳಿ, ಶಿವು ರೊಳ್ಳಿ ಸೇರಿದಂತೆ ಸಂಘಟನೆಯ ಸರ್ವ ಪದಾಧಿಕಾರಿಗಳು ಅಭಿನಂದನೆ ಸಲ್ಲಿಸಿದ್ದಾರೆ.



ಸಂಭ್ರಮದ ರಾಮನವಮಿ ಆಚರಣೆ



ವಿಜಯಪುರ: ನಗರದ ಝುಂಡಾ ಕಟ್ಟಿ ಹಳಕೇರಿ ಗಲ್ಲಿಯ ಗಾಯಿ ಚಾಳ್ ಬಳಿ ಇರುವ ಪ್ರಸನ್ನೇಶ್ವರ-ಪ್ರಸನ್ನಾಂಜನೇಯ ಹಾಗೂ ನೀಲಕಂಠೇಶ್ವರ ದೇವಸ್ಥಾನದಲ್ಲಿ ಶುಕ್ರವಾರ ಶ್ರೀರಾಮ ನವಮಿಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಅದರಂಗವಾಗಿ ಬೆಳಗ್ಗೆ ಸುಪ್ರಭಾತದ ಬಳಿಕ ಪಂಚಾಮೃತ ಅಭಿಷೇಕ, ಅಲಂಕಾರ ಸೇವೆ, ರಾಮನ ತೊಟ್ಟಿಲೋತ್ಸವ, ಸತ್ಯನಾರಾಯಣ ಪೂಜೆ ಜರುಗಿತು. ಪ್ರಸನ್ನೇಶ್ವರ ಸೇವಾ ಭಜನಾ ಮಂಡಳಿ ಸದಸ್ಯರಿಂದ ರಾಮ ನಾಮದ ಭಕ್ತಿ ಸಂಗೀತ ಸೇವೆ ಅತ್ಯಂತ ಸುಶ್ರಾವ್ಯವಾಗಿ ನಡೆದು ಭಕ್ತರ ಭಕ್ತಿಯ ಪರಾಕಾಷ್ಟೆ ಮೆರೆಯಿತು.

ರಾಮ ತೊಟ್ಟಿಲೋತ್ಸವದ ಸಂದರ್ಭದಲ್ಲಿ ನೂರಾರು ಭಕ್ತರು ಭಾಗವಹಿಸಿ ಬಾಲ ರಾಮನ ಸುಂದರ ರೂಪವನ್ನು ಮನದಲ್ಲಿ ತುಂಬಿಕೊಂಡರು. ವಿದ್ವಾನ್ ಪ್ರಕಾಶಾಚಾರ್ಯ ಮದಭಾವಿ ನೇತೃತ್ವವಹಿಸಿದ್ದರು. ನಾಗೇಶರಾವ ಕುಲಕರ್ಣಿ, ರಾಮರಾವ ಕುಲಕರ್ಣಿ (ತಾಂಬಾ), ಆನಂದರಾವ ಗಾಯಿ, ಅಪ್ಪಣ್ಣ ಗಾಯಿ, ಅನಿತಾ ಗಾಯಿ, ಸಂತೋಷ ಕಠಾವಿ, ಅಶ್ವಿನಿ ಕುಲಕರ್ಣಿ ಇದ್ದರು.

ಜಂಗೀ ನಿಕಾಲಿ ಕುಸ್ತಿಗೆ ಚಾಲನೆ

ಝಳಕಿ: ಕುಸ್ತಿ ಪಂದ್ಯದಲ್ಲಿ ಶಕ್ತಿಗಿಂತ ಯುಕ್ತಿ ಗೆಲುವು ಸಾಧಿಸಬಹುದು ಎಂದು ಕೆಎಂಎಫ್ ನಿರ್ದೇಶಕ ಸಂತೋಷಗೌಡ ಪಾಟೀಲ ಹೇಳಿದರು.

ಸಮೀಪದ ನಂದರಗಿ ಗ್ರಾಮದ ಅಬುಸಾಹೇಬ ದೇವರ ಜಾತ್ರಾ ಮಹೋತ್ಸವ ಪ್ರಯುಕ್ತ ಜಂಗಿ ನಿಕಾಲಿ ಕುಸ್ತಿ ಪಂದ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಒಬ್ಬನೊಡನೆಬ್ಬ ಸೆಣಸಿ ಗೆಲುವು ಸಾಧಿಸುವುದು. ಕುಸ್ತಿ ಪಂದ್ಯದಲ್ಲಿ ವ್ಯಕ್ತಿಯ ಶಕ್ತಿ ಹಾಗೂ ಯುಕ್ತಿಗಳ ಪ್ರದರ್ಶಿತವಾಗುತ್ತದೆ ಎಂದು ಹೇಳಿದರು.

ಚನ್ನಯ್ಯ ಹಿರೇಮಠ, ರವಿಗೌಡ ಪಾಟೀಲ, ಬಾಬುಗೌಡ ಪಾಟೀಲ, ಮುದಕೇಶ ಬಳ್ಳೊಳ್ಳಿ, ಅರ್ಜುನಗೌಂಡಿ, ಅಮೀರಜಹಾಗಿರದಾರ, ಸೋಮಸಿಂಗ ಜಿರಕಲಗಿ, ಸಿದ್ದು ಬಿರಾದಾರ, ಚನ್ನಬಸಪ್ಪ ಫೈಲವಾನರು, ಗೋವಿಂದ ಬಿರಾದಾರ, ಸಂಬುಗೌಡ ಪಾಟೀಲ, ಗ್ರಾಮಸ್ಥರು ಉಪಸ್ಥಿತರಿದ್ದರು.



ಸಂಭ್ರಮದ ಮೌನೇಶ್ವರ ಜಾತ್ರಾ ಮಹೋತ್ಸವ



ವಿಜಯಪುರ: ತಾಲೂಕಿನ ನಾಗಠಾಣ ಗ್ರಾಮದಲ್ಲಿ ಬುಧವಾರ ಮೌನೇಶ್ವರ ಜಾತ್ರಾ ಮಹೋತ್ಸವ ಸಂಭ್ರಮದಿಂದ ನಡೆಯಿತು.

ಜಾತ್ರಾ ಮಹೋತ್ಸವ ನಿಮಿತ್ತ ಗ್ರಾಮದಲ್ಲಿ ಮೌನೇಶ್ವರರ ಪಲ್ಲಕ್ಕಿ ಮೆರವಣಿಗೆ ಸಕಲ ವಾದ್ಯ ಮೇಳದೊಂದಿಗೆ ಭಕ್ತಿ, ಶ್ರದ್ಧೆಯೊಂದಿಗೆ ನಡೆಯಿತು. ಭಕ್ತರ ಮನೆಗಳಿಗೆ ಭೇಟಿ ನೀಡುತ್ತ, ಅಲ್ಲಿ ಕಾಯಿ ನೈವೇದ್ಯ ಮಾಡಿಕೊಂಡು, ಮರಳಿ ದೇವಸ್ಥಾನಕ್ಕೆ ಅಪಾರ ಭಕ್ತ ಸಮೂಹ ಹಾಗೂ ಆರತಿ ಹಿಡಿದ ಮಹಿಳೆಯರೊಂದಿಗೆ ದೇವರ ಫಲ್ಲಕ್ಕಿಯು ಆಗಮಿಸಿತು.

ಸಾವಿರಾರು ಸಂಖ್ಯೆಯ ಭಕ್ತರು ರಥದ ಮೇಲೆ ಹೂ, ಬಾಳೆಹಣ್ಣು, ಉತ್ತತ್ತಿ ಸಮರ್ಪಿಸಿ ಭಕ್ತಿ ಮೆರೆದರು. ಸ್ವತಃ ಭಕ್ತರು ಜಯಘೋಷಗಳೊಂದಿಗೆ ರಥವನ್ನು ಎಳೆಯುವ ದೃಶ್ಯ ಮನಮೋಹಕವಾಗಿತ್ತು.

ಶ್ರೀಧರ ಬಡಿಗೇರ, ಕಲ್ಯಾಣಿ ಪತ್ತಾರ, ಸುಭಾಷ ಪತ್ತಾರ, ಸಂತೋಷ ಸಿಂದಗಿ, ಅರುಣ ಬಡಿಗೇರ, ರಾಜು ಪತ್ತಾರ, ಕಿರಣ ಬಡಿಗೇರ, ಶ್ರೀಶೈಲ ಪತ್ತಾರ, ಅಶೋಕ ಬಡಿಗೇರ, ವಿಶ್ವನಾಥ ಬಡಿಗೇರ ಇದ್ದರು.

ಶೆಣೈಗೆ ಕಲಾಚೇತನ ಅಂತಾರಾಷ್ಟ್ರೀಯ ಪ್ರಶಸ್ತಿ

ಚಡಚಣ: ಹುಬ್ಬಳ್ಳಿಯ ಅಂತಾರಾಷ್ಟ್ರೀಯ ಹಿಂದೂ ಮಹಾಸಭಾ ದಿಂದ ದಾವಣಗೆರೆಯ ಸಾಂಸ್ಕೃತಿಕ ರಾಯ ಭಾರಿ ಎಂದೇ ಖ್ಯಾತರಾದ ವಾಣಿಯ ನಗರಿ ಯನ್ನು ಸಾಂಸ್ಕೃತಿಕ ನಗರಿಯಾಗಿಪರಿವರ್ತಿಸಿದ ಕಳೆದ ದಶಕಗಳಿಂದ ನಿರಂತರ 'ವಾಗಿ ಕಠಿಣ ಪರಿ ಶ್ರಮದಿಂದ ಕಲೆ, ಸಾಹಿತ್ಯ, ಸಂಗೀತ, ಯಕ್ಷಗಾನ, ಶಿಕ್ಷಣ ಸೇರಿದಂತೆ ಅವರ ಅನೇಕ ಸಾಧನೆಗಳನ್ನು ಪರಿಗಣಿಸಿ ಸಾಲಿಗ್ರಾಮ ಗಣೇಶ್ ಶೆಣೈ ಅವರಿಗೆ ಕಲಾಚೇತನ ಅಂತರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಅಂತಾರಾಷ್ಟ್ರೀಯ ಹಿಂದೂ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಹಲಕರಸಿಂಗ್ ತಿಳಿಸಿದ್ದಾರೆ. ಏ.15ರಂದು ಹುಬ್ಬಳ್ಳಿಯಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಲಾಗುವುದು ಎಂದು ಸಂಸ್ಥೆಯ ರಾಜ್ಯಾಧ್ಯಕ್ಷ ಸೋಮಶೇಖರ ಪಿ. ಯಾದವ್ ಪ್ರಕಟಣೆ ಯಲ್ಲಿ ತಿಳಿಸಿ ದ್ದಾರೆ. ಬೆಂಗಳೂರಿನ ವಿದ್ಯಾರ್ಥಿ ಘಟಕದ ರಾಜ್ಯಾಧ್ಯಕ್ಷ ಸಾಗರ್ ಆರ್. ಕಲಾದಗಿ ಸೇರಿದಂತೆ ದಾವಣಗೆರೆಯ ಕಲಾಕುಂಚ, ಯಕ್ಷರಂಗ, ಸಿನಿಮಾಸಿರಿ, ಕರ್ನಾಟಕ ಸುಗಮ ಸಂಗೀತ ಪರಿಷತ್, ಸರಸ್ವತಿ ದಾಸಪ್ಪ ಶೆಣೈ ಪ್ರತಿಷ್ಠಾನ, ಸಿನಿಮಾಸಿರಿ ಸಂಸ್ಥೆ, ಕನ್ನಡ ಸಾಹಿತ್ಯ ಪರಿಷತ್, ಕರಾವಳಿ ಮಿತ್ರ ಮಂಡಳಿ ಮುಂತಾದ ಅನೇಕ ಸಂಘಟನೆಗಳ ಸದಸ್ಯರು, ಪದಾಧಿಕಾರಿಗಳು ಅಭಿನಂದನೆ ಸಲ್ಲಿಸಿದ್ದಾರೆ.



ಕೋರಿಗೆ ಕರ್ನಾಟಕ ಭೂಷಣ ಪ್ರಶಸ್ತಿ ಪ್ರದಾನ



ವಿಜಯಪುರ: ನಗರದಲ್ಲಿ ಖ್ಯಾತ ಹಿರಿಯ ನ್ಯಾಯವಾದಿ, ಡಿಸಿಸಿ ಬ್ಯಾಂಕ್ ನಿವೃತ ವ್ಯವಸ್ಥಾಪಕ ಗವಿಸಿದ್ದಪ್ಪ ಕೋರಿ ಅವರಿಗೆ ಕರ್ನಾಟಕ ಭೂಷಣ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬೆಂಗಳೂರಿನ ಸರ್ವೇಜನ ಆರ್ಟ್ ಮತ್ತು ಕಲ್ಚರಲ್ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಹಮ್ಮಿಕೊಂಡ ಸಾಂಸ್ಕೃತಿಕ ಜನಪದ ವೈಭವ ಮತ್ತು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಗವಿಸಿದ್ದಪ್ಪ ಕೋರಿ ಅವರ ಸಾಮಾಜಿಕ, ಸಹಕಾರಿ, ಧಾರ್ಮಿಕ, ನ್ಯಾಯಾಂಗ ಕ್ಷೇತ್ರದ ಅಪಾರ ಸೇವೆಯನ್ನು ಪರಿಗಣಿಸಿ ಗವಿಸಿದ್ದಪ್ಪ ಕೋರಿ ಹಾಗೂ ಅವರ ಧರ್ಮ ಪತ್ನಿ ಅನಸೂಯಾ ಕೋರಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸರ್ವೇಜನ ಆರ್ಟ್ ಮತ್ತು ಕಲ್ಚರಲ್ ಟ್ರಸ್ಟ್‌ನ ಅಧ್ಯಕ್ಷೆ ಲಕ್ಷ್ಮಿತಾ ಗಂಗಾವತಿ, ಯುವ ಧುರೀಣ ರಾಜು ಕಂಕಣವಾಡಿ, ನ್ಯಾಯವಾದಿ ದಾನೇಶ್ ಅವಟಿ ಇದ್ದರು.

ಪದಾಧಿಕಾರಿಗಳ ವಿರೋಧ ಆಯ್ಕೆ

ದೇವರ ಹಿಪ್ಪರಗಿ: ಪಟ್ಟಣದ ವಿಪ್ರ ಸಮಾಜದ ಚಿದಂಬರ ಸೇವಾ ಸಮಿತಿಯ ನೂತನ ಪದಾಧಿಕಾರಿಗಳ ಅವಿರೋಧ ಆಯ್ಕೆ ಮಾಡಲಾಯಿತು.

ನೂತನ ಅಧ್ಯಕ್ಷರಾಗಿ ನರೇಂದ್ರ ಕೆ.ನಾಡಗೌಡ, ಉಪಾಧ್ಯಕ್ಷರಾಗಿ ವೆಂಕಟೇಶ ಕುಲಕರ್ಣಿ, ಕಾರ್ಯದರ್ಶಿಯಾಗಿ ಚಿದಂಬರ ಕುಲಕರ್ಣಿ ಅವರನ್ನು ಅವಿರೋಧವಾಗಿ ಆಯ್ಕೆಯಾದರು. ನಂತರ ಪದಾಧಿಕಾರಿಗಳನ್ನು ಹನುಮ ಜಯಂತಿ ದಿನದಂದು ಉಳಿದಿರುವ ಪದಾಧಿಕಾರಿಗಳನ್ನು ಆಯ್ಕ

ಆಯ್ಕೆ ಮಾಡಲಾಗುವುದೆಂದು ತಿಳಿಸಿದರು.

ವಿಪ್ರ ಸಮಾಜದ ಸಮಿತಿಯ ಮಾಜಿ ಅಧ್ಯಕ್ಷರಾದ ಡಾ.ಆರ್.ಆರ್. ನಾಯಕ, ಪಾಂಡುರಂಗ ದೇಶಪಾಂಡೆ, ಪ್ರಮೋದ ನಾಡಗೌಡ, ಮಾಜಿ ಕಾರ್ಯದರ್ಶಿ ಗುರುರಾಜ ಕುಲಕರ್ಣಿ, ಶರತ ಕುಲಕರ್ಣಿ, ಡಿ.ಜಿ.ದೇಶಪಾಂಡೆ, ಸುಧೀರ ಪಾಟೀಲ, ರಾಘವೇಂದ್ರ ಕುಲಕರ್ಣಿ, ಶ್ರೀನಿವಾಸ ಕುಲಕರ್ಣಿ, ಶ್ರೀಧರ ನಾಡಗೌಡ್ರು, ಪ್ರಲ್ಹಾದ ಕುಲಕರ್ಣಿ ಸೇರಿದಂತೆ ಹಲವಾರು ಜನ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.



ಕಿರುಸುದ್ದಿ

ಅರಳಲೇ ಹಿರೇಮಠದ ಲಘು ರಥೋತ್ಸವ



ಕುಕನೂರ: ತಾಲೂಕ ಮಂಗಳೂರ ಗ್ರಾಮದ ಲಿಂ.ಶಿವಾಚಾರ್ಯ ಸ್ವಾಮೀಜಿ ಅರಳಲೇ ಹಿರೇಮಠ ಅವರ 33ನೇ ಪುಣ್ಯಸ್ಮರಣೋತ್ಸವದ ಅಂಗವಾಗಿ ಶುಕ್ರವಾರ ಸಂಜೆ ಲಘುರಥೋತ್ಸವ ನಡೆಯಿತು.

ಬೆಳಿಗ್ಗೆ ಶಿವಾಚಾರ್ಯ ಸ್ವಾಮಿಗಳ ಕರ್ತೃ ಗದ್ದುಗೆಗೆ ಪೂಜೆ, ರುದ್ರಾಭಿಷೇಕ, ದೀಕ್ಷಾ(ಅಯ್ಯಾಚಾರ) ಪುಷ್ಪಾರ್ಚಣೆ, ಮಹಾಮಂಗಳಾರತಿ, ಅಭಿಷೇಕ, ಮಂತ್ರಾರ್ಪಣೆ ವಿವಿಧ ಧಾರ್ಮಿಕ ಕಾರ್ಯಗಳು ನಡೆದವು. ಮಹಿಳೆಯರು ಕುಂಬದೊಂದಿಗೆ ಮೆರವಣಿಗೆಯಲ್ಲಿ ಸಾಗಿದರು. ಸಂಜೆ ಅಪಾರ ಭಕ್ತರ ಉಪಸ್ಥಿತಿಯಲ್ಲಿ ಲಘು ರಥೋತ್ಸವ ವಿಜೃಂಭಣೆಯಿಂದ ಸಾಗಿ ಸಂಪನ್ನಗೊಂಡಿತು. ಭಜಂತ್ರಿಯವರ ವಿವಿಧ ವಾದ್ಯ, ಮೇಳಗಳು, ಡೊಳ್ಳು ಕುಣಿತಗಳ ದೃಶ್ಯಗಳನ್ನು ನೋಡಿ ಗ್ರಾಮಸ್ಥರು ಭಕ್ತಿ ಭಾವ ಮೆರೆದರು. ಭಕ್ತರಿಗೆ ಉಪಹಾರ ಹಾಗೂ ಮಹಾಪ್ರಸಾದ ಸೇವೆ ನೀಡಲಾಯಿತು.

ಚನ್ನಬಸವ ಸ್ವಾಮೀಜಿ, ಹಿರೇಮಲ್ಲಿನಕೇರಿ ಅವರಿಂದ ಐದು ದಿನಗಳ ಕಾಲ ಮಂಗಳೇಶ್ವರ ಕಲ್ಯಾಣ ಮಂಟಪದಲ್ಲಿ ಪುರಾಣ, ಆಶೀರ್ವಚನ ನಡೆದವು. ಸಾಧನೆಗೈದ ನಾಡಿದ ಅನ್ನದಾತರಿಗೆ, ಅಂಗನವಾಡಿ ಶಿಕ್ಷಕೀಯರಿಗೆ, ಆಶಾ ಕಾರ್ಯಕರ್ತರಿಗೆ, ಗ್ರಾಮವನ್ನು ತ್ಯಾಜ್ಯ ಮುಕ್ತ ಮಾಡುತ್ತಿರುವ ಪಂಚಾಯತ್ ಸಿಬ್ಬಂದಿಗೆ ಸನ್ಮಾನಿಸಲಾಯಿತು. ಸಿದ್ದಲಿಂದ ಶಿವಾಚಾರ್ಯ ಸ್ವಾಮೀಜಿ ಹಾಗೂ ಕುಕನೂರಿನ ಅನ್ನದಾನೇಶ್ವರ ಮಠದ ಡಾ.ಮಹಾದೇವ ಸ್ವಾಮೀಜಿ, ಕರಿಬಸವೇಶ್ವರ ಸ್ವಾಮೀಜಿ ಕುಷ್ಟಗಿ, ವೀರ ಸಂಗಮೇಶ್ವರ ಮಹಾಸ್ವಾಮಿಗಳು ಚಳಗೇರಿ, ಗಂಗಾಧರ ಸ್ವಾಮೀಜಿ ಕೊತಬಾಳ, ಬಸವಲಿಂಗೇಶ್ವರ ಸ್ವಾಮೀಜಿ ಶ್ರೀಧರ ಮುರುಡಿ ಹಿರೇಮಠ ಯಲಬುರ್ಗಾ ನೀಲಕಂಠ ತಾತನವರು ಎಂ.ಗುಡದೂರು, ಬೇನಾಳ ಶ್ರೀಗಳು, ಕಂಪ ಸಾಗರ ಶ್ರೀಗಳು ದಿವ್ಯ ಸಾನಿಧ್ಯವನ್ನು ವಹಿಸಿದ್ದರು. ಗ್ರಾಮದ ಭಕ್ತರು, ಮಠದ ಶಿಷ್ಯ ಬಳಗ ಹಾಗೂ ಗ್ರಾಮದ ಸುತ್ತ ಮುತ್ತಲಿನ ಭಕ್ತರು ಲಘು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ




ಗಂಗಾವತಿ: ತಾಲೂಕಿನ ವಡ್ಡರಹಟ್ಟಿಯಲ್ಲಿರುವ ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆಯ ಕೆಎಲ್‌ಇ ಕಾಲೇಜಿನಲ್ಲಿ ಮಾ.31ರಂದು ದತ್ತಿ ಉಪನ್ಯಾಸ ಆಯೋಜಿಸಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಶರಣೇಗೌಡ ಪೊಲೀಸ್ ಪಾಟೀಲ, ತಾಲೂಕು ಅಧ್ಯಕ್ಷ ರುದ್ರೇಶ ಆರ್ಹಾಳ ತಿಳಿಸಿದ್ದಾರೆ. ಮಾ.31ರಂದು ಬೆಳಗ್ಗೆ 10.30ಕ್ಕೆ ಆರಂಭವಾಗಲಿರುವ ಕಾರ್ಯಕ್ರಮವನ್ನು ಮಾಜಿ ಶಾಸಕ ಪರಣ್ಣ ಮುನವಳ್ಳಿ ಉದ್ಘಾಟಿಸಲಿದ್ದಾರೆ. ಕಸಾಪ ಜಿಲ್ಲಾಧ್ಯಕ್ಷ ಶರಣೇಗೌಡ ಪೊಲೀಸ್ ಪಾಟೀಲ ಅಧ್ಯಕ್ಷತೆ ವಹಿಸಲಿದ್ದು, ಕೆಎಲ್‌ಇ ಕಾಲೇಜಿನ ಸ್ಥಳೀಯ ಆಡಳಿತ ಮಂಡಳಿ ಅಧ್ಯಕ್ಷ ಹೊಸಕೇರಿ ಗಿರಿಯಪ್ಪ, ಪ್ರಾಂಶುಪಾಲೆ ಡಾ.ಮಾನಸ ಡಿ.ಎ.ಭಾಗಿಯಾಗಲಿದ್ದಾರೆ. ರಾಜಶೇಖರಪ್ಪ ಹೊಸಕೇರಿ, ಚನ್ನಬಸಮ್ಮ ಈಶ್ವರಪ್ಪ ಮುನವಳ್ಳಿ, ಬಸವರಾಜ ಕೋಟೆ, ಡಿ.ಗೋವರ್ಧನ ರಾಮಚಂದ್ರಪ್ಪ ದರೋಜಿ ಸ್ಮರಣಾರ್ಥ ದತ್ತಿ ಉಪನ್ಯಾಸ ನಡೆಯಲಿದೆ. ಇದೇ ವೇದಿಕೆಯಲ್ಲಿ ವಿವಿಧ ಕ್ಷೇತ್ರದಲ್ಲಿ ಮಾಡಿದ ಐವರು ಸಾಧಕರನ್ನು ಸನ್ಮಾನಿಸಲಾಗುತ್ತಿದೆ. ದತ್ತಿ ದಾನಿಗಳಾದ ಸುಬ್ರಹ್ಮಣ ದರೋಜಿ, ಸಂಗಮೇಶ ಕೋಟೆ, ಕಸಾಪದ ಅಧ್ಯಕ್ಷ ರುದ್ರೇಶ ಆರ್ಹಾಳ, ನಿಕಟಪೂರ್ವ ಅಧ್ಯಕ್ಷ ಶ್ರೀನಿವಾಸ ಅಂಗಡಿ, ವೆಂಕಟಗಿರಿ ಹೋಬಳಿ ಘಟಕದ ಅಧ್ಯಕ್ಷ ನಿಂಗಪ್ಪ ಗುಂಡೂರು ಅತಿಥಿಗಳಾಗಿ ಭಾಗಿಯಾಗಲಿದ್ದಾರೆ. ವಚನ ಸಾಹಿತ್ಯದಲ್ಲಿ ಸ್ತ್ರಿ ಸಂವೇದನೆ ಎಂಬ ವಿಷಯದ ಮೇಲೆ ಹಿರಿಯ ಸಾಹಿತಿ ಆರಳಿ ನಾಗಭೂಷಣ, ಶೋಷಣೆ ರಹಿತ ಸಮಾಜ ನಿರ್ಮಾಣದಲ್ಲಿ ಬಸವಣ್ಣನ ಪಾತ್ರ ಎಂಬ ವಿಷಯದ ಬಗ್ಗೆ ಹಿರಿಯ ಉಪನ್ಯಾಸಕ ಎ.ಕೆ.ಮಹೇಶ ಕುಮಾರ ಹಾಗೂ ಜಾನಪದ ಸಾಹಿತ್ಯದ ಬಗ್ಗೆ ಜಾನಪದ ಹಾಡುಗಾರ ಸುಖಮುನಿ ಉಪ್ಯನಾಸ ನೀಡಲಿದ್ದಾರೆ.



ಕೊಪ್ಪಳ: ರಾಮನವಮಿ ಪ್ರಯುಕ್ತ ಗಂಗಾವತಿ ವಿಧಾನಸಭಾ ಕ್ಷೇತ್ರದ ವಡ್ಡರಹಟ್ಟಿ, ಬಸಾಪಟ್ಟಣ, ಸಂಗಾಪುರ, ಗೂಗಿ ಬಂಡೀಕ್ಯಾಂಪ್, ರಾಂಪುರ ಗ್ರಾಮಗಳಲ್ಲಿ ಮಾಜಿ ಶಾಸಕ ಪರಣ್ಣ ಮುನವಳ್ಳಿ ಅವರು ಶ್ರೀರಾಮ ದೇವರ ದರ್ಶನ ಪಡೆದರು. ಮುಖಂಡ ಎಚ್.ಎಂ.ಸಿದ್ದರಾಮಯ್ಯ ಸ್ವಾಮಿ, ಜೋಗದ ಹನುಮಂತಪ್ಪ ನಾಯಕ್, ಬಸನಗೌಡ ದಾಸನಾಳ, ಶೇಷ ರಾವ್, ರವಿ ಬಸಾಪಟ್ಟಣ, ಶ್ರೀಕಾಂತ್ ಬಸಾಪಟ್ಟಣ, ಬಸವ ಪ್ರಭು ಇತರರಿದ್ದರು.

ಲಲಿತಮ್ಮಗೆ 'ಕಿತ್ತೂರು ರಾಣಿ ಚನ್ನಮ್ಮ' ಪ್ರಶಸ್ತಿ

ಕುಷ್ಟಗಿ: ಜಾನಪದ ಕಲೆಗಳ ನಿಸ್ವಾರ್ಥ ಸೇವಕಿ, ಸಾಂಪ್ರದಾಯಿಕ ಗಾಯನದ ಮೂಲಕ ಜನಮನ ಗೆದ್ದ ಕಲಾ ಚೇತನ ಲಲಿತಮ್ಮ ಬಸವರಾಜ ಹಿರೇಮಠ ಅವರು 2025-26ನೇ ಸಾಲಿನ ಪ್ರತಿಷ್ಠಿತ 'ಕಿತ್ತೂರು ರಾಣಿ ಚೆನ್ನಮ್ಮ' ರಾಜ್ಯ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ನೀಡಲಾಗುವ ಈ ಗೌರವವು, ಜನಪದ ಸಂಸ್ಕೃತಿಯ ಸಂರಕ್ಷಣೆ ಮತ್ತು ಪ್ರಸಾರದಲ್ಲಿ ಲಲಿತಮ್ಮ ಅವರು ಸಲ್ಲಿಸಿದ ವಿಶಿಷ್ಟ ಸೇವೆಗೆ ಸಂದ ಶ್ರೇಷ್ಠ ಮಾನ್ಯತೆಯಾಗಿದೆ.

ಮಾ.24ರಂದು ಬೆಂಗಳೂರಿನಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ವಿಶೇಷ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ನಾಡಿನ ವಿವಿಧ ಭಾಗಗಳಲ್ಲಿ ಜಾನಪದ ಗಾನವನ್ನು ಜೀವಂತವಾಗಿಟ್ಟುಕೊಂಡು, ಯುವಪೀಳಿಗೆಗೆ ಅದರ ಮೌಲ್ಯವನ್ನು ಪರಿಚಯಿಸಿದ ಅವರ ಶ್ರಮವನ್ನು ಈ ಸಂದರ್ಭದಲ್ಲಿ ವಿಶೇಷವಾಗಿ ಸ್ಮರಿಸಲಾಯಿತು.

ಪಟ್ಟಣದ ಹೆಮ್ಮೆಯಾದ ಲಲಿತಮ್ಮ ಅವರು, ತಮ್ಮ ಗಾಯನದ ಮೂಲಕ ಗ್ರಾಮೀಣ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸುವುದರ ಜೊತೆಗೆ, ಅನೇಕ ವೇದಿಕೆಗಳಲ್ಲಿ ಜನಪದ ಕಲೆಗಳಿಗೆ ಹೊಸ ಚೈತನ್ಯ ತುಂಬಿದ್ದಾರೆ. ಅವರ ಸಾಧನೆಗೆ ಈ ಪ್ರಶಸ್ತಿ ಮತ್ತೊಂದು ಮೈಲುಗಲ್ಲಾಗಿದ್ದು, ಕಲಾವಿದರು, ವಿವಿಧ ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರಿಂದ ಅಭಿನಂದನೆಗಳ ಮಹಾಪೂರವೇ ಹರಿದುಬಂದಿದೆ.



ಕುಷ್ಟಗಿ: ಜಾನಪದ ಕಲೆಗಳ ನಿಸ್ವಾರ್ಥ ಸೇವಕಿ, ಸಾಂಪ್ರದಾಯಿಕ ಗಾಯನದ ಮೂಲಕ ಜನಮನ ಗೆದ್ದ ಕಲಾ ಚೇತನ ಲಲಿತಮ್ಮ ಬಸವರಾಜ ಹಿರೇಮಠ ಅವರು 2025-26ನೇ ಸಾಲಿನ ಪ್ರತಿಷ್ಠಿತ 'ಕಿತ್ತೂರು ರಾಣಿ ಚೆನ್ನಮ್ಮ' ರಾಜ್ಯ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪೂರ್ವ ಸಿದ್ಧತಾ ಸಭೆ | ಡಿಸಿ ಡಾ.ಇಟ್ನಾಳ ಸೂಚನೆ

ರಸಗೊಬ್ಬರದ ಕೊರತೆಯಾಗದಿರಲಿ

ಕೊಪ್ಪಳ: ಜಿಲ್ಲೆಯ 2026ರ ಮುಂಗಾರು ಹಂಗಾಮಿನಲ್ಲಿ ಅವಶ್ಯವಿರುವ ರಸಗೊಬ್ಬರಕ್ಕೆ ಯಾವುದೇ ರೀತಿಯ ಕೊರತೆ ಆಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಡಾ.ಸುರೇಶ್ ಬಿ. ಇಟ್ನಾಳ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೊಪ್ಪಳ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ 2026-27ನೇ ಸಾಲಿನ ಮುಂಗಾರು ಹಂಗಾಮಿಗೆ ರಸಗೊಬ್ಬರಗಳ ಸಮರ್ಪಕ ಸರಬರಾಜು ಮತ್ತು ನಿರ್ವಹಣೆ ಕುರಿತು ಕರೆದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

2025ರ ಮುಂಗಾರು ಹಂಗಾಮಿನಲ್ಲಿ ಹಲವು ಸವಾಲುಗಳ ನಡುವೆಯೂ ಜಿಲ್ಲೆಯಲ್ಲಿ ರಸಗೊಬ್ಬರ ವಿತರಣೆ ಸಮರ್ಪಕವಾಗಿ ನಿರ್ವಹಿಸಿರುವುದು ಶ್ಲಾಘನೀಯವಾಗಿದೆ. ಆದರೆ, ಪ್ರಸಕ್ತ ಇರಾನ್ ಸೇರಿದಂತೆ ವಿವಿಧ ದೇಶಗಳ ನಡುವಿನ ಯುದ್ಧ ಪರಿಸ್ಥಿತಿಯಿಂದ ರಸಗೊಬ್ಬರ ಉತ್ಪಾದನೆಗೆ ಅಗತ್ಯವಾದ ಕಚ್ಚಾ ವಸ್ತುಗಳ ಆಮದು ಹಾಗೂ ರಸಗೊಬ್ಬರಗಳ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆ ಇದ್ದು, ಇದರಿಂದ 2026ರ ಮುಂಗಾರು ಹಂಗಾಮಿನಲ್ಲಿ ಪರಿಣಾಮ ಬೀರುವ ಸಾಧ್ಯತೆ ಇದೆ. ಹಾಗಾಗಿ ಇದಕ್ಕಾಗಿ ಪೂರ್ವ ತಯಾರಿ ಮಾಡಿಕೊಳ್ಳುವುದು ಅತ್ಯವಶ್ಯಕವಾಗಿದೆ. ರೈತರಿಗೆ ಉತ್ತಮ ಗುಣಮಟ್ಟದ ರಸಗೊಬ್ಬರಗಳನ್ನು ಸಕಾಲದಲ್ಲಿ ಹಾಗೂ ಸಮರ್ಪಕವಾಗಿ ದೊರಕುವಂತೆ ಮಾಡುವುದು ಸರ್ಕಾರದ ಪ್ರಮುಖ ಕರ್ತವ್ಯವಾಗಿದ್ದು, ಈ ನಿಟ್ಟಿನಲ್ಲಿ ಯಾವುದೇ ನಿರ್ಲಕ್ಷ್ಯ ನಡೆಯಬಾರದು ಎಂದು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.



> ಸಹಾಯಧನದ ಯೂರಿಯಾ ರಸಗೊಬ್ಬರವನ್ನು ಕೃಷಿಯೇತರ ಚಟುವಟಿಕೆಗಳಿಗೆ ಬಳಕೆಯಾಗುವುದನ್ನು ತಡೆಯಲು ಕಾರ್ಖಾನೆಗಳು ಹಾಗೂ ಕೈಗಾರಿಕೆಗಳನ್ನು ಗುರುತಿಸಿ ಮಿಷನ್ ಮೋಡ್‌ನಲ್ಲಿ ಪರಿಶೀಲನೆ ನಡೆಸಬೇಕು. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಪ್ರತಿ 15 ದಿನಗಳಿಗೊಮ್ಮೆ ಪರಿಶೀಲನಾ ಸಭೆ ನಡೆಸಬೇಕು.
> ■ ಡಾ.ಸುರೇಶ್ ಇಟ್ನಾಳ್, ಡಿಸಿ

ಕೃತಕ ಅಭಾವ ಸೃಷ್ಟಿಸಿ ಕಾಳಸಂತೆಯಲ್ಲಿ ಹೆಚ್ಚಿನ ದರಕ್ಕೆ ರಸಗೊಬ್ಬರ ಮಾರಾಟವಾಗದಂತೆ ಕಠಿಣ ಕ್ರಮ ಕೈಗೊಳ್ಳಬೇಕು. ಚಿಲ್ಲರೆ ಮಾರಾಟಗಾರರು ಪೊಸ್ ಯಂತ್ರದ ಮೂಲಕ ತಕ್ಷಣದ ಮಾರಾಟ ದಾಖಲಿಸದಿದ್ದಲ್ಲಿ, ಭೌತಿಕ ಮತ್ತು ಆನ್‌ಲೈನ್ ದಾಸ್ತಾನು ನಡುವೆ ವ್ಯತ್ಯಾಸ ಉಂಟಾಗಿ ಸರಬರಾಜು ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಆದ್ದರಿಂದ ಈ ಬಗ್ಗೆ ತೀವ್ರ ನಿಗಾವಹಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. 'ಧರ್ತಿ ಮಾತಾ ಬಚಾವೋ' ನಿಗ್ರಾಣಿ ಸಮಿತಿಗಳನ್ನು ಜಿಲ್ಲೆ, ತಾಲೂಕು ಮತ್ತು ಗ್ರಾಪಂ ಮಟ್ಟದಲ್ಲಿ ಚುರುಕುಗೊಳಿಸಿ, ಸಮಗ್ರ ರಸಗೊಬ್ಬರ ಬಳಕೆ ಹಾಗೂ ಪರ್ಯಾಯ ಗೊಬ್ಬರಗಳ ಉತ್ತೇಜನಕ್ಕೆ ಕ್ರಮ ವಹಿಸಬೇಕು ಎಂದು ಹೇಳಿದರು.

ಮುಂಗಾರು ಹಂಗಾಮು ಆರಂಭಕ್ಕೂ ಮುನ್ನ ಮತ್ತು ಮುಂಗಾರು ಹಂಗಾಮಿನ ಅವಧಿಯಲ್ಲಿ ಎಲ್ಲಾ ಸಂಬಂಧಿತ ಪಾಲುದಾರರೊಂದಿಗೆ ಸಭೆಗಳನ್ನು ನಡೆಸಿ, ಯಾವುದೇ ರೀತಿಯ ರಸಗೊಬ್ಬರದ ಕೊರತೆ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಒಟ್ಟಾರೆ ಪ್ರಸಕ್ತ ಸವಾಲುಗಳ ನಡುವೆಯೂ ರೈತರಿಗೆ ಯಾವುದೇ ತೊಂದರೆ ಆಗದಂತೆ ಸಕಾಲದಲ್ಲಿ ರಸಗೊಬ್ಬರಗಳನ್ನು ಪೂರೈಸುವಂತೆ ಎಲ್ಲ ಇಲಾಖೆ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸಲಹೆ ನೀಡಿದರು.

ಎಡಿಸಿ ಸಿದ್ದರಾಮೇಶ್ವರ, ಎಎಸ್ಪಿ ಆರ್.ಹೇಮಂತ್ ಕುಮಾರ್, ಕೃಷಿ ಇಲಾಖೆ ಜಂಟಿ ನಿರ್ದೇಶಕ ಜಿ.ಡಿ.ಕೃಷ್ಣಮೂರ್ತಿ, ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಕೃಷ್ಣ ಉಕ್ಕುಂದು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ತಹಶೀಲ್ದಾರರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಸುದೀರ್ಘ ಸೇವೆಗೆ ಗೌರವಪೂರ್ವಕ ವಿದಾಯ

ಕಲಬುರಗಿ: ಹನುಮೇಶ ತಮ್ಮ ಕರ್ತವ್ಯದಲ್ಲಿತೋರಿದನಿಷ್ಠೆ,ಪ್ರಾಮಾಣಿಕತೆ ಹಾಗೂ ಸೇವಾ ಮನೋಭಾವ ಎಲ್ಲರಿಗೂ ಮಾದರಿಯಾಗಿದೆ ಎಂದು ಜೆಸ್ಕಾಂನ ವ್ಯವಸ್ಥಾಪಕನಿರ್ದೇಶಕ ಕೃಷ್ಣಬಾಜಪೇಯಿ ಹೇಳಿದರು.

ಶುಕ್ರವಾರ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ ಹನುಮೇಶ ಪ್ರಾಣೇಶ್ ಆಚಾರ್ಯ ಅವರ ವಯೋನಿವೃತ್ತಿ ಬೀಳ್ಕೊಡುಗೆ ಸಮಾರಂಭ ಕೆಇಬಿ ಎಂಜಿನಿಯರ್ಸ್ ಅಸೋಸಿಯೇಷನ್ ಹಾಲ್ ಜೆಸ್ಕಾಂ ನಿಗಮ ಕಚೇರಿ ಆವರಣದಲ್ಲಿ ನಡೆಯಿತು.

ಈ ವೇಳೆ ಮಾತನಾಡಿದ ಅವರು, ಹನುಮೇಶ ಯಾವುದೇ ಒಂದು ಸಮಸ್ಯೆ ಬಂದರು ಅದಕ್ಕೆ ಸರಳ ಹಾಗೂ ಪರಿಣಾಮಕಾರಿ ಪರಿಹಾರ ನೀಡುತ್ತಿದ್ದರು. ವಿದ್ಯುತ್ ಇಲಾಖೆಯಲ್ಲಿ 34 ವರ್ಷ ಸೇವೆ ಸಲ್ಲಿಸುವುದು ಸುಲಭವಲ್ಲ, ಇಲ್ಲಿಯವರೆಗೂ ನಮ್ರತೆಯಿಂದ ಕಾರ್ಯನಿರ್ವಹಿಸುತ್ತಾ ಬಂದಿದ್ದಾರೆ. ಇದು ಕೇವಲ ವೃತ್ತಿಯಿಂದ ನಿವೃತ್ತಿ ಪ್ರವೃತ್ತಿಯಿಂದ ಅಲ್ಲ, ನಿಮ್ಮ ನಿವೃತ್ತಿ ಜೀವನ ಸಂತೋಷದಿಂದ ತುಂಬಿರಲಿ ಎಂದು ಹಾರೈಸಿದರು.

ಇದೇ ವೇಳೆ ಮುಖ್ಯ ಅತಿಥಿಗಳಾಗಿ ಮಾತನಾಡಿದ ಜೆಸ್ಕಾಂನ ಅಧ್ಯಕ್ಷ ಪ್ರವೀಣ್ ಪಾಟೀಲ ಹರವಾಳ ಅವರು, ಹನುಮೇಶ್ ಅವರು ಬಹಳ ಸೌಮ್ಯ ಸ್ವಭಾವದ ವ್ಯಕ್ತಿ. ನಿವೃತ್ತಿ ಹೊಂದಿದ ನಂತರವೂ ಸಂಸ್ಥೆಗೆ ಅಗತ್ಯವಿದ್ದಾಗ ತಮ್ಮ ಸಹಕಾರ ನೀಡುವಂತೆ ವಿನಂತಿಸಿದರು.



» ವಿದ್ಯುತ್ ಇಲಾಖೆಯಲ್ಲಿ 34 ವರ್ಷ ಸೇವೆ ಹನುಮೇಶ ಪ್ರಾಣೇಶ್ ಆಚಾರ್ಯ

ಈ ಸಂದರ್ಭದಲ್ಲಿತಮ್ಮ ಅನಿಸಿಕೆ ಹಂಚಿಕೊಂಡ ಹನುಮೇಶ, ಸಿಟ್ಟಿನಲ್ಲಿ ಅಥವಾ ಅವಸರದಲ್ಲಿ ಯಾವುದೇ ನಿರ್ಧಾರ ತೆಗೆದುಕೊಳ್ಳಬಾರದು. ನಿಧಾನವಾಗಿ ಯೋಚಿಸಿ, ಯಾವುದೇ ಗೊಂದಲವಿಲ್ಲದೆ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಯುವ ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ಜೆಸ್ಕಾಂನ ಮುಖ್ಯ ಆರ್ಥಿಕ ಸಲಹೆಗಾರರಾದ ಡಿ.ಎಚ್. ಶಿವಶಂಕರ ಅವರು, ಎಂಜಿನಿಯರ್ ಅಸೋಸಿಯೇಷನ್‌ನ ಉಪಾಧ್ಯಾಕ್ಷರಾದ ಸಚಿನ ಹುಂಡೇಕಾರ, ಎಂಐಎಸ್ ವಿಭಾಗದ ಅಧೀಕ್ಷಕ ಅಭಿಯಂತರ ಮುಮ್ತಾಜ್, ಡಿ.ಟಿ.ಚಂದ್ರಕಾಂತ ಹಾಗೂ ಜೆಸ್ಕಾಂನ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

ಮಕ್ಕಳಿಗೆ ಒಳ್ಳೆಯ ನಡೆ, ನುಡಿ ಕಲಿಸಿ: ಶೇಖರಪ್ಪ



ಹನುಮಸಾಗರ: ಪಾಲಕರು ತಮ್ಮ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕು. ನುಡಿಗಳಲ್ಲಿ ನಯ, ವಿನಯತೆ, ಗುರು-ಹಿರಿಯರನ್ನು ಗೌರವಿಸುವುದನ್ನು ಕಲಿಸಬೇಕು. ಮೊಬೈಲ್ ಕೊಡುವುದನ್ನು ನಿಲ್ಲಿಸಬೇಕು. ಹೆಚ್ಚು ಪುಸ್ತಕಗಳನ್ನು ಓದುವಂತೆ ತಿಳಿಹೇಳಿ ಜ್ಞಾನವಂತರನ್ನಾಗಿ ಮಾಡಬೇಕು ಎಂದು ಸಿಆರ್‌ಪಿ ಶೇಖರಪ್ಪ ಕುರಿ ಹೇಳಿದರು.

ಸಮೀಪದ ಬೆನಕನಾಳ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿದ ಅವರು ಮಾತನಾಡಿದರು.

ಗ್ರಾಮೀಣ ಭಾಗದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಸಾಕಷ್ಟು ಸಂಕಷ್ಟದ ಮಧ್ಯೆಯೂ ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಶ್ರಮಿಸುತ್ತಿವೆ. ಕಳೆದ 15ವರ್ಷದಿಂದ ಬೆನಕನಾಳದಂಥ ಅತ್ಯಂತ ಗ್ರಾಮೀಣ ಪ್ರದೇಶದಲ್ಲಿ ಕಡಿಮೆ ಫೀ ತೆಗೆದುಕೊಂಡು ಗುಣಾತ್ಮಕ ಶಿಕ್ಷಣ ಸಂಸ್ಥೆ ವಿದ್ಯಾದಾನ ಮಾಡುತ್ತಿರುವ ಡಾ.ಮೈಲಾರಪ್ಪ ಬಿಲಕಾರ ಹಾಗೂ ಸಿಬ್ಬಂದಿ ಕಾರ್ಯ ಶ್ಲಾಘನೀಯ ಎಂದರು.

ಶೈಕ್ಷಣಿಕ ವರ್ಷದ ವಿವಿಧ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ನೋಟ್ ಬುಕ್, ಪ್ರಶಸ್ತಿ ಪತ್ರ ವಿತರಿಸಲಾಯಿತು. ಸ್ಪರ್ಧೆಯಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಥಮ ಸ್ಥಾನ ಗಳಿಸಿದ ಪ್ರೀತಮ್ ಭೀಮಪ್ಪ ಬೆಂಗಿ ವಿದ್ಯಾರ್ಥಿಯನ್ನುಸನ್ಮಾನಿಸಲಾಯಿತು. ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು. ನಂತರ

ಉಪನ್ಯಾಸಕ ಮಹಾಂತೇಶ ನೇಲಾಗಣಿ ನಿರ್ವಹಿಸಿದರು. ಕಳಕಮ್ಮ ಬೆನಕನವಾರಿ ವಂದಿಸಿದರು.

ಸಂಪನ್ಮೂಲ ವ್ಯಕ್ತಿ ಬಸವರಾಜ ಕಲ್ಲನಿ, ಉಪನ್ಯಾಸಕ ಶಿವಕುಮಾರ ಹಾಲಕೆರಿ, ಭೂಮೇಶ ಅಂಗಡಿ, ನೀಲಪ್ಪ ಮೇಟಿ ಮಾತನಾಡಿದರು. ಸಂಸ್ಥೆಯ ಅಧ್ಯಕ್ಷ ಡಾ.ಮೈಲಾರಪ್ಪ ಬಿಲ್ದಾರ ಅಧ್ಯಕ್ಷತೆ ವಹಿಸಿದ್ದರು. ಮಹಾಂತೇಶ ನೇಲಾಗಣಿ, ಭೂಮೇಶ ಅಂಗಡಿ, ನೀಲಪ್ಪ ಮೇಟಿ, ಬಸವರಾಜ ಭಂಗಿ, ಹನಮಪ್ಪ ಹೂಲಗೇರಿ, ಹನುಮಂತ ಭೋವಿ, ಹುಸ್ಮನಸಾಬ ಹೊಲಗೇರಿ, ಹನುಮಪ್ಪ ಮುಗಳಿ, ಕವಿತಾ ಉಪ್ಪಾರ, ಪ್ರೇಮಾ ಕುಟುಗಮರಿ, ಗೌರಮ್ಮ ಪೊಲೀಸ್‌ಪಾಟೀಲ ಇತರರಿದ್ದರು.

ಪಿಡಬ್ಲ್ಯೂಡಿ ಕ್ಯಾಂಪ್ ನಿವಾಸಿಗಳಿಗೆ ತೆರವುಗೊಳಿಸಲು ನೋಟಿಸ್

ಸಿಂಧನೂರು: ದಶಕಗಳ ಕಾಲ ನಗರದ ಪಿಡಬ್ಲ್ಯೂಡಿ ಕ್ಯಾಂಪ್‌ನಲ್ಲಿವಾಸವಿರುವನಿವಾಸಿಗಳಿಗೆ ತೆರವುಗೊಳಿಸುವ ನೋಟಿಸ್ ನೀಡಿರುವ ಕ್ರಮದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಬಡವರನ್ನು ಒಕ್ಕಲೆಬ್ಬಿಸುವ ಪ್ರಯತ್ನವನ್ನು ತಕ್ಷಣ ನಿಲ್ಲಿಸಿ, ಅವರಿಗೆ ಹಕ್ಕುಪತ್ರ ನೀಡಬೇಕು ಎಂದು ಸಿಪಿಐ (ಎಂಎಲ್) ರೆಡ್ ಸ್ಟಾರ್ ರಾಜ್ಯ ಸಮಿತಿ ಸದಸ್ಯ ಎಂ.ಗಂಗಾಧರ್ ಆಗ್ರಹಿಸಿದರು.

ಗುರುವಾರ ಪಿಡಬ್ಲೂಡಿ ಕ್ಯಾಂಪ್ ನಿವಾಸಿಗಳೊಂದಿಗೆಸಭೆನಡೆಸಿಮಾತನಾಡಿದಅವರು, ಭೂಗಳ್ಳರನ್ನು ಬಿಟ್ಟು ದುಡಿದು ಬದುಕುತ್ತಿರುವ ಬಡವರನ್ನು ಗುರಿಯಾಗಿಸಿಕೊಂಡಿರುವುದು ಖಂಡನೀಯ. ನಗರದ ಹಾಗೂ ತಾಲೂಕಿನ ಹಲವೆಡೆ ಪ್ರಭಾವಿಗಳು ಸಾವಿರಾರು ಎಕರೆ ಸರ್ಕಾರಿ ಭೂಮಿಯನ್ನು ಅಕ್ರಮವಾಗಿ ಕಬ್ಜಾ ಮಾಡಿಕೊಂಡಿರುವಾಗ, ಆಡಳಿತವು ಕೇವಲ ಬಡ ಕಾರ್ಮಿಕರ ಮೇಲೆ ಕ್ರಮ ಕೈಗೊಳ್ಳುತ್ತಿರುವುದು ದ್ವಂದ್ವ ನೀತಿ ಎಂದು ಆರೋಪಿಸಿದರು.



ಸ್ಥಳೀಯ ಶಾಸಕ ಹಂಪನಗೌಡ ಬಾದರ್ಲಿ ಹಾಗೂ ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಅವರು ತಕ್ಷಣ ಮಧ್ಯಸ್ಥಿಕೆ ವಹಿಸಿ ಸಮಸ್ಯೆ ಪರಿಹಾರಕ್ಕೆ ಮುಂದಾಗಬೇಕು ಎಂದು ಒತ್ತಾಯಿಸಿದರು.

ಇದಲ್ಲದೆ, ಸಿಂಧನೂರು ನಗರಸಭೆ, ತಾಲೂಕಾಡಳಿತ ಹಾಗೂ ಜಿಲ್ಲಾಡಳಿತ ಕೂಡಲೇ ಎಚ್ಚೆತ್ತುಕೊಂಡು 40-50 ವರ್ಷಗಳಿಂದ ಇಲ್ಲಿ ವಾಸವಿರುವ ಬಡ ಕುಟುಂಬಗಳಿಗೆ ತೆರವು ನೋಟಿಸ್ ನೀಡುವ ಬದಲು ಕಾನೂನುಬದ್ಧ ಹಕ್ಕುಪತ್ರ ನೀಡುವಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ತಾಲೂಕು ಸಮಿತಿ ಸದಸ್ಯ ಹುಲುಗಪ್ಪ ಬಳ್ಳಾರಿ,ಪ್ರಮುಖ ಮುಖಂಡರಾದ ಮುರಳಿ ಕೃಷ್ಣಾ, ಪ್ರವೀಣ್, ಲತಾ, ಮುನ್ನಿಬೇಗಂ, ಹುಸೇನ್ ಭಾಷಾ, ಅಲಿಮಾ, ಹಸೇನ್, ಸರಸ್ವತಿ, ರಂಗಸ್ವಾಮಿ ಸೇರಿದಂತೆ ನೂರಾರು ನಿವಾಸಿಗಳು ಭಾಗವಹಿಸಿದ್ದರು.

ಗ್ರಂಥಾಲಯದಲ್ಲಿ ಹಿರಿಯರ ಜನ್ಮದಿನಾಚರಣೆ

ಮುನಿರಾಬಾದ್: ಹುಲಿಗಿ ಗ್ರಾಮದ ಗ್ರಾಪಂ ಅರಿವು ಕೇಂದ್ರ, ಸಾರ್ವಜನಿಕ ಗ್ರಂಥಾಲಯದಲ್ಲಿ ಗ್ರಾಮದ ಹಿರಿಯರೊಬ್ಬರ ಜನ್ಮದಿನವನ್ನು ವಿಶೇಷವಾಗಿ ಆಚರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಗ್ರಾಮಸ್ಥರು, ಓದುಗರ ಬಳಗ ಹಾಗೂ ಗ್ರಂಥಾಲಯ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರುಗು ನೀಡಿದರು.

ಕಾರ್ಯಕ್ರಮವನ್ನು ಸರಳವಾಗಿ ಆರಂಭಿಸಿ, ಹಿರಿಯರನ್ನು ಪುಷ್ಪಗುಚ್ಛ ಹಾಗೂ ಶಾಲು ಹೊದಿಸಿ ಗೌರವಿಸಲಾಯಿತು. ನಂತರ ಕೇಕ್ ಕತ್ತರಿಸುವ ಮೂಲಕ ಜನ್ಮದಿನವನ್ನು ಸಂಭ್ರಮದಿಂದ ಆಚರಿಸಲಾಯಿತು. ಈ ವೇಳೆ ಸಭಿಕರು ಹಿರಿಯರಿಗೆ ಹಾರೈಕೆಗಳನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಹಿರಿಯರು ತಮ್ಮ ಜೀವನ ಅನುಭವಗಳನ್ನು ಹಂಚಿಕೊಂಡು, ಇಂದಿನ ಯುವ ಪೀಳಿಗೆ ಓದಿನ ಅಭ್ಯಾಸ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಗ್ರಂಥಾಲಯಗಳ ಮಹತ್ವವನ್ನು ವಿವರಿಸಿದ ಅವರು, ಜ್ಞಾನ ವೃದ್ಧಿಗೆ ಪುಸ್ತಕಗಳು ಅವಿಭಾಜ್ಯ ಅಂಗವಾಗಿವೆ ಎಂದು ತಿಳಿಸಿದರು.



ಗ್ರಂಥಾಲಯದ ಕಾರ್ಯಚಟುವಟಿಕೆಗಳನ್ನು ಶ್ಲಾಘಿಸಲಾಯಿತು. ಕಾರ್ಯಕ್ರಮದ ಅಂತ್ಯದಲ್ಲಿ ಸಿಹಿತಿಂಡಿಗಳನ್ನು ಹಂಚಿ ಸಂಭ್ರಮಾಚರಣೆಯನ್ನು ಯಶಸ್ವಿಯಾಗಿ ಮುಕ್ತಾಯಗೊಳಿಸಲಾಯಿತು.

ಗ್ರಾಪಂ ಕಾರ್ಯದರ್ಶಿ ನಾಗರಾಜ್ ಗ್ರಂಥಪಾಲಕಿ ಮಂಗಳ ಮಲ್ಲಿಕಾರ್ಜುನ್ ಕೊತಬಾಳ, ಸ್ಪಂದನ ಕಾರ್ಯಕ್ರಮದ ಪ್ರೇರಕಿ ಕವಿತಾ ಬಂಗಿ, ಶಿವಮ್ಮ, ನಿವೃತ್ತ ಅಂಗನವಾಡಿ ಟೀಚರ್ ಶಂಕ್ರಮ್ಮ, ಸಾವಿತ್ರಿಬಾಯಿ, ಶಿಕ್ಷಕರಾದ ಮೋತಿಲಾಲ್, ಶಶಿಕಲಾ ಶಂಕ್ರಪ್ಪ, ಕಾಳಮ್ಮ, ಚಂದಮ್ಮ, ಸುಜಾತ ಗೌಳಿ, ಬಸವರಾಜಪ್ಪ ಇತರರಿದ್ದರು.

ಶ್ರೀರಾಮನ ಆದರ್ಶ ಸರ್ವಕಾಲಕ್ಕೂ ಸಮ್ಮತ



ಗಂಗಾವತಿ: ತ್ರೇತಾಯುಗದ ಶ್ರೀರಾಮ ಆತನಲಿರುವ ಆದರ್ಶ ಗುಣಗಳು ತ್ಯಾಗ ಸಹೋದರತ್ವ ಇವೆಲ್ಲವನ್ನು ಗಮನಿಸಿದಾಗ ಸರ್ವಕಾಲಕ್ಕೂ ಸಮ್ಮತವಾಗಿದೆ ಎಂದು ಶ್ರೀಯೋಗೇಶ್ವರ ಯಾಜ್ಞವಲ್ಕ್ಯ ಸೇವಾ ಟ್ರಸ್ಟಿನ ಅಧ್ಯಕ್ಷ ಮುರಳೀಧರ ಕುಲಕರ್ಣಿ ಹೇಳಿದರು.

ಅವರು ಶ್ರೀಆಂಜನೇಯ ದೇವಸ್ಥಾನದಲ್ಲಿ ಆಯೋಜಿಸಿದ ಶ್ರೀರಾಮನವಮಿ ಪ್ರಯುಕ್ತ ತಾರಕರಾಮ ಹೋಮ ಸಂಪನ್ನಗೊಂಡ ಬಳಿಕ ಮಾತನಾಡಿದರು.

ಜನ್ಮ ಸಾರ್ಥಕತೆಗೆ ಶ್ರೀರಾಮ ತಾರಕ ಮಂತ್ರ ಜಪ ಮಾಡುವುದರಿಂದ ಸುಖ ಶಾಂತಿ ಸಮೃದ್ಧಿ ದೊರೆಯುತ್ತದೆ. ಎಂದು ತಿಳಿಸಿದರು.

ವೇದಮೂರ್ತಿ ಪ್ರದೀಪ ಆಚಾರ್ ಹೋಮ ಹವನದ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಿದರು. ಇದಕ್ಕೂ ಪೂರ್ವದಲ್ಲಿ ಮೂಲ ಆಂಜನೇಯನಿಗೆ ಪಂಚಾಮೃತ ಅಭಿಷೇಕ ವಾಯುಸ್ತುತಿ ಪಾರಾಯಣ ಇತರೆ ಕಾರ್ಯಕ್ರಮಗಳು ನಡೆದವು.

ರಾಮೋತ್ಸವ ಸಮಿತಿಯ ಸತೀಶ್ ಕೋಮಲಾಪುರ, ಸಂತೋಷ್ ರವಿ, ವೀರಾಪುರ್ ಗುರುರಾಜ್, ಚರ್ಚಿನ ಗುಡ್ಡ ರತೀಶ್, ಸುದರ್ಶನ್ ಸಂಜಯ್, ಶ್ರೀಕಾಂತ್ ಪ್ರಾಣೇಶ್, ಪ್ರಕಾಶ್ ರಾಘವೇಂದ್ರ, ಲೆಕ್ಕಿಹಾಳ ಕೃಷ್ಣ ಆಲಂಪಲ್ಲಿ, ತಿರುಮಲ್ ರಾವ್, ಆನಂದ ಮತ್ತಿತರರಿದ್ದರು. ಬಳಿಕ ತೀರ್ಥ ಪ್ರಸಾದ ನಡೆಸಲಾಯಿತು.

ರಾಮನವಮಿ: ರಾಮತಾರಕ ಹೋಮ ಸಂಪನ್ನ

ಗಂಗಾವತಿ: ನಗರದ ರಾಮಮಂದಿರದಲ್ಲಿ ಗುರುವಾರ ಶ್ರೀರಾಮನವಮಿ ಪ್ರಯುಕ್ತ ರಾಮ ತಾರಕ ಹೋಮ ಹವನದ ಪೂರ್ಣಾಹುತಿಯನ್ನು ಶ್ರೀರಾಮಚಂದ್ರ, ಸೇವಾ ಟ್ರಸ್ಟ್ ಅಧ್ಯಕ್ಷ ರಾಧಿಕಾ ಶ್ರೀನಿವಾಸ್ ಅನಂತಪುರ ದಂಪತಿಗಳು ಹಾಗೂ ಕುಟುಂಬಸ್ಥರ ನೇತೃತ್ವದಲ್ಲಿ ಸಂಪನ್ನಗೊಂಡಿತು.

ದೇವಸ್ಥಾನದ ಅರ್ಚಕ ಅನಿಲ್ ಭಟ್ ಹಾಗೂ ಸಂತೋಷ ಆಚಾರ್ ಋತ್ವಿಜರ್ ತಂಡದವರು ಧಾರ್ಮಿಕ ಪೂಜಾ ಕಾರ್ಯಕ್ರಮಗಳನ್ನು ಸಾಂಗತವಾಗಿ ನಡೆಸಿಕೊಟ್ಟರು.

ಅರ್ಚಕ ಅನಿಲ್ ಭಟ್ ಮಾತನಾಡಿ, ರಾಮ ನಾಮ ಜಪದಿಂದ ಸಂಕಷ್ಟಗಳು ದೂರವಾಗಲಿವೆ. ರಾಮನ ಬಂಟ ಶ್ರೀ ಆಂಜನೇಯ ಇದೇ ಪ್ರಾಂತದ ಕಿಷ್ಕಿಂದ ಅಂಜನಾದ್ರಿಯಲ್ಲಿ ಜನಿಸಿರುವುದು ನಮ್ಮ ಪೂರ್ವಜನ್ಮದ ಪುಣ್ಯವಾಗಿದೆ ಎಂದು ಹೇಳಿದರು ಜೊತೆಗೆ 27ರಂದು ಶ್ರೀ ರಾಮನವಮಿ ಆಚರಣೆ ಪ್ರಯುಕ್ತ ತೊಟ್ಟಿಲು ಸೇವೆ ಇನ್ನಿತರ ಪೂಜಾ ಕಾರ್ಯಕ್ರಮಗಳು ಜರಗಲಿದ್ದು, ಆಸ್ತಿಕ ಬಂಧುಗಳು ಭಾಗವಹಿಸುವಂತೆ ಕೋರಿದರು

ಆರ್ಯವೈಶ್ಯ ಸಮಾಜ ಬಾಂಧವರು. ವಿಪ್ರ ಸಮಾಜ ಬಾಂಧವರು ಸಕಲ ಭಕ್ತಾದಿಗಳು ಭಾಗವಹಿಸಿದರು.



ಹಿಂದುಪರ ಸಂಘಟನೆಗಳಿಂದ ರಾಮನವಮಿ



ಮಾನ್ವಿ: ಪಟ್ಟಣದ ಬಸವ ವೃತ್ತದಲ್ಲಿ ಹಿಂದೂಪರ ಸಂಘಟನೆಗಳ ವತಿಯಿಂದ ನಡೆದ ಶ್ರೀರಾಮನವಮಿ ಕಾರ್ಯಕ್ರಮದಲ್ಲಿ ಶ್ರೀರಾಮದೇವರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಕಲ್ಮಠ ಶ್ರೀವಿರೂಪಾಕ್ಷ ಶಿವಾಚಾರ್ಯ ಮಹಾಸ್ವಾಮೀಜಿ ಆಶೀರ್ವಾಚನ ನೀಡಿ ಅಯೋಧ್ಯ ಪುರುಷ ಶ್ರೀರಾಮಚಂದ್ರ ಪ್ರಭುವಿನ ಆದರ್ಶವನ್ನು ಪ್ರತಿಯೊಬ್ಬರು ಕೂಡ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ರಾಮರಾಜ್ಯದ ಕಲ್ಪನೆ ನೆರವೇರಲಿ ಎಂದು ತಿಳಿಸಿದರು.

ಸಾರ್ವಜನಿಕರಿಗೆ ಪಾನಕ ಹಾಗೂ ಮಜ್ಜಿಗೆಯನ್ನು ವಿತರಿಸಲಾಯಿತು.

ವಿಶ್ವಹಿಂದೂ ಪರಿಷತ್ ತಾ.ಅಧ್ಯಕ್ಷ ವಿಜಯೇಂದ್ರ ಇಭ್ರಮಾಪುರ್. ತಾ.ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರಾದ ಹರಿಹಾರಪಾಟೀಲ್ ಬಿಜೆಪಿ, ಮಾನ್ವಿ ಮಂಡಲ ಅಧ್ಯಕ್ಷರಾದ ವೀರಭದ್ರಗೌಡ ಭೋಗವತಿ, ಅಖಿಲಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಅರಣುಕುಮಾರ ಚಂದಾ, ನಗರೇಶ್ವರ ವೈಶ್ಯ ಸಮಾಜದ ತಾ.ಅಧ್ಯಕ್ಷ ಮುತ್ತು ರಾಜ್ ಶೆಟ್ಟಿ, ಸುರೇಶನಾಡಗೌಡ, ಶರಣ ಮುಂದಿನಮನೆ ವೀರೇಶನಾಯಕ ಬೆಟ್ಟದೂರು, ಮೌನೇಶ, ಸಂಗಮೇಶಗೌಡ, ರಾಜಶೇಖರಸ್ವಾಮಿ, ಪ್ರವೀಣ್ ಸ್ವಾಮಿ ಸೇರಿದಂತೆ ಇತರರಿದ್ದರು.

ರಾಷ್ಟ್ರೋತ್ಥಾನದಲ್ಲಿ ರಾಮನವಮಿ ಆಚರಣೆ

ಕಲಬುರಗಿ: ನಗರದ ಹೊರವಲಯದ ಶರಣ ಸಿರಸಗಿ ಬಳಿಯ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ಶುಕ್ರವಾರ ರಾಮನವಮಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು.

ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶಾಲೆಯ ಕರೆಸ್ಪಾಂಡೆಂಟ್ ಕೃಷ್ಣ ಜ್ಯೋಶಿ ಮಾತನಾಡಿ, ಮರ್ಯಾದ ಪುರುಷೋತ್ತಮ ರಾಮನು,ತಂದೆಗೆ ಕೊಟ್ಟ ವಚನದಂತೆ 14 ವರ್ಷಗಳ ವನವಾಸ ಅನುಭವಿಸಿದನು. ಜಗತ್ತಿಗೆ ಆದರ್ಶ ವ್ಯಕ್ತಿಯಾಗಿದ್ದನು. ಭಕ್ತ ಹನುಮಂತನ ನಿಷ್ಠೆ ಹಾಗೂ ಶಬರಿಯ ಭಕ್ತಿಯನ್ನು ಉದಾಹರಿಸಿ, ರಾಮನ ಆಗಮನಕ್ಕಾಗಿ ಅವಳು ಪ್ರತಿದಿನ ಕಾದು ಸಿಹಿಯಾದ ಹಣ್ಣುಗಳನ್ನು ಸವಿದು ಅವನಿಗಾಗಿ ಇಡುತ್ತಿದ್ದಳು ಎಂದರು.

ಶಾಲೆಯ ಪ್ರಧಾನಾಚಾರ್ಯ ವಂಶಿಕೃಷ್ಣ, ಆಡಳಿತಾಧಿಕಾರಿ ಶ್ರೀಕಾಂತ್ ಪಾಟೀಲ, ಶೈಕ್ಷಣಿಕ ಸಂಯೋಜಕ ರವಿಕುಮಾರ, ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಮಕ್ಕಳು ಮತ್ತು ಶಿಕ್ಷಕರು ರಾಮ ಭಜನೆ ನಡೆಸಿದರು. ಪ್ರೀ-ಕೆಜಿ ವಿದ್ಯಾರ್ಥಿಗಳು ರಾಮ, ಲಕ್ಷ್ಮಣ, ಸೀತೆ ಹಾಗೂ ಹನುಮಂತ ಮತ್ತು ವಾನರ ಸೇನೆಯ ಛದ್ಮವೇಷ ಧರಿಸಿ ಗಮನಸೆಳೆದರು. ಸಂಜೀವ್ ಎಚ್. ಸ್ವಾಗತಿಸಿದರು. ಕಾವ್ಯ ಡಿ ವಂದಿಸಿದರು. ಹಾಗೂ ಅಂಬಿಕಾ ಬಿ. ನಿರೂಪಿಸಿದರು.



ಕಿರುಸುದ್ದಿ

ಕೋಸಂಬರಿ, ಪಾನಕ ವಿತರಣೆ

ಸಿರುಗುಪ್ಪ: ನಗರದ ಪ್ರಸಿದ್ಧ ಅಭಯ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಶ್ರೀರಾಮನವಮಿ ನಿಮಿತ್ತ ವಿವಿಧ ಪೂಜೆಗಳು ಶುಕ್ರವಾರ ಅದ್ದೂರಿಯಾಗಿ ನಡೆದವು. ನಂತರ ವಿಶ್ವ ಹಿಂದೂ ಪರಿಷತ್ ಹಾಗೂ ಭಜರಂಗ ದಳದ ವತಿಯಿಂದ ಶ್ರೀರಾಮನವಮಿ ನಿಮಿತ್ತ ಶುಕ್ರವಾರ ಶ್ರೀರಾಮ ಭಕ್ತರಿಗೆ ಕೋಸಂಬರಿ, ಪಾನಕ ವಿತರಿಸಲಾಯಿತು. ಪ್ರಭು ಶ್ರೀರಾಮನ ಉತ್ಸವ ನಿಮಿತ್ತ ನಗರದ ಶ್ರೀರಾಮ ಮಂದಿರದಲ್ಲಿ ಬೆಳಿಗ್ಗೆ ವಿಶೇಷ ಪೂಜೆ, ಅರ್ಚನೆ ಸಲ್ಲಿಸಿ, ಭಕ್ತಿ ಸಮರ್ಪಿಸಿದ ವಿಶ್ವ ಹಿಂದೂ ಪರಿಷತ್ ಹಾಗೂ ಭಜರಂಗ ದಳದ ಕಾರ್ಯಕರ್ತರು, ಪ್ರಮುಖರು ನಗರದ ಹೃದಯ ಭಾಗ ಐಸಿಐಸಿ ಬ್ಯಾಂಕ್ ಎದುರು ಜಮಾಯಿಸಿ ಭಕ್ತರಿಗೆ ಪ್ರಸಾದ, ಕೋಸಂಬರಿ, ಪಾನಕ ವಿತರಿಸಿ ಭಕ್ತಿ ಸಮರ್ಪಿಸಿದರು.ಎ.ಜೆ.ಮಂಜು, ಬೇರೂರ ಬಸವನಗೌಡ, ರವಿ, ಮಂಜುನಾಥ್, ಧರಪ್ಪ ನಾಯಕ್, ವಿನಯ ಕುಮಾರ್ ಸೇರಿದಂತೆ ಇತರರಿದ್ದರು.

ಏ.2ರಂದು ಪೂರ್ವಭಾವಿ ಸಭೆ

ಹೂವಿನಹಡಗಲಿ: ತಹಶೀಲ್ದಾರ್ ಹಾಗೂ ತಾಲೂಕು ಕಾರ್ಯನಿರ್ವಾಹಕ ದಂಡಾಧಿಕಾರಿಗಳ ಕಚೇರಿ, ಹೂವಿನಹಡಗಲಿ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತ್ಯುತ್ಸವ ಹಾಗೂ ಡಾ.ಬಾಬು ಜಗಜೀವನ್ ರಾಮ್ ಅವರ ಜಯಂತ್ಯುತ್ಸವ ದಿನಾಚರಣೆ ಆಚರಿಸುವ ಕುರಿತು ಪೂರ್ವಭಾವಿ ಸಭೆಯನ್ನು ಏ.2ರಂದು ತಾಲೂಕು ಕಚೇರಿಯಲ್ಲಿ ತಹಶೀಲ್ದಾರ್ ಅವರ ಅಧ್ಯಕ್ಷತೆಯಲ್ಲಿ ಜರುಗುವುದು. ಅಂದು ತಾಲೂಕು ಕಚೇರಿಯ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆಗೆ ಸಭೆ ಕರೆಯಲಾಗಿದ್ದು, ಪ್ರಯುಕ್ತ ತಾಲೂಕಿನ ಎಲ್ಲ ದಲಿತಪರ, ಪ್ರಗತಿಪರ ಮತ್ತು ಕನ್ನಡಪರ, ಇತರೆ ಜನಪರ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಪತ್ರಿಕಾ ಮಧ್ಯಮದವರು ಸಭೆಗೆ ಹಾಜರಾಗಿ ತಮ್ಮ ಅತ್ಯಮೂಲ್ಯ ಸಲಹೆಗಳನ್ನು ನೀಡಬೇಕೆಂದು ಕೋರಲಾಗಿದೆ.

ಕುರುಗೋಡು ಪುರಸಭೆ: ಸಂತೆ ಮಾರುಕಟ್ಟೆ ಹರಾಜು



ಕುರುಗೋಡು: ಪಟ್ಟಣದ ಪುರಸಭೆಯ ಸಭಾಂಗಣದಲ್ಲಿ ಪ್ರಸಕ್ತ ಸಾಲಿನ ವಾರದ ಸಂತೆ ಮತ್ತು ದೈನಂದಿನ ಸಂತೆ ಮಾರುಕಟ್ಟೆಯ ಬಾಬತ್ತು ಟೆಂಡರ್ ಹರಾಜು ಪ್ರಕ್ರಿಯೆ ಜರುಗಿತು.2026-27 ಸಾಲಿನ ವಾರದ ಸಂತೆ 1.70 ಲಕ್ಷ ರೂ., ದಿನವಾಹಿ ಸಂತೆ ಮಾರುಕಟ್ಟೆ 6.90 ಲಕ್ಷ ರೂ.ಗೆ ಹರಾಜು ಜರುಗಿತು. ಕಳೆದ ವರ್ಷಕ್ಕಿಂತ ಹೆಚ್ಚಿನ ಬೆಲೆಗೆ ಹರಾಜು ಪ್ರಕ್ರಿಯೆ ಜರುಗಿದ್ದು ವಿಶೇಷವಾಗಿತ್ತು. ಹರಾಜು ಪ್ರಕ್ರಿಯೆ ಬಿರುಸಿನಿಂದ ಕೂಡಿತ್ತು. ವಾರದ ಮಾರುಕಟ್ಟೆಗೆ 5 ಜನ, ದಿನವಾಹಿ ಮಾರುಕಟ್ಟೆಗೆ 4 ಜನ ಬಿಡ್ಡುದಾರರು ಉತ್ಸಾಹದಿಂದ ಪಾಲ್ಗೊಂಡಿದ್ದರು.ಪುರಸಭೆ ಮುಖ್ಯಾಧಿಕಾರಿ ದತ್ತಾತ್ರೇಯ ಹೆಗಡೆ ಮಾತನಾಡಿ, ಟೆಂಡರ್ ಮಾಡಿರುವ ಗುತ್ತಿಗೆದಾರರು ಪುರಸಭೆ ವತಿಯಿಂದ ನೀಡಿರುವ ಸೂಚನೆಗಳಂತೆ ಸುಂಕ ವಸೂಲಿ ಮಾಡಬೇಕು. ಈ ಹರಾಜು 12 (1ವರ್ಷ) ತಿಂಗಳ ಅವಧಿ ಮಾತ್ರ ಇರುತ್ತದೆ. ಸೂಚನೆಗಳನ್ನು ಮೀರಿದರೆ ಸೂಕ್ತ ಕ್ರಮ ಕಗೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.ಈ ವೇಳೆ ಪುರಸಭೆ ಸದಸ್ಯರು, ಅಧಿಕಾರಿಗಳು, ಬಿಡ್ಡುದಾರರು ಹಾಗೂ ಮುಖಂಡರು ಇದ್ದರು.

ಸಂಭ್ರಮದ ರಥೋತ್ಸವ



ಹಗರಿಬೊಮ್ಮನಹಳ್ಳಿ: ಪಟ್ಟಣದ ಆರಾಧ್ಯ ದೈವ ಶ್ರೀಹಗರಿ ಆಂಜನೇಯ ಸ್ವಾಮಿ ರಥೋತ್ಸವ ಸಕಲ ವಾದ್ಯ ಮೇಳದೊಂದಿಗೆ ಸಹಸ್ರಾರು ಭಕ್ತರ ಜಯ ಘೋಷಗಳ ಮಧ್ಯೆ ಶುಕ್ರವಾರ ಸಂಜೆ ಅದ್ದೂರಿಯಾಗಿ ಜರುಗಿತು. ರಥೋತ್ಸವದ ಅಂಗವಾಗಿ ದೇವಸ್ಥಾನದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ಅದ್ದೂರಿಯಾಗಿ ನಡೆದವು. ದೇವಸ್ಥಾನ ಆವರಣದಲ್ಲಿ ಬೆಳಿಗ್ಗೆಯಿಂದ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.ಸಂಜೆ ರಥೋತ್ಸವಕ್ಕೂ ಮುನ್ನ ನಡೆದ ಪಟಾಕ್ಷಿ ಹರಾಜಿನಲ್ಲಿ ಬೋವಿ ವೀರಣ್ಣ ಎಂಬುವರು 6.51 ಲಕ್ಷ ರೂ.ಗಳಿಗೆ ಪಡೆದರು. ವಿಶೇಷವೆಂದರೆ ಪುರಸಭೆ ಸದಸ್ಯ ಬೋವಿ ವೀರಣ್ಣ ಸ್ವಾಮಿಯ ಪಟಾಕ್ಷಿಯನ್ನು ಸತತ ಎಂಟನೇ ಬಾರಿ ಪಡೆದಿದ್ದು ವಿಶೇಷವಾಗಿತ್ತು.ಬಳಿಕ ಹಗರಿ ಆಂಜನೇಯ ಸ್ವಾಮಿ ರಥೋತ್ಸವ ಸಾವಿರಾರು ಭಕ್ತರ ಮಧ್ಯೆ ವಿಜೃಂಭಣೆಯಿಂದ ಜರುಗಿತು.ಭಕ್ತರು ರಥೋತ್ಸವಕ್ಕೆ ಬಾಳೆ ಹಣ್ಣು ಎಸೆದು ಭಕ್ತಿ ಸಮರ್ಪಿಸಿದರು. ರಥೋತ್ಸವ ಮುಂಬಾಗದಲ್ಲಿ ಇದ್ದ ಸಾಂಸ್ಕೃತಿಕ ಕಲಾ ತಂಡಗಳ ವೇಷಧಾರಿಗಳು ನೋಡುಗರ ಗಮನ ಸೆಳೆದವು.



ಸಿರುಗುಪ್ಪ: ನಗರದ ಪ್ರಸಿದ್ಧ ಅಭಯ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಶ್ರೀರಾಮನವಮಿ ನಿಮಿತ್ತ ವಿವಿಧ ಪೂಜೆಗಳು ಶುಕ್ರವಾರ ಅದ್ದೂರಿಯಾಗಿ ನಡೆದವು. ನಂತರ ವಿಶ್ವ ಹಿಂದೂ ಪರಿಷತ್ ಹಾಗೂ ಭಜರಂಗ ದಳದ ವತಿಯಿಂದ ಶ್ರೀರಾಮನವಮಿ ನಿಮಿತ್ತ ಶುಕ್ರವಾರ ಶ್ರೀರಾಮ ಭಕ್ತರಿಗೆ ಕೋಸಂಬರಿ, ಪಾನಕ ವಿತರಿಸಲಾಯಿತು.

ವಿಶೇಷ ಉಪನ್ಯಾಸ ಕಾರ್ಯಕ್ರಮ

ಕೆಂಭಾವಿ: ಗಣಿತಶಾಸ್ತ್ರಕ್ಕೂ ನಿಸರ್ಗಕ್ಕೂ ಅವಿನಾಭಾವ ಸಂಬಂಧವಿದೆ. ಜೀವನದ ಪ್ರತಿಯೊಂದು ಹಂತದಲ್ಲೂ ಗಣಿತಶಾಸ್ತ್ರ ಹಾಸುಹೊಕ್ಕಾಗಿದೆ ಎಂದು ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥ ಐಕ್ಯೂಎಸಿ ಸಂಯೋಜಕ ಶಶಿಕುಮಾರ ಎತ್ತಿಮನಿ ಹೇಳಿದರು.

ಪಟ್ಟಣದ ಗಂಗಾಬಾಯಿ ಶಾಂತಗೌಡ ಪೊಲೀಸ್‌ಪಾಟೀಲ ಮೆಮೋರಿಯಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಒಂದು ದಿನದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಯುಗದಲ್ಲಿ ಗಣಿತಶಾಸ್ತ್ರದ ಬಗ್ಗೆ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ತಿಳಿದುಕೊಳ್ಳುವ ಆಸಕ್ತಿ ಅಭಿರುಚಿ ಬೆಳೆಸಿಕೊಂಡಾಗ ಬದುಕಲಿ ಭರವಸೆ ಮೂಡುತ್ತದೆ ಎಂದವರು, ಗಣಿತಶಾಸ್ತ್ರ ಕೇವಲ ಸಂಖ್ಯೆಗಳ ಆಟವಲ್ಲ ಅದು ಸುವ್ಯವಸ್ಥಿತ ಅಧ್ಯಯನ ಪದ್ಧತಿಯಾಗಿದ್ದು, ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಗಣಿತದ ಜ್ಞಾನ ಹೆಚ್ಚಿಸಿಕೊಳ್ಳಲು ಉಪನ್ಯಾಸ ಮಾಲಿಕೆ ಸಹಕಾರಿಯಾಗಲಿದೆ ಎಂದರು.

ಮುದ್ನಾಳ ವಸತಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಕಾಂತಪ್ಪ ಚವ್ಹಾಣ (ಸ್ಪರ್ಧಾತ್ಮಕ ಗಣಿತ) ಹಾಗೂ ಲಿಂಗಸುಗೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ನಜ್ಮಾ ಬೇಗಂ (ಗಣಿತ ಮತ್ತು ಭರವಸೆ) ಕುರಿತು ವಿಶೇಷ ಉಪನ್ಯಾಸ ನೀಡಿದರು.ಪ್ರಾಂಶುಪಾಲ ಡಾ.ನಾಗಪ್ಪ ಚಾವಲ್ಕರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಉಪನ್ಯಾಸಕರಾದ ಡಾ.ಸಿದ್ದಲಿಂಗ ರಾಠೋಡ, ಮಲ್ಲಿಕಾರ್ಜುನ ಮರಡ್ಡಿ, ನಸ್ರೀನ್ ತಾಜ್, ಡಾ.ಯಂಕನಗೌಡ ಪಾಟೀಲ, ಅತಿಥಿ ಉಪನ್ಯಾಸಕರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.



ಕೆಂಭಾವಿ: ಪಟ್ಟಣದ ಗಂಗಾಬಾಯಿ ಶಾಂತಗೌಡ ಪೊಲೀಸ್ ಪಾಟೀಲ ಮೆಮೋರಿಯಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಒಂದು ದಿನದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥ ಐಕ್ಯೂಎಸಿ ಸಂಯೋಜಕ ಶಶಿಕುಮಾರ ಎತ್ತಿಮನಿ ಮಾತನಾಡಿದರು.

ಅಯೋಧ್ಯೆಯಂತೆ ಪ್ರತಿಬಿಂಬಿಸಿದ ಶ್ರೀರಾಮನ ಮೂರ್ತಿ

ರಾಣಿಪೇಟೆಯಲ್ಲಿ ರಾಮನವಮಿ ವೈಭವ

ವಿಜಯನಗರ: ಹೊಸಪೇಟೆ ನಗರದ ರಾಣಿಪೇಟೆಯಲ್ಲಿರುವ ಶ್ರೀರಾಮ ಮಂದಿರದಲ್ಲಿ ಶುಕ್ರವಾರ ಶ್ರೀರಾಮ ನವಮಿಯನ್ನು ಅತ್ಯಂತ ಸಡಗರ-ಸಂಭ್ರಮದಿಂದ ಆಚರಿಸಲಾಯಿತು. ನೂತನವಾಗಿ ನಿರ್ಮಾಣಗೊಂಡಿರುವ ಭವ್ಯ ಮಂದಿರದಲ್ಲಿ ರಾಮೋತ್ಸವದ ಪ್ರಯುಕ್ತ ನಡೆದ ಧಾರ್ಮಿಕ ವಿಧಿವಿಧಾನಗಳು ಭಕ್ತರನ್ನು ಭಕ್ತಿಭಾವದಲ್ಲಿ ತೇಲಿಸಿತು.

ಇತ್ತೀಚಗಷ್ಟೇ ನವೀಕರಿಸಿರುವ ಶ್ರೀ ರಾಮ ಮಂದಿರದಲ್ಲಿ ಶ್ರೀರಾಮ, ಸೀತೆ, ಲಕ್ಷ್ಮಣ, ಆಂಜನೇಯ, ಗಣಪತಿ, ರಾಮಲಿಂಗೇಶ್ವರ ಹಾಗೂ ನವಗ್ರಹ ಮೂರ್ತಿಗಳನ್ನು ಶಾಸ್ತ್ರೋಕ್ತವಾಗಿ ಪ್ರತಿಷ್ಠಾಪಿಸಲಾಗಿದ್ದು, ಈ ಬಾರಿ ನವಮಿಯ ಆಚರಣೆ ನಿಮಿತ್ತ ನೂತನ ಮಂದಿರದಲ್ಲಿ ಭಕ್ತಿಭಾವದಿಂದ ಪೂಜಾಕೈಂಕರ್ಯಗಳನ್ನು ನೆರವೇರಿಸಲಾಯಿತು. ಬೆಳಗ್ಗೆಯಿಂದಲೇ ಪಂಚಾಮೃತಾಭಿಷೇಕ, ಜಲಾಭಿಷೇಕ, ಹೋಮಹವನ ಸೇರಿದಂತೆ ವಿಧಿವಿಧಾನಗಳೊಂದಿಗೆ ಪೂಜೆ ನೆರವೇರಿಸಲಾಯಿತು. ಶ್ರೀರಾಮ ನವಮಿ ನಿಮಿತ್ತ ದೇವಸ್ಥಾನವನ್ನು ತರಹೇವಾರಿ ಪುಷ್ಪಗಳಿಂದ ಅಲಂಕರಿಸಲಾಗಿತ್ತು. ವಿಶೇಷವೆಂದರೆ, ಇಲ್ಲಿನ ಶ್ರೀರಾಮ ಮೂರ್ತಿಯ ಮುಖದ ತೇಜಸ್ಸು ಮತ್ತು ಸೌಂದರ್ಯವು ಅಯೋಧ್ಯೆಯ ಭವ್ಯ ಮಂದಿರದಲ್ಲಿರುವ ಬಾಲರಾಮನ ಮೂರ್ತಿಯ ಪ್ರಖರತೆಯನ್ನು ನೆನಪಿಸುವಂತಿದೆ ಎಂದು ಭಕ್ತಾದಿಗಳು ಭಾವಪರವಶರಾಗಿ ಮಾತನಾಡಿಕೊಂಡರು.

ಬೆಳಗ್ಗೆಯಿಂದಲೇ ರಾಣಿಪೇಟೆ ಭಾಗದ ಮನೆ-ಮನೆಗಳಿಂದ ಭಕ್ತರು ಹೊಸ ಬಟ್ಟೆ ಧರಿಸಿ ದೇವಸ್ಥಾನದತ್ತ ಹೆಜ್ಜೆ ಹಾಕಿದರು. ದೇವಸ್ಥಾನದ ಆವರಣದಲ್ಲಿ ಭಕ್ತರ ಸಾಗರವೇ ಹರಿದುಬಂದಿದ್ದು, ದೇವರ ದರ್ಶನಕ್ಕಾಗಿ ಗಂಟೆಗಟ್ಟಲೆ ಸರದಿಯಲ್ಲಿ ನಿಂತು ಭಕ್ತರು ಪುನೀತರಾದರು. ಹೂವು, ಹಣ್ಣು ಕಾಯಿ ಅರ್ಪಿಸಿ ಧನ್ಯತೆ ಮೆರೆದರು.



ಬೃಹತ್ ಅನ್ನದಾಸೋಹ: ಶ್ರೀರಾಮ ನವಮಿಯ ಅಂಗವಾಗಿ ಭಕ್ತ ಮಂಡಳಿಯ ವತಿಯಿಂದ ಅಚ್ಚುಕಟ್ಟಾದ ಅನ್ನಸಂತರ್ಪಣೆ ಆಯೋಜಿಸಲಾಗಿತ್ತು. ಮಧ್ಯಾಹ್ನ 12:30ಕ್ಕೆ ಆರಂಭವಾದ ಅನ್ನದಾಸೋಹ ಸಂಜೆ 4 ಗಂಟೆಯವರೆಗೆ ಸತತವಾಗಿ ನಡೆಯಿತು. ಉತ್ತರ ಕರ್ನಾಟಕದ ಶೈಲಿಯ ಸವಿಯಾದ ಗೋಧಿ ಹುಗ್ಗಿ, ಸಿಹಿಯಾದ ಬೂಂದಿ, ರುಚಿಕರವಾದ ವೆಜಿಟೇಬಲ್ ಪಲಾವ್, ಬದನೆಕಾಯಿ ಪಲ್ಲೆ, ಅನ್ನ ಮತ್ತು ಬಿಸಿಬಿಸಿಯಾದ ಸಾಂಬಾರ್ ಅನ್ನು ಪ್ರಸಾದವಾಗಿ ಉಣಬಡಿಸಲಾಯಿತು.

ಹೊಸಪೇಟೆ ನಗರಸಭೆ ಅಧ್ಯಕ್ಷ ಎನ್.ರೂಪೇಶ್ ಕುಮಾರ್, ಹೊಸಪೇಟೆ ಸವಿತಾ ಸಮಾಜದ ಅಧ್ಯಕ್ಷ ಡಿ.ತಿರುಮಲೇಶ್ ನೇತೃತ್ವದಲ್ಲಿ ಸವಿತಾ ಸಮಾಜದ ಪ್ರಮುಖರಾದ ಎನ್.ವೇಣುಗೋಪಾಲ್, ಮುರಳಿಮೋಹನ, ಸುರೇಶ(ಅಂಜಿ), ಮಹೇಶ್, ರಾಜೇಶ್, ಪ್ರಸಾದ್, ದೀಪು, ಚಿನ್ನಿ ರಾಘವೇಂದ್ರ, ಕೋಟೇಶ್, ಸಂತೋಷ್, ಸಂಜೀವರೆಡ್ಡಿ, ಲಕ್ಷ್ಮಣ, ಕಿರಣ್ ಮತ್ತು ಭಕ್ತ ಮಂಡಳಿಯ ಸದಸ್ಯರು ಸ್ವಯಂಸೇವಕರಾಗಿ ಕಾರ್ಯನಿರ್ವಹಿಸಿ ಅನ್ನಸಂತರ್ಪಣೆಯನ್ನು ಯಶಸ್ವಿಗೊಳಿಸಿದರು.

ಎಲ್ಲೆಡೆ ರಾಮನ ಸ್ಮರಣೆ

ಮರ್ಯಾದಾ ಪುರುಷ ಶ್ರೀ ರಾಮನವಮಿಯನ್ನು ಹೊಸಪೇಟೆ ಸೇರಿದಂತೆ ಜಿಲ್ಲಾದ್ಯಂತ ಅದ್ದೂರಿಯಾಗಿ ಆಚರಿಸಲಾಯಿತು. ರಾಮನವಮಿ ನಿಮಿತ್ತ ವಿವಿಧೆಡೆ ದೇವಸ್ಥಾನಗಳಲ್ಲಿ ಬೆಳಗ್ಗೆಯಿಂದಲೇ ಜನರು ದೇವರ ದರ್ಶನಕ್ಕಾಗಿ ಸಾಲುಗಟ್ಟಿದ್ದರು. ಹಂಪಿಯ ಐತಿಹಾಸಿಕ ಕೋದಂಡ ರಾಮ ದೇವಸ್ಥಾನ, ಚಕ್ರತೀರ್ಥ ಯಂತ್ರೋದ್ಧಾರಕ ಸನ್ನಿಧಾನದಲ್ಲಿರುವ ಪಟ್ಟಾಭಿರಾಮ, ಹೊಸಪೇಟೆ ನಗರದ ಒಡಕರಾಯ ದೇವಸ್ಥಾನ, ರಾಣಿಪೇಟೆಯ ಸವಿತಾ ಸಮಾಜದ ಶ್ರೀರಾಮ ದೇವಸ್ಥಾನ, ತುಂಗಭದ್ರಾ ಡ್ಯಾಂನಲ್ಲಿರುವ ಈ.ವಿ.ಕ್ಯಾಂಪ್‌ನ ಶ್ರೀ ಸೀತಾರಾಮ ದೇವಸ್ಥಾನ, ಅನಂತಶಯನ ಗುಡಿಯ ಪಾಂಡುರಂಗ ಕಾಲೋನಿಯ ಶ್ರೀ ರಾಮ ಮಂದಿರದಲ್ಲಿ ಬುಧವಾರ ಬೆಳಗ್ಗೆಯಿಂದಲೇ ಪೂಜೆ, ಪುನಸ್ಕಾರ ಜೋರಾಗಿತ್ತು. ಸೂರ್ಯೋದಕ್ಕೂ ಮುನ್ನವೇ ಶ್ರೀರಾಮ, ಲಕ್ಷ್ಮಣ ಮತ್ತು ತಾಯಿ ಸೀತೆಯ ವಿಗ್ರಹಗಳಿಗೆ ಪಂಚಾಮೃತ ಅಭಿಷೇಕ, ಜಲಾಭಿಷೇಕ ನೆರವೇರಿಸಲಾಯಿತು. ತುಳಸಿ ಸೇರಿದಂತೆ ತರಹೇವಾರಿ ಪುಷ್ಪಗಳೊಂದಿಗೆ ವಿಶೇಷವಾಗಿ ಅಲಂಕರಿಸಿ, ಪೂಜೆ ಸಲ್ಲಿಸಲಾಯಿತು.

ಕಲ್ಲಂಗಡಿ ಖರೀದಿಗೆ ಮುಗಿಬಿದ್ದ ಜನತೆ

ಅಕ್ಕಂಡಿ ಬಸವರಾಜ್ ಮಾಲವಿ

ಹಗರಿಬೊಮ್ಮನಹಳ್ಳಿ: ಬೇಸಿಗೆಯ ಬಿಸಿಲು ಆರಂಭವಾಗಿದ್ದು, ನೆತ್ತಿಯನ್ನು ಸುಡಲಾರಂಭಿಸಿದೆ. ಜನರು ಈ ಬಿಸಿಲಿನ ಬೇಗೆಯಿಂದ ತಪ್ಪಿಸಿಕೊಳ್ಳಲು ಪಾನೀಯಗಳ ಮೊರೆ ಹೋಗುತ್ತಿದ್ದಾರೆ.

ಪಟ್ಟಣದಲ್ಲಿ ರೈತರೊಬ್ಬರು ತಾವು ಬೆಳೆದ ಕಲ್ಲಂಗಡಿ ಹಣ್ಣುಗಳನ್ನು ಟ್ರ್ಯಾಕ್ಟರೊಂದರಲ್ಲಿ ತುಂಬಿಕೊಂಡು ಬಂದು 50 ರೂ. ಪಾಯಿಗೊಂದು ಕಲ್ಲಂಗಡಿ ನೂರು ರೂಪಾಯಿಗೊಂದು ಕಲ್ಲಂಗಡಿ ಎಂದು ಮಾರಾಟ ಮಾಡಲು ಬಂದಿದ್ದರು. ಇಲ್ಲಿನ ಜನ ನಾ ಮುಂದು ತಾ ಮುಂದು ಎನ್ನುವಂತೆ ಕಲ್ಲಂಗಡಿ ತೆಗೆದುಕೊಳ್ಳಲು ಮುಗಿಬಿದ್ದಿದ್ದಾರೆ. ಎರಡು ಎಕರೆ ಹೊಲದಲ್ಲಿ ಕಲ್ಲಂಗಡಿ ಬೆಳೆದಿದ್ದು, ಇದನ್ನು ಬೆಳೆಯಲು ಒಂದು ಲಕ್ಷ ರೂ. ಖರ್ಚು ಮಾಡಿದ್ದೇವೆ. ಈಗಾಗಲೇ ಎರಡು ಟ್ರ್ಯಾಕ್ಟರ್ ಕಲ್ಲಂಗಡಿ ಮಾರಾಟ ಮಾಡಿದ್ದೇವೆ. ಇಂದು ಎರಡು ಟ್ರ್ಯಾಕ್ಟರ್ ಕಲ್ಲಂಗಡಿ ಮಾರಾಟ ಮಾಡಲು ತಂದಿದ್ದೇವೆ. ಈಗಾಗಲೇ ನಾವು ಹಾಕಿದ ಬಂಡವಾಳ ಬಂದಿದೆ. ಇನ್ನು ಒಂದು ಲಕ್ಷಕ್ಕೂ ಹೆಚ್ಚು ಲಾಭ ಬರುವ ಕಲ್ಲಂಗಡಿ ಹೊಲದಲ್ಲಿದೆ ಎಂದು ಇಟಗಿ ಗ್ರಾಮದ ರೈತರಾದ ಮೌನೇಶ್ ತಿಳಿಸಿದರು.

ಪಾನೀಯಗಳಿಗೂ ಮೊರೆ

ಬಿಸಿಲಿನ ಬೇಗೆ ತಾಳಲಾರದೆ ಪಟ್ಟಣದ ಜನತೆ ಪಾನೀಯಗಳಾದ ಎಳನೀರು, ಕಬ್ಬಿನ ಹಾಲು, ಶರಬತ್, ಮಜ್ಜಿಗೆ, ಲಸ್ಸಿ, ಸೇರಿದಂತೆ ಹೆಚ್ಚು ನೀರಿನಂಶ ವಿರುವ ಹಣ್ಣುಗಳ ಸೇವನೆ ಮಾಡುತ್ತಿದ್ದಾರೆ.

ರಾಸಾಯನಿಕ ಕೆಮಿಕಲ್ ಬಳಸಿ ತಯಾರಿಸುವ ಐಸ್, ಕೋಲ್ಡ್ ಡ್ರಿಂಕ್ಸ್ ಸೇವಿಸುವ ಬದಲು ರೈತರು ಹೊಲದಲ್ಲಿ ಬೆಳೆಯುವ ಕಲ್ಲಂಗಡಿ, ಮೋಸಂಬಿ, ದ್ರಾಕ್ಷಿ ಹಣ್ಣುಗಳ ಮತ್ತು ತೆಂಗಿನಕಾಯಿ ಎಳನೀರು ಸೇವಿಸಿದರೆ ದೇಹ ತಂಪಾಗಿರುತ್ತದೆ. ಜೊತೆಗೆ ಆರೋಗ್ಯವೂ ಸುಧಾರಿಸುತ್ತೆ. ಮುಖ್ಯವಾಗಿ ಅನ್ನದಾತ ರೈತರ ಜೀವನ ಸುಧಾರಣೆಗೆ ಸಹಕಾರಿಯಾಗುತ್ತದೆ.

■ ಆರ್.ಕೇಶವ್ ರೆಡ್ಡಿ, ಪ್ರಥಮ ದರ್ಜೆ ಗುತ್ತಿಗೆದಾರ



ಅಗತ್ಯ ಮಾಹಿತಿಯೊಂದಿಗೆ ಸಭೆಗೆ ಆಗಮಿಸಿ



ಕೊಟ್ಟೂರು: ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೊಸಮನಿ ಅನಿಲ್ ಅವರ ಅಧ್ಯಕ್ಷತೆಯಲ್ಲಿ ಪ್ರಗತಿ ಪರಿಶೀಲನಾ ಸಭೆ ಜರುಗಿತು.

ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮೀ, ಗೃಹ ಜ್ಯೋತಿ, ಶಕ್ತಿ, ಯುವ ನಿಧಿ, ಅನ್ನ ಭಾಗ್ಯ ಯೋಜನೆಗಳ ಕುರಿತು ಚರ್ಚಿಸಿದರು.

ಗೃಹಜ್ಯೋತಿ: ಜಿಲ್ಲಾ ಮಟ್ಟದ ಸಭೆಗೆ ನೀಡಿರುವ ಅಂಕಿ, ಅಂಶಗಳಿಗೂ ಹಾಗೂ ತಾಲೂಕು ಮಟ್ಟದ ಸಭೆಗೆ ನೀಡಿರುವ ಅಂಕಿ ಅಂಶಗಳಿಗೆ ಹೋಲಿಕೆಯಾಗುತ್ತಿಲ್ಲ, ಏಕೆ ಸರಿಯಾದ ಮಾಹಿತಿ ನೀಡುತ್ತಿಲ್ಲ ಎಂದು ಅಧ್ಯಕ್ಷರು ಇಲಾಖೆಯ ಅಧಿಕಾರಿಗಳಿಗೆ ಪ್ರಶ್ನಿಸಿದರು.

ಮುಂದಿನ ಸಭೆಯ ವೇಳೆಗೆ ಸರಿಪಡಿಸಲಾಗುವುದು ಎಂದು ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಉತ್ತರಿಸಿದರು. ಗ್ರಾಮಗಳಲ್ಲಿ ವಿದ್ಯುತ್ ತಂತಿಗಳಿಗೆ ಕೊಂಡಿಗಳನ್ನು ಹಾಕಿಕೊಂಡಿರುವವರಿಗೆ ಗೃಹ ಜ್ಯೋತಿ ಮಾಡಿಸಲು ಕ್ರಮವಹಿಸುವಂತೆ ಜೆಸ್ಕಾಂ ಅಧಿಕಾರಿ ನಾಗರಾಜ್ ಅವರಿಗೆ ಸೂಚಿಸಿದರು.

ಗೃಹಲಕ್ಷ್ಮೀ: ಗೃಹ ಲಕ್ಷ್ಮೀ ಹಣ ಫಲಾನುಭವಿಗಳ ಖಾತೆಗೆ ನವೆಂಬರ್ ವರೆಗೆ ಜಮಾ ಆಗಿದೆ, ಇನ್ನೂ ಮೂರು ತಿಂಗಳು ಬಾಕಿ ಇದೆ. ಮರಣ ಹೊಂದಿದ ಫಲಾನುಭವಿಗಳನ್ನು ಪತ್ತೆಹಚ್ಚಿ ಗೃಹ ಲಕ್ಷ್ಮಿ ಹಣ ಅವರ ಖಾತೆಗೆ ಹೋಗದಂತೆ ಕ್ರಮವಹಿಸಲಾಗುತ್ತಿದೆ. ಮರಣದ ನಂತರವೂ ಹಣ ಜಮೆಯಾಗಿದ್ದಲ್ಲಿ ಅಂತವರ ಸರ್ವೇ ಮಾಡಿಸಲಾಗಿದ್ದು, 240 ಮರಣ ಹೊಂದಿದ ಫಲಾನುಭವಿಗಳ ಖಾತೆಯಲ್ಲಿನ ಹಣವನ್ನು ಬ್ಯಾಂಕ್‌ನವರೇ ಮುಟ್ಟುಗೋಲು ಹಾಕಿಕೊಂಡು ಸರ್ಕಾರಕ್ಕೆ ಹಿಂತಿರುಗಿಸಲಿದ್ದಾರೆ. ಪ್ರತಿ ತಿಂಗಳು ಮರಣ ಹೊಂದಿದ ಫಲಾನುಭವಿಗಳ ಮಾಹಿತಿಯನ್ನು ಪಡೆಯಲಾಗುತ್ತಿದೆ ಎಂದು ಸಿಡಿಪಿಒ ಮಾಲುಂಬಿ ಅವರು ಸಭೆಗೆ ತಿಳಿಸಿದರು.

ತಾಪಂ ಇಒ ಡಾ.ಬಿ.ಆನಂದಕುಮಾರ, ಸಮಿತಿ ಸದಸ್ಯರಾದ ಪ್ರಭುದೇವ, ಸುಶೀಲಮ್ಮ, ಎನ್.ಚಂದ್ರಪ್ಪ, ಮಾರಪ್ಪ, ಗಾಯತ್ರಿ ಎ.ಎಸ್., ಶಿವರಾಜ್ ಟಿ., ಟಿ.ನಾಗಪ್ಪ, ಪಿ.ಕೆ.ಇಂದ್ರಜಿತ್, ತಿರುಕಪ್ಪ ಕರಡಿ, ಆನಂದ, ಮಾಲ್ವಿ ಜಮೀರ್ ಖಾನ್, ಉಮಾಪತಿ ಸ್ವಾಮಿ ಎಂ.ಎಂ., ವಿಷಯ ನಿರ್ವಾಹಕರು, ತಾಪಂ ಸಿಬ್ಬಂದಿ ಇದ್ದರು.

ಕೊತ್ತಲಾಂಜನೇಯ ರಥೋತ್ಸವ ಅದ್ದೂರಿ

ಕೂಡ್ಲಿಗಿ: ಪಟ್ಟಣದ ಆರಾಧ್ಯ ದೈವ ಶ್ರೀಕೊತ್ತಲಾಂಜನೇಯ ಸ್ವಾಮಿ ರಥೋತ್ಸವ ರಾಮನವಮಿ ದಿನದಂದು ಅದ್ದೂರಿಯಾಗಿ ಜರುಗಿತು.

ಕಳೆದ ಎರಡು ದಿನಗಳಿಂದ ರಥೋತ್ಸವದನಿಮಿತ್ತವಾಗಿ ಪೂರ್ವ ಧಾರ್ಮಿಕ ಪೂಜಾ ಕಾರ್ಯಗಳು ಸಾಂಗವಾಗಿ ಜರಗಿದವು. ಇಂದು ಮುಂಜಾನೆಯಿಂದಲೇ ಪಟ್ಟಣಾದ್ಯಂತ ಮನೆ, ಮನೆಗಳಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಬೆಳಗ್ಗಿಯಿಂದಲೇ ದೇವರ ದರ್ಶನಕ್ಕಾಗಿ ಆಗಮಿಸಿದ ಭಕ್ತರು ಕುಟುಂಬ ಸಮೇತ ಪೂಜಾ ಕಾರ್ಯದಲ್ಲಿ ಭಾಗವಹಿಸಿ ಭಕ್ತಿ ಸಮರ್ಪಿಸಿದರು. ರಥೋತ್ಸವಕ್ಕೆ ಮುತ್ತಷ್ಟು ಮೆರಗು ನೀಡಿತು. ಇದಕ್ಕೂ ಮೊದಲು ಪಲ್ಲಕ್ಕಿ ಉತ್ಸವ ಜರಗಿದ್ದು ಇದಕ್ಕೂ ಮೊದಲು ಬೆಳಿಗ್ಗೆ ಸ್ಥಳೀಯ ವೈದಿಕ ಬ್ರಾಹ್ಮಣ ಸಮುದಾಯವರಿಂದ ರಥೋತ್ಸವದ ಪ್ರಯುಕ್ತ ಯಾಗ ಯಜ್ಞಾದಿ ಪೂಜೆಗಳು ಜರುಗಿಸಿ ಬ್ರಾಹ್ಮಣರ ನೇತೃತ್ವದಲ್ಲಿ ಮಡಿ ತೇರು ಎಳೆಯಲಾಯಿತು.

ಪಟ್ಟಣ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡರು.

15 ಲಕ್ಷಕ್ಕೆ ಪಟ್ಟದ ಸವಾಲು!: ರಾಜ್ಯ ಎಸ್ಟಿ ಮೋರ್ಚಾದ ಅಧ್ಯಕ್ಷರಾದ ಬಂಗಾರು ಹನುಮಂತು 1511,111 (ಹದಿನೈದು ಲಕ್ಷದ ರೂ. ಒಂದು ನೂರ ಒಂದು ರೂಪಾಯಿ) ಆಂಜನೇಯ ಸ್ವಾಮಿಯ ಪಟ್ಟದ ಸವಾಲನ್ನು ಈ ವರ್ಷ ತಮ್ಮದಾಗಿಸಿಕೊಂಡರು.

ತಾಲೂಕಿನ ದಂಡಾಧಿಕಾರಿ ಕುಮಾರಿ ನೇತ್ರಾವತಿ ಕೆ., ಪಪಂ ಮಾಜಿ ಅಧ್ಯಕ್ಷಕವಾಲಿಶಿವಪ್ಪ, ವಿವಿಧ ಇಲಾಖೆ ಅಧಿಕಾರಿಗಳು, ವಾಲ್ಮೀಕಿ ಸಮುದಾಯದ ಮುಖಂಡರು ಹಾಗೂ ಯುವಕರು ಸೇರಿದಂತೆ ಪೊಲೀಸ್ ಇಲಾಖೆಯಿಂದ ರಥೋತ್ಸವದ ಹಿನ್ನೆಲೆ ಬಿಗಿ ಭದ್ರತೆ ಕೈಗೊಳ್ಳಲಾಯಿತು.



ಪ್ರತಿಯೊಬ್ಬರೂ ಜಲ ಸಂಪನ್ಮೂಲ ಸಂರಕ್ಷಿಸಿ



ಸಿರುಗುಪ್ಪ: ಕಾನೂನು ಬದ್ಧವಾಗಿ ಅದನ್ನು ಬಳಸುವಂತೆ ಉತ್ತೇಜಿಸುವುದು ಮತ್ತು ಪ್ರತಿಯೊಬ್ಬ ನಾಗರಿಕರು ಜಲ ಸಂಪನ್ಮೂಲಗಳನ್ನು ಸಂರಕ್ಷಿಸುವುದು ವಿಶ್ವ ಜಲದಿನಾಚರಣೆಯ ಉದ್ದೇಶವಾಗಿದೆ ಎಂದು ಸಿವಿಲ್ ನ್ಯಾಯಾಧೀಶ ಅಶೋಕ ಆರ್.ಎಚ್. ಹೇಳಿದರು.

ನಗರದತಾಲೂಕುಕ್ರೀಡಾಂಗಣದ ಶಾಖಾ ಗ್ರಂಥಾಲಯ ಹಾಗೂ ಸ್ಪರ್ಧಾತ್ಮಕ ಅಧ್ಯಯನ ಕೇಂದ್ರದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಗ್ರಂಥಾಲಯ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಅರಣ್ಯ ಇಲಾಖೆ, ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ 'ವಿಶ್ವ ಜಲ ದಿನಾಚರಣೆ' ನಿಮಿತ್ತ ಶುಕ್ರವಾರಹಮ್ಮಿಕೊಂಡಿದ್ದ ಕಾನೂನು ಅರಿವು ನೆರವು ಕಾರ್ಯಕ್ರಮದಲ್ಲಿ ಮಾತನಾಡಿದರು.

ಗಂಗ ಸ್ನಾನ, ತುಂಗ ಪಾನ ಈ ಉಕ್ತಿಯು ವೈಜ್ಞಾನಿಕ ಅಂಶಗಳನ್ನು ಒಳಗೊಂಡು ರಚನೆಯಾಗಿದೆ. ಆದರೆ, ಇಂದು ಅವುಗಳು ಮಾಲೀನ್ಯವಾಗಿ ಅನೇಕ ರೋಗಗಳಿಗೆ ಕಾರಣವಾಗುತ್ತಿವೆ.

ನೀರು ಒಂದು ನೈಸರ್ಗಿಕ ಸಂಪನ್ಮೂಲವಾಗಿದೆ. ಪ್ರಕೃತಿಯಲ್ಲಿ ನೀರನ್ನು ಉಳಿಸಿದರೆ ನೂರಾರು ಜೀವ ರಾಶಿಗಳು ಉಳಿವಿಗೆ ಕಾರಣವಾಗುತ್ತವೆ. ನೀರು ಅಮೂಲ್ಯ ಸಂಪನ್ಮೂಲವಾಗಿದ್ದು, ಇದನ್ನು ವ್ಯರ್ಥ ಮಾಡುವುದು ಅಥವಾ ಮಾಲಿನ್ಯಗೊಳಿಸುವುದು ಕಾನೂನಿನಡಿ ಅಪರಾಧ, ಶುದ್ಧ ಕುಡಿಯುವ ನೀರು ಪಡೆಯುವುದು ನಾಗರಿಕರ ಹಕ್ಕು ಎಂದರು.

ವಕೀಲರಸಂಘದ ಅಧ್ಯಕ್ಷ ಉಪ್ಪಾರ ವೆಂಕೋಬ, ಸಹಾಯಕ ಸರ್ಕಾರಿ ಅಭಿಯೋಜಕ ಶಿವರಾಜ, ಉಪ ವಲಯ ಅರಣ್ಯ ಅಧಿಕಾರಿ ಎನ್. ಬಸವನಗೌಡ ಮಾತನಾಡಿದರು.

ಕಾರ್ಯದರ್ಶಿ ಶಿವಕುಮಾರ್ ಎಂ., ಉಪ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿ ರಾಹುಲ್, ಪಿಎಸ್ಐ ಮಲ್ಲಯ್ಯ, ಶಾಖಾ ಗ್ರಂಥಾಲಯ ಗ್ರಂಥಪಾಲಕ ಜಗದೇವಪ್ಪ ಡಬಿರಾಬಾದ್ ಭಾಗವಹಿಸಿದ್ದರು.

ರಾಮನ ತೊಟ್ಟಿಲು ಕಾರ್ಯಕ್ರಮ


ಬೀದರ್: ನಗರದ ಕೆಇಬಿ ಹತ್ತಿರದ ಶ್ರೀಹನುಮಾನ ಮಂದಿರದಲ್ಲಿ ಶ್ರೀರಾಮ ನವಮಿ ಅಂಗವಾಗಿ ಗುರುವಾರ ದಿನಪೂರ್ತಿ ಧಾರ್ಮಿಕ ಕಾರ್ಯಕ್ರಮಗಳು ಭಕ್ತಿಭಾವದಿಂದ ಹಾಗೂ ಸಂಭ್ರಮದಿಂದ ನೆರವೇರಿದವು.

ಬೆಳಿಗ್ಗೆಯಿಂದಲೇ ಭಕ್ತರು ಮಂದಿರಕ್ಕೆ ಆಗಮಿಸಿ ಶ್ರೀರಾಮನ ದರ್ಶನ ಪಡೆದು ವಿಶೇಷ ಪೂಜೆಗಳಲ್ಲಿ ಭಾಗವಹಿಸಿದರು.

ಮಧ್ಯಾಹ್ನ ಮುಖ್ಯ ಆಕರ್ಷಣೆಯಾಗಿ ರಾಮನ ತೊಟ್ಟಿಲು ಕಾರ್ಯಕ್ರಮವನ್ನು ಅತ್ಯಂತ ಸಡಗರದಿಂದ ಆಯೋಜಿಸಲಾಯಿತು. ಶ್ರೀರಾಮನ ಮೂರ್ತಿಯನ್ನು ಸುಂದರವಾಗಿ ಅಲಂಕರಿಸಿದ ತೊಟ್ಟಿಲಿನಲ್ಲಿ ಇಟ್ಟು ಭಕ್ತರು ಭಕ್ತಿಭಾವದಿಂದ ತೂಗಿ ಪೂಜೆ ಸಲ್ಲಿಸಿದರು. ಮಹಿಳೆಯರು ಭಕ್ತಿಗೀತೆಗಳನ್ನು ಹಾಡಿ, ಹಬ್ಬದಸಂಭ್ರಮವನ್ನು ಹೆಚ್ಚಿಸಿದರು. ನಂತರ ಭಕ್ತರಿಗೆ ಮಹಾಪ್ರಸಾದ ವಿತರಣೆ ಮಾಡಲಾಗಿದ್ದು, ಅನೇಕರು ಅದರಲ್ಲಿ ಭಾಗವಹಿಸಿ ಪ್ರಸಾದ ಸ್ವೀಕರಿಸಿದರು.ಪ್ರಮುಖರಾದ ರಾಜಶ್ರೀ ಖ್ಯಾಮಾ, ಚಿನ್ನಮ್ಮ ಶಿವಬಸಪ್ಪ, ಶಶಿಕಲಾ, ಸಂಗೀತಾ, ಸುನಂದಾ, ನಿರ್ಮಲಾ, ಕಾಶಿನಾಥ ಬೆಲ್ದಾಳೆ, ವೀರಶೆಟ್ಟಿ ಖ್ಯಾಮಾ, ಬಸವರಾಜ ಬೇಮಳಖೇಡ, ಭೀಮಣ್ಣ ಸೋರಳ್ಳಿ, ಆಕಾಶ ಕೊಡಗೆ, ಮಹೇಶ ನಿಂಬೂರೆ, ಶಂಕರ ಖ್ಯಾಮಾ, ಮಾದಪ್ಪ ಬೊಮ್ಮಾ ಸೇರಿದಂತೆ ಅನೇಕ ಭಕ್ತರು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.



ಶ್ರೀರಾಮನವಮಿ: ಕಲ್ಯಾಣೋತ್ಸವ



ಬಳ್ಳಾರಿ: ನಗರದ ಸಿರುಗುಪ್ಪ ರಸ್ತೆಯ ಗಣೇಶ ನಗರ ಬಡಾವಣೆಯ ಶ್ರೀಲಕ್ಷ್ಮೀ ನರಸಿಂಹ ಸಹಿತ, ಶ್ರೀಯಂತ್ರೋದ್ಧಾರಕ ಶ್ರೀಆಂಜನೇಯ ದೇವಸ್ಥಾನ, ಶ್ರೀರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಶುಕ್ರವಾರ ಶ್ರೀರಾಮನವಮಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಶ್ರೀರಾಮ ನವಮಿ ಹಬ್ಬದ ನಿಮಿತ್ತ ಶ್ರೀಸೀತಾರಾಮ ಕಲ್ಯಾಣೋತ್ಸವ ಸೇರಿದಂತೆ ವಿವಿಧ ಪೂಜೆಗಳು ಶ್ರೀಮಠದ ಶ್ರೀಬಲರಾಮ ಆಚಾರ್ಯ ಅವರ ನೇತೃತ್ವದಲ್ಲಿ ಅದ್ದೂರಿಯಾಗಿ ನಡೆದವು. ಪ್ರಭು ಶ್ರೀರಾಮ ಚಂದ್ರನ ರಥೋತ್ಸವ ಅದ್ದೂರಿಯಾಗಿ ನಡೆಯಿತು. ವಿವಿಧ ಭಜನಾ ಮಂಡಳಿ ಸದಸ್ಯರಿಂದ ಸಾಮೂಹಿಕ ಭಜನೆ, ಕೋಲಾಟ ಗಮನಸೆಳೆಯಿತು. ಇದಕ್ಕೂ ಮುನ್ನ ದೇವಾಲಯದಲ್ಲಿ ಶ್ರೀರಾಮ ನವಮಿ ಹಬ್ಬದ ನಿಮಿತ್ತ ವಿಶೇಷ ಪೂಜೆ, ಅರ್ಚನೆ, ಅಲಂಕಾರ, ನೈವೇದ್ಯ, ಮಂಗಳಾರತಿ ಸೇರಿದಂತೆ ವಿವಿಧ ಪೂಜೆಗಳು ನಡೆದವು. ನಂತರ ಬಳ್ಳಾರಿಯ ಪಂ.ಉಡುಪಿ ಕೃಷ್ಣಾಚಾರ ಅವರಿಂದ ಶ್ರೀರಾಮನ ಮಹಿಮೆ ಕುರಿತು ಉಪನ್ಯಾಸ ನಡೆಯಿತು. ಆಗಮಿಸಿದ ಎಲ್ಲ ಭಕ್ತರಿಗೆ ತೀರ್ಥ, ಪ್ರಸಾದ, ಕೋಸಂಬರಿ, ಪಾನಕ ವಿತರಿಸಲಾಯಿತು.


ರಾಮನವಮಿ: ಕೋಸಂಬರಿ, ಪಾನಕ ವಿತರಣೆ

ಬಳ್ಳಾರಿ: ನಗರದ ಹೃದಯ ಭಾಗ ಮೋತಿ ವೃತ್ತದ ಶ್ರೀರಾಮ ಮಂದಿರದಲ್ಲಿ ಶ್ರೀರಾಮ ನವಮಿಯನ್ನು ಶುಕ್ರವಾರ ಅದ್ದೂರಿಯಾಗಿ ಆಚರಿಸಲಾಯಿತು.

ಬೆಳಿಗ್ಗೆ ವಿಶೇಷ ಪೂಜೆ, ಅರ್ಚನೆ, ವಿಶೇಷ ಅಲಂಕಾರ, ನೈವೇದ್ಯ, ಮಂಗಳಾರತಿ ಸೇರಿದಂತೆ ವಿವಿಧ ಪೂಜೆಗಳು ನಡೆದವು. ನಂತರ ನಡೆದ ಕಲ್ಯಾಣೋತ್ಸವದಲ್ಲಿ ಅನೇಕ ಜನ ದಂಪತಿಗಳು ಭಾಗವಹಿಸಿ ಭಕ್ತಿ ಸಮರ್ಪಿಸಿದರು. ನಗರ ಸೇರಿದಂತೆ ವಿವಿಧ ಕಡೆಯಿಂದ ಆಗಮಿಸಿದ ನೂರಾರು ಭಕ್ತರು ಸರದಿಯಲ್ಲಿ ನಿಂತು ಪ್ರಭು ಶ್ರೀರಾಮನ ದರ್ಶನ ಪಡೆದು ಪುನೀತರಾದರು. ಸೂರ್ಯವಂಶ ಕ್ಷತ್ರಿಯ ಸಮಾಜ ಬಾಂಧವರು, ಟ್ರಸ್ಟ್‌ನ ಪದಾಧಿಕಾರಿಗಳು ಆಗಮಿಸಿದ ಎಲ್ಲ ಭಕ್ತರಿಗೂ ತೀರ್ಥ ಪ್ರಸಾದ, ಕೋಸಂಬರಿ, ಪಾನಕ ವಿತರಣೆ ಮಾಡಿ ಭಕ್ತಿ ಸಮರ್ಪಿಸಿದರು. ವಿ.ಎನ್. ರಾಜ್, ತಾರಾನಾಥ್ ಸೇರಿದಂತೆ ಅನೇಕ ಗಣ್ಯರು, ಶ್ರೀರಾಮನ ಭಕ್ತರು ಪ್ರಭು ಶ್ರೀರಾಮನ ಸೇವೆ ಸಲ್ಲಿಸಿ ಭಕ್ತಿ ಸಮರ್ಪಿಸಿದರು. ದೇಗುಲದ ಮುಂಭಾಗದಲ್ಲಿ ಭಕ್ತರು ಕೋಸಂಬರಿ, ಮಜ್ಜಿಗೆ, ಪಾನಕ, ಬಾಳೆಹಣ್ಣು ವಿತರಿಸುವ ಮೂಲಕ ಶ್ರೀರಾಮದೇವರ ಸೇವೆ ಸಲ್ಲಿಸಿದರು.



ಸ್ವಯಂಪ್ರೇರಿತ ರಕ್ತದಾನ ಶಿಬಿರ



ಗಾದಿಗನೂರು: ಗುಂಡ್ಲುವದ್ದಿಗೇರಿ ಗ್ರಾಮದಲ್ಲಿ ಶ್ರೀರಾಮ ನವಮಿ ಅಂಗವಾಗಿ ಗ್ರಾಮ ಪಂಚಾಯಿತಿ ಕಾರ್ಯಾಲಯ ಬೈಲುವದ್ದಿಗೇರಿ, ಪ್ರಾಥಮಿಕ ಆರೋಗ್ಯ ಕೇಂದ್ರ ಗಾದಿಗನೂರು ಮತ್ತು ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಹೊಸಪೇಟೆ ಸಂಯುಕ್ತ ಆಶ್ರಯದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಶ್ರೀರಾಮ ಮಂದಿರ ಹತ್ತಿರದಲ್ಲಿ ನಡೆಸಲಾಯಿತು.

ಡಾ.ದಿವ್ಯಶ್ರೀ ಎಚ್.ಎನ್. ಮಾತನಾಡಿ, ರಕ್ತದಾನ ಮಾಡುವುದರಿಂದ ಹೃದಯಘಾತದ ಸಂಭವ ಕಡಿಮೆಯಾಗುತ್ತದೆ. ರಕ್ತದಲ್ಲಿ ಕೊಲೆಸ್ಟ್ರಾಲ್ ಅಂಶ ಕಡಿಮೆ ಆಗುತ್ತದೆ. ಇತರರ ಜೀವ ಉಳಿಸಬಹುದು. ದೇಹದಲ್ಲಿ ಹೊಸ ರಕ್ತ ಉತ್ಪತ್ತಿಯನ್ನು ಉತ್ತೇಜಿಸುತ್ತದೆ. ದೇಹದಲ್ಲಿ ಹೊಸ ರಕ್ತ ಚಲನೆಯಿಂದ ಚುರುಕುತನ ನೆನಪಿನ ಶಕ್ತಿ ಹೆಚ್ಚಾಗುತ್ತದೆ ಎಂದು ತಿಳಿಸಿದರು.

ಶಿಬಿರದಲ್ಲಿ 20ಕ್ಕೂ ಹೆಚ್ಚು ಜನರು ರಕ್ತದಾನ ಮಾಡಿದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ಬ್ಲಡ್ ಸಂಗ್ರಹ ಅಧಿಕಾರಿ ಜಗದೀಶ್, ಆರೋಗ್ಯ ನಿರೀಕ್ಷಣಾಧಿಕಾರಿ ರಾಜೀವ್ ಗಾಂಧಿ ಕೆ.ಪಿ., ವಿಮ್ಸ್ ಬ್ಲಡ್ ಬ್ಯಾಂಕ್ ಕೌನ್ಸಲರ್ ಸಂತೋಷ, ಆಸ್ಪತ್ರೆ ಅಟೆಂಡರ್ ಜಿ.ಮಂಜುನಾಥ, ನರ್ಸಿಂಗ್ ಅಧಿಕಾರಿ ಸುಪ್ರಿಯಾ, ಜ್ಯೋತಿ ಹಾಗೂ ಆಶಾ ಕಾರ್ಯಕರ್ತೆಯರಿದ್ದರು.